ಕರ್ನಾಟಕ ಸರ್ಕಾರ

# ಅರ್ಥಶಾಸ್ತ್ರ

## ಭಾರತೀಯ ಆರ್ಥಿಕತೆಯ ಮೂಲ ಅಂಶಗಳು

## 10

### ಹತ್ತನೆಯ ತರಗತಿ

### ವಿಭಿನ್ನ ಸಾಮರ್ಥ್ಯವುಳ್ಳ /

### (ಅಂಧ ವಿದ್ಯಾರ್ಥಿಗಳಿಗಾಗಿ)

## 2015

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**

**100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,**

**ಬೆಂಗಳೂರು – 560 085.**

# ಮುನ್ನುಡಿ

ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿಭಿನ್ನ ಸಾಮರ್ಥ್ಯವುಳ್ಳ / ಅಂಧ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಬದಲಾಗಿ ವಿದ್ಯಾರ್ಥಿಗಳ ಆಯ್ಕೆಗೆ ಅನುಗುಣವಾಗಿ ಐದು ವಿಷಯಗಳನ್ನು ಸೂಚಿಸಿ, ಎರಡು ವಿಷಯಗಳನ್ನು ಆರಿಸಿಕೊಳ್ಳುವ ಅವಕಾಶವನ್ನು ಒದಗಿಸಲಾಗಿದೆ. ಈ ಐದು ವಿಷಯಗಳಲ್ಲಿ ಅರ್ಥಶಾಸ್ತ್ರ ವಿಷಯವೂ ಒಂದಾಗಿದೆ. 2015ರಲ್ಲಿ ಹತ್ತನೇ ತರಗತಿಯ ಪಠ್ಯ ಪುಸ್ತಕವನ್ನು ರಚಿಸಿ, ಜಾರಿಗೆ ತರಲಾಗಿದೆ. ಎಂಟು ಹಾಗೂ ಒಂಭತ್ತನೆಯ ತರಗತಿಗಳಿಗೂ ಪಠ್ಯಪುಸ್ತಕ ರಚನಾ ಕಾರ್ಯವು ತ್ವರಿತವಾಗಿ ನಡೆಯುತ್ತಿದ್ದು, ಮುಂದಿನ ವರ್ಷಗಳಲ್ಲಿ ಜಾರಿಗೆ ತರಲು ತೀರ್ಮಾನಿಸಲಾಗಿದೆ.

ಅರ್ಥಶಾಸ್ತ್ರ ವಿಷಯದಲ್ಲಿ ಹತ್ತನೇ ತರಗತಿಗೆ **ಭಾರತೀಯ ಆರ್ಥಿಕತೆಯ ಮೂಲ ಅಂಶಗಳು.** ಈ ಶೀರ್ಷಿಕೆಯಡಿಯಲ್ಲಿ ವ್ಯಾಪಕವಾಗಿರುವ ಕಲಿಕಾಂಶಗಳನ್ನು ವಿದ್ಯಾರ್ಥಿಗಳ ಶೈಕ್ಷಣಿಕಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಡಿಯಲ್ಲಿ ಹಾಗೂ ಪಠ್ಯವಸ್ತುವಿಗೆ ಅನುಗುಣವಾಗಿ ವಿಷಯಮಂಡನೆ ಹಾಗೂ ಪ್ರತಿ ಅಧ್ಯಾಯದಲ್ಲಿ ನೀಡಿರುವ ಅಭ್ಯಾಸಗಳು ವಿದ್ಯಾರ್ಥಿಗಳನ್ನು ತಾರ್ಕಿಕ ಆಲೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ರಚನೆ ಮತ್ತು ಸಂರಚನೆ ಹಾಗೂ ಪುನರ್‌ರಚನೆ ಮತ್ತು ಸ್ವಕಲಿಕೆಯೊಂದಿಗೆ ಸಾಮರ್ಥ್ಯಗಳನ್ನು ತನ್ನದಾಗಿಸಿಕೊಳ್ಳುವಂತೆ, ನಿತ್ಯ ಜೀವನದಲ್ಲಿನ ಘಟನೆಗಳಿಗೆ ಪರಿಹಾರ ಕಂಡುಕೊಳ್ಳುವ ಜೀವನ ಕೌಶಲಗಳನ್ನು ತನ್ನದಾಗಿಸಿಕೊಳ್ಳುವಂತೆ ಪ್ರೇರೇಪಿಸುವ ಪ್ರಯತ್ನಶೀಲತೆಯೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಹನ್ನೊಂದು ಅಧ್ಯಾಯಗಳಲ್ಲಿ ಪ್ರಚಲಿತ ವಿಷಯಗಳಿಗೆ ಮಹತ್ವ ನೀಡುತ್ತಾ ಪ್ರತಿ ಅಧ್ಯಾಯದ ಕೊನೆಯಲ್ಲಿ ನೀಡಿರುವ ಅಭ್ಯಾಸಗಳು ಮತ್ತು ಕಾರ್ಯಯೋಜನೆಗಳನ್ನು ನೀಡುವುದರ ಜೊತೆಗೆ ಪ್ರಚಲಿತ ಅಂಶಗಳಿಗೆ ಆದ್ಯತೆ ನೀಡಿ ಇವುಗಳನ್ನು ಅರ್ಥೈಸಿಕೊಳ್ಳಲು, ಚರ್ಚೆ, ಸಂವಾದ, ಪ್ರಾಯೋಗಿಕ ಚಟುವಟಿಕೆಗಳಿಗೆ ಅವಕಾಶ ಇರುವಂತೆ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪಠ್ಯಪುಸ್ತಕ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಪರಿಶೀಲಕರಿಗೆ, ಮಾರ್ಗದರ್ಶಕರಿಗೆ, ಪಠ್ಯಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ಹಾಗೂ ಈ ಕಾರ್ಯದಲ್ಲಿ ಸಹಕರಿಸಿದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ವಿದ್ಯಾರ್ಥಿಗಳಿಗೆ ಯಶಸ್ವಿ ಉಂಟಾಗಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲೆಂದು ಕರ್ನಾಟಕ ಪಠ್ಯಪುಸ್ತಕ ಸಂಘವು ಆಶಿಸುತ್ತದೆ.

**ಶ್ರೀ ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು.

# ಅಧ್ಯಕ್ಷರ ನುಡಿ

ರಾಷ್ಟ್ರಗಳು ಅಭಿವೃದ್ಧಿಯಾದರೆ ಜನ–ಜೀವನ ಮಟ್ಟವು ಉತ್ತಮವಾಗಿರುತ್ತದೆ ಎಂಬ ನಂಬಿಕೆಯಿಂದ ಬಹುತೇಕ ಅನಭಿವೃದ್ಧಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಶ್ರಮಿಸುತ್ತವೆ. ಅಭಿವೃದ್ಧಿಗೆ ಬಂಡವಾಳ ಹಾಗೂ ಹೂಟೆಯ ಕೊರತೆ ಎದುರಾಗುವುದರಿಂದ ಅಸಮತೋಲನ ಬೆಳವಣಿಗೆಯ ಪಥವನ್ನು ಇಚ್ಛಾಪೂರ್ವಕವಾಗಿ ಈ ರಾಷ್ಟ್ರಗಳು ಅನುಸರಿಸುತ್ತವೆ. ಹೆಚ್ಚು ಬೆಳವಣಿಗೆಯಾದರೆ ಸಾಕು, ಆ ಬೆಳವಣಿಗೆಯ ಹೆಚ್ಚಳ ನಿಧಾನವಾಗಿ ತಳಮಟ್ಟಕ್ಕೂ ಹರಿಯುವುದರಿಂದ (ಟ್ರಿಕಲ್ ಡೌನ್ ಎಫೆಕ್ಟ್) ಎಲ್ಲಾ ಕ್ಷೇತ್ರಗಳು ಅಭಿವೃದ್ಧಿಯಾಗುತ್ತವೆ ಎಂದು ಈ ರಾಷ್ಟ್ರಗಳು ನಂಬುತ್ತವೆ. ಆದರೆ, ಅನೇಕ ರಾಷ್ಟ್ರಗಳು ಅಭಿವೃದ್ಧಿ ವೇಗವನ್ನು ಹೆಚ್ಚಿಸಿಕೊಳ್ಳುತ್ತವಾದರೂ ಅದು ತಳಮಟ್ಟಕ್ಕೆ ಹರಿಯದಿರುವುದರಿಂದ ಎಲ್ಲರನ್ನು ಒಳಗೊಂಡ ಅಭಿವೃದ್ಧಿ ಅದಾಗುವುದಿಲ್ಲ.

ಭಾರತ ಇಂದು ಅಂತಹ ಸಂದಿಗ್ಧ ಸ್ಥಿತಿಯಲ್ಲಿದೆ. ಆರ್ಥಿಕ ಬೆಳವಣಿಗೆಯ ವೇಗ ಮತ್ತೊಮ್ಮೆ ಹೆಚ್ಚಾಗುವ ಎಲ್ಲ ಲಕ್ಷಣಗಳನ್ನು ನಮ್ಮ ದೇಶ ತೋರುತ್ತಿದೆ. ಆದರೆ, ಬಡವ–ಬಲ್ಲಿದ, ಜನ ಸಾಮಾನ್ಯ, ದುರ್ಬಲ, ದಲಿತ, ಮಹಿಳೆ–ಇವರನ್ನು ಒಳಗೊಂಡ ಬೆಳವಣಿಗೆಯಾಗಿ, 'ಸರ್ವರಿಗೂ ಸಮಪಾಲು ಸಮಬಾಳು' ಆಗುತ್ತದೆಂದು ಹೇಳುವುದು ಸಾಧ್ಯವಿಲ್ಲ. ಹಾಗಾಗಿ, ಈ ನಿಟ್ಟಿನಲ್ಲಿ ಭಾರತದ ಅರ್ಥಶಾಸ್ತ್ರದ ವ್ಯವಸ್ಥೆ ಹಾಗೂ ಆರ್ಥಿಕ ನೀತಿಗಳಲ್ಲಿ ಸೂಕ್ತ ಬದಲಾವಣೆ ಅಗತ್ಯವಾಗಿದೆ. ಅಂದರೆ ಭಾರತದ ಅರ್ಥಶಾಸ್ತ್ರವನ್ನು ಬೌದ್ಧಿಕವಾಗಿ ವಾಸ್ತವ ನೆಲೆಗಟ್ಟಿನ ಮೇಲೆ ಅಧ್ಯಯನ ಮಾಡಿ ಎಲ್ಲರನ್ನು ಒಳಗೊಂಡ ಸುಸ್ಥಿರ ಅಭಿವೃದ್ಧಿಯಾಗುವತ್ತ ಭಾರತವನ್ನು ಕೊಂಡೊಯ್ಯಬೇಕಿದೆ.

ಪ್ರಸ್ತುತ, 10ನೇ ತರಗತಿಯ ಅರ್ಥಶಾಸ್ತ್ರ ಪಠ್ಯದಲ್ಲಿ 'ಭಾರತೀಯ ಆರ್ಥಿಕತೆಯ ಮೂಲ ಅಂಶ'ಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. ಇತ್ತೀಚೆಗೆ ಭಾರತದ ಆರ್ಥಿಕತೆಯಲ್ಲಾದ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಠ್ಯವನ್ನು ರಚಿಸಲಾಗಿದೆ. ವಿದ್ಯಾರ್ಥಿಗಳ ದೃಷ್ಟಿಯಿಂದ ಸೂಕ್ಷ್ಮ ಹಾಗೂ ಕಠಿಣ ಅಂಶಗಳನ್ನು ಸರಳೀಕರಿಸುವ ಪ್ರಯತ್ನವನ್ನು ಅಲ್ಲಿ ಮಾಡಲಾಗಿದೆ. ಅನಭಿವೃದ್ಧಿಯ ಆರ್ಥಿಕತೆಯಿಂದ ಅಭಿವೃದ್ಧಿಯ ಆರ್ಥಿಕತೆಗೆ ತೆರಳಲು ನೈಸರ್ಗಿಕ ಸಂಪನ್ಮೂಲಗಳನ್ನು ಹಾಗೂ ಮಾನವ ತಾಕತ್ತನ್ನು ದಕ್ಷವಾಗಿ ಬಳಸಿಕೊಂಡು, ಕೃಷಿ ಹಾಗೂ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಿ, ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರ ಸಮಸ್ಯೆಗಳನ್ನು ಹೋಗಲಾಡಿಸಿ ಬಡತನವನ್ನು ನಿವಾರಿಸಲು ಪ್ರಯತ್ನಿಸಬೇಕಿದೆ. ಇದಕ್ಕೆ ಪೂರಕವಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ, ಹಾಗೆಯೇ ಭಾರತದ ಕೇಂದ್ರೀಯ ಬ್ಯಾಂಕ್ ಮತ್ತು ವಿದೇಶಿ ವ್ಯಾಪಾರದ ಮಹತ್ವ ಹಾಗೂ ಅಭಿವೃದ್ಧಿಯತ್ತ ಸಾಗಲು ಅವುಗಳ ಪಾತ್ರವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ವಿಭಿನ್ನ ಸಾಮರ್ಥ್ಯವುಳ್ಳ / ಅಂಧ ವಿದ್ಯಾರ್ಥಿಗಳು ಸೂಕ್ಷ್ಮ ಗ್ರಾಹಿಗಳಾಗಿರುವುದರಿಂದ ಅವರ ಉತ್ಕಟ ಕಲಿಯುವ ಹಂಬಲವನ್ನು ಪೋಷಿಸುವ ಸಲುವಾಗಿ ಆಸಕ್ತಿಯಿಂದ ಈ ಪಠ್ಯವನ್ನು ರಚಿಸಲಾಗಿದೆ. ಅಲ್ಲದೇ ಜನಮುಖಿ ಮತ್ತು ಸಮಾಜಮುಖಿ ಆಶಯಗಳನ್ನು ಇಟ್ಟುಕೊಂಡು ಈ ಹಂತದ ವಿದ್ಯಾರ್ಥಿಗಳಿಗೆ ಎಷ್ಟನ್ನು ತಿಳಿಸಬೇಕು ಎನ್ನುವ ಚರ್ಚೆ ನಡೆಸಿ ಈ ಪಠ್ಯವನ್ನು ಸಿದ್ಧಗೊಳಿಸಲಾಗಿದೆ.

ಶಿಕ್ಷಕರು, ತಪ್ಪದೇ ಅನುಸರಿಸಬೇಕಾದ ಕೆಲವು ಅಂಶಗಳನ್ನು ನಾವಿಲ್ಲಿ ಸೂಚಿಸಲು ಬಯಸುತ್ತೇವೆ:

* ಪ್ರತಿ ಪಾಠದ ಆರಂಭದಲ್ಲಿ, ವಿದ್ಯಾರ್ಥಿಗಳು ತಿಳಿಯುವ ವಿಷಯಗಳನ್ನು ಪ್ರಶ್ನೆಗಳ ಮೂಲಕ ನೀಡಲಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಈ ಪ್ರಶ್ನೆಗಳನ್ನು ಕೇಳಿ, ಅವುಗಳಿಗೆ ಉತ್ತರವನ್ನು ಹುಡುಕಿ ತಿಳಿವನ್ನು ಹೆಚ್ಚಿಸಿಕೊಳ್ಳುವ ವಾತಾವರಣವನ್ನು ಉಂಟು ಮಾಡಿ ವಿದ್ಯಾರ್ಥಿಗಳಿಗೆ ಕಲಿಯುವ ಉತ್ಸಾಹವನ್ನು ಮೂಡಿಸುವುದು ಮುಖ್ಯ. ಇದು ನಮ್ಮ ಆಶಯವಾಗಿದೆ.
* ಪಠ್ಯಪುಸ್ತಕದ ಉತ್ತಮ ಅಂಶಗಳು ಮತ್ತು ಕೊರತೆಗಳನ್ನು ಶಿಕ್ಷಕರು, ಕರ್ನಾಟಕ ಪಠ್ಯಪುಸ್ತಕ ಸಂಘದ ಮುಖ್ಯ ಸಂಯೋಜಕರಿಗೆ ತಿಳಿಸುವ ಕ್ರಮವನ್ನು ಸ್ವಾಗತಿಸುತ್ತೇವೆ. ಶಿಕ್ಷಕರ ಈ ಸೂಕ್ತ ಸಲಹೆಗಳನ್ನು ಪಠ್ಯಪುಸ್ತಕ ಪರಿಷ್ಕರಣೆಯ ಹಂತದಲ್ಲಿ ಅಳವಡಿಸಿಕೊಳ್ಳಲಾಗುವುದು. ಪೋಷಕರೂ ಈ ಕಾರ್ಯದಲ್ಲಿ ಭಾಗವಹಿಸುವುದಾದರೆ ಅದನ್ನೂ ಸ್ವಾಗತಿಸುತ್ತೇವೆ.
* ಪ್ರತಿ ಪಾಠದಲ್ಲಿ ನಿಯೋಜಿತ ಕಾರ್ಯವನ್ನು ಕೊಟ್ಟಿದ್ದು, ಅದನ್ನು ವಿದ್ಯಾರ್ಥಿಗಳು ಅರಿಯಲು ಶಿಕ್ಷಕರು ಸೂಕ್ತವಾದ ಮಾರ್ಗದರ್ಶನವನ್ನು, ಸಾಧನಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಿ ಎಂದು ನಾವು ನಮ್ರತೆಯಿಂದ ಶಿಕ್ಷಕ ಬಂಧುಗಳನ್ನು ಕೋರುತ್ತೇವೆ.
* ಸದರಿ ಪಠ್ಯಪುಸ್ತಕವನ್ನು ರೂಪುಗೊಳಿಸಲು ಸಹಕರಿಸಿದ ಎಲ್ಲರಿಗೂ ವಂದನೆಗಳು.

**ಡಾ. ಎಸ್.ಆರ್. ಕೇಶವ**
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ
ಬೆಂಗಳೂರು

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು:**

**ಡಾ. ಎಸ್.ಆರ್. ಕೇಶವ** : ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಸದಸ್ಯರುಗಳು:**

**ಶ್ರೀ ಮುತ್ತೇಗೌಡ** : ಅರ್ಥಶಾಸ್ತ್ರ ಉಪನ್ಯಾಸಕರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಮನಗರ.

**ಶ್ರೀ ಆದಿಶೇಷ ರಾವ್** : ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಗೌರಿಬಿದನೂರು.

**ಶ್ರೀ. ಎನ್. ಮಂಜುನಾಥ್** : ಅರ್ಥಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾಸ್ತಿ, ಕೋಲಾರ.

**ಪರಿಶೀಲಕರು:**

**ಪ್ರೋ.ಎಸ್.ಟಿ. ಬಾಗಲಕೋಟೆ** : ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.

**ಸಲಹೆ ಮತ್ತು ಮಾರ್ಗದರ್ಶನ:**

**ಶ್ರೀ ನಾಗೇಂದ್ರ ಕುಮಾರ್** : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀ ಪಾಂಡುರಂಗ** : ಉಪನಿರ್ದೇಶಕರು(ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು:**

**ಶ್ರೀಮತಿ. ಎನ್.ಎಸ್. ಸೌಮ್ಯ** : ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು.

## ಪರಿವಿಡಿ

# ವಿಷಯ : ಅರ್ಥಶಾಸ್ತ್ರ


| ಕ್ರ.ಸಂ. | ಶೀರ್ಷಿಕೆ: ಭಾರತೀಯ ಆರ್ಥಿಕತೆಯ ಮೂಲ ಅಂಶಗಳು | ಪುಟಸಂಖ್ಯೆ |
|---|---|---|
| ಅಧ್ಯಾಯ – 1 | ಅಭಿವೃದ್ಧಿ ಮತ್ತು ಅನಭಿವೃದ್ಧಿ ಆರ್ಥಿಕತೆ | 1 |
| ಅಧ್ಯಾಯ – 2 | ಭಾರತದ ನೈಸರ್ಗಿಕ ಸಂಪನ್ಮೂಲಗಳು | 17 |
| ಅಧ್ಯಾಯ – 3 | ಭಾರತದಲ್ಲಿ ಮಾನವ ಸಂಪನ್ಮೂಲ | 35 |
| ಅಧ್ಯಾಯ – 4 | ಭೂ ಸುಧಾರಣೆಗಳು, ಹಸಿರು ಕ್ರಾಂತಿ ಮತ್ತು ಕೃಷಿ ಅಭಿವೃದ್ಧಿ | 52 |
| ಅಧ್ಯಾಯ – 5 | ಕೃಷಿ ಹಣಕಾಸು | 73 |
| ಅಧ್ಯಾಯ – 6 | ಭಾರತದ ಕೈಗಾರಿಕಾಭಿವೃದ್ಧಿ | 86 |
| ಅಧ್ಯಾಯ – 7 | ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರು | 100 |
| ಅಧ್ಯಾಯ – 8 | ಭಾರತದಲ್ಲಿ ಬಡತನ | 112 |
| ಅಧ್ಯಾಯ – 9 | ಆರ್ಥಿಕ ಮೂಲಭೂತ ಸೌಕರ್ಯಗಳು | 122 |
| ಅಧ್ಯಾಯ – 10 | ಭಾರತದ ಕೇಂದ್ರ ಬ್ಯಾಂಕ್ | 137 |
| ಅಧ್ಯಾಯ – 11 | ಭಾರತದ ವಿದೇಶಿ ವ್ಯಾಪಾರ | 146 |

# ಅಧ್ಯಾಯ-1

# ಅಭಿವೃದ್ಧಿ ಮತ್ತು ಅನಭಿವೃದ್ಧಿ ಆರ್ಥಿಕತೆ

"ಅಭಿವೃದ್ಧಿಯೆಂದರೆ ವೈಭವೋಪೇತ ಜೀವನವೋ ಅಥವಾ ಶಾಂತಿ, ಅಭ್ಯುದಯ ಮತ್ತು ಸಂತೋಷವೋ ಎಂಬುದನ್ನು ನೀವೇ ನಿರ್ಧರಿಸಿ" - **ಸುಂದರಲಾಲ್ ಬಹುಗುಣ**

**ಪೀಠಿಕೆ :**

ವಿಶ್ವದ ಅನೇಕ ರಾಷ್ಟ್ರಗಳ ಸರ್ಕಾರಗಳು ತನ್ನ ನಾಗರಿಕರ ಜೀವನ ಮಟ್ಟದ ಉನ್ನತೀಕರಣ ಹಾಗೂ ಜನಸಾಮನ್ಯರ ಕ್ಷೇಮಾಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಆರ್ಥಿಕ ಅಭಿವೃದ್ಧಿಯಾಗುವತ್ತ ಶ್ರಮಿಸುತ್ತಲಿವೆ. ಆದರೆ ಎಲ್ಲಾ ರಾಷ್ಟ್ರಗಳ ಅಭಿವೃದ್ಧಿಯ ಮಟ್ಟವು ಏಕರೀತಿಯಾಗಿಲ್ಲ. ಆದ್ದರಿಂದ ಕೆಲವು ರಾಷ್ಟ್ರಗಳನ್ನು ಅನಭಿವೃದ್ಧಿ ರಾಷ್ಟ್ರಗಳೆಂದು, ಇನ್ನು ಕೆಲವು ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಂದೂ ಮತ್ತು ಇನ್ನುಳಿದ ರಾಷ್ಟ್ರಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಕರೆಯಲಾಗುತ್ತದೆ. ಹಾಗಾದರೆ ಆರ್ಥಿಕ ಅಭಿವೃದ್ಧಿ ಎಂದರೇನು? ಅನಭಿವೃದ್ಧಿ ರಾಷ್ಟವೆಂದರೇನು? ಅವುಗಳ ಲಕ್ಷಣಗಳು ಯಾವುವು? ಹಾಗೆಯೇ ಅಭಿವೃದ್ಧಿ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಯಾವುವು? ಅವುಗಳ ಲಕ್ಷಣಗಳು ಯಾವುವು? ಭಾರತವು ಅಭಿವೃದ್ಧಿಶೀಲ ರಾಷ್ಟ್ರವೊ ಅಥವಾ ಅಭಿವೃದ್ಧಿ ಹೊಂದಿದ ರಾಷ್ಟ್ರವೊ? ಭಾರತದ ಆರ್ಥಿಕತೆಯ ಲಕ್ಷಣಗಳೇನು? ಈ ನಿಟ್ಟಿನಲ್ಲಿ ಈ ಅಧ್ಯಾಯವು ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ನೀಡುವುದರ ಜೊತೆಗೆ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ತಿಳಿಸುತ್ತದೆ.

ಮೇಯರ್ ಮತ್ತು ಬಾಲ್ಡ್‌ವಿನ್‌ರವರ ಪ್ರಕಾರ: 'ಆರ್ಥಿಕ ಅಭಿವೃದ್ಧಿಯು ಸುದೀರ್ಘ ಕಾಲದವರೆಗೆ ಒಂದು ದೇಶದ ರಾಷ್ಟ್ರೀಯ ನೈಜ ಆದಾಯವನ್ನು ಹೆಚ್ಚಳ ಮಾಡುವ ಪ್ರಕ್ರಿಯೆಯಾಗಿದೆ. 1960ರವರೆಗೆ ಆರ್ಥಿಕ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗಳನ್ನು ಸಮಾನ ಪದಗಳನ್ನಾಗಿ ಬಳಸಲಾಗುತ್ತಿತ್ತು. ತದನಂತರ ಹೆಚ್ಚಿನ ಕೈಗಾರೀಕರಣ, ವಾಣಿಜ್ಯೀಕರಣದ ಪರಿಣಾಮವಾಗಿ ರಾಷ್ಟ್ರದ ನಿವ್ವಳ ದೇಶೀಯ ಉತ್ಪನ್ನದ ತಲಾ ಆದಾಯದಲ್ಲಿ ಆಗುವ ಹೆಚ್ಚಳವನ್ನು ಆರ್ಥಿಕ ಬೆಳವಣಿಗೆಯೆಂದು ಪರಿಗಣಿಸಲಾಯಿತು. ರಾಷ್ಟ್ರದಲ್ಲಿರುವ ಬಡತನ, ನಿರುದ್ಯೋಗ ಹಾಗೂ ಅಸಮಾನತೆಯನ್ನು ಕಡಿಮೆ ಮಾಡಿ ಕೃಷಿ ಪ್ರಧಾನ ಅರ್ಥವ್ಯವಸ್ಥೆಯಿಂದ ಕೈಗಾರಿಕಾ ಪ್ರಧಾನ ಅರ್ಥವ್ಯವಸ್ಥೆಯಾಗಿ ರಚನಾತ್ಮಕ ಬದಲಾವಣೆ ಹೊಂದುವುದರ ಜೊತೆಗೆ ಸುದೀರ್ಘ ಕಾಲದವರೆಗೆ ರಾಷ್ಟ್ರೀಯ ದೇಶೀಯ ಉತ್ಪನ್ನದಲ್ಲಿ ಹೆಚ್ಚಳವಾಗುವುದನ್ನು ಆರ್ಥಿಕ ಅಭಿವೃದ್ಧಿ ಎಂದು ವ್ಯಾಖ್ಯಾನಿಸಲಾಯಿತು. ಅಂತೆಯೇ ವಿಶ್ವಸಂಸ್ಥೆಯ ಪ್ರಕಾರ ಅಭಿವೃದ್ಧಿ ಎಂಬುದು ಕೇವಲ ಮನುಷ್ಯನ ಪ್ರಾಪಂಚಿಕ ಅಗತ್ಯತೆಯನ್ನು ಪೂರೈಸುವುದು ಮಾತ್ರವೇ ಅಲ್ಲ, ಅದು ಆತನ ಸಾಮಾಜಿಕ ಜೀವನವನ್ನು ಉತ್ತಮಗೊಳಿಸುವುದೂ ಆಗಿದೆ. ಹಾಗಾಗಿ ಅಭಿವೃದ್ಧಿಯೆಂದರೆ ಆರ್ಥಿಕ ಬೆಳವಣಿಗೆಯ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಂಸ್ಥಿಕ ಬೆಳವಣಿಗೆಯಾಗಿದೆ.

## ಅನಭಿವೃದ್ಧಿ ಆರ್ಥಿಕತೆ

ಅನಭಿವೃದ್ಧಿ ಅಥವಾ ಅಭಿವೃದ್ಧಿ ಹೊಂದದೇ ಇರುವ ಆರ್ಥಿಕತೆಯಲ್ಲಿ ಜನರ ಆದಾಯ ಮತ್ತು ಉಳಿತಾಯಗಳೆರಡೂ ಕಡಿಮೆ ಇರುತ್ತವೆ. ಬಹುತೇಕ ಜನರು ಅನಕ್ಷರಸ್ಥರಾಗಿದ್ದು, ಮೂಢನಂಬಿಕೆಗಳಿಗೆ ಬಲಿಯಾಗಿರುತ್ತಾರೆ. ಬಹುತೇಕ ಜನರು ಬಡವರಾಗಿದ್ದು, ಕನಿಷ್ಠ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ನೈಸರ್ಗಿಕ ಸಂಪನ್ಮೂಲಗಳು ಸದ್ಬಳಕೆಯಾಗದೇ ಉತ್ಪಾದನಾ ವಿಧಾನವು ಪುರಾತನವಾಗಿದ್ದು, ಒಟ್ಟಾರೆ ಉತ್ಪಾದನೆ ಕಡಿಮೆಯಿರುತ್ತದೆ.

ಭಾರತದ ಮೊದಲನೆಯ ಪಂಚವಾರ್ಷಿಕ ಯೋಜನೆಯ ಮೊದಲ ಸಂಪುಟದಲ್ಲಿ (1952) ಹೇಳಿದಂತೆ ಒಂದೆಡೆ ಉಪಯೋಗಿಸಲ್ಪಡದ ಇಲ್ಲವೇ ಕಡಿಮೆ ಉಪಯೋಗಿಸಿರುವ ಶ್ರಮಿಕ ಶಕ್ತಿ ಹಾಗೂ ಮತ್ತೊಂದೆಡೆ ಸದ್ಬಳಕೆಯಾಗದ ನೈಸರ್ಗಿಕ ಸಂಪನ್ಮೂಲಗಳ ಲಕ್ಷಣಗಳು ಯಥೇಚ್ಛವಾಗಿ ಕಾಣಸಿಗುವ ರಾಷ್ಟ್ರವನ್ನು ಅಭಿವೃದ್ಧಿ ಹೊಂದಿಲ್ಲದ ಆರ್ಥಿಕತೆ ಎಂದು ಕರೆಯಲಾಗುತ್ತದೆ.

## ಅನಭಿವೃದ್ಧಿ ಆರ್ಥಿಕತೆಯ ಪ್ರಮುಖ ಲಕ್ಷಣಗಳು

ಅನಭಿವೃದ್ಧಿ ಆರ್ಥಿಕತೆಯ ಲಕ್ಷಣಗಳನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ

1) ಆರ್ಥಿಕ ಲಕ್ಷಣಗಳು 2) ಆರ್ಥಿಕೇತರ ಲಕ್ಷಣಗಳು

## ಆರ್ಥಿಕ ಲಕ್ಷಣಗಳು

ಅನಭಿವೃದ್ಧಿ ಆರ್ಥಿಕತೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳಾದ ಖನಿಜಗಳು, ಅರಣ್ಯ ಸಂಪತ್ತು, ಜಲಸಂಪನ್ಮೂಲಗಳು ಹೇರಳವಾಗಿ ಲಭ್ಯವಿದ್ದರೂ ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳದಿರುವುದು ಪ್ರಮುಖ ಲಕ್ಷಣವಾಗಿದೆ. ಅಂಥ ರಾಷ್ಟ್ರಗಳ ಇತರ ಮುಖ್ಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ:

**ಬಂಡವಾಳದ ಕೊರತೆ :** ಆರ್ಥಿಕ ಅಭಿವೃದ್ಧಿಗೆ ಬಂಡವಾಳವು ಮೂಲ ಅಗತ್ಯವಾಗಿದ್ದು ಅದು ಅನಭಿವೃದ್ಧಿ ದೇಶಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಈ ದೇಶಗಳಲ್ಲಿ ಹೂಡಿಕೆ ಮಾಡಲು ಸೂಕ್ತ ಉತ್ತೇಜಕಗಳು ಲಭ್ಯವಿರದಿರುವುದರಿಂದ ಬಂಡವಾಳದ ಹೂಡಿಕೆ ಮತ್ತು ತತ್ಪರಿಣಾಮವಾಗಿ ಆದಾಯ ಹಾಗೂ ಉಳಿತಾಯಗಳೆರಡೂ ಕಡಿಮೆಯಿರುತ್ತದೆ. ಈ ಕಾರಣದಿಂದಾಗಿ ಮುಂದೆಯೂ ಬಂಡವಾಳದ ಲಭ್ಯತೆ ಕಡಿಮೆಯಾಗುತ್ತದೆ.

**ಮಾನವಶಕ್ತಿ ಸಂಪನ್ಮೂಲದ ಕೊರತೆ:** ಅನಭಿವೃದ್ಧಿ ದೇಶಗಳಲ್ಲಿ ಜನಸಂಖ್ಯೆ ಹೆಚ್ಚಾಗಿದ್ದರೂ ಅಧಿಕ ಅನಕ್ಷರತೆಯ ಕಾರಣದಿಂದಾಗಿ ಅವರಲ್ಲಿ ಕೌಶಲ್ಯಗಳ ಕೊರತೆ ಇದ್ದು, ಉತ್ಪಾದಕ ಚಟುವಟಿಕೆಗಳಲ್ಲಿ ಅವರನ್ನು ಗರಿಷ್ಠ ಮಟ್ಟದಲ್ಲಿ ತೊಡಗಿಸಿಕೊಳ್ಳಲಾಗುವುದಿಲ್ಲ.

**ಆಧುನಿಕ ತಾಂತ್ರಿಕತೆಯ ಕೊರತೆ** : ಅನಭಿವೃದ್ಧಿ ರಾಷ್ಟ್ರಗಳಲ್ಲಿ ತಾಂತ್ರಿಕತೆಯ ಕೊರತೆಯೂ ಯಥೇಚ್ಚವಾಗಿ ಕಾಡುತ್ತದೆ. ಬಂಡವಾಳದ ಕೊರತೆಯಿಂದಾಗಿ ತಾಂತ್ರಿಕತೆಯ ಉನ್ನತೀಕರಣ ಆಗದೇ ಇರುವುದು ಅಭಿವೃದ್ಧಿಗೆ ದೊಡ್ಡ ಹಿನ್ನೆಡೆಯಾಗುತ್ತದೆ.

**ಹಣಕಾಸು ಸಂಸ್ಥೆಗಳ ಕೊರತೆ** : ಅನಭಿವೃದ್ಧಿಯ ರಾಷ್ಟ್ರಗಳಲ್ಲಿ ಸಾಂಸ್ಥಿಕ ವಲಯದಲ್ಲಿ ಹಣಕಾಸು ಸಂಸ್ಥೆಗಳು (ಬ್ಯಾಂಕುಗಳು, ಸಾಲ ಸಂಸ್ಥೆಗಳು, ಇತ್ಯಾದಿ) ಅಭಿವೃದ್ಧಿಯಾಗಿರುವುದಿಲ್ಲ. ಹಾಗಾಗಿ ಜನರ ಉಳಿತಾಯವನ್ನು ಸಂಗ್ರಹಿಸಿ ಹೂಡಿಕೆದಾರರಿಗೆ ಅದನ್ನು ಒದಗಿಸುವ ಕಾರ್ಯ ಸೂಕ್ತ ರೀತಿಯಲ್ಲಿ ಆಗದೇ ಇರುವುದರಿಂದ ಅಭಿವೃದ್ಧಿಯು ತೀವ್ರವಾಗುವುದಿಲ್ಲ.

**ಮೂಲಸೌಕರ್ಯಗಳ ಕೊರತೆ** : ಅನಭಿವೃದ್ಧಿ ದೇಶಗಳಲ್ಲಿ ಮೂಲಸೌಕರ್ಯಗಳಾದ ಆರೋಗ್ಯ, ಶಿಕ್ಷಣ, ಸಾರಿಗೆ, ಸಂಪರ್ಕ ವ್ಯವಸ್ಥೆಗಳ ಕೊರತೆಯಿದ್ದು ಅದರ ದೆಸೆಯಿಂದಾಗಿಯೂ ಅಭಿವೃದ್ಧಿಯು ಕುಂಠಿತಗೊಳ್ಳುತ್ತದೆ.

## ಬಡತನದ ವಿಷವರ್ತುಲ

ಅನಭಿವೃದ್ಧಿ ದೇಶಗಳಲ್ಲಿ ಹಿಂದುಳಿದಿರುವಿಕೆಯು ವರ್ತುಲಾಕಾರದ ಕಾರಣ-ಪರಿಣಾಮಗಳನ್ನು ತೋರ್ಪಡಿಸುತ್ತಿದ್ದು, ಇಳಿಕೆಯಾಗದ ಬಡತನವು ಅದರ ಒಂದು ಕಠೋರ ಸತ್ಯವಾಗಿ ಪರಿಣಮಿಸುತ್ತದೆ. ಪ್ರೊ. ರ್‍ಯಾಗ್ನರ್ ನರ್ಕ್ಸ್‌ರವರ ಪ್ರಕಾರ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಹಲವಾರು ಶಕ್ತಿಗಳು ವರ್ತುಲಾಕಾರವಾಗಿ ಪರಸ್ಪರ ಪ್ರತಿಕ್ರಿಯಿಸುತ್ತ ಬಡರಾಷ್ಟ್ರವು ಬಡತನದಲ್ಲಿ ಉಳಿಯುವ ಪ್ರಕ್ರಿಯೆಯೇ ಈ ವಿಷವರ್ತುಲವಾಗಿದೆ. ಅವರ ಪ್ರಕಾರ 'ಒಂದು ರಾಷ್ಟ್ರವು ಬಡ ರಾಷ್ಟ್ರವಾಗಿದೆ ಏಕೆಂದರೆ ಅದು ಬಡತನದಲ್ಲಿದೆ'. (A Country is poor because it is poor).

ಬಡತನದ ವಿಷವರ್ತುಲವನ್ನು ಬೇಡಿಕೆ ಮತ್ತು ಪೂರೈಕೆಗಳೆರಡೂ ದೃಷ್ಟಿಗಳಿಂದ ಅರ್ಥಮಾಡಿಕೊಳ್ಳಬಹುದಾಗಿದೆ (ಚಿತ್ರವನ್ನು ನೋಡಿರಿ).



ಅನಭಿವೃದ್ಧಿ ದೇಶಗಳಲ್ಲಿ ಕಡಿಮೆ ಆದಾಯದಿಂದಾಗಿ, ಉಳಿತಾಯ ಕಡಿಮೆಯಾಗುತ್ತದೆ, ಅದರ ಪರಿಣಾಮವಾಗಿ ಕಡಿಮೆ ಹೂಡಿಕೆಯಾಗುತ್ತದೆ. ಕಡಿಮೆ ಹೂಡಿಕೆಯ ದೆಸೆಯಿಂದಾಗಿ ಬಂಡವಾಳ ಸಂಚಯನ ಕಡಿಮೆಯಾಗಿ ಉತ್ಪಾದಕತೆಯು ಕಡಿಮೆಯಿರುತ್ತದೆ ಮತ್ತು ಅದು ಕಡಿಮೆ ಆದಾಯಕ್ಕೆ ಕಾರಣವಾಗುತ್ತದೆ.

ಅನಭಿವೃದ್ಧಿ ದೇಶಗಳಲ್ಲಿನ ಕಡಿಮೆ ಆದಾಯವು ಮಾರುಕಟ್ಟೆ ಬೆಳವಣಿಗೆಗೆ ಪೂರಕವಲ್ಲದಿರುವುದರಿಂದ ಸಣ್ಣ ಗಾತ್ರದ ಮಾರುಕಟ್ಟೆಯಿರುತ್ತದೆ ಮತ್ತು ಇದರ ಕಾರಣದಿಂದಾಗಿ ಆದಾಯದ ಪ್ರಮಾಣ ಕಡಿಮೆ ಇರುತ್ತದೆ. ಕಡಿಮೆ ಆದಾಯದಿಂದ ಕಡಿಮೆ ಮಟ್ಟದ ಬಂಡವಾಳ ಸೃಷ್ಟಿ, ಅದರಿಂದಾಗಿ ಕಡಿಮೆ ಉತ್ಪಾದಕತೆ ಹಾಗೂ ಅದರಿಂದಾಗಿ ಕಡಿಮೆ ಆದಾಯ ಬರುತ್ತದೆ.

### ಆರ್ಥಿಕೇತರ ಲಕ್ಷಣಗಳು

ಆರ್ಥಿಕೇತರ ಲಕ್ಷಣಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಿದ್ದು, ಅವುಗಳೆಂದರೆ

ಅ) ಸಾಮಾಜಿಕ ಲಕ್ಷಣಗಳು ಆ) ರಾಜಕೀಯ ಹಾಗೂ ಆಡಳಿತಾತ್ಮಕ ಲಕ್ಷಣಗಳು.

### ಅ. ಸಾಮಾಜಿಕ ಲಕ್ಷಣಗಳು

## 1. ಜಾತಿ ಮತ್ತು ವರ್ಗಗಳ ಅಸ್ತಿತ್ವ

ಅನಭಿವೃದ್ಧಿಯ ದೇಶಗಳಲ್ಲಿ ಜಾತಿ ಹಾಗೂ ವರ್ಗವ್ಯವಸ್ಥೆಯ ಅಸ್ತಿತ್ವವಿದ್ದು ಅದು ಆರ್ಥಿಕ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸುತ್ತದೆ.

## 2. ಹೆಚ್ಚಿನ ಆದಾಯ ಅಸಮಾನತೆ

ಮುಂದುವರೆದ ರಾಷ್ಟ್ರಗಳಿಗೆ ಹೋಲಿಸಿದರೆ ಅನಭಿವೃದ್ಧಿ ರಾಷ್ಟ್ರಗಳಲ್ಲಿ ಆದಾಯ ಅಸಮಾನತೆಯು ಅತಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಅನಭಿವೃದ್ಧಿ ರಾಷ್ಟ್ರಗಳಲ್ಲಿ ಆದಾಯ ಹಂಚಿಕೆಯ ತಳದಲ್ಲಿರುವ ಅತ್ಯಂತ ಕಡುಬಡವರಾದ ಶೇ. 10ರಷ್ಟು ಜನರಲ್ಲಿ ಹಂಚಿಕೆಯಾದ ರಾಷ್ಟ್ರೀಯ ಆದಾಯದ ಪ್ರಮಾಣವನ್ನು ಅದೇ ರಾಷ್ಟ್ರದ ಆದಾಯ ಹಂಚಿಕೆಯ ಮೇಲ್ತುದಿಯಲ್ಲಿರುವ ಅತ್ಯಂತ ಶ್ರೀಮಂತ ಶೇ. 10ರಷ್ಟು ಜನರಲ್ಲಿ ಹಂಚಿಕೆಯಾಗಿರುವ ರಾಷ್ಟ್ರೀಯ ಆದಾಯವನ್ನು ಹೋಲಿಸಿದಾಗ ಆದಾಯ ಅಸಮಾನತೆಯ ತೀವ್ರತೆ ಎದ್ದು ಕಾಣುತ್ತದೆ.

ಉದಾ: ಕೀನ್ಯಾ, ನೈಜೀರಿಯಾ, ಜಾಂಬಿಯಾ, ಕೋಲಂಬಿಯಾ ದೇಶಗಳಲ್ಲಿ ಆ ದೇಶದ ಕೆಳತುದಿಯಲ್ಲಿರುವ ಶೇ. 10 ರಷ್ಟು ಕಡುಬಡವರಿಗೆ ರಾಷ್ಟ್ರೀಯ ಆದಾಯದಿಂದ ಕೇವಲ ಶೇ. ಒಂದರಷ್ಟು ಇಲ್ಲವೇ ಅದಕ್ಕಿಂತ ಕಡಿಮೆ ಆದಾಯ ಹಂಚಿಕೆಯಾಗುತ್ತದೆ. ಆದರೆ ಅದೇ ದೇಶದ ಮೇಲ್ತುದಿಯಲ್ಲಿರುವ ಶೇ. 10ರಷ್ಟು ಸಿರಿವಂತರಿಗೆ ಸರಾಸರಿ ಶೇ. 42 ರಿಂದ ಶೇ. 45ರಷ್ಟು ಆದಾಯ ಹಂಚಿಕೆಯಾಗುತ್ತದೆ.

## 3. ಬಡತನದ ಹೆಚ್ಚಿನ ಹೊರೆ

ಜೀವನದ ಅವಶ್ಯಕ ವಸ್ತುಗಳಾದ ಆಹಾರ, ಬಟ್ಟೆ, ವಸತಿಯನ್ನು ಪೂರೈಸಿಕೊಳ್ಳಲು ಆಗದ ಸ್ಥಿತಿಗೆ ಬಡತನ ಎಂದು ಕರೆಯಬಹುದು. ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ವಬ್ಯಾಂಕು ದಿನವೊಂದಕ್ಕೆ 1.25 ಡಾಲರ್‌ಗಿಂತ ಕಡಿಮೆ ವೆಚ್ಚ ಮಾಡುವ ಜನರನ್ನು ಬಡವರು ಎಂದು ಗುರುತಿಸಲಾಗುತ್ತದೆ. 1.25 ಡಾಲರ್ ವೆಚ್ಚವು ಅಂತರಾಷ್ಟ್ರೀಯ ಬಡತನ ರೇಖೆಯಾಗಿದ್ದು ಅದಕ್ಕಿಂತ ಕಡಿಮೆ ವೆಚ್ಚ ಮಾಡುವವರನ್ನು ಬಡತನ ರೇಖೆಯ ಕೆಳಗಿರುವವರು ಎಂದು ಹೇಳಲಾಗುತ್ತದೆ. ಪ್ರತಿಯೊಂದು ದೇಶವು ಬಡತನ ರೇಖೆಯ ತನ್ನದೇ ಆದ ಮಾನದಂಡವನ್ನು ಬಳಸಿ ಅದಕ್ಕಿಂತ ಕೆಳಗೆ ಇರುವ ಜನರನ್ನು ಗುರುತಿಸುವ ಪ್ರಯತ್ನ ಮಾಡುತ್ತದೆ. ಉದಾಹರಣೆಗೆ ಭಾರತದಲ್ಲಿ ಗ್ರಾಮೀಣ ಪ್ರದೇಶದಲ್ಲಿ ದಿನವೊಂದಕ್ಕೆ 2400 ಕ್ಯಾಲೋರಿ ಮತ್ತು ನಗರ ಪ್ರದೇಶದಲ್ಲಿ ದಿನವೊಂದಕ್ಕೆ 2100 ಕ್ಯಾಲೋರಿ ಶಕ್ತಿ ನೀಡುವಷ್ಟು ಆಹಾರವನ್ನು ಸೇವಿಸಲು ಅಸಮರ್ಥರಾದವರನ್ನು ಬಡವರು ಎಂದು ಗುರುತಿಸಲಾಗುತ್ತದೆ. ಹಾಗೆಯೇ ತೆಂಡುಲ್ಕರ್ ಸಮಿತಿಯು ಗ್ರಾಮೀಣ ಪ್ರದೇಶದಲ್ಲಿ ತಲಾ ರೂ. 26 ಹಾಗೂ ಪಟ್ಟಣ ಪ್ರದೇಶದಲ್ಲಿ ತಲಾ ರೂ. 32ಕ್ಕಿಂತ ಕಡಿಮೆ ಅನುಭೋಗಿ ವೆಚ್ಚವನ್ನು ಮಾಡುವಂಥ ವ್ಯಕ್ತಿಗಳನ್ನು ಬಡತನದ ರೇಖೆಗಿಂತ ಕೆಳಗೆ ವಾಸಿಸುವವರು ಎಂದು ಗುರುತಿಸಿದೆ.

ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ಅನೇಕ ರಾಷ್ಟ್ರಗಳಲ್ಲಿ ಕಡುಬಡತನದ ತೀವ್ರತೆ ಹೆಚ್ಚಿದೆ. ಬಡತನ ಹೆಚ್ಚಿರುವ ರಾಷ್ಟ್ರಗಳಲ್ಲಿ ಅನಕ್ಷರತೆ, ಅಪೌಷ್ಠಿಕತೆ, ಅನಾರೋಗ್ಯ, ಶಿಶು ಮರಣದರ ಹಾಗೂ ತಾಯಂದಿರ ಮರಣ ದರಗಳು ಹೆಚ್ಚಾಗಿರುವುದೂ ಕಂಡುಬರುತ್ತದೆ.

## ವಿಶ್ವ ಅಭಿವೃದ್ಧಿ ವರದಿ 2014

2014ರ ವಿಶ್ವ ಅಭಿವೃದ್ಧಿ ವರದಿಯು 2012ರಲ್ಲಿ ಇದ್ದ ತಲಾ ಆದಾಯವನ್ನು ಪರಿಗಣಿಸಿ ವಿವಿಧ ರಾಷ್ಟ್ರಗಳನ್ನು ಈ ಕೆಳಗಿನಂತೆ ವರ್ಗೀಕರಿಸಿದೆ:

1. **ಹೆಚ್ಚು ಆದಾಯ ಹೊಂದಿರುವ ದೇಶಗಳು:** 12,616 ಡಾಲರುಗಳಿಗಿಂತ ಹೆಚ್ಚು ತಲಾದಾಯ ಹೊಂದಿರುವ ದೇಶಗಳು **ಉದಾ:** ಅಮೇರಿಕಾ, ಕೆನಡಾ, ಜಪಾನ್, ಇತ್ಯಾದಿ.

2. **ಮಧ್ಯಮ ಆದಾಯ ಹೊಂದಿರುವ ದೇಶಗಳು:** 1036 ಡಾಲರುಗಳಿಂದ 12,615 ಡಾಲರುಗಳಷ್ಟು ತಲಾದಾಯ ಹೊಂದಿರುವ ದೇಶಗಳು. **ಉದಾ:** ಚೀನಾ, ಭಾರತ, ಕೊರಿಯಾ, ಈಜಿಪ್ಟ್, ಇರಾನ್ ಇತ್ಯಾದಿ.

3. **ಕಡಿಮೆ ಆದಾಯ ಹೊಂದಿರುವ ದೇಶಗಳು:** 1035 ಡಾಲರುಗಳಿಗಿಂತ ಕಡಿಮೆ ತಲಾದಾಯ ಹೊಂದಿರುವ ದೇಶಗಳು. **ಉದಾ:** ಇಥಿಯೋಪಿಯಾ, ಕೀನ್ಯಾ, ಬಾಂಗ್ಲಾದೇಶ, ನೇಪಾಳ ಇತ್ಯಾದಿ.

### ಮಾನವ ಅಭಿವೃದ್ಧಿ ವರದಿ

ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ರೂಪಿಸಿದ ಇನ್ನೊಂದು ಮಾನದಂಡವೇ ಮಾನವ ಅಭಿವೃದ್ಧಿ ಸೂಚ್ಯಂಕ. ಇದನ್ನು 1990ರಲ್ಲಿ ಪಾಕಿಸ್ತಾನದ ಅರ್ಥಶಾಸ್ತ್ರಜ್ಞ ಮೆಹಬೂಬ್ ಉಲ್ ಹಕ್ ರವರು ರೂಪಿಸಿದರು. ಅವರು ಈ ಸೂಚ್ಯಂಕವನ್ನು ಯಾವುದೇ ರಾಷ್ಟ್ರದ ಶೈಕ್ಷಣಿಕ, ಆರೋಗ್ಯ ಮತ್ತು ಆದಾಯದಲ್ಲಿನ ಸಾಧನೆಗಳನ್ನು, ಆಯಾ ಅಂಶಗಳಲ್ಲಿನ ಅತ್ಯುನ್ನತ ಸಾಧನೆಗಳಿಗೆ ಹೋಲಿಸುವುದರೊಂದಿಗೆ, ಸದರಿ ಸಾಧನೆಗಳನ್ನು ಸರಾಸರಿಗೊಳಿಸಿ ಲೆಕ್ಕ ಹಾಕಿದ್ದಾರೆ. ಈ ಸೂಚ್ಯಂಕದ ಮೌಲ್ಯವು ಸೊನ್ನೆ ಮತ್ತು ಒಂದರ ಮಧ್ಯೆ ಬರುತ್ತಿದ್ದು, ಅದರ ಆಧಾರದ ಮೇಲೆ ವಿಶ್ವದ ರಾಷ್ಟ್ರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ:

1) **ಹೆಚ್ಚು ಮಾನವ ಅಭಿವೃದ್ಧಿ ಹೊಂದಿದ ರಾಷ್ಟಗಳು:** 0.8 ಕ್ಕಿಂತ ಹೆಚ್ಚು ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ಹೊಂದಿರುವ ರಾಷ್ಟ್ರಗಳನ್ನು ಹೆಚ್ಚು ಮಾನವ ಅಭಿವೃದ್ಧಿ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ.

2) **ಮಧ್ಯಮ ಮಾನವ ಅಭಿವೃದ್ಧಿ ಹೊಂದಿದ ರಾಷ್ಟಗಳು:** 0.5 ರಿಂದ 0.8ರ ನಡುವೆ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ಹೊಂದಿರುವ ರಾಷ್ಟ್ರಗಳನ್ನು ಮಧ್ಯಮ ಮಾನವ ಅಭಿವೃದ್ಧಿ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ.

3) **ಕಡಿಮೆ ಮಾನವ ಅಭಿವೃದ್ಧಿ ಹೊಂದಿದ ರಾಷ್ಟಗಳು:** 0.5 ಕ್ಕಿಂತ ಕಡಿಮೆ ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ಹೊಂದಿರುವ ರಾಷ್ಟ್ರಗಳನ್ನು ಕಡಿಮೆ ಮಾನವ ಅಭಿವೃದ್ಧಿ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ.

## 4. ಮೂಢನಂಬಿಕೆಗಳು ಹಾಗೂ ಕಂದಾಚಾರಗಳು

ಅನಭಿವೃದ್ಧಿ ದೇಶಗಳಲ್ಲಿ ಅನೇಕ ಮೂಢನಂಬಿಕೆಗಳು ಹಾಗೂ ಕಂದಾಚಾರಗಳು ಚಾಲ್ತಿಯಲ್ಲಿರುತ್ತವೆ. ಇವುಗಳು ಜನರನ್ನು ವಿವೇಚನಾಯುಕ್ತವಾಗಿ ಚಿಂತಿಸಲು ಅಡ್ಡಿಪಡಿಸುತ್ತವೆ. ಆದ್ದರಿಂದ ಇವುಗಳು ಆರ್ಥಿಕ ಅಭಿವೃದ್ಧಿಗೆ ದೊಡ್ಡ ತೊಡಕಾಗುತ್ತವೆ.

### ರಾಜಕೀಯ ಹಾಗೂ ಆಡಳಿತಾತ್ಮಕ ಲಕ್ಷಣಗಳು

ಅನಭಿವೃದ್ಧಿ ರಾಷ್ಟ್ರಗಳಲ್ಲಿ ಅಭಿವೃದ್ಧಿಯತ್ತ ಮುನ್ನಡೆಯಲು ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ. ಆಡಳಿತಾತ್ಮಕ ಶಾಹಿಯಲ್ಲಿನ ಭ್ರಷ್ಟಾಚಾರದಿಂದಾಗಿ ಬಡವರಿಗೆ ಮತ್ತು ಅರ್ಹರಿಗೆ ತಲುಪಬೇಕಾದ ಯೋಜನೆಗಳು ಸೋರಿ ಹೋಗುತ್ತವೆ. ಹಾಗಾಗಿ ಉತ್ತಮ ಯೋಜನೆಗಳು ಸಹ ಜಾರಿಗೊಳ್ಳುವಲ್ಲಿ ವಿಫಲವಾಗುತ್ತವೆ.

### ಅಭಿವೃದ್ಧಿ ಶೀಲ ರಾಷ್ಟಗಳು

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಬಡತನದ ವಿಷವರ್ತುಲದಿಂದ ಹೊರಬಂದು ಸ್ವಯಂಚಾಲಿತ ಆರ್ಥಿಕತೆಯಾಗಿ, ನಿರಂತರ ಆರ್ಥಿಕ ಬೆಳವಣಿಗೆ ಸಾಧಿಸುತ್ತವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬಂಡವಾಳ

ಸಂಪನ್ಮೂಲಗಳು ಹೇರಳವಾಗಿರುತ್ತದೆ. ಶ್ರಮಿಕರ ದಕ್ಷತೆಯಲ್ಲಿ ಹೆಚ್ಚಳ, ಉತ್ಪಾದನಾ ಸಂಘಟನೆಗಳು ಉತ್ತಮವಾಗಿರುತ್ತದೆ ಮತ್ತು ಅಭಿವೃದ್ಧಿ ಹೊಂದಿದ ಸಾರಿಗೆ, ಸಂಪರ್ಕ, ಬಲಿಷ್ಠ ಬ್ಯಾಂಕುಗಳು ಹಾಗೂ ಇತರೆ ಹಣಕಾಸಿನ ಸಂಸ್ಥೆಗಳು, ಹೆಚ್ಚಿರುವ ನಗರೀಕರಣ, ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಲಭ್ಯತೆ, ಉತ್ತಮ ಜೀವನದ ಮಟ್ಟ, ಹೆಚ್ಚಿನ ಅವಧಿಯ ವಿರಾಮದ ಲಭ್ಯತೆ ಹಾಗೂ ಅಧಿಕ ಮನರಂಜನೆಯ ಸೌಲಭ್ಯಗಳು ಕಂಡುಬರುತ್ತವೆ. ಅಮೇರಿಕ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಜಪಾನ್, ಕೆನಡಾ ಇತ್ಯಾದಿ ದೇಶಗಳನ್ನು ಅಭಿವೃದ್ಧಿ ಹೊಂದಿದ ದೇಶಗಳೆಂದು ಕರೆಯಲಾಗುತ್ತದೆ.

**ಅಭಿವೃದ್ಧಿ ಹೊಂದಿದ ದೇಶಗಳ ಪ್ರಮುಖ ಲಕ್ಷಣಗಳೆಂದರೆ:**

1) ಕೈಗಾರಿಕಾ ವಲಯದ ಪ್ರಾಮುಖ್ಯತೆ
2) ಹೆಚ್ಚಿನ ಮಟ್ಟದ ಬಂಡವಾಳ ಸಂಚಯನ
3) ಉನ್ನತ ಮಟ್ಟದ ಉತ್ಪಾದನಾ ಕೌಶಲ್ಯ ಹಾಗೂ ತಂತ್ರಜ್ಞಾನದ ಬಳಕೆ
4) ಜನಸಂಖ್ಯೆಯ ಕಡಿಮೆ ಬೆಳವಣಿಗೆ ದರ
5) ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಲಭ್ಯತೆ
6) ಅತ್ಯುತ್ತಮ ಮೂಲಭೂತ ಸೌಕರ್ಯಗಳ ಲಭ್ಯತೆ

## 1. ಕೈಗಾರಿಕಾ ವಲಯದ ಪ್ರಾಮುಖ್ಯತೆ

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕೈಗಾರಿಕಾ ವಲಯದ ನಿರಂತರ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಕೈಗಾರಿಕಾ ವಲಯಕ್ಕೆ ಪ್ರಾಮುಖ್ಯತೆಯನ್ನು ನೀಡುವುದರಿಂದ ಲಭ್ಯವಿರುವ ಸಂಪನ್ಮೂಲಗಳನ್ನು ದಕ್ಷವಾಗಿ ಬಳಸಿಕೊಂಡು ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಿ ಆ ಮೂಲಕ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಬಹುದಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಆದಾಯದ ಹೆಚ್ಚಿನ ಪಾಲು ಕೃಷಿಯೇತರ ವಲಯದಿಂದ ಲಭ್ಯವಾಗುತ್ತದೆ.

## 2. ಹೆಚ್ಚಿನ ಮಟ್ಟದ ಬಂಡವಾಳ ಸಂಚಯನ

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಉಳಿತಾಯ ಮತ್ತು ಹೂಟೆಯು ಹೆಚ್ಚಾಗಿರುತ್ತದೆ. ಹಾಗಾಗಿ ಅಲ್ಲಿ ಬಂಡವಾಳ ಸಂಚಯನ ಉತ್ತಮವಾಗಿರುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಹೂಟೆಯ ದರವು ಆ ದೇಶಗಳ ರಾಷ್ಟ್ರೀಯ ಆದಾಯದ ಶೇ. 25 ರಿಂದ ಶೇ. 30ರಷ್ಟು ಇರುತ್ತದೆ.

## 3. ಉನ್ನತ ಮಟ್ಟದ ಉತ್ಪಾದನಾ ಕೌಶಲ್ಯ ಹಾಗೂ ತಂತ್ರಜ್ಞಾನದ ಬಳಕೆ

ಉನ್ನತ ಮಟ್ಟದ ಉತ್ಪಾದನಾ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ಮುಂದುವರೆದ ರಾಷ್ಟ್ರಗಳಲ್ಲಿ ವೈಜ್ಞಾನಿಕ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಹಾಗಾಗಿ ಅಭಿವೃದ್ಧಿ ಹೊಂದಿದ ದೇಶಗಳು ಇತರೆ ದೇಶಗಳಿಗಿಂತ ಕಡಿಮೆ ಖರ್ಚಿನ ಉನ್ನತ ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ತಯಾರಿಸುತ್ತವೆ. ಉನ್ನತ ಮಟ್ಟದ ಉತ್ಪಾದನಾ ಕೌಶಲ್ಯ ಹಾಗೂ ತಂತ್ರಜ್ಞಾನದ ಉಪಯೋಗದಿಂದಲೇ ಜಪಾನ್, ಜರ್ಮನಿ, ಇಸ್ರೇಲ್ ದೇಶಗಳು ಅತಿ ವೇಗವಾಗಿ ತಮ್ಮ ತಮ್ಮ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಿವೆ.

## 4. ಕಡಿಮೆ ಜನಸಂಖ್ಯೆ ಬೆಳವಣಿಗೆ ದರ

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಉತ್ತಮ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣದ ಲಭ್ಯತೆಯಿಂದ ಸಹಜವಾಗಿ ಜನನ ಮತ್ತು ಮರಣ ದರಗಳು ಕಡಿಮೆಯಾಗುತ್ತದೆ. ಉತ್ತಮ ಗುಣಮಟ್ಟದ ಆರೋಗ್ಯ ಸೌಲಭ್ಯಗಳ ಲಭ್ಯತೆಯಿಂದ ಜನರ ಜೀವಿತಾವಧಿಯು ಹೆಚ್ಚಾಗಿರುತ್ತದೆ. ಒಂದೆಡೆ ಹೆಚ್ಚಿಗಿರುವ ಬಂಡವಾಳ ಸಂಚಯನ ಮತ್ತೊಂದೆಡೆ ಕಡಿಮೆ ಜನಸಂಖ್ಯೆ ಬೆಳವಣಿಗೆ ದರವು ಆ ರಾಷ್ಟ್ರಗಳಲ್ಲಿ ಹೆಚ್ಚಿನ ತಲಾ ಆದಾಯ ಮತ್ತು ಹೆಚ್ಚಿನ ಏಳಿಗೆಗೆ ಕಾರಣವಾಗುತ್ತದೆ. ಹಾಗಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಜನರು ಉತ್ತಮವಾದ ಜೀವನ ಮಟ್ಟವನ್ನು ಹೊಂದಿರುತ್ತಾರೆ. ಹಾಗಾಗಿ ಅಲ್ಲಿನ ಜನರು ರಾಷ್ಟ್ರದ ಬೆಳವಣಿಗೆಗಾಗಿ ಕೈಗಾರಿಕೆ ಹಾಗೂ ಸೇವಾ ವಲಯದ ಅಭಿವೃದ್ಧಿಗಾಗಿ ಶ್ರಮಿಸುತ್ತಾರೆ.

## 5. ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಲಭ್ಯತೆ

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಮೂಲಭೂತ ಸೌಕರ್ಯಗಳು ಉತ್ತಮವಾಗಿರುತ್ತವೆ. ಹಾಗಾಗಿ ಅಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳು ದೊರಕುತ್ತವೆ. ಈ ಸೌಲಭ್ಯಗಳೂ ಸಹ ಅವರನ್ನು ರಾಷ್ಟ್ರದ ಅಭಿವೃದ್ಧಿಗೆ ಮತ್ತಷ್ಟು ಶ್ರಮಿಸಲು ಉತ್ತೇಜಿಸುತ್ತವೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹಾಗೂ ಅನಭಿವೃದ್ಧಿ ರಾಷ್ಟ್ರಗಳ ನಡುವಿನ ವ್ಯತ್ಯಾಸ.

| | ಅನಭಿವೃದ್ಧಿ ರಾಷ್ಟ್ರಗಳು | ಅಭಿವೃದ್ಧಿ ಹೊಂದಿದ ರಾಷ್ಟ್ರಗಳು |
|---|---|---|
| 1 | ವಾರ್ಷಿಕವಾಗಿ 5000 ಡಾಲರ್‌ಗಿಂತ ಕಡಿಮೆ ತಲಾ ಆದಾಯವಿರುವ ರಾಷ್ಟ್ರಗಳು | ವಾರ್ಷಿಕವಾಗಿ 5000 ಡಾಲರ್‌ಗಿಂತ ಹೆಚ್ಚಿನ ತಲಾ ಆದಾಯವಿರುವ ರಾಷ್ಟ್ರಗಳು |
| 2 | ಅತಿ ಹೆಚ್ಚಿನ ಜನಸಂಖ್ಯೆ ಬೆಳವಣಿಗೆ ದರ | ಅತಿ ಕಡಿಮೆ ಇಲ್ಲವೇ ಶೂನ್ಯ ಜನಸಂಖ್ಯೆ ಬೆಳವಣಿಗೆ ದರ |

| | | |
|---|---|---|
| 3 | ಬಂಡವಾಳ ಹಾಗೂ ಉನ್ನತ ತಂತ್ರಜ್ಞಾನದ ಕೊರತೆ | ಅತಿ ಹೆಚ್ಚಿನ ಬಂಡವಾಳ ಸಂಚಯನ ಹಾಗೂ ಉನ್ನತ ತಂತ್ರಜ್ಞಾನದ ಲಭ್ಯತೆ |
| 4 | ಹೆಚ್ಚಿನ ಸಂಖ್ಯೆಯ ಜನರು ಕಡುಬಡವರಾಗಿರುತ್ತಾರೆ. ಇಲ್ಲಿ ನಿರಪೇಕ್ಷ ಬಡತನ ಹೆಚ್ಚಾಗಿರುತ್ತದೆ | ಸಾಪೇಕ್ಷ ಬಡತನವನ್ನು ಮಾತ್ರ ಕಾಣಬಹುದು |
| 5 | ಜೀವನಮಟ್ಟವು ಉತ್ತಮವಾಗಿರುವುದಿಲ್ಲ | ಜೀವನಮಟ್ಟವು ಅತ್ಯುತ್ತಮವಾಗಿರುತ್ತದೆ |
| 6 | ಮರೆಮಾಚಿದ ಹಾಗೂ ಅರೆ-ಉದ್ಯೋಗದ ಸಮಸ್ಯೆ ಅಧಿಕವಾಗಿರುತ್ತದೆ. | ಆರ್ಥಿಕ ಆವರ್ತಗಳ ಕಾರಣದಿಂದಾಗಿ ತಾತ್ಕಾಲಿಕವಾಗಿ ಕೆಲವೊಮ್ಮೆ ನಿರುದ್ಯೋಗ ಸಮಸ್ಯೆ ಎದುರಾಗುತ್ತದೆ. |

## ಅಭಿವೃದ್ಧಿ ಹೊಂದುತ್ತಿರುವ ರಾಷ್ಟಗಳ ಲಕ್ಷಣಗಳು

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅನಭಿವೃದ್ಧಿಯ ಜಡತ್ವದಿಂದ ಹೊರಬಂದು ಅಭಿವೃದ್ಧಿ ಹೊಂದಲು ಶ್ರಮಿಸುತ್ತವೆ. ಆದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅನಭಿವೃದ್ಧಿಯಿಂದ ಹೊರಬರುವ ಲಕ್ಷಣಗಳಲ್ಲದೇ ಅಭಿವೃದ್ಧಿ ಹೊಂದುವ ರಾಷ್ಟ್ರದ ಲಕ್ಷಣಗಳೂ ಗೋಚರಿಸುತ್ತವೆ. ಆ ಪ್ರಮುಖ ಲಕ್ಷಣಗಳೆಂದರೆ:

### 1) ತಲಾ ಆದಾಯದಲ್ಲಿ ಕ್ರಮೇಣ ಹೆಚ್ಚಳ:

ಅನಭಿವೃದ್ಧಿ ರಾಷ್ಟ್ರಗಳಲ್ಲಿ ತಲಾ ಆದಾಯವು ಅತ್ಯಂತ ಕಡಿಮೆಯಿರುತ್ತದೆ. ಉದಾ: ಇಥಿಯೋಪಿಯಾ ದೇಶದಲ್ಲಿ ತಲಾ ಆದಾಯವು ಸ್ವಿಟ್ಜರ್‌ಲ್ಯಾಂಡ್ ದೇಶದ ತಲಾ ಆದಾಯಕ್ಕಿಂತ 345 ಪಟ್ಟು ಕಡಿಮೆಯಿರುವುದನ್ನು ಗಮನಿಸಬಹುದಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ತಲಾ ಆದಾಯವು ಕ್ರಮೇಣ ಹೆಚ್ಚಳವಾಗುವುದರಿಂದ ಬಂಡವಾಳ ಸಂಚಯನ ಹಾಗೂ ಹೂಟೆಯಲ್ಲಿಯೂ ಕ್ರಮೇಣ ಹೆಚ್ಚಳವಾಗುತ್ತದೆ. ಉದ್ಯೋಗದ ಅವಕಾಶಗಳು ಸೃಷ್ಟಿಯಾಗಿ ಒಟ್ಟು ಹಾಗೂ ತಲಾ ಆದಾಯಗಳೆರಡೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕ್ರಮೇಣ ಹೆಚ್ಚಾಗುತ್ತವೆ.

### 2) ಜನಸಂಖ್ಯೆ ಬೆಳವಣಿಗೆ ದರದಲ್ಲಿ ಸಾಪೇಕ್ಷವಾಗಿ ಇಳಿಕೆ:

ಅನಭಿವೃದ್ಧಿ ರಾಷ್ಟ್ರಗಳಲ್ಲಿ ಜನಸಂಖ್ಯೆ ಬೆಳವಣಿಗೆ ದರವು ಅಧಿಕವಾಗಿರುತ್ತದೆ. ಆದರೆ ಬೆಳವಣಿಗೆ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಕ್ರಮೇಣ ಸುಧಾರಣೆಯಿಂದಾಗಿ ಜನಸಂಖ್ಯೆಯ ಬೆಳವಣಿಗೆ ದರದಲ್ಲಿ ಕ್ರಮೇಣ ಇಳಿಕೆಯಾಗುತ್ತದೆ.

## 3) ಮಾನವ ಬಂಡವಾಳದಲ್ಲಿ ಕ್ರಮೇಣ ಹೆಚ್ಚಳ:

ಅನಭಿವೃದ್ಧಿ ರಾಷ್ಟ್ರಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ತುಂಬಾ ಹಿಂದುಳಿದಿರುತ್ತವೆ. ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳು ಅನಭಿವೃದ್ಧಿ ರಾಷ್ಟ್ರಗಳಲ್ಲಿ ಇಲ್ಲದಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶಿಕ್ಷಣ ಮತ್ತು ಆರೋಗ್ಯದ ಸೌಲಭ್ಯಗಳ ಸುಧಾರಣೆಯಿಂದಾಗಿ ಜೀವಿತಾವಧಿಯು ಹೆಚ್ಚಳವಾಗುತ್ತದೆ. ಶಿಶು ಮರಣದರ ಮತ್ತು ತಾಯಂದಿರ ಮರಣದರ ಕಡಿಮೆಗೊಳ್ಳುತ್ತದೆ. ಹಾಗಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಾನವ ಬಂಡವಾಳದಲ್ಲಿ ಹೆಚ್ಚಳವಾಗುತ್ತದೆ.

## 4) ಕೃಷಿಯೇತರ ಚಟುವಟಿಕೆಗಳಿಗೆ ಪ್ರಾಮುಖ್ಯತೆ:

ಅನಭಿವೃದ್ಧಿ ರಾಷ್ಟ್ರಗಳಲ್ಲಿ ಬಹುತೇಕ ದುಡಿಯುವ ವರ್ಗ ಕೃಷಿಯನ್ನೇ ಅವಲಂಬಿಸಿರುತ್ತದೆ. ಹಾಗಾಗಿ ಕೃಷಿಯಿಂದ ಆ ರಾಷ್ಟ್ರಗಳ ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆಯಿರುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ದುಡಿಯುವ ವರ್ಗವು ಜೀವನೋಪಾಯಕ್ಕಾಗಿ ಕ್ರಮೇಣ ಕೃಷಿಯೇತರ ಚಟುವಟಿಕೆಗಳತ್ತ ಸಾಗುವುದರಿಂದ ಆ ರಾಷ್ಟ್ರಗಳ ಆದಾಯದಲ್ಲಿ ಕೃಷಿಯ ಪಾಲು ಕಡಿಮೆಯಾಗಿ ಕೈಗಾರಿಕೆ ಹಾಗೂ ಸೇವಾ ವಲಯಗಳ ಪಾಲು ಹೆಚ್ಚಾಗುತ್ತದೆ.

## 5) ಅಸಂಘಟಿತ ವಲಯದ ಪ್ರಾಧಾನ್ಯತೆ:

ಕೃಷಿಯೇತರ ವಲಯಗಳತ್ತ ಕಾರ್ಮಿಕರು ಸಾಗುವಾಗ ಎಲ್ಲರಿಗೂ ಸಮರ್ಪಕ ಪ್ರಮಾಣದಲ್ಲಿ ಉದ್ಯೋಗ ದೊರಕದೇ ಇರಬಹುದು. ಆಗ ಕಾರ್ಮಿಕರು ಸ್ವಯಂ ಉದ್ಯೋಗ ಆರಂಭಿಸಬಹುದು ಅಥವಾ ದೊರಕಿದ ಯಾವುದೇ ಉದ್ಯೋಗವನ್ನು ಮಾಡುವರು. ಈ ಉದ್ಯೋಗಗಳು ಪ್ರಮುಖವಾಗಿ ಅಸಂಘಟಿತ ವಲಯದಲ್ಲಿದ್ದು ಅಲ್ಲಿ ಕಡಿಮೆ ಕೂಲಿ ಇರುವುದಲ್ಲದೇ ಯಾವುದೇ ರಜೆ, ಭತ್ಯೆಯ ಸೌಲಭ್ಯಗಳು ಇರುವುದಿಲ್ಲ. ಕಡಿಮೆ ಕೌಶಲ್ಯಗಳೂ ಇದಕ್ಕೆ ಕಾರಣವಿದ್ದು, ಗ್ರಾಮಗಳಿಂದ ನಗರಗಳೆಡೆಗೆ ವಲಸೆ ಬಂದ ಕಾರ್ಮಿಕರಿಗೆ ಇಂಥ ಉದ್ಯೋಗಗಳ ಹೊರತಾಗಿ ಬೇರೆ ಯಾವ ಉದ್ಯೋಗಾವಕಾಶಗಳು ಇರುವುದಿಲ್ಲ.

## 6) ಕ್ರಮೇಣವಾಗಿ ಹೆಚ್ಚುತ್ತಿರುವ ನಗರೀಕರಣ:

ಅನಭಿವೃದ್ಧಿ ದೇಶಗಳಲ್ಲಿ ಬಹುತೇಕ ಜನರು ಗ್ರಾಮಗಳಲ್ಲಿ ವಾಸಿಸುತ್ತಿದ್ದು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಗರಗಳಲ್ಲಿ ಉದ್ಯೋಗ, ಉತ್ತಮ ಶಿಕ್ಷಣ ಆರೋಗ್ಯ ಸೌಲಭ್ಯಗಳಲ್ಲದೇ ಇತರ ಮೂಲ ಸೌಕರ್ಯಗಳು ಯಥೇಚ್ಛವಾಗಿ ಲಭ್ಯವಿರುವುದರಿಂದ ಗ್ರಾಮಗಳಿಂದ ನಗರಕ್ಕೆ ವಲಸೆ ಹೆಚ್ಚಾಗಿರುತ್ತದೆ. ಇದು ನಗರೀಕರಣಕ್ಕೆ ಇಂಬು ಕೊಡುತ್ತದೆ.

## ಭಾರತದ ಆರ್ಥಿಕತೆ

ಭಾರತವು ಕಳೆದ ಆರೂವರೆ ದಶಕಗಳಿಂದ ಯೋಜಿತ ಆರ್ಥಿಕ ಅಭಿವೃದ್ಧಿಯನ್ನು ಕೈಗೊಂಡಿದೆ. ಹಲವಾರು ಅಭಿವೃದ್ಧಿಪರ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿ ದೇಶದ ಆರ್ಥಿಕತೆಯನ್ನು ಸದೃಢಗೊಳಿಸಿ ಅಭಿವೃದ್ಧಿಯ ಪಥದತ್ತ ದಾಪುಗಾಲು ಹಾಕಲು ಶ್ರಮಿಸುತ್ತಿದೆ. ಹಾಗಾಗಿ ಭಾರತದ ಆರ್ಥಿಕತೆಯು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರಮುಖ ದೇಶವಾಗಿ ಬೆಳೆಯುತ್ತಿದೆ. ಆದರೆ ಭಾರತದ ಆರ್ಥಿಕತೆಯಲ್ಲಿ ಈಗಲೂ ಕೆಲವು ಅನಭಿವೃದ್ಧಿಯ ಲಕ್ಷಣಗಳು ಗೋಚರಿಸುತ್ತವೆ. ಹಾಗಾಗಿ ಭಾರತದ ಆರ್ಥಿಕತೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಅನಭಿವೃದ್ಧಿ ಆರ್ಥಿಕತೆಯ ಲಕ್ಷಣಗಳನ್ನು ಗಮನಿಸಬಹುದಾಗಿದೆ.

## ಅನಭಿವೃದ್ಧಿಯ ಆರ್ಥಿಕತೆಯಾಗಿ ಭಾರತ

ಭಾರತದ ಆರ್ಥಿಕತೆಯ ಅನಭಿವೃದ್ಧಿಯ ಲಕ್ಷಣಗಳಲ್ಲಿ ಪ್ರಮುಖವಾದವುಗಳೆಂದರೆ:

### 1) ಕಡಿಮೆ ತಲಾದಾಯ:

ಜನಸಂಖ್ಯೆಯ ಹೆಚ್ಚಳ, ಅತ್ಯಂತ ಹೆಚ್ಚಿನ ಬಡತನ ಮತ್ತು ನಿರುದ್ಯೋಗಗಳಿಂದಾಗಿ ಭಾರತದಲ್ಲಿ ತಲಾದಾಯವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ಈಗಲೂ ಕಡಿಮೆ ಇದೆ. 1948ರಲ್ಲಿ ಭಾರತದ ತಲಾದಾಯವು ಕೇವಲ 230 ರೂಪಾಯಿಗಳು ಇತ್ತು. ಭಾರತದ ತಲಾದಾಯವು ಅಮೇರಿಕಾದ ತಲಾದಾಯದ ಕೇವಲ 1/13 ರಷ್ಟು ಮಾತ್ರವೇ ಇದೆ.

### 2) ಆದಾಯ ಹಾಗೂ ಸಂಪತ್ತಿನಲ್ಲಿ ಅಸಮಾನತೆ:

ಭಾರತದಲ್ಲಿ ಆದಾಯ ಹಾಗೂ ಸಂಪತ್ತಿನ ಅಸಮಾನತೆಯು ಹೆಚ್ಚಾಗಿದೆ. ವಿಶ್ವಬ್ಯಾಂಕ್ ಹಾಗೂ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ವರದಿಯ ಪ್ರಕಾರ ಭಾರತದಲ್ಲಿ ಅಸಮಾನತೆ ಇತ್ತೀಚೆಗೆ ಹೆಚ್ಚಳವಾಗಿದೆ. ಅಸಮಾನತೆಯನ್ನು ಅಳೆಯಲು ಗಿನಿ ಸೂಚ್ಯಂಕವನ್ನು ಬಳಸಲಾಗುತ್ತದೆ. ಗಿನಿ ಸೂಚ್ಯಂಕವು ಶೂನ್ಯವಿದ್ದರೆ ಪೂರ್ಣ ಸಮಾನತೆಯಿದ್ದು, 100 ಇದ್ದರೆ ಅತ್ಯಂತ ಹೆಚ್ಚಿನ ಅಸಮಾನತೆಯಿರುತ್ತದೆ. ಭಾರತದಲ್ಲಿ ಸದರಿ ಗಿನಿ ಸೂಚ್ಯಂಕದ ಮೌಲ್ಯವು 1991ರಲ್ಲಿ 32.5 ರಷ್ಟಿದ್ದದ್ದು 2010ರ ಅವಧಿಗೆ 37ಕ್ಕೆ ಹೆಚ್ಚಾಗಿದೆ. ಭಾರತದ ಶೇ. 40ರಷ್ಟು ಶ್ರೀಮಂತ ಜನರು 79.2ರಷ್ಟು ಆಸ್ತಿಯನ್ನು ಹೊಂದಿದ್ದರೆ, ಉಳಿದ ಶೇ. 60 ರಷ್ಟು ಜನರು ಕೇವಲ 20.8 ರಷ್ಟು ಆಸ್ತಿಯನ್ನು ಹೊಂದಿರುವುದು ಅಸಮಾನತೆಯ ದ್ಯೋತಕವಾಗಿದೆ.

### 3) ಅತಿಯಾದ ಬಡತನ:

ಆದಾಯ ಅಸಮಾನತೆಯಿಂದ ಸಹಜವಾಗಿ ಬಡತನ ಹೊರಹೊಮ್ಮುತ್ತದೆ. ಭಾರತದಲ್ಲಿ 1979-80ರಲ್ಲಿ ಶೇ.48.44ರಷ್ಟು ಜನರು ಬಡವರಿದ್ದು ಅದು 2011ರ ವೇಳೆಗೆ ಶೇ.21.9ಕ್ಕೆ ಕಡಿಮೆಯಾಗಿದ್ದರೂ ಒಟ್ಟು 269.3

ದಶಲಕ್ಷ ಜನರು ಈಗಲೂ ಬಡತನ ರೇಖೆಗಿಂತ ಕೆಳಗೆ ವಾಸ ಮಾಡುತ್ತಿದ್ದಾರೆ. ಅವರೆಲ್ಲರೂ ಕನಿಷ್ಠ ಸೌಲಭ್ಯಗಳಿಲ್ಲದೇ ಜೀವನ ಸಾಗಿಸುತ್ತಿದ್ದಾರೆ.

## 4) ಕೃಷಿಯ ಮೇಲಿನ ಅಧಿಕ ಅವಲಂಬನೆ :

ಭಾರತದ ರಾಷ್ಟ್ರೀಯ ಆದಾಯದಲ್ಲಿ ಕೃಷಿಯ ಪಾಲು 1950–51ರಲ್ಲಿ ಶೇ.55.3ರಷ್ಟಿದ್ದುದು 2013–14ರ ವೇಳೆಗೆ ಶೇ.13.5ಕ್ಕೆ ಇಳಿಯಿತಾದರೂ, ಕೃಷಿಯಲ್ಲಿ ಉದ್ಯೋಗ ಮಾಡುತ್ತಿರುವ ಜನಸಂಖ್ಯೆಯ ಪ್ರಮಾಣ ಈಗಲೂ ಶೇ.48.9ರಷ್ಟಿದೆ. ಭಾರತದ ಕೃಷಿಯು ಮಳೆಯ ಮೇಲೆ ಅವಲಂಬಿತವಿರುವುದರಿಂದ ಈ ಜನರಿಗೆ ವರ್ಷಪೂರ್ತಿ ಉದ್ಯೋಗ ದೊರಕದೇ ಅವರು ಅರೆ–ಉದ್ಯೋಗ ಅಥವಾ ಋತುಮಾನ ಆಧಾರಿತ ನಿರುದ್ಯೋಗ ಅನುಭವಿಸುತ್ತಿದ್ದು, ಅವರು ಗಳಿಸುವ ಆದಾಯ ಸಮರ್ಪಕವಾಗಿಲ್ಲ. ಅವರ ಕೌಶಲಗಳ ಮಟ್ಟ ಕಡಿಮೆ ಇರುವುದರಿಂದ ಕೃಷಿಯ ಅಭಿವೃದ್ಧಿಯೂ ಕುಂಠಿತಗೊಳ್ಳುವುದಲ್ಲದೇ ಅವರಿಗೆ ಬೇರೆ ಯಾವುದೇ ಉದ್ಯೋಗ ಕೈಗೊಳ್ಳುವ ಸಾಮರ್ಥ್ಯವಿರುವುದಿಲ್ಲ.

## 5) ಕುಂಠಿತ ಮಾನವ ಅಭಿವೃದ್ಧಿ :

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ದೀರ್ಘಾವಧಿಯ ಆರೋಗ್ಯವಂತ ಜೀವನ, ಜ್ಞಾನ ಹಾಗೂ ಉತ್ತಮ ಜೀವನ ಮಟ್ಟ ಎಂಬ ಮೂರು ಮಾನದಂಡಗಳ ಆಧಾರದ ಮೇಲೆ ಅಳೆಯಲಾಗುತ್ತಿದ್ದು ಕಡಿಮೆ ಮಟ್ಟದ ಶಿಕ್ಷಣ, ಆರೋಗ್ಯ ಮತ್ತು ಆದಾಯಗಳ ದೆಸೆಯಿಂದಾಗಿ ಭಾರತದ ಮಾನವ ಅಭಿವೃದ್ಧಿ ಸಾಧನೆಯೂ ಕುಂಠಿತಗೊಂಡಿದೆ. 2013ರಲ್ಲಿ ಯು.ಎನ್.ಡಿ.ಪಿ.ಯವರು ರಚಿಸಿದ ಮಾನವ ಅಭಿವೃದ್ಧಿ ಸೂಚ್ಯಂಕದ ಅನುಸಾರ ಭಾರತವು 186 ದೇಶಗಳಲ್ಲಿ 136ನೇ ಸ್ಥಾನವನ್ನು ಹೊಂದಿದೆ.

## ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿ ಭಾರತ

ಭಾರತದ ಆರ್ಥಿಕತೆಯಲ್ಲಿ ಕೆಲವು ಅನಭಿವೃದ್ಧಿ ರಾಷ್ಟ್ರದ ಲಕ್ಷಣಗಳು ಇದ್ದರೂ ಬಹುತೇಕ ಲಕ್ಷಣಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಲಿನಲ್ಲಿ ಭಾರತವನ್ನು ನಿಲ್ಲಿಸಿದೆ. ಅವುಗಳಲ್ಲಿ ಮುಖ್ಯವಾಗಿ:

## 1) ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ:

ಭಾರತವು 2015ರ ಆರಂಭಕ್ಕೆ 2 ಟ್ರಿಲಿಯನ್ ಆರ್ಥಿಕತೆಯಾಗಿ ಹೊರಹೊಮ್ಮಿದೆ. ರಾಷ್ಟ್ರೀಯ ಆದಾಯವು 2004–05ರ ಸ್ಥಿರಬೆಲೆಗಳಲ್ಲಿ 1950–51 ರಲ್ಲಿ 2,78,677 ಕೋಟಿಯಿದ್ದು, ಅದು 2013–14ರ ವೇಳಗೆ 56,73, 857 ಕೋಟಿಗಳಿಗೆ ಹೆಚ್ಚಾಗಿದ್ದು ವಿಶ್ವದ ನಾಲ್ಕನೆಯ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆದಿದೆ.

## 2) ಉತ್ತಮ ಬೆಳವಣಿಗೆ ದರ:

ಭಾರತದ ಆರ್ಥಿಕತೆಯು 1950–80ರ ಅವಧಿಯಲ್ಲಿ ಸರಾಸರಿ ಶೇ.3.5ರ ದರದಲ್ಲಿ ಬೆಳವಣಿಗೆ ಹೊಂದಿದ್ದು 1980–91ರ ಅವಧಿಯಲ್ಲಿ ಸರಾಸರಿ ಶೇ.5.5ರ ದರದಲ್ಲಿ ಬೆಳವಣಿಗೆ ಹೊಂದಿ 2000–2011ರ ಅವಧಿಯಲ್ಲಿ ಅದು ಸರಾಸರಿ ಶೇ.8ರ ದರದಲ್ಲಿ ಬೆಳವಣಿಗೆ ಹೊಂದಿತು. ತದ ನಂತರ ಬೆಳವಣಿಗೆ ದರವು ಕುಂಠಿತವಾಗುತ್ತಿದ್ದರೂ ಅದು ಮರಳಿ ಉತ್ತಮ ಬೆಳವಣಿಗೆ ದರ ಸಾಧಿಸುವತ್ತ ದಾಪುಗಾಲು ಹಾಕುತ್ತಿದೆ. ಭಾರತವು ವಿಶ್ವದಲ್ಲಿಯೇ ಎರಡನೇ ಅತಿ ವೇಗವಾಗಿ ಬೆಳೆಯುತ್ತಿರುವ ಉದಯೋನ್ಮುಖ ಆರ್ಥಿಕತೆಯಾಗಿದೆ.

## 3) ವಲಯವಾರು ಹಂಚಿಕೆಯಲ್ಲಿ ಗಮನಾರ್ಹವಾದ ಬದಲಾವಣೆ:

1950–51ರಲ್ಲಿ ರಾಷ್ಟ್ರೀಯ ಆದಾಯಕ್ಕೆ ಕೃಷಿಯಿಂದ ಶೇ.55.3ರಷ್ಟು (1999–00ರ ಬೆಲೆಗಳಲ್ಲಿ) ಕೊಡುಗೆಯಿತ್ತು. ಅದು 2013–14ರ ವೇಳೆಗೆ ಶೇ.13.5ಕ್ಕೆ ಇಳಿಯಿತು. ಇದೇ ಅವಧಿಯಲ್ಲಿ ಕೈಗಾರಿಕೆ ಮತ್ತು ಸೇವಾ ವಲಯಗಳ ಪಾಲು ಗಣನೀಯವಾಗಿ ಹೆಚ್ಚಾಗಿದೆ. ಆದರೆ ಆದಾಯದಲ್ಲಿ ಕಂಡು ಬಂದ ಈ ಬದಲಾವಣೆಯು ಉದ್ಯೋಗದಲ್ಲಿ ಕಂಡುಬಂದಿಲ್ಲವಾದ್ದರಿಂದ ಭಾರತದಲ್ಲಿ ಶೇ.51.5ರಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯೇತರ ಚಟುವಟಿಕೆಯನ್ನು ಅವಲಂಬಿಸಿದ್ದಾರೆ.

## 4) ಸೇವಾ ವಲಯ ಆಧಾರಿತ ಬೆಳವಣಿಗೆ:

ಚೀನಾದ ನಂತರ ವಿಶ್ವದ ಎರಡನೇ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಆರ್ಥಿಕತೆಯಾಗಿ ಭಾರತ ಬೆಳೆಯುತ್ತಿದೆ. ಇದಕ್ಕೆ ಪ್ರಮುಖವಾಗಿ ಸೇವಾ ವಲಯದ ಬೆಳವಣಿಗೆ ಕಾರಣವಾಗಿದ್ದು ಅದು 2000–01 ರಿಂದ 2013–14ರ ಅವಧಿಯಲ್ಲಿ ಶೇ.8.5ರ ದರದಲ್ಲಿ ಬೆಳವಣಿಗೆ ಹೊಂದಿದೆ. 2013–14ರಲ್ಲಿ ಸೇವಾ ವಲಯದ (ನಿರ್ಮಾಣ ಕ್ಷೇತ್ರವನ್ನು ಒಳಗೊಂಡಂತೆ) ಪಾಲು ರಾಷ್ಟ್ರೀಯ ಆದಾಯದಲ್ಲಿ ಶೇ. 64.8 ರಷ್ಟಿದ್ದಿತು.

## 5) ಮೂಲ ಸೌಕರ್ಯಗಳಲ್ಲಿ ವಿಸ್ತರಣೆ:

ಮೂಲ ಸೌಕರ್ಯಗಳೆಂದರೆ ಆರ್ಥಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಸರಾಗವಾಗಿ ಕೈಗೊಳ್ಳಲು ಅನುಕೂಲತೆ ಒದಗಿಸುವಂಥ ಸಾರಿಗೆ, ಸಂಪರ್ಕ, ಇಂಧನ/ಶಕ್ತಿ, ನೀರಾವರಿ, ಶಿಕ್ಷಣ ಹಾಗೂ ಆರೋಗ್ಯ ವ್ಯವಸ್ಥೆಗಳು. ಇವು ಉತ್ತಮವಾಗಿದ್ದಲ್ಲಿ ಆರ್ಥಿಕ ಬೆಳವಣಿಗೆಯು ತೀವ್ರವಾಗುವುದರಲ್ಲಿ ಸಂದೇಹವೇ ಇಲ್ಲ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಈ ಮೂಲ ಸೌಕರ್ಯಗಳು ತುಂಬಾ ಕೊರತೆಯಲ್ಲಿದ್ದವು. ಉದಾಹರಣೆಗೆ 1948ರಲ್ಲಿ ಭಾರತದ ವಿದ್ಯುಚ್ಛಕ್ತಿ ಉತ್ಪಾದಕ ಸಾಮರ್ಥ್ಯವು ಕೇವಲ 2100 ಮೆಗಾವ್ಯಾಟ್ ಆಗಿತ್ತು. ಅಲ್ಲದೇ 1951ರಲ್ಲಿ ಕೇವಲ ಶೇ. 8.33ರಷ್ಟು ಸಾಕ್ಷರತೆ ಹಾಗೂ ನೀರಾವರಿ ಪ್ರದೇಶವು 22.6 ಮಿಲಿಯನ್ ಹೆಕ್ಟೇರ್‌ಗಳು ಮಾತ್ರ ಇತ್ತು. ಆದರೆ ಇಂದು ಭಾರತದಲ್ಲಿ 97 ಬಿಲಿಯನ್ ಘಟಕಗಳಷ್ಟು ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿದೆ, 48.65 ಲಕ್ಷ ಕಿ.ಮೀ. ರಸ್ತೆಗಳಿವೆ, 63.9 ಮಿಲಿಯನ್ ಹೆಕ್ಟೇರ್‌ನಷ್ಟು ನೀರಾವರಿ ಪ್ರದೇಶವಿದೆ. ಸಾಕ್ಷರತೆಯ ಶೇ.74.04ರಷ್ಟು ಇದ್ದು ಸಾಪೇಕ್ಷವಾಗಿ ಉತ್ತಮ ಶಿಕ್ಷಣ ಹಾಗೂ ಆರೋಗ್ಯದ ವ್ಯವಸ್ಥೆ ರೂಪುಗೊಂಡಿದೆ.

## 6) ಬ್ಯಾಂಕಿಂಗ್ ಹಾಗೂ ಹಣಕಾಸು ಕ್ಷೇತ್ರಗಳ ಬೆಳವಣಿಗೆ:

1947ರಲ್ಲಿ ಭಾರತದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಹಿಂದುಳಿದಿತ್ತು. ಅದು ಸಂಪೂರ್ಣವಾಗಿ ಖಾಸಗಿ ವಲಯದಲ್ಲಿತ್ತು. ಭಾರತದ ಕೇಂದ್ರ ಬ್ಯಾಂಕಾದ ರಿಸರ್ವ್ ಬ್ಯಾಂಕ್ ಸಹ ಷೇರುದಾರರ ಬ್ಯಾಂಕಾಗಿತ್ತು. 1949ರಲ್ಲಿ ಅದನ್ನು ರಾಷ್ಟ್ರೀಕರಣಗೊಳಿಸಲಾಯಿತು. 1955ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ರಾಷ್ಟ್ರೀಕರಣಗೊಳಿಸಲಾಯಿತು. ತದನಂತರ 1969ರಲ್ಲಿ 14 ಹಾಗೂ 1980ರಲ್ಲಿ 6 ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಬ್ಯಾಂಕುಗಳ ರಾಷ್ಟ್ರೀಕರಣವು ಭಾರತದಲ್ಲಿ ಬ್ಯಾಂಕುಗಳ ವಿಸ್ತರಣೆ ಹಾಗೂ ಹಣಕಾಸಿನ ಕ್ಷೇತ್ರಗಳ ಅಭಿವೃದ್ಧಿಗೆ ಸಹಕಾರಿಯಾಯಿತು. 1991ರ ಆರ್ಥಿಕ ಸುಧಾರಣೆಯ ನಂತರ ಖಾಸಗಿ ಹಾಗೂ ವಿದೇಶಿ ಬ್ಯಾಂಕುಗಳ ಸ್ಥಾಪನೆಗೆ ಪ್ರೋತ್ಸಾಹ ದೊರೆಯಿತು. ಭಾರತದಲ್ಲಿ ಇಂದು 1,11,723 ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳಲ್ಲಿ ಶೇ. 37.9ರಷ್ಟು ಬ್ಯಾಂಕುಗಳು ಗ್ರಾಮೀಣ ಭಾಗದಲ್ಲಿ ಕೆಲಸ ನಿರ್ವಹಿಸುತ್ತಿವೆ.

ಭಾರತದ ಆರ್ಥಿಕತೆಯಲ್ಲಿ ಅನಭಿವೃದ್ಧಿಯ ಲಕ್ಷಣಗಳು ಕೆಲವು ಇದ್ದರೂ, ಭಾರತದ ಆರ್ಥಿಕತೆಯಲ್ಲಿ ಇಂದು ಅತ್ಯಂತ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ರಾಷ್ಟ್ರಗಳ ಎಲ್ಲಾ ಲಕ್ಷಣಗಳನ್ನು ನಾವು ಕಾಣಬಹುದು. ಜನಸಂಖ್ಯೆ ಬೆಳವಣಿಗೆಯ ದರವನ್ನು ಮತ್ತಷ್ಟು ಕಡಿತಗೊಳಿಸಿ, ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳನ್ನು ಒದಗಿಸಿ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳಿಸಿದರೆ ಭಾರತ ಶೀಘ್ರದಲ್ಲಿ ಅಭಿವೃದ್ಧಿ ರಾಷ್ಟ್ರವಾಗುವುದರಲ್ಲಿ ಸಂಶಯವಿಲ್ಲ.

### ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಒಂದು ರಾಷ್ಟ್ರವು ಬಡ ರಾಷ್ಟ್ರವಾಗಿರುವುದಕ್ಕೆ ಕಾರಣ ಬಡತನವಾಗಿದೆ. ಎಂದು ಹೇಳಿದವರು__________

   ಅ) ರ್‍ಯಾಗ್ನರ್ ನರ್ಕ್ಸ್   ಆ) ಆಡಂಸ್ಮಿತ್

   ಇ) ಮಾರ್ಷಲ್   ಈ) ಕೇನ್ಸ್

2. ಹೆಚ್ಚು ತಲಾದಾಯ ಹೊಂದಿರುವ ದೇಶವೆಂದರೆ __________

   ಅ) ಭಾರತ   ಆ) ಚೀನಾ

   ಇ) ಈಜಿಪ್ಟ್   ಈ) ಅಮೇರಿಕಾ

3. 2013–14ರಲ್ಲಿ ಸೇವಾ ವಲಯದ (ನಿರ್ಮಾಣ ಕ್ಷೇತ್ರವನ್ನು ಒಳಗೊಂಡಂತೆ)ಪಾಲು ____________

ಅ) ಶೇ.64.8 ಆ) ಶೇ.54.8

ಇ) ಶೇ. 60 ಈ) ಶೇ.50

4. ತೆಂಡುಲ್ಕರ್ ಸಮಿತಿಯ ಗ್ರಾಮೀಣ ಪ್ರದೇಶದಲ್ಲಿ ____________ ಹಾಗೂ ಪಟ್ಟಣ ಪ್ರದೇಶದಲ್ಲಿ ____________ಕ್ಕಿಂತ ಕಡಿಮೆ ಅನುಭೋಗಿ ವೆಚ್ಚವನ್ನು ಮಾಡಿದರೆ ಆತ ಬಡತನದ ರೇಖೆಗಿಂತ ಕೆಳಗೆ ವಾಸಿಸುವವರು ಎಂದು ಗುರ್ತಿಸಿದೆ.

ಅ) ರೂ.26, ರೂ 32 ಆ) ರೂ 32, ರೂ 26

ಇ) ರೂ 52, ರೂ 64 ಈ) ರೂ 64, ರೂ 56

5. ಹಿಂದುಳಿದ ರಾಷ್ಟ್ರಗಳ ಪ್ರಮುಖ ಲಕ್ಷಣವೆಂದರೆ __________

ಅ) ಹೆಚ್ಚಿನ ನಗರೀಕರಣ ಆ) ಹೆಚ್ಚಿನ ಅಪೌಷ್ಠಿಕತೆ

ಇ) ಹೆಚ್ಚಿನ ಸಾಕ್ಷರತೆ ಈ) ಹೆಚ್ಚಿನ ಜೀವನ ಗುಣಮಟ್ಟ

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1) ಭಾರತದಲ್ಲಿ ಶೇ. 51.5ರಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ______ ನ್ನು ಅವಲಂಬಿಸಿದ್ದಾರೆ.

2) 2013–14ರಲ್ಲಿ ಸೇವಾವಲಯದ ಪಾಲು ರಾಷ್ಟ್ರೀಯ ಆದಾಯದಲ್ಲಿ ______ ರಷ್ಟಿದ್ದಿತ್ತು.

3) ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತವು ______ ಸ್ಥಾನದಲ್ಲಿದೆ

4) ಯಾವ ರಾಷ್ಟ್ರಗಳಲ್ಲಿ ವಾರ್ಷಿಕವಾಗಿ ______ ಡಾಲರ್‌ಗಿಂತ ಕಡಿಮೆ ತಲಾದಾಯವಿರುತ್ತದೆಯೋ ಆ ರಾಷ್ಟ್ರಗಳನ್ನು ಅನಭಿವೃದ್ಧಿ ರಾಷ್ಟ್ರಗಳೆಂದು ಕರೆಯಲಾಗುತ್ತದೆ.

5) ಒಟ್ಟು ಬ್ಯಾಂಕಿಂಗ್ ಶಾಖೆಗಳಲ್ಲಿ _______ ರಷ್ಟು ಬ್ಯಾಂಕುಗಳು ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1) ಆರ್ಥಿಕ ಅಭಿವೃದ್ಧಿ ಎಂದರೇನು?

2) ಅನಭಿವೃದ್ಧಿ ಆರ್ಥಿಕತೆಯ ಅರ್ಥ ಬರೆಯಿರಿ?

3) ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತವು ಎಷ್ಟನೇ ಸ್ಥಾನದಲ್ಲಿದೆ?

4) ಭಾರತದಲ್ಲಿ ಬಡತನ ಪ್ರಮಾಣ ಎಷ್ಟು?

5) ಯಾವುದಾರೂ 2 ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಹೆಸರಿಸಿ?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1) ಅನಭಿವೃದ್ಧಿ ಆರ್ಥಿಕತೆಯ ಆರ್ಥಿಕೇತರ ಲಕ್ಷಣಗಳನ್ನು ಹೆಸರಿಸಿ?

2) ಭಾರತದ ಆರ್ಥಿಕತೆಯ ಪ್ರಮುಖ ವಲಯಗಳನ್ನು ಹೆಸರಿಸಿ?

3) ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ ಎಷ್ಟರಲ್ಲಿ ಮಾಡಲಾಯಿತು?

4) ಅನಭಿವೃದ್ಧಿ ರಾಷ್ಟ್ರಗಳನ್ನು ಹೆಸರಿಸಿ?

5) ಬಡತನ ವಿಷವರ್ತುಲ ದೇಶದ ಅಭಿವೃದ್ಧಿಗೆ ಹೇಗೆ ತೊಡಕಾಗಿದೆ ಎಂದು ವಿವರಿಸಿ?

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1) ಅನಭಿವೃದ್ಧಿ ಆರ್ಥಿಕತೆಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

2) ಅಭಿವೃದ್ಧಿ ಮತ್ತು ಅನಭಿವೃದ್ಧಿ ರಾಷ್ಟ್ರಗಳ ನಡುವಿನ ವ್ಯತ್ಯಾಸ ಬರೆಯಿರಿ.

3) ಅಭಿವೃದ್ಧಿ ಶೀಲ ರಾಷ್ಟ್ರವಾಗಿ ಭಾರತದ ಆರ್ಥಿಕತೆಯನ್ನು ಚರ್ಚಿಸಿ?

4) ಬಡತನದ ವಿಷವರ್ತುಲವನ್ನು ಬೇಡಿಕೆ ಮತ್ತು ಪೂರೈಕೆ ಕಡೆಯಿಂದ ವಿಶ್ಲೇಷಿಸಿ?

5) ಅನಭಿವೃದ್ಧಿ ಆರ್ಥಿಕತೆಯಾಗಿ ಭಾರತದ ಲಕ್ಷಣಗಳನ್ನು ವಿವರಿಸಿ?

### ನಿಯೋಜಿತ ಕಾರ್ಯ

1) ಅಭಿವೃದ್ಧಿ ಹೊಂದಿದ ಮತ್ತು ಅನಭಿವೃದ್ಧಿ ರಾಷ್ಟ್ರಗಳನ್ನು ಪಟ್ಟಿ ಮಾಡಿ?

2) ನೀವು ವಾಸಿಸುತ್ತಿರುವ ಊರಿನ ಅಭಿವೃದ್ಧಿ ಹಾಗೂ ಅನಭಿವೃದ್ಧಿಯ ಲಕ್ಷಣಗಳನ್ನು ಪಟ್ಟಿ ಮಾಡಿ?

# ಅಧ್ಯಾಯ-2

# ಭಾರತದ ನೈಸರ್ಗಿಕ ಸಂಪನ್ಮೂಲಗಳು

"ರಾಷ್ಟ್ರವೊಂದು ಏಳಿಗೆಯಾಗಬೇಕಾದರೆ ತನ್ನ ನೈಸರ್ಗಿಕ ಸಂಪನ್ಮೂಲಗಳನ್ನು ರಾಷ್ಟ್ರದ ಆಸ್ತಿ ಎಂದು ಪರಿಗಣಿಸಬೇಕು" - **ಥಿಯೋಡರ್ ರೊಸ್ವೆಲ್ಟ್**

"ನೈಸರ್ಗಿಕ ಸಂಪನ್ಮೂಲಗಳಿಲ್ಲದೇ ಬದುಕು ಅಸಾಧ್ಯವಾಗುತ್ತದೆ. ಹುಟ್ಟಿನಿಂದ ಸಾಯುವವರೆಗೆ ಮನುಷ್ಯನ ಅಗತ್ಯತೆಗಳಾದ ಆಹಾರ, ಬಟ್ಟೆ, ವಸತಿ, ಸಾರಿಗೆಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಪರಿವರ್ತನೆ ಮಾಡುತ್ತೇವೆ. ನಾವು ನಮ್ಮ ಎಲ್ಲಾ ಪ್ರಾಪಂಚಿಕ ಅಗತ್ಯತೆಗಳಿಗೂ, ಸ್ವಾಸ್ಥ್ಯ, ಪ್ರಶಸ್ತ್ಯವಾದ ಹಾಗೂ ಸುರಕ್ಷಿತವಾದ ಜೀವನಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಆಶ್ರಯಿಸುತ್ತೇವೆ. ಹೇರಳವಾದ ನೈಸರ್ಗಿಕ ಸಂಪನ್ಮೂಲಗಳಿಲ್ಲದೇ ಅಭಿವೃದ್ಧಿಯ ಉಚ್ಛ್ರಾಯ ಸ್ಥಿತಿ ನಮ್ಮ ಕೈಗೆಟುಕುವುದಿಲ್ಲ". - **ಗಿಫೋರ್ಡ್ ಪಿಂಚೋ**

## ಪೀಠಿಕೆ :

ಒಂದು ದೇಶದ ಆರ್ಥಿಕ ಅಭಿವೃದ್ಧಿಯು ಆ ದೇಶದಲ್ಲಿರುವ ಸಂಪನ್ಮೂಲಗಳನ್ನು ಅವಲಂಬಿಸಿರುತ್ತದೆ. ಅದು ನೈಸರ್ಗಿಕ ಸಂಪನ್ಮೂಲಗಳಾಗಿರಬಹುದು ಇಲ್ಲವೇ ಮಾನವ ನಿರ್ಮಿತ ಸಂಪನ್ಮೂಲಗಳಾಗಿರಬಹುದು. ನೈಸರ್ಗಿಕ ಸಂಪನ್ಮೂಲಗಳು ಮತ್ತು ಆರ್ಥಿಕ ಅಭಿವೃದ್ಧಿಯ ನಡುವೆ ನಿಕಟ ಸಂಬಂಧವಿದೆ. ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿದ್ದರೆ ಆ ದೇಶದ ಆರ್ಥಿಕ ಅಭಿವೃದ್ಧಿಯು ಅಧಿಕವಾಗಿರುತ್ತದೆ. ಹಾಗಾದರೆ ನೈಸರ್ಗಿಕ ಸಂಪನ್ಮೂಲಗಳೆಂದರೇನು? ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳು ನಿರ್ವಹಿಸುವ ಪಾತ್ರವೇನು? ನೈಸರ್ಗಿಕ ಸಂಪನ್ಮೂಲಗಳ ವಿಧಗಳಾವುವು? ಭಾರತದಲ್ಲಿನ ಪ್ರಮುಖ ಅರಣ್ಯ ಭೂಮಿ, ಜಲ ಮತ್ತು ಖನಿಜ ಸಂಪನ್ಮೂಲಗಳ ಪ್ರಮಾಣವೆಷ್ಟು? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸ್ಥಿತಿಗಳ ಕುರಿತು ಈ ಅಧ್ಯಾಯವು ತಿಳಿಸುತ್ತದೆ.

## ನೈಸರ್ಗಿಕ ಸಂಪನ್ಮೂಲಗಳ ಅರ್ಥ

ಮಾನವನಿಗೆ ಉಪಯುಕ್ತವಾಗುವ ಎಲ್ಲ ವಸ್ತುಗಳನ್ನು ಸಂಪನ್ಮೂಲಗಳು ಎನ್ನಲಾಗುತ್ತದೆ. ಒಂದು ದೇಶದ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ನೈಸರ್ಗಿಕ ಮತ್ತು ಮಾನವ ನಿರ್ಮಿತ ಸಂಪನ್ಮೂಲಗಳ ಪಾತ್ರ ನಿರ್ಣಾಯಕವಾದದ್ದು. ನೈಸರ್ಗಿಕ ಸಂಪನ್ಮೂಲಗಳು ಪ್ರಮುಖವಾಗಿ ಭೂಮಿ, ನೀರು, ಅರಣ್ಯ, ಖನಿಜ ಸಂಪನ್ಮೂಲಗಳನ್ನು ಒಳಗೊಂಡಿದ್ದು, ಮಾನವನ ಬಯಕೆಗಳನ್ನು ತೃಪ್ತಿಪಡಿಸುವ ನೈಸರ್ಗಿಕ ಸರಕುಗಳಾಗಿವೆ. ಇಂತಹ ನೈಸರ್ಗಿಕ ಸಂಪನ್ಮೂಲಗಳು ದೇಶದ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಲಭ್ಯವಿರುವ ಅತ್ಯಮೂಲ್ಯ

ಸಾಧನಗಳಾಗಿವೆ. ಮಾನವ ನಿರ್ಮಿತ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲ ಪ್ರಮುಖವಾಗಿದ್ದು, ಸಮಾಜದ ಏಳಿಗೆಗೆ ಹಾಗೂ ಜನರ ಜೀವನಮಟ್ಟದ ಅಭಿವೃದ್ಧಿಗೆ ನೆರವಾಗುತ್ತವೆ.

## ಆರ್ಥಿಕತೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪ್ರಾಮುಖ್ಯತೆ

ಭಾರತವು ವಿಪುಲ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ರಾಷ್ಟ್ರವಾಗಿದ್ದರೂ ಸೂಕ್ತ ಹಾಗೂ ಸಮರ್ಪಕ ಮಾನವ ಬಂಡವಾಳದ ಕೊರತೆಯಿಂದ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ದಕ್ಷ ಬಳಕೆಯಾಗುತ್ತಿಲ್ಲ. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳು ನಿರ್ವಹಿಸುವ ಪ್ರಮುಖ ಪಾತ್ರಗಳೆಂದರೆ:

1) **ಕೃಷಿ ಅಭಿವೃದ್ಧಿ:** ಕೃಷಿಯು ಪ್ರಮುಖವಾಗಿ ಪ್ರಕೃತಿಯಾಧಾರಿತ ಕಸುಬಾಗಿದೆ. ಉತ್ತಮ ಗುಣಮಟ್ಟದ ಹವಾಗುಣ, ಫಲವತತ್ತೆಯ ಮಣ್ಣು, ಉತ್ತಮ ಮಳೆಯ ಹಂಚಿಕೆ, ಆಹಾರ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳಕ್ಕೆ ಕಾರಣವಾಗುತ್ತದೆ.

2) **ಕೈಗಾರಿಕಾ ಅಭಿವೃದ್ಧಿ:** ಭಾರತದಲ್ಲಿ ಯಥೇಚ್ಛವಾಗಿ ಲಭ್ಯವಿರುವ ವಿವಿಧ ರೀತಿಯ ಖನಿಜಾಂಶಗಳು, ಅನೇಕ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಪೂರೈಸುತ್ತವೆ. ಉದಾ: ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ, ಸಿಮೆಂಟು ಕೈಗಾರಿಕೆ, ರಾಸಾಯನಿಕ ಕೈಗಾರಿಕೆಗಳಿಗೆ ಅಗತ್ಯವಿರುವ ವಿವಿಧ ರೀತಿಯ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ.

3) **ಸಾರಿಗೆ-ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಗೆ ಇಂಧನದ ಪೂರೈಕೆ:** ದಕ್ಷ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯು ಯಾವುದೇ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ, ಕೈಗಾರಿಕೆ, ಮಾರುಕಟ್ಟೆ ವಿಸ್ತರಣೆ ಹಾಗೂ ವ್ಯಾಪಾರಗಳ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುತ್ತದೆ. ಅಂತಹ ದಕ್ಷ ಸಾರಿಗೆ ವ್ಯವಸ್ಥೆಯು ಸಮರ್ಪಕವಾದ ಪೆಟ್ರೋಲಿಯಮ್ ಉತ್ಪನ್ನಗಳ ಪೂರೈಕೆಯನ್ನು ಅವಲಂಬಿಸಿದೆ.

4) **ಜನಸಂಖ್ಯೆಯ ಅಗತ್ಯತೆಗಳ ಪೂರೈಕೆ:** ನೈಸರ್ಗಿಕ ಸಂಪನ್ಮೂಲಗಳು ಜನರ ಅಗತ್ಯತೆಗಳನ್ನು ಪೂರೈಸುವುದರ ಮೂಲಕ ಅವರ ಜೀವನ ಮಟ್ಟದ ಹೆಚ್ಚಳಕ್ಕೆ ಕಾರಣವಾಗುತ್ತದೆ.

5) **ದೇಶದ ರಕ್ಷಣೆ:** ದೇಶದ ಆಂತರಿಕ ಭದ್ರತೆ ಹಾಗೂ ಬಾಹ್ಯ ರಕ್ಷಣೆಗೆ ಅಗತ್ಯವಿರುವ ಎಲ್ಲಾ ರಕ್ಷಣಾ ಸಲಕರಣೆ-ಸಾಧನಗಳ ಉತ್ಪಾದನೆಗೆ ಅಗತ್ಯವಿರುವ ಖನಿಜಗಳನ್ನು ನಿಸರ್ಗವು ಪೂರೈಸುತ್ತದೆ.

ಹೀಗೆ ಒಂದು ದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳ ದಕ್ಷ ಬಳಕೆಯು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಆದರೆ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆ ಮತ್ತು ದುರ್ಬಳಕೆಯು ದೇಶದ ಪರಿಸರ ಮತ್ತು ಆರ್ಥಿಕತೆಯ ಮೇಲೆ ಭೀಕರ ದುಷ್ಪರಿಣಾಮಗಳನ್ನು ಬೀರುತ್ತವೆ. ಆದ್ದರಿಂದ ನೈಸರ್ಗಿಕ ಸಂಪನ್ಮೂಲಗಳ ಬಳಕೆಯು ಆ ಸಂಪನ್ಮೂಲಗಳ ಪುನರುತ್ಪಾದನೆಯ ದರಕ್ಕಿಂತ ಕಡಿಮೆಯಿರಬೇಕು.

## ನೈಸರ್ಗಿಕ ಸಂಪನ್ಮೂಲಗಳ ವರ್ಗೀಕರಣ

ನೈಸರ್ಗಿಕ ಸಂಪನ್ಮೂಲಗಳನ್ನು ಪ್ರಮುಖವಾಗಿ ಅವುಗಳ ಪುನರ್ ನವೀಕರಣದ ಮತ್ತು ಹಂಚಿಕೆಯ ಸ್ವರೂಪದ ಮೇಲೆ ವರ್ಗೀಕರಿಸಲಾಗಿದೆ.

ಪುನರ್ ನವೀಕರಣದ ಆಧಾರದ ಮೇಲೆ ನೈಸರ್ಗಿಕ ಸಂಪನ್ಮೂಲಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ: 1) ನವೀಕರಿಸಬಹುದಾದ ಸಂಪನ್ಮೂಲಗಳು ಹಾಗೂ 2) ಬರಿದಾಗುವ ಸಂಪನ್ಮೂಲಗಳು. ಇವುಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ.

**1) ನವೀಕರಿಸಬಹುದಾದ ಅಥವಾ ಬರಿದಾಗದ ಸಂಪನ್ಮೂಲಗಳು:** ಯಾವ ಸಂಪನ್ಮೂಲಗಳು ನೈಸರ್ಗಿಕವಾಗಿ ಬೆಳೆದು/ಪುನರುತ್ಪಾದನೆಗೊಂಡು ಮತ್ತೆ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬಳಕೆಗೆ ಲಭ್ಯವಾಗುತ್ತವೆಯೋ ಅಂತಹವುಗಳು ನವೀಕರಿಸಬಹುದಾದ ಸಂಪನ್ಮೂಲಗಳು. ಈ ಸಂಪನ್ಮೂಲಗಳನ್ನು ನಿರಂತರವಾಗಿ ಬಳಸಿದರೂ ಮತ್ತೆ ಮತ್ತೆ ಬಳಕೆಗೆ ದೊರಕುತ್ತವೆ. ಉದಾಹರಣೆಗೆ ಭೂಮಿಯ ಮೇಲ್ಮಣ್ಣು, ಅರಣ್ಯ, ಜಲ, ವಾಯು, ಇತ್ಯಾದಿ.

**2) ನವೀಕರಿಸಲಾಗದ ಅಥವಾ ಬರಿದಾಗುವ ಸಂಪನ್ಮೂಲಗಳು:** ಒಮ್ಮೆ ಬಳಸಿದ ಸಂಪನ್ಮೂಲಗಳು ಮತ್ತೆ ಬಳಕೆಗೆ ಲಭ್ಯವಾಗುವುದಿಲ್ಲವೋ ಅಂತಹವುಗಳು ನವೀಕರಿಸಲಾಗದ ಸಂಪನ್ಮೂಲಗಳು. ನಿರಂತರವಾಗಿ ಬಳಸುವಿಕೆಯ ಕ್ರಿಯೆಯಿಂದ ಇವು ಕ್ರಮೇಣ ಬರಿದಾಗುವುದರಿಂದ ಇವುಗಳನ್ನು ಬರಿದಾಗುವ ಸಂಪನ್ಮೂಲವೆಂಥಲೂ ಕರೆಯುತ್ತೇವೆ. ಉದಾಹರಣೆಗೆ, ಖನಿಜಗಳು, ಅದಿರು, ತೈಲ, ಇತ್ಯಾದಿ.

ಹಂಚಿಕೆಯ ಸ್ವರೂಪದ ಮೇಲೆ ನೈಸರ್ಗಿಕ ಸಂಪನ್ಮೂಲಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ: 1) ಸರ್ವವ್ಯಾಪಿ ಅಥವಾ ನಿರಂತರ ಸಂಪನ್ಮೂಲಗಳು ಮತ್ತು 2) ಸ್ಥಳ ನಿರ್ಬಂಧಿತ ಸಂಪನ್ಮೂಲಗಳು. ಇವುಗಳ ಕುರಿತು ಸಂಕ್ಷಿಪ್ತವಾಗಿ ತಿಳಿಯೋಣ.

1) **ಸರ್ವವ್ಯಾಪಿ ಅಥವಾ ನಿರಂತರ ಸಂಪನ್ಮೂಲಗಳು:** ಎಲ್ಲಾ ಸ್ಥಳಗಳಲ್ಲಿ ನಿರಂತರವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಸರ್ವವ್ಯಾಪಿ ಸಂಪನ್ಮೂಲಗಳು ಎಂದು ಕರೆಯಲಾಗುತ್ತದೆ. ಉದಾ: ವಾಯುಶಕ್ತಿ, ಸೌರಶಕ್ತಿ.

2) **ಸ್ಥಳ ನಿರ್ಬಂಧಿತ ಸಂಪನ್ಮೂಲಗಳು:** ಒಂದು ನಿರ್ದಿಷ್ಟ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವ ಮತ್ತು ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಸ್ಥಳ ನಿರ್ಬಂಧಿತ ಸಂಪನ್ಮೂಲಗಳು ಎನ್ನಲಾಗುತ್ತದೆ. ಉದಾ: ಖನಿಜಗಳು, ಇಂಧನ ಮೂಲಗಳು, ಜಲ ವಿದ್ಯುತ್ ಇತ್ಯಾದಿ.

## ಭೂ ಸಂಪನ್ಮೂಲ

ಭೂಮಿಯ ಮೇಲಿನ ಜೀವ ಸಂಕುಲವು ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ಗಾಳಿ, ಸೂರ್ಯನಶಕ್ತಿ

ಹಾಗೂ ಇತರೆ ಖನಿಜ ಸಂಪನ್ಮೂಲಗಳನ್ನು ಅವಲಂಬಿಸಿದೆ. ಯಾವುದೇ ಆರ್ಥಿಕ ಚಟುವಟಿಕೆಯು ಭೂಮಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದಲೇ ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲವು ಮಹತ್ವದ ಸ್ಥಾನವನ್ನು ಹೊಂದಿದೆ. ಭಾರತವು 329 ದಶ ಲಕ್ಷ ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದು, ಇದು ಜಗತ್ತಿನ ಭೂ ಪ್ರದೇಶದ ಶೇ. 2.4ರಷ್ಟಾಗುತ್ತದೆ. ಕೃಷಿಯು ಪ್ರಧಾನವಾಗಿ ಭೂಮಿಯನ್ನು ಅವಲಂಬಿಸಿದೆ. ಭೂಮಿಯ ಬಳಕೆಯನ್ನು ಸಾಮಾನ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ ವಿವಿಧ ರೀತಿಯ ಕೃಷಿ ಬೆಳೆಗಳು, ನೆಡು ತೋಪುಗಳು, ತೋಟಗಳಿಗೆ ಸೇರಿದ ಕೃಷಿ ಭೂಮಿ ಒಂದೆಡೆಯಾದರೆ; ಹಳ್ಳಿ-ಪಟ್ಟಣ, ನಗರ, ಕೈಗಾರಿಕೆಗಳು, ರಸ್ತೆ, ರೈಲು ಹಾಗೂ ಹುಲ್ಲುಗಾವಲುಗಳಿಗೆ ಒಳಪಟ್ಟಿರುವ ಕೃಷಿಯೇತರ ಭೂಮಿ ಇನ್ನೊಂದೆಡೆಯಾಗಿದೆ.

## ಭೂ ಬಳಕೆ

ಭೂಮಿಯನ್ನು ವಿವಿಧ ಉದ್ದೇಶಗಳಿಗಾಗಿ ಬಳಸುವುದನ್ನು ಭೂಮಿಯ ಬಳಕೆ ಎನ್ನುತ್ತೇವೆ. ಭಾರತದ ಒಟ್ಟು ಭೌಗೋಳಿಕ ಪ್ರದೇಶವಾದ 329 ದಶ ಲಕ್ಷ ಹೆಕ್ಟೇರ್‌ಗಳಲ್ಲಿ 306 ದಶ ಲಕ್ಷ ಹೆಕ್ಟೇರ್ ಪ್ರದೇಶವು ಸಮೀಕ್ಷೆಗೊಳಪಟ್ಟ ಭೂ ಪ್ರದೇಶವಾಗಿದೆ. ಸುಮಾರು 42 ದಶ ಲಕ್ಷ ಹೆಕ್ಟೇರ್ ಭೂ ಪ್ರದೇಶವು ಸಾಗುವಳಿಗೆ ಲಭ್ಯವಿಲ್ಲದ ಭೂಮಿಯಾಗಿದ್ದು ಇದು ಕಟ್ಟಡಗಳು, ರಸ್ತೆಗಳು, ಕೈಗಾರಿಕಾ ಪ್ರದೇಶಗಳಿಂದ ಆವೃತವಾಗಿದೆ. ಸುಮಾರು 69 ದಶ ಲಕ್ಷ ಹೆಕ್ಟೇರ್ ಭೂ ಪ್ರದೇಶವು ಅರಣ್ಯಗಳಿಂದ ಆವೃತಗೊಂಡಿದ್ದು ಇದು ಒಟ್ಟು ಭೌಗೋಳಿಕ ಪ್ರದೇಶದ ಶೇ. 23ರಷ್ಟಿದೆ. ಸುಮಾರು 25 ದಶ ಲಕ್ಷ ಹೆಕ್ಟೇರ್ ಭೂ ಪ್ರದೇಶವು ಬಂಜರು ಭೂಮಿಯಾಗಿದ್ದು, 11 ದಶ ಲಕ್ಷ ಹೆಕ್ಟೇರ್ ಭೂ ಪ್ರದೇಶವು ಖಾಯಂ ಹುಲ್ಲುಗಾವಲು ಪ್ರದೇಶಗಳಿಂದ ಕೂಡಿದೆ. ಸುಮಾರು 18 ದಶ ಲಕ್ಷ ಹೆಕ್ಟೇರ್ ಭೂ ಪ್ರದೇಶವು ಬೀಳು ಭೂಮಿಯಾಗಿದೆ; ಸುಮಾರು 141 ದಶ ಲಕ್ಷ ಹೆಕ್ಟೇರ್ ಭೂ ಪ್ರದೇಶವು ನಿವ್ವಳ ಬೆಳೆ ಪ್ರದೇಶವಾಗಿದ್ದು ಇದರಲ್ಲಿ 49 ದಶ ಲಕ್ಷ ಹೆಕ್ಟೇರ್ ಒಂದಕ್ಕಿಂತ ಹೆಚ್ಚು ಸಾರಿ ಬಿತ್ತನೆಗೊಳಪಟ್ಟ ಭೂಮಿಯಾಗಿದೆ.

## ಭೂ ಸವೆತ

ಭೂಮಿಯ ಮೇಲ್ಪದರವು ಜೋರಾಗಿ ಬೀಸುವ ಗಾಳಿ, ರಭಸವಾಗಿ ಹರಿಯುವ ನೀರು ಮುಂತಾದ ಕಾರಣಗಳಿಂದ ಕೊಚ್ಚಿ ಹೋಗುವುದಕ್ಕೆ ಭೂ ಸವೆತ ಎನ್ನಲಾಗುತ್ತದೆ. ಅಂದರೆ ವಿವಿಧ ಕಾರಣಗಳಿಂದ ಭೂಮಿಯು ತನ್ನ ಫಲವತತ್ತೆಯನ್ನು ಕಳೆದುಕೊಳ್ಳುವುದಕ್ಕೆ ಭೂ ಸವೆತ ಎನ್ನಲಾಗುತ್ತದೆ. ಭೂ ಸವೆತವು ಒಂದು ಗಂಭೀರ ಸಮಸ್ಯೆ ಎಂದು ಪರಿಗಣಿಸಲ್ಪಟ್ಟಿದ್ದು ಭಾರತದಲ್ಲಿ ಶೇ.53ರಷ್ಟು ಭೂಮಿಯು ಭೂ ಸವೆತದ ಸಮಸ್ಯೆಯನ್ನು ಎದುರಿಸುತ್ತಿದೆ.

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಬಹುತೇಕ ಜನರ ಜೀವನೋಪಾಯ ಸಾಗುವಳಿಯೇ ಆಗಿದೆ. ಇಂತಹ ಕೃಷಿ ಚಟುವಟಿಕೆಯು ಭೂಮಿಯ ಮೇಲ್ಭಾಗದಲ್ಲಿರುವ ಫಲವತ್ತಾದ ಮಣ್ಣನ್ನು ಅವಲಂಬಿಸಿದೆ. ದುರದೃಷ್ಟವಶಾತ್ ಭಾರತದಲ್ಲಿ 247 ದಶಲಕ್ಷ ಹೆಕ್ಟೇರ್ ಪ್ರದೇಶವು ಮಣ್ಣಿನ ಸವೆತಕ್ಕೆ ಒಳಗಾಗಿದೆ. ಭಾರತದ 144 ದಶಲಕ್ಷ ಹೆಕ್ಟೇರ್ ಪ್ರದೇಶವು ನೀರು ಮತ್ತು ಗಾಳಿಯ ಕಾರಣದಿಂದ ಮಣ್ಣಿನ ಸವೆತಕ್ಕೆ ಒಳಗಾಗಿದೆ. ನೀರಿನ ಸವೆತದಿಂದ ಪ್ರತಿವರ್ಷ 6000 ರಿಂದ 7000 ದಶಲಕ್ಷ ಟನ್ನುಗಳಷ್ಟು ಮಣ್ಣಿನ ಮೇಲ್ಪದರ ಕಳೆದು ಹೋಗುತ್ತಿದೆ.

## ಭೂ ಸವೆತಕ್ಕೆ ಪ್ರಮುಖ ಕಾರಣಗಳು

ಭಾರತದಲ್ಲಿ ಭೂಮಿಯು ಹಲವಾರು ನೈಸರ್ಗಿಕ ಮತ್ತು ಮಾನವ ನಿರ್ಮಿತ ಕಾರಣಗಳಿಂದ ಭೂ ಸವೆತ ಉಂಟಾಗುತ್ತದೆ. ಅಂತಹ ಪ್ರಮುಖ ಕಾರಣಗಳೆಂದರೆ:

1) ಭೂಮಿಯ ಮೇಲಿನ ಜನಸಂಖ್ಯಾ ಒತ್ತಡವು ತೀವ್ರವಾಗಿ ಏರಿಕೆಯಾಗುತ್ತಿದ್ದು, ಭೂಮಿಯ ತಲಾ ಲಭ್ಯತೆಯು ಕಡಿಮೆಯಾಗುತ್ತಿದೆ. ಇದರಿಂದ ಭೂಮಿಯ ಮೇಲೆ ಒತ್ತಡ ಹೆಚ್ಚಿ ಭೂ ಸವೆತಕ್ಕೆ ಕಾರಣವಾಗುತ್ತದೆ. ಭಾರತದಲ್ಲಿ ಭೂಮಿಯ ತಲಾ ಲಭ್ಯತೆಯ ಪ್ರಮಾಣವು ಕೇವಲ 0.17 ಹೆಕ್ಟೇರ್‌ನಷ್ಟಿದೆ.

2) ಭಾರತವು ಶೇ. 80ರಷ್ಟು ಮಳೆಯನ್ನು ಮಾನ್ಸೂನ್ ಮಾರುತಗಳಿಂದ ಪಡೆಯುತ್ತಿದ್ದು, ಅಧಿಕ ಮಳೆಯು ಪ್ರವಾಹಗಳನ್ನು ಹಾಗೂ ಮಳೆಯ ಕೊರತೆಯು ಬರಗಾಲವನ್ನು ಉಂಟುಮಾಡುವುದರ ಮೂಲಕವೂ ಮಣ್ಣಿನ ಮೇಲೆ ಪರಿಣಾಮ ಬೀರುತ್ತದೆ.

3) ನಿರಂತರ ಬೇಸಾಯ, ವರ್ಗಾವಣೆ ಬೇಸಾಯ ಪದ್ಧತಿ, ಸಮರ್ಪಕವಲ್ಲದ ನೀರಾವರಿ, ಕೀಟನಾಶಕ, ರಾಸಾಯನಿಕಗಳ ಬಳಕೆಗಳೂ ಸಹ ಮಣ್ಣಿನ ಫಲವತ್ತತೆಯ ನಷ್ಟಕ್ಕೆ ಕಾರಣವಾಗಿವೆ.

4) ಹೆಚ್ಚುತ್ತಿರುವ ಜನಸಂಖ್ಯೆಯ ಆಹಾರದ ಬೇಡಿಕೆಯನ್ನು ಈಡೇರಿಸಲು, ಸಾಗುವಳಿ ಭೂಮಿಯನ್ನು ವಿಸ್ತರಿಸಲು ಅರಣ್ಯಗಳನ್ನು ಕಡಿಯುವುದರ ಮೂಲಕ ಭೂಮಿಯನ್ನು ನಾಶಗೊಳಿಸಲಾಗುತ್ತಿದೆ.

5) ಇಡೀ ಪ್ರಪಂಚದಲ್ಲಿಯೇ ಅತಿ ಹೆಚ್ಚು ಜಾನುವಾರುಗಳನ್ನು ಹೊಂದಿರುವ ದೇಶ ಭಾರತವಾಗಿದೆ. ಅವುಗಳಿಗೆ ಅಗತ್ಯ ಮೇವು ಒದಗಿಸಲು ಮುಕ್ತವಾಗಿ ಹುಲ್ಲು ಮೇಯಿಸಲಾಗುತ್ತದೆ. ಇದರಿಂದಲೂ ಮಣ್ಣಿನ ಸವೆತ ಹೆಚ್ಚಾಗುತ್ತಿದೆ.

6) ಹೆಚ್ಚುತ್ತಿರುವ ನಗರೀಕರಣ ಮತ್ತು ಕೈಗಾರೀಕರಣಗಳಿಂದಾಗಿ ರಸ್ತೆ, ರೈಲು, ಕಟ್ಟಡಗಳ ನಿರ್ಮಾಣ, ಅಣೆಕಟ್ಟು, ಕಾರ್ಖಾನೆಗಳ ಸ್ಥಾಪನೆಯು ಸಹ ಮಣ್ಣಿನ ಸವೆತಕ್ಕೆ ಕಾರಣವಾಗುತ್ತದೆ.

## ಭೂ ಸವೆತದಿಂದಾಗುವ ದುಷ್ಪರಿಣಾಮಗಳು

ಭೂ ಸವೆತದಿಂದ ಪರಿಸರ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ಹಲವಾರು ದುಷ್ಪರಿಣಾಮಗಳನ್ನು ಬೀರುತ್ತವೆ. ಅವುಗಳೆಂದರೆ:

1) ಭೂಮಿಯ ಮೇಲ್ಪದರದಲ್ಲಿನ ಮಣ್ಣಿನ ಸತ್ವ ನಷ್ಟವಾಗುತ್ತದೆ.

2) ಮಣ್ಣಿನ ಸವೆತದಿಂದ ಅಂತರ್ಜಲ ಮಟ್ಟವು ಕುಸಿಯುತ್ತದೆ.

3) ಮಣ್ಣಿನ ಸವೆತದಿಂದ ಪ್ರವಾಹಗಳು ಮತ್ತು ಬರಗಾಲದ ಪ್ರವೃತ್ತಿಯು ತೀವ್ರವಾಗುತ್ತದೆ.

4) ಜಲಾಶಯಗಳು ಮತ್ತು ಕೆರೆಗಳು ಹೂಳಿನಿಂದ ತುಂಬುವ ಮೂಲಕ ಅವುಗಳ ನೀರು ಸಂಗ್ರಹಣಾ ಸಾಮರ್ಥ್ಯವು ಕಡಿಮೆಯಾಗುತ್ತದೆ.

5) ಗಾಳಿಯಿಂದ ಉಂಟಾಗುವ ಮಣ್ಣಿನ ಸವೆತವು ಮಣ್ಣಿನ ಉತ್ಪಾದಕ ಸಾಮರ್ಥ್ಯವನ್ನು ಕಡಿಮೆಗೊಳಿಸುತ್ತದೆ.

6) ಕೃಷಿ ಇಳುವರಿಯು ಕಡಿಮೆಯಾಗುತ್ತದೆ.

7) ಭೂ ಮಾಲಿನ್ಯದ ಮೂಲಕ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ.

8) ಸಸ್ಯ ಸಂಕುಲಗಳು ನಾಶವಾಗುವುದರ ಮೂಲಕ ಜೈವಿಕ ಪರಿಸರ ಅಸಮತೋಲನ ಉಂಟಾಗುತ್ತದೆ.

## ಭೂ ಸಂರಕ್ಷಣಾ ಕ್ರಮಗಳು

ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಪ್ರಕ್ರಿಯೆಗೆ ಭೂ ಸಂರಕ್ಷಣೆ ಎನ್ನಲಾಗುತ್ತದೆ. ಭೂ ಸಂರಕ್ಷಣೆಯ ಪ್ರಮುಖ ಕ್ರಮಗಳೆಂದರೆ ;

1) ಇಳಿಜಾರಿನ ಪ್ರದೇಶಗಳಲ್ಲಿ ಒಡ್ಡುಗಳನ್ನು ನಿರ್ಮಿಸುವುದು ಮತ್ತು ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

2) ಬೆಟ್ಟ ಪ್ರದೇಶಗಳಲ್ಲಿ ಹಾಗೂ ಸರ್ಕಾರಿ ಜಮೀನಿನಲ್ಲಿ ಮರ ಗಿಡಗಳನ್ನು ನೆಡುವುದು.

3) ಜಾನುವಾರುಗಳ ಅತಿಯಾದ ಹುಲ್ಲು ಮೇಯಿಸುವಿಕೆಯನ್ನು ನಿಯಂತ್ರಿಸುವುದು.

4) ಕೃಷಿಯಲ್ಲಿ ಹಸಿರೆಲೆ ಮತ್ತು ಸಾವಯವ ಗೊಬ್ಬರವನ್ನು ಬಳಸುವ ಮೂಲಕ ಮಣ್ಣಿನ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಿಸಬಹುದು.

5) ರಭಸವಾಗಿ ನೀರು ಹರಿಯುವಲ್ಲಿ ಒದುಗಳನ್ನು ಮತ್ತು ಚೆಕ್ ಡ್ಯಾಂಗಳನ್ನು ನಿರ್ಮಿಸುವುದು.

6) ಸಮರ್ಪಕವಾದ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದು.

7) ಬೆಳೆ ಆವರ್ತ ಪದ್ಧತಿಯನ್ನು ಕೃಷಿಯಲ್ಲಿ ಅನುಸರಿಸುವುದು.

8) ಕೇಂದ್ರ ಸರ್ಕಾರವು 'ಭೂ ಸಂರಕ್ಷಣಾ ಮಂಡಳಿ'ಯನ್ನು ಸ್ಥಾಪಿಸಿದ್ದು, ಭೂ ಸಂರಕ್ಷಣೆಯ ಜವಾಬ್ದಾರಿ ಹೊಂದಿದೆ.

9) ಊರಿಗೊಂದು ಕೆರೆ ಹಾಗೂ ಜಲ ಸಂವರ್ಧನಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಜಾರಿಗೊಳಿಸುವುದು.

## ಜಲ ಸಂಪನ್ಮೂಲಗಳು

ನೀರು ನಿಸರ್ಗದ ಕೊಡುಗೆಯಾಗಿದ್ದು. ಅದು ಜೀವನಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ಒಂದು ಮೂಲಭೂತ ಅಂಶವಾಗಿದೆ. ಸಮರ್ಪಕವಾದ ಯೋಗ್ಯ ನೀರಿನ ಪೂರೈಕೆಯು ಉತ್ತಮ ಆರೋಗ್ಯ ಮತ್ತು ಶುಚಿತ್ವ ನಿರ್ವಹಣೆಗೆ

ಅಗತ್ಯವಾಗಿದೆ. ನೀರಿನ ಲಭ್ಯತೆಯು ಅಭಿವೃದ್ಧಿಯ ಪ್ರತಿ ಹಂತದ ಮೇಲೆಯೂ ಪ್ರಭಾವ ಬೀರುತ್ತದೆ. ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯಗಳಿಗೆ ನೀರು ಅಗತ್ಯ ಆದಾನವಾಗಿದೆ. ಇದಲ್ಲದೇ ಎಲ್ಲಾ ಜೀವ ಸಂಕುಲಗಳಿಗೆ ಕುಡಿಯಲು ನೀರು ಬೇಕು. ಹಾಗಾಗಿ ಮಾನವನ ಆರ್ಥಿಕ ಚಟುವಟಿಕೆ ಪ್ರಾರಂಭವಾಗುವುದೇ ನೀರಿನ ಬಳಕೆಯಿಂದಲೇ ಆಗಿದೆ. ಜಲ ಸಂಪನ್ಮೂಲಗಳ ಲಭ್ಯತೆಯಲ್ಲಿ ಭಾರತವು ಮೂರನೇ ಸ್ಥಾನದಲ್ಲಿದೆ. ಇಂದು ಭಾರತವು ಹೆಚ್ಚುತ್ತಿರುವ ಶುದ್ಧ ನೀರಿನ ಕೊರತೆ ಹಾಗೂ ರಾಜ್ಯಗಳ ನಡುವೆ ನೀರಿಗಾಗಿ ಪೈಪೋಟಿ ಸೇರಿದಂತೆ ತನ್ನ ನೆರೆ ರಾಷ್ಟ್ರಗಳ ಜೊತೆ ತನ್ನ ಪಾಲಿನ ನೀರಿನ ಹಕ್ಕಿನ ರಕ್ಷಣೆಗಾಗಿ ಶ್ರಮಿಸುತ್ತಿದೆ.

## ಜಲ ಸಂಪನ್ಮೂಲಗಳ ಮೂಲಗಳು

ಭಾರತದಲ್ಲಿನ ಜಲ ಸಂಪನ್ಮೂಲಗಳ ಮೂಲಗಳನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ 1) ಮೇಲ್ಮೈ ಜಲ ಮತ್ತು 2) ಅಂತರ್ಜಲ

## ಮೇಲ್ಮೈ ಜಲ

ಭೂಮಿಯ ಮೇಲ್ಭಾಗದಲ್ಲಿರುವ ಕುಂಟೆಗಳು, ಕೆರೆಗಳು, ಕಾಲುವೆಗಳು, ನದಿಗಳು ಮತ್ತು ಸರೋವರಗಳು ಮೇಲ್ಮೈ ಜಲದ ಪ್ರಮುಖ ಮೂಲಗಳಾಗಿವೆ. ಮಳೆ ನೀರು ಮೇಲ್ಮೈ ಜಲಕ್ಕೆ ಪ್ರಮುಖ ಮೂಲವಾಗಿದ್ದು ಶೇ. 80ರಷ್ಟು ಮಳೆಯು ನೈಋತ್ಯ ಮಾನ್ಸೂನ್ ಮಾರುತಗಳಿಂದ ಬರುತ್ತದೆ. ಆದರೆ ಇದು ಅನಿಶ್ಚಿತತೆ ಮತ್ತು ಅಕಾಲಿಕತೆಯಿಂದ ಕೂಡಿದೆ. ಭಾರತವು ಹಲವಾರು ನದಿಗಳನ್ನು ಹೊಂದಿದ್ದು ಜಲಾನಯನ ಪ್ರದೇಶಗಳನ್ನು ನಿರ್ಮಿಸಿದೆ, ಭಾರತದಲ್ಲಿ ಲಭ್ಯವಿರುವ ಮೇಲ್ಮೈ ಜಲವನ್ನು ಅಧಿಕವಾಗಿ ನೀರಾವರಿ ಮತ್ತು ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ. ಅಲ್ಲದೇ ಮೀನುಗಾರಿಕೆ, ಜಲಸಂಚಾರ, ಗೃಹ ಬಳಕೆಗಳಿಗೆ ನೀರು ತುಂಬಾ ಅಗತ್ಯವಾಗಿದೆ.

## ಅಂತರ್ಜಲ

ಭೂಮಿಯ ಗರ್ಭದಲ್ಲಿ ಅಡಗಿರುವ ಸುಪ್ತ ಜಲವನ್ನು ಅಂತರ್ಜಲ ಎನ್ನಲಾಗುತ್ತದೆ. ಇದು ಪ್ರಮುಖವಾಗಿ ಬಾವಿಗಳು, ಕೊಳವೆ ಬಾವಿಗಳು ಮತ್ತು ಚಿಲುಮೆಗಳ ಮೂಲಗಳಿಂದ ದೊರೆಯುತ್ತದೆ. ಭಾರತವು ವಿಶ್ವದಲ್ಲಿಯೇ ಅತಿ ಹೆಚ್ಚು ಅಂತರ್ಜಲ ಬಳಸುವ ರಾಷ್ಟ್ರವಾಗಿದೆ. ವರ್ಷಕ್ಕೆ ಅಂದಾಜು 230 ಘನ ಕಿ.ಮೀ.ನಷ್ಟು ನೀರನ್ನು ಬಳಸಲಾಗುತ್ತಿದೆ (ವಿಶ್ವಬ್ಯಾಂಕ್, 2010). ಕೃಷಿ ಮತ್ತು ನೀರಾವರಿಗಳ ಶೇ.60ರಷ್ಟು ಬೇಡಿಕೆಯನ್ನು ಮತ್ತು ದೇಶೀಯ ನೀರಿನ ಶೇ.80 ರಷ್ಟು ಬೇಡಿಕೆಯನ್ನು ಅಂತರ್ಜಲದ ಮೂಲಕವೇ ಈಡೇರಿಸಲಾಗುತ್ತಿದೆ. ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಪ್ರಕಾರ ಗ್ರಾಮೀಣ ಪ್ರದೇಶಗಳಿಗೆ ಶೇ. 90ರಷ್ಟು ನೀರಿನ ಪೂರೈಕೆಯ ಮೂಲ ಅಂತರ್ಜಲವಾಗಿದೆ.

ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ನೀರಿನ ಬೇಡಿಕೆ ಮತ್ತು ಬಳಕೆಯ ಪ್ರಮಾಣವು ಹೆಚ್ಚಾಗುತ್ತಿದೆ. ತೀವ್ರ ಜನಸಂಖ್ಯೆಯ ಬೆಳವಣಿಗೆ, ಕೃಷಿ ಮತ್ತು ಕೈಗಾರಿಕೆಗಳ ಪ್ರಗತಿ, ಕೈಗಾರೀಕರಣದಿಂದ ತೀವ್ರಗೊಳ್ಳುತ್ತಿರುವ ನಗರೀಕರಣ, ಸುಧಾರಿಸಿದ ಮೂಲಭೂತ ಸೇವೆಗಳ ಪ್ರಕ್ರಿಯೆಯ ಕಾರಣವಾಗಿದೆ. ಇದಲ್ಲದೇ ನೀರಿನ ಅಸಮರ್ಪಕ ನಿರ್ವಹಣೆ,

ದುರ್ಬಳಕೆ ಹಾಗೂ ಜಲ ಮಾಲಿನ್ಯದಿಂದ ಹಲವು ಕೆರೆಗಳು ಮತ್ತು ಕೆಲವು ನದಿಗಳು ನಿರ್ನಾಮಗೊಂಡಿವೆ. ಇದರಿಂದ ಒಂದು ಕಡೆ ಅಂತರ್ಜಲ ಮಟ್ಟದ ಕುಸಿತದಿಂದಾಗಿ ನೀರಿನ ಲಭ್ಯತೆಯ ಪ್ರಮಾಣವು ಕಡಿಮೆಗೊಂಡರೆ ಮತ್ತೊಂದೆಡೆ ಆರೋಗ್ಯದ ಮೇಲೆ ಭೀಕರ ಪರಿಣಾಮಗಳನ್ನು ಬೀರುತ್ತದೆ. ನೀರಿನ ಬೇಡಿಕೆಯ ಹೆಚ್ಚಳದಿಂದಾಗಿ ನೀರು ಒಂದು ಆರ್ಥಿಕ ಸರಕಾಗಿ ಮಾರ್ಪಾಟು ಹೊಂದಿದೆ. ಹಾಗಾಗಿ ಉತ್ತಮ ಕುಡಿಯುವ ನೀರಿಗೆ ಬೆಲೆಯನ್ನು ತೆರಬೇಕಾಗುತ್ತದೆ. ಇದರಿಂದಾಗಿ ನೀರಿನ ಮೇಲಿನ ವೆಚ್ಚದ ಪ್ರಮಾಣವು ಹೆಚ್ಚಾಗುತ್ತದೆ.

## ಅರಣ್ಯ ಸಂಪನ್ಮೂಲಗಳು

ಭಾರತವು ನೈಸರ್ಗಿಕ ವೈವಿಧ್ಯತೆಯಿಂದ ಸಮೃದ್ಧವಾಗಿದೆ. ಅರಣ್ಯವು ಕೃಷಿ ನಂತರ ಅತಿ ಹೆಚ್ಚು ಭೂಮಿಯನ್ನು ಬಳಕೆ ಮಾಡಿಕೊಳ್ಳುವ ಪ್ರಮುಖ ವಲಯವಾಗಿದೆ. ಅರಣ್ಯಗಳು ಹಲವಾರು ಪ್ರಾಣಿ, ಪಕ್ಷಿ ಮತ್ತು ಸಸ್ಯ ಪ್ರಭೇಧಗಳ ಆಶ್ರಯ ತಾಣವಾಗಿದೆ. ಇಂತಹ ಅರಣ್ಯಗಳು ಜಗತ್ತಿನಾದ್ಯಂತ ವಿಸ್ತರಿಸಿದೆ. ಅರಣ್ಯಗಳ ವಿಧಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿವೆ. ಇವು ನೈಸರ್ಗಿಕವಾಗಿ ಬೆಳೆಯುತ್ತವೆ. ಆದರೆ ಮಾನವನ ಚಟುವಟಿಕೆಗಳು ಅರಣ್ಯಗಳ ಮೇಲೆ ಧನಾತ್ಮಕವಾಗಿ ಮತ್ತು ನಕಾರಾತ್ಮಕವಾದ ಪರಿಣಾಮಗಳನ್ನು ಬೀರುತ್ತದೆ.

ಭಾರತದಲ್ಲಿ 6,37,293 ಚದರ ಕಿ. ಮೀ. ಪ್ರದೇಶ ಅರಣ್ಯಗಳಿಂದ ಕೂಡಿದ್ದು, ಇದು ಭಾರತದ ಒಟ್ಟು ಭೌಗೋಳಿಕ ಪ್ರದೇಶದ ಶೇ. 19.39ರಷ್ಟು ಇದೆ. ಇದರಲ್ಲಿ ಶೇ. 11.48ರಷ್ಟು ದಟ್ಟ ಅರಣ್ಯಗಳಿಂದ, ಶೇ. 7.76ರಷ್ಟು ತೆರದ ಅರಣ್ಯಗಳಿಂದ ಹಾಗೂ ಶೇ. 0.15ರಷ್ಟು ಮ್ಯಾಂಗ್ರೋವ್ ಅರಣ್ಯಗಳಿಂದ ಆವೃತವಾಗಿದೆ.

## ಅರಣ್ಯಗಳ ಪ್ರಾಮುಖ್ಯತೆ

ನಾಗರಿಕತೆಗಳ ಉಗಮ ನದಿಯ ದಡಗಳಲ್ಲಿ ಆರಂಭವಾದರೂ ಅವರು ತಮ್ಮ ಆಹಾರ, ಬಟ್ಟೆ, ವೈದ್ಯಕೀಯ ಗಿಡ ಮೂಲಿಕೆಗಳಿಗೆ ಇತ್ಯಾದಿ ಅಗತ್ಯತೆಗಳಿಗಾಗಿ ಅರಣ್ಯಗಳನ್ನು ಅವಲಂಬಿಸಿದ್ದರು. ಅರಣ್ಯದಲ್ಲಿನ ಒಂದು ಸಣ್ಣ ಪ್ರದೇಶವನ್ನು ತೆರವುಗೊಳಿಸಿ, ಆಹಾರ ಬೆಳೆಯಲು ಪ್ರಾರಂಭಿಸಿದರು. ಆದರೆ ಇತರೆ ಅಗತ್ಯಗಳನ್ನು ಪೂರೈಸಿಕೊಳ್ಳಲು ಅರಣ್ಯಗಳ ಮೇಲಿನ ಅವರ ಅವಲಂಬನೆಯು ನಿರಂತರವಾಗಿ ಮುಂದುವರಿಯಿತು. ಜನರು ಇಂದಿಗೂ ಕಾಗದ, ಉರುವಲು ಕಟ್ಟಿಗೆ, ವೈದ್ಯಕೀಯ ಗಿಡಮೂಲಿಕೆಗಳು, ಆಹಾರ ಮತ್ತು ಮೇವುಗಳಿಗಾಗಿ ಅರಣ್ಯಗಳನ್ನು ಅವಲಂಬಿಸಿದ್ದಾರೆ.

ಗ್ರಾಮೀಣ ಜನಸಂಖ್ಯೆಗೆ ಉರುವಲು ಕಟ್ಟಿಗೆಗಳು ಅಡುಗೆ ಮಾಡಲು ಮತ್ತು ನೀರು ಕಾಯಿಸಲು ಪ್ರಮುಖ ಶಕ್ತಿ ಸಂಪನ್ಮೂಲವಾಗಿವೆ. ಅದಕ್ಕಾಗಿ ಕಾಡಿನಲ್ಲಿ ಒಣಗಿದ ಮತ್ತು ಬಿದ್ದ ಮರಗಳಿಂದ ಗ್ರಾಮೀಣ ಜನರು ಸಣ್ಣ ಕಟ್ಟಿಗೆಗಳನ್ನು ಸಂಗ್ರಹಿಸುತ್ತಾರೆ.

ಜಾನುವಾರು ಮತ್ತು ಇತರೆ ಪ್ರಾಣಿಗಳಿಗೆ ಗುಡ್ಡಗಾಡು ಮತ್ತು ಶುಷ್ಕ ಪ್ರದೇಶಗಳಲ್ಲಿ ಹಾಗೂ ಬರಗಾಲದಂತಹ ಸಂದರ್ಭಗಳಲ್ಲಿ ಅರಣ್ಯಗಳು ಪ್ರಮುಖ ಮೇವಿನ ಮೂಲವಾಗಿದೆ. ಅರಣ್ಯಗಳು ಜಾನುವಾರುಗಳಿಗೆ ಅಗತ್ಯವಿರುವ ಹುಲ್ಲು, ಮರದ ಎಲೆಗಳು, ಮತ್ತು ಪೊದೆಗಳನ್ನು ಹೊಂದಿದ್ದು ಪೌಷ್ಟಿಕ ಆಹಾರ ಪೂರೈಸುತ್ತವೆ.

ಕಾಡಿನ ಮರದ ಬೇರುಗಳು ನೀರು ಮತ್ತು ಗಾಳಿಯಿಂದ ಉಂಟಾಗುವ ಮಣ್ಣಿನ ಸವಕಳಿಯನ್ನು ತಡೆಗಟ್ಟುತ್ತದೆ. ಅಲ್ಲದೇ ಮರಗಳಿಂದ ಉದುರುವ ಎಲೆಗಳು ಮಣ್ಣಿನ ಸಾರಜನಕ ಅಂಶವನ್ನು ಹೆಚ್ಚಿಸುವ ಮೂಲಕ ಮಣ್ಣಿನ ಫಲವತತ್ತೆಯನ್ನು ಸುಧಾರಿಸುತ್ತದೆ.

ದೇಶದಲ್ಲಿ 1500ಕ್ಕೂ ಹೆಚ್ಚು ವಿಧದ ಜಾತಿಯ ಮರಗಳು, ಲಭ್ಯವಿದ್ದು ಅವುಗಳಲ್ಲಿ ಹಲವನ್ನು ಮರದ ದಿಮ್ಮಿಗಳ ತಯಾರಿಕೆಗೆ ಬಳಸಲಾಗುತ್ತಿದೆ. ಕಾಗದ ಕಾರ್ಖಾನೆ, ಔಷಧಿಯ ಕಾರ್ಖಾನೆ, ಪ್ಲೈವುಡ್ ಕಾರ್ಖಾನೆ ಮುಂತಾದ ಅರಣ್ಯಗಳ ಆಧಾರಿತ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಗಿದೆ.

ಅನಾದಿ ಕಾಲದಿಂದಲೂ ಮಾನವರು ವಿವಿಧ ಕಾಯಿಲೆಗಳನ್ನು ಗುಣಪಡಿಸಲು ಅರಣ್ಯಗಳನ್ನು ಅವಲಂಬಿಸಿದ್ದಾರೆ. ಇಂದಿಗೂ ಅನೇಕ ಕಾಯಿಲೆಗಳನ್ನು ವಾಸಿ ಮಾಡಲು ಅಗತ್ಯವಿರುವ ಔಷಧಿಯನ್ನು ಅರಣ್ಯದಲ್ಲಿ ಲಭಿಸುವ ವಿವಿಧ ರೀತಿಯ ಮೂಲಿಕೆಗಳು ಮತ್ತು ಸಸ್ಯಗಳಿಂದ ದೊರಕುತ್ತದೆ. ವಿವಿಧ ರೀತಿಯ ಆಯುರ್ವೇದ ಔಷಧಿಗಳನ್ನು ತಯಾರಿಸಲು ಅರಣ್ಯಗಳನ್ನು ಬಳಸಲಾಗುತ್ತಿದೆ.

ಅರಣ್ಯಗಳು ಜೈವಿಕ ವೈವಿಧ್ಯತೆಯ ಸೌಂದರ್ಯ ತಾಣಗಳಾಗಿದ್ದು, ಅವು ಮನರಂಜನಾ ಸ್ಥಳಗಳೂ ಆಗಿವೆ. ಹಾಗಾಗಿ ಆಯ್ದ ಅರಣ್ಯಗಳನ್ನು ಮನೋರಂಜನಾ ಸ್ಥಳಗಳಾಗಿ ಅಭಿವೃದ್ಧಿಪಡಿಸಿರುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿದೆ.

ಅರಣ್ಯಗಳು ಆಮ್ಲಜನಕವನ್ನು ಮರುಬಳಕೆ ಮತ್ತು ವಾಯು ಶುದ್ಧೀಕರಿಸುವ ಪ್ರಮುಖ ಕಾರ್ಯವನ್ನು ನಿರ್ವಹಿಸುತ್ತದೆ. ಇದಲ್ಲದೇ ಪರಿಸರ ಸಮತೋಲನ ನಿರ್ವಹಣೆಗೂ ಸಹಾಯಕವಾಗಿದೆ. ಹೀಗೆ ಪರಿಸರ ಮತ್ತು ಆರ್ಥಿಕ ಸುಸ್ಥಿರತೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

## ಖನಿಜ ಸಂಪನ್ಮೂಲಗಳು

ಖನಿಜಗಳು ನಿಶ್ಚಿತವಾದ ರಾಸಾಯನಿಕ ರಚನೆಯ ಕ್ರಿಯೆಯಿಂದ ಸ್ವಾಭಾವಿಕವಾಗಿಯೇ ಭೂಮಿಯ ಒಳಭಾಗದಲ್ಲಿ ಉಂಟಾಗುತ್ತದೆ. ಇಂತಹ ಖನಿಜಗಳು ದೇಶದಾದ್ಯಂತ ಅಸಮವಾಗಿ ಹಂಚಿಕೆಯಾಗಿದೆ. ಭೂಮಿಯ ಒಳಭಾಗದಲ್ಲಿರುವ ಖನಿಜಗಳನ್ನು ಮೇಲಕ್ಕೇತ್ತುವುದಕ್ಕೆ ಗಣಿಗಾರಿಕೆ ಎನ್ನಲಾಗುತ್ತದೆ. ಭಾರತವು ಹೇರಳವಾದ ಖನಿಜ ಸಂಪನ್ಮೂಲಗಳಿಂದ ಕೂಡಿದೆ. ಕಲ್ಲಿದ್ದಲು, ಕಬ್ಬಿಣದ ಅದಿರು, ಮ್ಯಾಂಗನೀಸ್, ಕ್ರೋಮೈಟ್, ಜಿಪ್ಸಮ್, ಚಿನ್ನ, ಬಾಕ್ಸೈಟ್, ತಾಮ್ರ, ಸತು, ಸೀಸ, ಬೆಳ್ಳಿ, ಸುಣ್ಣದ ಕಲ್ಲು, ಅಲ್ಯೂಮಿನಿಯಂ, ಯುರೇನಿಯಂ ಮತ್ತು ಥೋರಿಯಂಗಳಂತಹ ಸಾಕಷ್ಟು ಪ್ರಮಾಣದ ಖನಿಜ ಸಂಪನ್ಮೂಲಗಳು ಲಭ್ಯವಿವೆ. ಖನಿಜ ಸಂಪನ್ಮೂಲಗಳನ್ನು ಅವುಗಳ ಬಳಕೆಯ ಆಧಾರದ ಮೇಲೆ ಲೋಹ ಮತ್ತು ಅಲೋಹ ಖನಿಜ ಸಂಪನ್ಮೂಲಗಳೆಂದು ವಿಂಗಡಿಸಲಾಗಿದೆ.

**ಲೋಹ ಖನಿಜ ಸಂಪನ್ಮೂಲಗಳು:** ಲೋಹಗಳಿಂದ ಕೂಡಿರುವ ಖನಿಜಗಳಿಗೆ ಲೋಹಪೂರಿತ ಖನಿಜ ಸಂಪನ್ಮೂಲಗಳೆಂದು ಕರೆಯಲಾಗುತ್ತದೆ. ಕಬ್ಬಿಣದ ಅದಿರು, ಮ್ಯಾಂಗನೀಸ್, ತಾಮ್ರ, ಬಾಕ್ಸೈಟ್, ಚಿನ್ನ ಮತ್ತು ಬೆಳ್ಳಿ ಪ್ರಮುಖ ಲೋಹ ಖನಿಜಗಳಾಗಿವೆ.

**ಅಲೋಹ ಖನಿಜ ಸಂಪನ್ಮೂಲಗಳು:** ಲೋಹದ ಅಂಶವನ್ನು ಹೊಂದಿರದ ಖನಿಜ ಸಂಪನ್ಮೂಲಗಳನ್ನು ಅಲೋಹ ಖನಿಜ ಸಂಪನ್ಮೂಲಗಳೆಂದು ಕರೆಯಲಾಗುತ್ತದೆ. ಉದಾಹರಣೆಗೆ ಮೈಕಾ, ಸುಣ್ಣದ ಕಲ್ಲು, ಸಲ್ಫರ್, ಜಿಪ್ಸಮ್, ಉಪ್ಪು ಇತ್ಯಾದಿಗಳಾಗಿವೆ. ಇವುಗಳನ್ನು ಹೆಚ್ಚಾಗಿ ರಾಸಾಯನಿಕ ಹಾಗೂ ರಸಗೊಬ್ಬರ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ.

## ಖನಿಜ ಸಂಪನ್ಮೂಲಗಳ ಪ್ರಾಮುಖ್ಯತೆ

ಒಂದು ದೇಶದ ಸುಸ್ಥಿರ ಆರ್ಥಿಕತೆಯ ಪ್ರಗತಿಯು ಲಭ್ಯವಿರುವ ಖನಿಜಗಳ ಬಳಕೆಯನ್ನು ಅವಲಂಬಿಸಿದೆ. ಆಧುನಿಕ ನಾಗರಿಕತೆಯು ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ, ಕೈಗಾರಿಕೆಗಳು ಹಾಗೂ ಇತರೆ ಕ್ಷೇತ್ರಗಳ ಅಭಿವೃದ್ಧಿಗೆ ಖನಿಜಗಳು ಆಧಾರವಾಗಿದೆ. ಆದ್ದರಿಂದ ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಖನಿಜ ಸಂಪನ್ಮೂಲಗಳು ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಕೆಳಕಂಡ ಅಂಶಗಳು ಖನಿಜ ಸಂಪನ್ಮೂಲಗಳ ಪಾತ್ರವನ್ನು ವಿವರಿಸುತ್ತವೆ.

1) **ಕೃಷಿ ಅಭಿವೃದ್ಧಿ:** ಖನಿಜಗಳು ಆಧುನಿಕ ಕೃಷಿ ಪದ್ಧತಿಗೆ ಬಹುಮುಖ್ಯ ಸಲಕರಣೆಗಳು ಮತ್ತು ಯಂತ್ರಗಳನ್ನು ಒದಗಿಸುತ್ತದೆ. ಅಲ್ಲದೇ ಕೃಷಿಯಲ್ಲಿ ಬಳಸುವ ರಾಸಾಯನಿಕ ಗೊಬ್ಬರಗಳನ್ನು ನೈಟ್ರೇಟ್, ಫಾಸ್ಫೇಟ್‌ಗಳಂತಹ ಖನಿಜಗಳಿಂದಲೇ ತಯಾರಿಸಲಾಗುತ್ತದೆ. ಹೀಗೆ ದೇಶದಲ್ಲಿ ಕೃಷಿ ಅಭಿವೃದ್ಧಿಗೆ ಖನಿಜ ಸಂಪನ್ಮೂಲಗಳು ಕೊಡುಗೆ ನೀಡುತ್ತವೆ.

2) **ಕೈಗಾರಿಕಾ ಅಭಿವೃದ್ಧಿ:** ಖನಿಜಗಳಿಲ್ಲದೇ ಕೈಗಾರಿಕೀಕರಣ ಸಾಧ್ಯವಿಲ್ಲ. ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ತೈಲ ಕಾರ್ಖಾನೆ ಮುಂತಾದವುಗಳಿಗೆ ಅಗತ್ಯ ಕಚ್ಚಾ ಸಂಪನ್ಮೂಲಗಳನ್ನು ಖನಿಜಗಳು ಒದಗಿಸುತ್ತವೆ. ಅಲ್ಲದೇ ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಿರುವ ಸಣ್ಣ ಮತ್ತು ಭಾರಿ ಗಾತ್ರದ ಯಂತ್ರೋಪಕರಣಗಳನ್ನು ಹಲವು ಖನಿಜ ಲೋಹಗಳಿಂದ ತಯಾರಿಸಲಾಗುತ್ತದೆ.

3) **ಸಾರಿಗೆ ಸೌಲಭ್ಯಗಳ ಅಭಿವೃದ್ಧಿ:** ಸಾರಿಗೆಯು ಸೇವಾ ವಲಯದ ಪ್ರಮುಖ ಕ್ಷೇತ್ರವಾಗಿದೆ. ರಸ್ತೆ, ರೈಲ್ವೇ, ಜಲಸಾರಿಗೆ ಮತ್ತು ವಾಯು ಸಾರಿಗೆಗಳಿಗೆ ಅಗತ್ಯವಿರುವ ರೈಲ್ವೇ ಹಳಿಗಳು, ಟಾರ್ ಮತ್ತು ಕಾಂಕ್ರೀಟ್, ರೈಲ್ವೇ ಬೋಗಿಗಳು, ರಸ್ತೆ ಸೇತುವೆಗಳು, ಮುಂತಾದ ಮೂಲಭೂತ ಅಗತ್ಯ ಸೌಕರ್ಯಗಳ ಪ್ರಗತಿಯು ಖನಿಜ ಸಂಪನ್ಮೂಲಗಳನ್ನು ಅವಲಂಬಿಸಿದೆ. ಅಷ್ಟೇ ಅಲ್ಲದೇ ಸಾರಿಗೆ ಪ್ರಕಾರಗಳ ಸಂಚಾರಕ್ಕೆ ಅಗತ್ಯವಿರುವ ಪೆಟ್ರೋಲಿಯಮ್ ಉತ್ಪನ್ನಗಳು, ಹಡಗು ಮತ್ತು ವಿಮಾನಗಳ ತಯಾರಿಕೆಗೆ ಕಬ್ಬಿಣ ಮತ್ತು ಉಕ್ಕು, ತಾಮ್ರ, ಸತು, ಅಲ್ಯುಮಿನಿಯಂ ಮುಂತಾದ ಲೋಹಗಳನ್ನು ಖನಿಜ ಸಂಪನ್ಮೂಲಗಳು ಪೂರೈಸುತ್ತವೆ.

4) **ವಿದ್ಯುಚ್ಛಕ್ತಿಯ ಸಮರ್ಪಕವಾದ ಪೂರೈಕೆ:** ವಿದ್ಯುತ್ತಿನ ಸಂವಹನಕ್ಕಾಗಿ ತಾಮ್ರ ಮತ್ತು ಅಲ್ಯುಮಿನಿಯಂ ತಂತಿಗಳನ್ನು ಬಳಸಲಾಗುತ್ತದೆ. ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿನ ಉತ್ಪಾದನಾ ಚಟುವಟಿಕೆಗಳು ವಿದ್ಯುತ್ತನ್ನು ಹೆಚ್ಚಾಗಿ ಅವಲಂಬಿಸಿದ್ದು, ಅಗತ್ಯ ಶಕ್ತಿ ಸಂಪನ್ಮೂಲಗಳ ತಯಾರಿಕೆಗೆ ಮತ್ತು ಸಾಗಣೆಗೆ ಖನಿಜ ಸಂಪನ್ಮೂಲಗಳನ್ನು ಬಳಸಲಾಗುತ್ತಿದೆ.

5) **ಜನರ ಜೀವನ ಮಟ್ಟ ಸುಧಾರಣೆ:** ಖನಿಜ ಸಂಪನ್ಮೂಲಗಳು ಕೇವಲ ಕೃಷಿ, ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿಯ ಜೊತೆಗೆ ಗೃಹಬಳಕೆಗೆ ಅಗತ್ಯವಿರುವ ಎಲ್ಲಾ ರೀತಿಯ ಸಲಕರಣೆಗಳನ್ನು ಅಂದರೆ ಅಡುಗೆ ಮಾಡಲು ಬಳಸುವ ಪಾತ್ರೆಗಳು, ಇತರೆ ಪೀಠೋಪಕರಣಗಳು, ಅಲಂಕಾರಿಕ ಆಭರಣಗಳು ಎಲ್ಲವನ್ನು ಪೂರೈಸುತ್ತದೆ. ಈ ಮೂಲಕ ಜನರ ಜೀವನ ಮಟ್ಟ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

6) **ದೇಶದ ರಕ್ಷಣೆ:** ದೇಶದ ಆಂತರಿಕ ಮತ್ತು ಬಾಹ್ಯ ಭದ್ರತೆಗೆ ಅಗತ್ಯವಿರುವ ಯುದ್ಧ ಸಲಕರಣೆಗಳನ್ನು ಅಂದರೆ, ಬಂದೂಕು, ಮಿಷಿನ್ ಗನ್, ಪರಮಾಣು ಬಾಂಬು, ಯುದ್ಧ ವಾಹನ ಇತ್ಯಾದಿಗಳನ್ನು ತಯಾರಿಸಲು ಅಗತ್ಯವಿರುವ ಕಚ್ಚಾ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಖನಿಜಗಳು ದೇಶದ ರಕ್ಷಣೆಗೆ ಸಹಾಯಕವಾಗಿವೆ.

## ಭಾರತದ ಪ್ರಮುಖ ಖನಿಜ ಸಂಪನ್ಮೂಲಗಳು

1) **ಕಬ್ಬಿಣದ ಅದಿರು:** ಕಬ್ಬಿಣದ ಅದಿರು ಉಕ್ಕು ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ದೇಶದ ರಫ್ತುಗಳಿಕೆಯಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ. ಪ್ರಪಂಚದ ಒಟ್ಟು ಕಬ್ಬಿಣದ ಅದಿರಿನ ನಿಕ್ಷೇಪದಲ್ಲಿ ಶೇ. 20ರಷ್ಟು ಭಾರತದಲ್ಲಿದೆ. ಹೊಂದಿದೆ. ಭಾರತದಲ್ಲಿ ಉತ್ತಮ ಗುಣಮಟ್ಟದ ಕಬ್ಬಿಣದ ಅದಿರು ಬಿಹಾರ, ಒಡಿಶಾ, ಮತ್ತು ಮಧ್ಯ ಪ್ರದೇಶಗಳಲ್ಲಿ ದೊರೆಯುತ್ತದೆ. ಕಡಿಮೆ ಗುಣಮಟ್ಟದ ಕಬ್ಬಿಣದ ಅದಿರು ತಮಿಳುನಾಡು, ಮಹಾರಾಷ್ಟ್ರ ಆಂಧ್ರ ಪ್ರದೇಶಗಳಲ್ಲಿ ದೊರೆಯುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಮತ್ತು ಕೆಮ್ಮಣ್ಣುಗುಂಡಿಗಳಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ. ಅಲ್ಲದೇ ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಿದೆ. ಪ್ರಸ್ತುತ ಭಾರತವು ಇಡೀ ವಿಶ್ವದಲ್ಲಿಯೇ ಉಕ್ಕನ್ನು ಅತಿ ಕಡಿಮೆ ವೆಚ್ಚದಲ್ಲಿ ಉತ್ಪಾದಿಸುವ ರಾಷ್ಟ್ರವಾಗಿದೆ.

2) **ಮ್ಯಾಂಗನೀಸ್:** ಮ್ಯಾಂಗನೀಸ್ ಅದಿರು ಪ್ರಮುಖವಾಗಿ ಪದರು ಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿ ಆಕ್ಸೈಡ್ ರೂಪದಲ್ಲಿ ದೊರೆಯುತ್ತದೆ. ಇದನ್ನು ಉಕ್ಕು, ಪ್ಲಾಸ್ಟಿಕ್ ಮತ್ತು ಗಾಜಿನ ಉತ್ಪಾದನೆಯಲ್ಲಿ ಬಳಸಲಾಗುತ್ತದೆ. ಭಾರತದಲ್ಲಿ ಮ್ಯಾಂಗನೀಸ್ ಅದಿರು ಬಿಹಾರ, ಆಂಧ್ರ ಪ್ರದೇಶ, ಕರ್ನಾಟಕ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ ಹಾಗೂ ಒಡಿಶಾ ರಾಜ್ಯಗಳಲ್ಲಿ ಹೇರಳವಾಗಿ ದೊರಕುತ್ತದೆ.

3) **ಬಾಕ್ಸೈಟ್:** ಬಾಕ್ಸೈಟ್ 20ನೇ ಶತಮಾನದಲ್ಲಿ ಬಳಕೆಯಾಗುತ್ತಿರುವ ಅತ್ಯದ್ಭುತ ಲೋಹವೆಂದೇ ಪರಿಗಣಿಸಲ್ಪಟ್ಟಿದೆ. ಅಲ್ಯುಮಿನಿಯಂನ ತಯಾರಿಕೆಗೆ ಬಾಕ್ಸೈಟ್ ಒಂದು ಕಚ್ಚಾ ವಸ್ತುವಾಗಿ ಅತ್ಯವಶ್ಯಕವಾಗಿದೆ. ವಿಮಾನಗಳ ತಯಾರಿಕೆಗೆ, ವಿದ್ಯುತ್ ಸಲಕರಣೆಗಳು ಹಾಗೂ ಗೃಹೋಪಯೋಗಿ ಸಲಕರಣೆಗಳ ತಯಾರಿಕೆಯಲ್ಲಿ ಅಲ್ಯುಮಿನಿಯಂನ್ನು ಹೆಚ್ಚಾಗಿ ಬಳಸಲಾಗುತ್ತದೆ. ಭಾರತದಲ್ಲಿ ಪ್ರಮುಖವಾಗಿ ಮಧ್ಯಪ್ರದೇಶ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರ, ಗೋವಾ, ಗುಜರಾತ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಶಾ ರಾಜ್ಯಗಳಲ್ಲಿ ಬಾಕ್ಸೈಟ್ ದೊರಕುತ್ತದೆ.

4) **ಅಭ್ರಕ:** ಕಾಗೆ ಬಂಗಾರ ಎಂತಲೇ ಪ್ರಸಿದ್ಧವಾಗಿರುವ ಅಭ್ರಕವು ವಿದ್ಯುತ್ ಉಪಕರಣಗಳು, ಗಾಜು, ಮತ್ತು ರೇಡಿಯೋ, ಟೆಲಿಪೋನ್, ಟೆಲಿಗ್ರಾಫ್ ಸಲಕರಣೆಗಳ ತಯಾರಿಕೆಯಲ್ಲಿ ಪ್ರಮುಖವಾಗಿ ಬೇಕಾದ ವಸ್ತುವಾಗಿದೆ. ಭಾರತವು ಇಡೀ ಪ್ರಂಪಚದಲ್ಲಿಯೇ ಅತಿ ಹೆಚ್ಚು ಅಭ್ರಕವನ್ನು ಉತ್ಪಾದಿಸುವ ದೇಶವಾಗಿದ್ದು, ಅದು ಪ್ರಪಂಚದ ಶೇ. 80ರಷ್ಟನ್ನು ಉತ್ಪಾದಿಸುತ್ತದೆ. ಇದು ಪ್ರಮುಖವಾಗಿ ಬಿಹಾರ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಕರ್ನಾಟಕ ರಾಜ್ಯಗಳಲ್ಲಿ ದೊರಕುತ್ತದೆ.

5) **ಚಿನ್ನ:** ಚಿನ್ನವು ಅಲಂಕಾರಿಕ ವಸ್ತುವಾಗಿದ್ದು, ಆಭರಣಗಳ ತಯಾರಿಕೆಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಮತ್ತು ರಾಯಚೂರಿನ ಹಟ್ಟಿಯಲ್ಲಿ ಚಿನ್ನದ ನಿಕ್ಷೇಪಗಳಿವೆ. ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶಗಳ ಕೆಲ ಭಾಗಗಳಲ್ಲಿಯೂ ಚಿನ್ನದ ನಿಕ್ಷೇಪಗಳಿವೆ.

6) **ತಾಮ್ರ:** ತಾಮ್ರವು ವಿವಿಧ ಉಪಯೋಗಗಳಿಗೆ ಬಳಸುವ ಪ್ರಮುಖ ಲೋಹವಾಗಿದೆ. ಇದನ್ನು ವಿದ್ಯುತ್ ಉಪಕರಣಗಳ ತಯಾರಿಕೆಯಲ್ಲಿ ಮಾತ್ರವಲ್ಲದೇ ಕೈಗಾರಿಕೆ ಹಾಗೂ ಗೃಹ ವಸ್ತುಗಳ ತಯಾರಿಕೆಯಲ್ಲಿಯೂ ಬಳಸಲಾಗುತ್ತದೆ. ಭಾರತದಲ್ಲಿ ಪ್ರಮುಖವಾಗಿ ಬಿಹಾರ, ಮಧ್ಯಪ್ರದೇಶ, ಕರ್ನಾಟಕ, ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ಸಿಕ್ಕಿಂ, ರಾಜಸ್ಥಾನಗಳಲ್ಲಿ ತಾಮ್ರದ ಅದಿರಿನ ನಿಕ್ಷೇಪಗಳಿವೆ.

7) **ಸತು ಮತ್ತು ಸೀಸ:** ಮಿಶ್ರಲೋಹಗಳ ತಯಾರಿಕೆಯಲ್ಲಿ ಸತು ಮತ್ತು ಸೀಸಗಳು ಹೆಚ್ಚು ಉಪಯುಕ್ತವಾಗಿವೆ. ಇವು ಹೆಚ್ಚಾಗಿ ಆಂಧ್ರಪ್ರದೇಶ, ಗುಜರಾತ್ ಮತ್ತು ಒಡಿಶಾ ರಾಜ್ಯಗಳಲ್ಲಿ ದೊರೆಯುತ್ತವೆ.

8) **ಸುಣ್ಣದ ಕಲ್ಲು:** ಸುಣ್ಣದ ಕಲ್ಲು ಅಲೋಹ ಖನಿಜ ಸಂಪನ್ಮೂಲವಾಗಿದೆ. ಇದನ್ನು ಸಿಮೆಂಟು, ಸುಣ್ಣ ತಯಾರಿಕೆಯಲ್ಲಿ ಹಾಗೂ ಕಬ್ಬಿಣ ಮತ್ತು ಸೀಸದ ಅದಿರನ್ನು ಕರಗಿಸಲು ಮತ್ತು ಕಟ್ಟಡಗಳ ನಿರ್ಮಾಣದಲ್ಲಿ ಹೆಚ್ಚು ಬಳಸಲಾಗುತ್ತದೆ. ಭಾರತದಲ್ಲಿ ಪ್ರಮುಖವಾಗಿ ಬಿಹಾರ, ಆಂಧ್ರಪ್ರದೇಶ, ರಾಜಸ್ಥಾನಗಳು ಅಧಿಕವಾಗಿ ಸುಣ್ಣದ ಕಲ್ಲನ್ನು ಉತ್ಪಾದಿಸಲಾಗುತ್ತದೆ.

## ಭಾರತದಲ್ಲಿ ಶಕ್ತಿ ಸಂಪನ್ಮೂಲಗಳು

ಶಕ್ತಿಯ ಬಳಕೆಯಿಲ್ಲದೇ ಯಾವುದೇ ವಸ್ತುವನ್ನೂ ಉತ್ಪಾದಿಸಲು ಸಾಧ್ಯವಿಲ್ಲ. ಆರ್ಥಿಕತೆಯ ಯಾವುದೇ ಕ್ಷೇತ್ರದ ಅಭಿವೃದ್ಧಿಯು ಶಕ್ತಿ ಸಂಪನ್ಮೂಲಗಳಿಂದ ನಿರ್ಧರಿತವಾಗುತ್ತದೆ. ಕೃಷಿ, ಕೈಗಾರಿಕೆ, ಗೃಹ ಬಳಕೆ, ಸೇವಾ ವಲಯದ ಕ್ಷೇತ್ರಗಳೆಲ್ಲವಕ್ಕೂ ಶಕ್ತಿಯು ಅವಶ್ಯಕ ಆದಾನವಾಗಿದೆ. ಎಲ್ಲಾ ರೀತಿಯ ಅಭಿವೃದ್ಧಿ ಚಟುವಟಿಕೆಗಳು ನೇರವಾಗಿ ಅಥವಾ ಪರೋಕ್ಷವಾಗಿ ಶಕ್ತಿ ಸಂಪನ್ಮೂಲಗಳನ್ನು ಅವಲಂಬಿಸಿದ್ದು, ಒಂದು ದೇಶದ ಶಕ್ತಿಯ ಬಳಕೆಯ ಮಟ್ಟವನ್ನು ಆರ್ಥಿಕ ಅಭಿವೃದ್ಧಿಯ ಸೂಚಿಯನ್ನಾಗಿ ಪರಿಗಣಿಸಲಾಗುತ್ತದೆ. ನೈಸರ್ಗಿಕವಾಗಿ ದೊರೆಯುವ ಕಲ್ಲಿದ್ದಲು, ಪೆಟ್ರೋಲಿಯಮ್ ಉತ್ಪನ್ನಗಳು, ನೈಸರ್ಗಿಕ ಅನಿಲ, ವಾಯು ಎಲ್ಲವೂ ಪ್ರಾಥಮಿಕ ಶಕ್ತಿ ಸಂಪನ್ಮೂಲಗಳಾಗಿವೆ. ಇವುಗಳನ್ನು ವಿವಿಧ ಬಳಕೆಯ ರೂಪದಲ್ಲಿ ಪರಿವರ್ತಿಸಲಾಗುತ್ತದೆ.

ಶಕ್ತಿ ಸಂಪನ್ಮೂಲಗಳನ್ನು ಪ್ರಮುಖವಾಗಿ ಅವುಗಳ ದೀರ್ಘಕಾಲಿನ ಬಳಕೆಯ ಆಧಾರದ ಮೇಲೆ ಸಾಂಪ್ರಾದಾಯಿಕ ಶಕ್ತಿ ಸಂಪನ್ಮೂಲಗಳು ಮತ್ತು ಅಸಾಂಪ್ರಾದಾಯಿಕ ಶಕ್ತಿ ಸಂಪನ್ಮೂಲಗಳೆಂದು ವಿಂಗಡಿಸಬಹುದಾಗಿದೆ.

## ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು

ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿದ್ದು, ಅವುಗಳೆಂದರೆ:

1) **ವಾಣಿಜ್ಯ ಶಕ್ತಿ ಸಂಪನ್ಮೂಲಗಳು:** ವಾಣಿಜ್ಯ ಶಕ್ತಿ ಸಂಪನ್ಮೂಲಗಳು ಪ್ರಮುಖವಾಗಿ ಕಲ್ಲಿದ್ದಲು, ಪೆಟ್ರೋಲಿಯಮ್, ನೈಸರ್ಗಿಕ ಅನಿಲ, ವಿದ್ಯುಚ್ಛಕ್ತಿಯನ್ನು ಒಳಗೊಂಡಿದ್ದು, ಇವುಗಳಲ್ಲಿ ಜಲವಿದ್ಯುತ್‌ನ್ನು ಹೊರತು ಪಡಿಸಿ ಉಳಿದವೆಲ್ಲವೂ ತೀರಿ ಹೋಗುವ ಶಕ್ತಿ ಸಂಪನ್ಮೂಲಗಳಾಗಿವೆ.

2) **ವಾಣಿಜ್ಯೇತರ ಶಕ್ತಿ ಸಂಪನ್ಮೂಲಗಳು:** ಇವುಗಳಲ್ಲಿ ಪ್ರಮುಖವಾಗಿ ಉರುವಲು ಕಟ್ಟಿಗೆ, ಸಗಣಿಯ ಬೆರಣಿ, ಕೃಷಿ ತ್ಯಾಜ್ಯ ಮುಂತಾದವುಗಳಿದ್ದು, ಇವು ನವೀಕರಿಸಬಹುದಾದ ಶಕ್ತಿ ಸಂಪನ್ಮೂಲಗಳಾಗಿವೆ. ಇವುಗಳನ್ನು ಸಾಮಾನ್ಯವಾಗಿ ಅಡುಗೆಗೆ ಮತ್ತು ಇತರ ಗೃಹ ಬಳಕೆ ಕಾರ್ಯಗಳಿಗೆ ಬಳಸಲಾಗುತ್ತದೆ.

## ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು

ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಸೌರಶಕ್ತಿ, ಪವನಶಕ್ತಿ, ಜೈವಿಕ ಅನಿಲ ಹಾಗೂ ಭೂ ಉಷ್ಣಶಕ್ತಿ ಇತ್ಯಾದಿಗಳು ಪ್ರಮುಖವಾದ ವಿಧಗಳು.

## ಭಾರತದ ಪ್ರಮುಖ ಶಕ್ತಿ ಸಂಪನ್ಮೂಲಗಳು

## ಕಲ್ಲಿದ್ದಲು

ಕಲ್ಲಿದ್ದಲು ಪ್ರಪಂಚದಲ್ಲಿಯೇ ಹೇರಳವಾಗಿ ದೊರೆಯುವ ಪಳಿಯುಳಿಕೆ ಇಂಧನವಾಗಿದೆ. ಇದನ್ನು ಕಪ್ಪು ವಜ್ರ ಎಂದು ಕರೆಯಲಾಗುತ್ತದೆ. ಕಲ್ಲಿದ್ದಲ್ಲನ್ನು ನೇರವಾಗಿ ಸುಡುವುದರಿಂದ ಸಲ್ಫರ್ ಆಕ್ಸೈಡ್, ನೈಟ್ರಿಕ್ ಆಕ್ಸೈಡ್, ಕಾರ್ಬನ್ ಡೈ ಆಕ್ಸೈಡ್‌ನಂತಹ ಅನಿಲಗಳು ಬಿಡುಗಡೆಯಾಗುವುದರಿಂದ ಮಾಲಿನ್ಯ ಹೆಚ್ಚಾಗುತ್ತದೆ. ಕಲ್ಲಿದ್ದಲಿನಲ್ಲಿ ಕಂಡು ಬರುವ ಪ್ರಮುಖ ಅಂಶವೆಂದರೆ ಇಂಗಾಲವಾಗಿದೆ. ಕಲ್ಲಿದ್ದಲು ಒಳಗೊಂಡಿರುವ ನಿರ್ದಿಷ್ಟ ಕಾರ್ಬನ್ ಅಂಶದ ಆಧಾರದ ಮೇಲೆ ಕಲ್ಲಿದ್ದಲನ್ನು ಮೂರು ವಿಧಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ;

1) **ಆಂಥ್ರಸೈಟ್:** ಕಲ್ಲಿದ್ದಲಿನಲ್ಲಿ ಕಾರ್ಬನ್ ಅಂಶ ಶೇ. 95ಕ್ಕಿಂತ ಹೆಚ್ಚು ಇದ್ದರೆ ಅದು ಆಂಥ್ರಸೈಟ್ ಕಲ್ಲಿದ್ದಲಾಗಿರುತ್ತದೆ. ಇದನ್ನು ತಯಾರಿಕಾ ವಲಯದಲ್ಲಿ ಮತ್ತು ಕೋಕ್‌ನ್ನು ತಯಾರಿಸಲು ಬಳಸಲಾಗುತ್ತದೆ.

2) **ಬಿಟುಮಿನಾಸ್:** ಕಲ್ಲಿದ್ದಲಿನಲ್ಲಿ ಕಾರ್ಬನ್ ಅಂಶ ಶೇ. 42 ರಿಂದ ಶೇ. 83ರಷ್ಟು ಇದ್ದರೆ ಅದು ಬಿಟುಮಿನಾಸ್ ವರ್ಗಕ್ಕೆ ಸೇರಿದ ಕಲ್ಲಿದ್ದಲಾಗಿರುತ್ತದೆ. ಇದು ಪ್ರಪಂಚದ ಒಟ್ಟು ಕಲ್ಲಿದ್ದಲಿನ ಉತ್ಪಾದನೆ ಶೇ. 80ರಷ್ಟಿದೆ.

3) **ಲಿಗ್ನೈಟ್:** ಕಲ್ಲಿದ್ದಲ್ಲಿನಲ್ಲಿ ಶೇ.38 ಕ್ಕಿಂತ ಕಡಿಮೆ ಕಾರ್ಬನ್ ಅಂಶವಿದ್ದರೆ ಅದು ಲಿಗ್ನೈಟ್ ಎಂದು ಪರಿಗಣಿತವಾಗುತ್ತದೆ. ಒಟ್ಟು ಕಲ್ಲಿದಲ್ಲಿನ ಉತ್ಪಾದನೆ ಶೇ. 15ರಷ್ಟು ಲಿಗ್ನೈಟ್ ಇರುತ್ತದೆ. ಇದು ಕಡಿಮೆ ತಾಪದ ಸಾಮರ್ಥ್ಯ ಹೊಂದಿರುವುದರಿಂದ ಇದನ್ನು ಸಾಮಾನ್ಯವಾಗಿ ಉಕ್ಕು ಉತ್ಪಾದನಾ ಘಟಕಗಳಲ್ಲಿ ಬಳಸಲಾಗುತ್ತದೆ.

ಭಾರತದಲ್ಲಿ ಕಲ್ಲಿದ್ದಲ್ಲನ್ನು ಪ್ರಮುಖವಾಗಿ ಬಿಹಾರದ ಬೊಕಾರೋ, ಪಶ್ಚಿಮಬಂಗಾಳದ ರಾಣಿಗಂಜ್, ಮಧ್ಯಪ್ರದೇಶದ ಜಾರ್ಖಂಡ್, ಮಹಾರಾಷ್ಟ್ರದ ರಾಜಪುತ ಮತ್ತು ಆಂಧ್ರಪ್ರದೇಶದ ಸಿಂಗರೇಣಿಗಳಲ್ಲಿ ಉತ್ಪಾದಿಸಲಾಗುತ್ತದೆ.

## ಪೆಟ್ರೋಲಿಯಮ್ ಉತ್ಪನ್ನಗಳು

ಪೆಟ್ರೋಲಿಯಮ್‌ನ್ನು ದ್ರವರೂಪದ ಚಿನ್ನ ಎಂಬುದಾಗಿ ಕರೆಯಲಾಗುತ್ತದೆ. ಪೆಟ್ರೋಲಿಯಮ್ ಉತ್ಪನ್ನಗಳು ಬಹು ಸಂಕೀರ್ಣವಾದ ಉರಿ ಹೊತ್ತಿಕೊಳ್ಳುವ ಗುಣಹೊಂದಿರುವ ಎಣ್ಣೆಯುಕ್ತ ಹೈಡ್ರೋಕಾರ್ಬನ್‌ಗಳ ಸಂಯುಕ್ತ ಮಿಶ್ರಣವಾಗಿದೆ. ಆದ್ದರಿಂದ ಇದನ್ನು ಊರ್ಧ್ವಪಾತದ ಪ್ರಕ್ರಿಯೆಯ ಮೂಲಕ ಶುದ್ಧೀಕರಣ ಮಾಡಲಾಗುತ್ತದೆ. ಇಂತಹ ಶುದ್ಧೀಕರಣದ ಪ್ರಕ್ರಿಯೆಯಲ್ಲಿ ವಿವಿಧ ತಾಪಮಾನಗಳಲ್ಲಿ ಹಲವು ವಿಧದ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತದೆ. ಅವುಗಳಲ್ಲಿ ಪೆಟ್ರೋಲಿಯಮ್, ಅನಿಲ, ಸೀಮೆ ಎಣ್ಣೆ, ಪೆಟ್ರೋಲ್, ಡೀಸಲ್, ಇಂಧನ ತೈಲ, ಲ್ಯೂಬ್ರಿಕಂಟ್‌ಗಳು, ಕಚ್ಚಾತೈಲ ಇತ್ಯಾದಿಗಳು ಪ್ರಮುಖವಾದವುಗಳು. ಇದನ್ನು ಹೆಚ್ಚಾಗಿ ಮೋಟಾರುಗಳು, ರೈಲು, ವಿಮಾನ, ಹಡಗು, ಕೈಗಾರಿಕೆ, ಕೃಷಿ ಮುಂತಾದ ಚಟುವಟಿಕೆಗಳಲ್ಲಿ ಬಳಸಲಾಗುತ್ತದೆ. ಭಾರತದ ಒಟ್ಟು ಇಂಧನದ ಬಳಕೆಯಲ್ಲಿ ಪೆಟ್ರೋಲಿಯಮ್‌ನ ಪಾಲು ಶೇ. 44ರಷ್ಟಿದೆ. ಭಾರತದಲ್ಲಿ ಹೆಚ್ಚಾಗಿ ಮಹಾರಾಷ್ಟ್ರದ ಬಾಂಬೆ ಹೈ, ಕೇರಳದ ಕೊಚ್ಚಿನ್, ಗುಜರಾತಿನ ಅಂಕಲೇಶ್ವರ, ತಮಿಳುನಾಡಿನ ತಂಜಾವೂರು ಮುಂತಾದ ಪ್ರದೇಶಗಳಲ್ಲಿ ಪೆಟ್ರೋಲಿಯಮ್ ದೊರಕುತ್ತದೆ.

## ನೈಸರ್ಗಿಕ ಅನಿಲ

ನೈಸರ್ಗಿಕ ಅನಿಲವು ಶೇ. 95ರಷ್ಟು ಮಿಥೇನ್ ಮತ್ತು ಉಳಿದ ಭಾಗವು ಪ್ರೋಪೇನ್ ಮತ್ತು ಈಥೇನ್‌ಗಳಿಂದ ಕೂಡಿರುವ ವಸ್ತುವಾಗಿದ್ದು ಇದೂ ಸಹ ಒಂದು ಪಳಿಯುಳಿಕೆ ಇಂಧನವಾಗಿದೆ. ನೈಸರ್ಗಿಕ ಅನಿಲವನ್ನು ಹೆಚ್ಚಾಗಿ ಕಚ್ಚಾ ತೈಲ ನಿಕ್ಷೇಪಗಳ ಬಳಿಯಲ್ಲಿಯೇ ಉತ್ಪಾದಿಸಲಾಗುತ್ತದೆ. ಇದು ಹಲವಾರು ವರ್ಷಗಳ ಹಿಂದೆ ಸತ್ತ ಪ್ರಾಣಿಗಳು ಮತ್ತು ಸಸ್ಯಗಳು ಭೂಮಿಯ ಒಳಗಡೆ ವಿಘಟನೆಯನ್ನು ಹೊಂದುವ ಮೂಲಕ ರಚನೆಗೊಂಡ ಶಕ್ತಿಮೂಲವಾಗಿದೆ.

ಸಾಂದ್ರೀಕೃತ ನೈಸರ್ಗಿಕ ಅನಿಲವನ್ನು (ಸಿ.ಎನ್.ಜಿ.) ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಬಳಸಲಾಗುತ್ತಿದ್ದು ಇದರಿಂದ ಪ್ರಮುಖ ನಗರ ಪ್ರದೇಶಗಳಲ್ಲಿನ ವಾಯು ಮಾಲಿನ್ಯ ಸಮಸ್ಯೆಯನ್ನು ನಿವಾರಿಸಬಹುದಾಗಿದೆ.

## ಸೌರಶಕ್ತಿ:

ಸೂರ್ಯನು ಪ್ರಸ್ತುತ ಮಾನವ ಬಳಸುವ ಶಕ್ತಿಯ ಪ್ರಮಾಣಕ್ಕಿಂತ 10000 ಪಟ್ಟು ಅಧಿಕ ಶಕ್ತಿಯನ್ನು ಪ್ರತಿವರ್ಷ ನೀಡುತ್ತಾನೆ. ಸೌರಶಕ್ತಿಯು ಭಾರತದ ನವೀಕರಿಸಬಹುದಾದ ಶಕ್ತಿ ಸಂಪನ್ಮೂಲಗಳಲ್ಲಿಯೇ ಅತಿ ಹೆಚ್ಚು ಬಳಕೆಯಲ್ಲಿರುವ ಶಕ್ತಿ ಸಂಪನ್ಮೂಲವಾಗಿದೆ. ಸೌರಶಕ್ತಿಯಯನ್ನು ಸೂರ್ಯನ ಕಿರಣಗಳ ಸಹಾಯದಿಂದ ವಿದ್ಯುಜ್ಜನಕ ಕೋಶಗಳನ್ನು ಬಳಸುವ ಮೂಲಕ ಉತ್ಪಾದಿಸಲಾಗುತ್ತದೆ. ಅಂದರೆ ಸೌರಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಲು ಫೋಟೋವೊಲ್ಟಾಯಿಕ್ ಕೋಶಗಳನ್ನು ಬಳಸಲಾಗುತ್ತದೆ. ಭಾರತದಲ್ಲಿ ಸೌರಶಕ್ತಿಯನ್ನು ದಿನನಿತ್ಯದ ಜೀವನದಲ್ಲಿನ ಹಲವು ಉದ್ದೇಶಗಳಿಗಾಗಿ ಉದಾಹರಣೆಗೆ, ಅಡುಗೆ ಮಾಡಲು, ನೀರು ಕಾಯಿಸಲು ಹಾಗೂ ವಿದ್ಯುತ್ ದೀಪ ಬೆಳಗಿಸಲು, ಬಳಸಲಾಗುತ್ತದೆ. ಇದು ಮಾಲಿನ್ಯರಹಿತ ಶುದ್ಧ ಶಕ್ತಿ ಸಂಪನ್ಮೂಲವಾಗಿದೆ. ಭಾರತದಲ್ಲಿ ದಿನದಿಂದ ದಿನಕ್ಕೆ ಶಕ್ತಿಯ ಪರ್ಯಾಯ ಬಳಕೆಯ ಮೂಲಗಳು ಹೆಚ್ಚಾಗುತ್ತಲೇ ಇವೆ. ಭಾರತದಲ್ಲಿ 700000 ಫೋಟೋವೊಲ್ಟಾಯಿಕ್ ವ್ಯವಸ್ಥೆಗಳನ್ನು ಅಳವಡಿಸಿದ್ದು ಎಲ್ಲಾ ರಾಜ್ಯಗಳಿಂದ 44 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

## ಪವನ ಶಕ್ತಿ

ಭಾರತವು ಸಾಕಷ್ಟು ಪವನಶಕ್ತಿಯ ಉತ್ಪಾದನೆಗೆ ಬೇಕಾದ ಅನುಕೂಲವಾದ ವಾತಾವರಣವನ್ನು ಹೊಂದಿದೆ. ಗಾಳಿಯು ಬೀಸುವ ಪ್ರದೇಶಗಳಲ್ಲಿ ಗಾಳಿ ಯಂತ್ರಗಳನ್ನು ಬಳಸುವ ಮೂಲಕ ಪವನಶಕ್ತಿಯನ್ನು ಉತ್ಪಾದಿಸಲಾಗುತ್ತದೆ. ಆದರೆ ಗಾಳಿಯ ವೇಗವು ದೇಶದಾದ್ಯಂತ ಏಕಪ್ರಕಾರವಾಗಿ ಇಲ್ಲದಿರುವುದರಿಂದ ಎಲ್ಲಾ ಪ್ರದೇಶಗಳಲ್ಲೂ ಪವನಶಕ್ತಿಯನ್ನು ಉತ್ಪಾದಿಸಲಾಗುವುದಿಲ್ಲ. ಇದನ್ನು ಹೆಚ್ಚಾಗಿ ಗಾಳಿ ಬೀಸುವ ಪ್ರದೇಶಗಳಲ್ಲಿ ಅಂದರೆ ಕರಾವಳಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಸ್ಥಾಪಿಸಲಾಗುತ್ತದೆ. ಇಂದು ಶಕ್ತಿ ಸಂಪನ್ಮೂಲಗಳಲ್ಲಿಯೇ ಪ್ರಬಲ ಶಕ್ತಿಯನ್ನು ಒದಗಿಸುವ ಮೂಲವೆಂದು ಪವನಶಕ್ತಿಯನ್ನು ಪರಿಗಣಿಸಲಾಗಿದೆ. ಪವನಶಕ್ತಿಯು ಪರಿಸರ ಸ್ನೇಹಿ ಶುದ್ಧಶಕ್ತಿಯ ಮೂಲವಾಗಿದೆ. ಪವನಶಕ್ತಿಯನ್ನು ಉತ್ಪಾದಿಸುವ ಪ್ರಾರಂಭದ ಹೂಡಿಕೆಯು ದುಬಾರಿಯಾದರೂ ಭವಿಷ್ಯದಲ್ಲಿ ಇದು ಸಾಕಷ್ಟು ಅನುಕೂಲತೆಗಳನ್ನು ತಂದುಕೊಡುತ್ತದೆ.

ಭಾರತದಲ್ಲಿನ ಗಾಳಿ ಸಂಪನ್ಮೂಲ ಅಂದಾಜು ಕಾರ್ಯಕ್ರಮವು 24 ರಾಜ್ಯಗಳಲ್ಲಿ 800 ಗಾಳಿ ಆವರಿಸುವ ಕೇಂದ್ರಗಳನ್ನು ಮತ್ತು 193 ಗಾಳಿ ಮೇಲ್ವಿಚಾರಣಾ ಕೇಂದ್ರಗಳನ್ನು ಒಳಗೊಂಡಿದೆ. ಒಟ್ಟಾರೆಯಾಗಿ ಭಾರತದ 13 ರಾಜ್ಯಗಳಲ್ಲಿ 45000 ಮೆಗಾವ್ಯಾಟ್ ಪವನಶಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

## ಜಲ ವಿದ್ಯುತ್

ನೀರಿನ ಸಹಾಯದಿಂದ ವಿದ್ಯುತ್ತನ್ನು ಉತ್ಪಾದಿಸುವುದು ಅತ್ಯಂತ ಹಳೆಯ ವಿಧಾನವಾಗಿದೆ. ಇದು ವ್ಯಾಪಕವಾಗಿ ಬಳಸಲಾಗುವ ನವೀಕರಿಸಬಹುದಾದ ಪ್ರಮುಖ ಮೂಲವಾಗಿದೆ. ಜಲವಿದ್ಯುತ್ ಶಕ್ತಿಯನ್ನು ಗುರುತ್ವಬಲದ

ಸಹಾಯದಿಂದ ನೀರನ್ನು ಹಾಯಿಸುವ ಅಥವಾ ಬೀಳಿಸುವ ಮೂಲಕ ವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ಇಲ್ಲಿ ಇಂಧನವನ್ನು ದಹಿಸುವುದಿಲ್ಲವಾದ್ದರಿಂದ ಇದರಿಂದ ಕನಿಷ್ಠ ಪರಿಸರ ಮಾಲಿನ್ಯವಿರುತ್ತದೆ. ಇದರ ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚವು ಸಾಪೇಕ್ಷವಾಗಿ ಕಡಿಮೆಯಿದ್ದು, ಈ ತಂತ್ರಜ್ಞಾನವನ್ನು ವಿಶ್ವಾಸಾರ್ಹವಾಗಿ ನಿರಂತರವಾಗಿ ಬಳಸಬಹುದಾಗಿದೆ. ಏಕೆಂದರೆ ಜಲಾಶಯಗಳಲ್ಲಿ ನೀರು ಸಂಗ್ರಹಿಸುವ ಮೂಲಕ ಆ ನೀರನ್ನು ಜಲಶಕ್ತಿ ಉತ್ಪಾದನೆಗೆ ಯಾವಾಗಲೂ ಬಳಸಬಹುದು. ಸಾಮಾನ್ಯವಾಗಿ ನದಿಗಳಿಗೆ ಸಣ್ಣ, ಮಧ್ಯಮ ಮತ್ತು ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸುವ ಮೂಲಕ ಜಲವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪಾದಿಸಲಾಗುತ್ತದೆ.

ಕರ್ನಾಟಕದ ಶಿವನಸಮುದ್ರದ ಬಳಿ ಮೊದಲ ಬಾರಿಗೆ 1902ರಲ್ಲಿ ಜಲವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಪ್ರಾರಂಭಿಸಲಾಯಿತು. ಹಿರಾಕುಡ್, ದಾಮೋದರ್, ಭಾಕ್ರಾ ನಂಗಲ್, ನಾಗರ್ಜುನ ಸಾಗರ, ಕೋಸಿ, ಫರಕ್ಕಾ ಅಣೆಕಟ್ಟುಗಳು ಭಾರತದಲ್ಲಿನ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳಾಗಿವೆ.

## ಅಣು ವಿದ್ಯುತ್

ಅಣು ವಿದ್ಯುತ್‌ನ್ನು ಉತ್ಪಾದಿಸಲು ಪ್ರಮುಖವಾಗಿ ಯುರೇನಿಯಂ ಮತ್ತು ಥೋರಿಯಂ ಪರಮಾಣುಗಳನ್ನು ಬಳಸಲಾಗುತ್ತದೆ. ಕಲ್ಲಿದ್ದಲಿನಿಂದ ಪಡೆಯುವ ಶಕ್ತಿಗಿಂತ ಅಗಾಧ ಪ್ರಮಾಣದ ಶಕ್ತಿಯನ್ನು ಈ ಪರಮಾಣುಗಳಿಂದ ಉತ್ಪಾದಿಸಬಹುದಾಗಿದೆ. 1948ರಲ್ಲಿ ಭಾರತದಲ್ಲಿ ಅಣು ಶಕ್ತಿ ಆಯೋಗವನ್ನು ಸ್ಥಾಪಿಸಿದೆ. ಇದು ದೇಶದಲ್ಲಿ ಪರಮಾಣು ವಿಜ್ಞಾನಿಗಳ ಸಂಶೋಧನೆಯನ್ನು ಸಂಘಟಿಸುವುದು, ಪರಮಾಣು ಸಂಶೋಧನೆಯನ್ನು ಉತ್ತೇಜಿಸುವುದು, ಅದಕ್ಕಾಗಿ ತರಬೇತಿ ನೀಡುವುದು ಮತ್ತು ಪರಮಾಣು ಖನಿಜಗಳ ಅನ್ವೇಷಣೆಯ ಕಾರ್ಯವನ್ನು ನಿರ್ವಹಿಸುತ್ತದೆ. ಭಾರತದಲ್ಲಿ 7 ಅಣು ಶಕ್ತಿ ಸ್ಥಾವರಗಳಿದ್ದು 21 ನ್ಯೂಕ್ಲಿಯರ್ ರಿಯಾಕ್ಟರ್‌ಗಳು ಕಾರ್ಯಾಚರಣೆ ಮಾಡುತ್ತಿವೆ. ಈ ಮೂಲಕ 5308 ಮೆಗಾವ್ಯಾಟ್ ಅಳವಡಿಕೆ ಸಾಮರ್ಥ್ಯವನ್ನು ಸೃಷ್ಟಿಸಲಾಗಿದೆ.

1969ರಲ್ಲಿ ಮಹಾರಾಷ್ಟ್ರದ ತಾರಾಪುರದಲ್ಲಿ ಮೊದಲ ಬಾರಿಗೆ ಅಣುಶಕ್ತಿ ಕೇಂದ್ರ ಸ್ಥಾಪಿತವಾಯಿತು. ನಂತರ ಉತ್ತರ ಪ್ರದೇಶದ ನರೋರ, ರಾಜಸ್ಥಾನದ ರಾಣಾ ಪ್ರತಾಪಸಾಗರ, ಗುಜರಾತಿನ ಕಕ್ರಾಪಾರ್, ತಮಿಳುನಾಡಿನ ಕಲ್ಪಕಂ ಮತ್ತು ಕುಡಂಕುಲಮ್ ಹಾಗೂ ಕರ್ನಾಟಕದ ಕೈಗಾ ಪ್ರದೇಶಗಳಲ್ಲಿ ಸ್ಥಾಪಿತಗೊಂಡಿವೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಎಲ್ಲಾ ಸ್ಥಳಗಳಲ್ಲಿ ನಿರಂತರವಾಗಿ ಲಭ್ಯವಿರುವ ಸಂಪನ್ಮೂಲಗಳೆಂದರೆ ____________

   ಅ) ವಾಯು ಆ) ಖನಿಜ ಇ) ಪೆಟ್ರೋಲಿಯಮ್ ಈ) ಕಲ್ಲಿದ್ದಲು

2. ಮಹಾರಾಷ್ಟ್ರದ ತಾರಾಪುರದಲ್ಲಿ ಅಣುಶಕ್ತಿ ಕೇಂದ್ರವನ್ನು ---------------ರಲ್ಲಿ ಸ್ಥಾಪಿಸಲಾಯಿತು.

ಅ) 1999 ಆ) 1989 ಇ) 1979 ಈ) 1969

3. ಅತಿ ಹೆಚ್ಚು ಕಾರ್ಬನ್ ಅಂಶ ಹೊಂದಿರುವ ಕಲ್ಲಿದ್ದಲಿನ ವಿಧವು ________

ಅ) ಆಂಥ್ರಸೈಟ್ ಆ) ಬಿಟುಮಿನಾಸ್ ಇ) ಲಿಗ್ನೈಟ್ ಈ) ಯಾವುದೂ ಅಲ್ಲ

4. ಮಣ್ಣಿನ ಸವೆತಕ್ಕೆ ಕಾರಣವಾಗುವ ಪ್ರಮುಖವಾದ ಅಂಶಗಳೆಂದರೆ ________

ಅ) ರಭಸವಾಗಿ ಹರಿಯುವ ನೀರು ಆ) ಜೋರಾಗಿ ಬೀಸುವ ಗಾಳಿ

ಇ) ರಾಸಾಯನಿಕಗಳ ಬಳಕೆ ಈ) ಮೇಲಿನ ಎಲ್ಲವೂ

5. ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ರಾಜ್ಯ ________

ಅ) ಕರ್ನಾಟಕ ಆ) ತಮಿಳುನಾಡು ಇ) ಮಧ್ಯಪ್ರದೇಶ ಈ) ಆಂಧ್ರಪ್ರದೇಶ

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ

1. ಭಾರತದಲ್ಲಿ ಅಣು ಶಕ್ತಿ ಆಯೋಗವನ್ನು ______ ರಲ್ಲಿ ಸ್ಥಾಪಿಸಿದೆ.
2. ನೈಸರ್ಗಿಕ ಅನಿಲವು ______ ಮತ್ತು ______ ಗಳಿಂದ ಕೂಡಿರುವ ವಸ್ತುವಾಗಿದೆ.
3. ಮ್ಯಾಂಗನೀಸ್ ಅದಿರು ಪ್ರಮುಖವಾಗಿ ______ ಮತ್ತು ______ ಶಿಲೆಗಳಲ್ಲಿ ಆಕ್ಸೈಡ್ ರೂಪದಲ್ಲಿ ದೊರೆಯುತ್ತದೆ.
4. ಪೆಟ್ರೋಲಿಯಂ ಅನ್ನು ದ್ರವರೂಪದ ______ ಎಂದು ಕರೆಯುತ್ತಾರೆ.
5. ಕಾಗೆ ಬಂಗಾರ ಎಂದು ______ ಖನಿಜವನ್ನು ಕರೆಯಲಾಗುತ್ತದೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ನೈಸರ್ಗಿಕ ಸಂಪನ್ಮೂಲದ ಅರ್ಥ ಬರೆಯಿರಿ.
2. ಶುದ್ಧಶಕ್ತಿ ಸಂಪನ್ಮೂಲಕ್ಕೆ ಒಂದು ಉದಾಹರಣೆ ಕೊಡಿ.
3. ಭೂ ಬಳಕೆ ಎಂದರೇನು?
4. ಅಂತರ್ಜಲ ಎಂದರೇನು?
5. ಸೌರಶಕ್ತಿ ಎಂದರೇನು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ

1. ನೈಸರ್ಗಿಕ ಸಂಪನ್ಮೂಲಗಳ ಪ್ರಕಾರಗಳಾವುವು?
2. ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಾವುವು?
3. ಅರಣ್ಯಗಳ ನಾಲ್ಕು ಉಪಯೋಗಗಳನ್ನು ಬರೆಯಿರಿ?
4. ಕಲ್ಲಿದ್ದಲಿನ ವಿಧಗಳಾವುವು?
5. ಯಾವುದಾದರೂ ನಾಲ್ಕು ಅಣುಶಕ್ತಿ ಕೇಂದ್ರಗಳನ್ನು ಹೆಸರಿಸಿ?

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ

1. ಆರ್ಥಿಕ ಅಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪಾತ್ರವನ್ನು ವಿವರಿಸಿ.
2. ಭೂ ಸವೆತಕ್ಕೆ ಕಾರಣಗಳನ್ನು ಮತ್ತು ಭೂ ಸಂರಕ್ಷಣೆಯ ಕ್ರಮಗಳನ್ನು ಚರ್ಚಿಸಿ
3. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಖನಿಜ ಸಂಪನ್ಮೂಲಗಳ ಪಾತ್ರವನ್ನು ವಿವರಿಸಿ.
4. ನವೀಕರಿಸಬಹುದಾದ ಸಂಪನ್ಮೂಲಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
5. ಭಾರತದಲ್ಲಿ ಜಲಸಂಪನ್ಮೂಲಗಳ ಕುರಿತು ಟಿಪ್ಪಣಿ ಬರೆಯಿರಿ.

### ನಿಯೋಜಿತ ಕಾರ್ಯ

1) ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳನ್ನು ಪಟ್ಟಿ ಮಾಡಿರಿ.
2) ನಿಮ್ಮ ಜಿಲ್ಲೆಯಲ್ಲಿ ಹರಿಯುತ್ತಿರುವ ನದಿ ಇಲ್ಲವೇ ಕೆರೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆಯಿರಿ.

# ಅಧ್ಯಾಯ–3

# ಭಾರತದಲ್ಲಿ ಮಾನವ ಸಂಪನ್ಮೂಲ

"ಅಪಾರವಾದ ಸಂಪನ್ಮೂಲಗಳನ್ನು ಮತ್ತು ಮಾನವ ಶಕ್ತಿಯನ್ನು ಉಪಯೋಗಿಸುವತ್ತ ಯೋಜನೆಗಳು ರೂಪವಾಗಬೇಕು" - **ಜೆ.ಸಿ.ಕುಮಾರಪ್ಪ**

"ನಾವೀಗ ಸಂಪಾದಿಸುತ್ತಿರುವ ನಮ್ಮ ಕೈಗಾರಿಕಾ ಬೆಳವಣಿಗೆಯ ಹೆಚ್ಚಿನ ಭಾಗವು ಬಂಡವಾಳ ಹೂಡಿಕೆಯಿಂದಾದುದಲ್ಲ, ಆದರೆ ಮಾನವರಲ್ಲಿನ ಹೂಡಿಕೆ ಮತ್ತು ಸುಧಾರಿತಗೊಂಡ ಮಾನವರಿಂದಾದ ಸುಧಾರಣೆಗಳಿಂದಾಗಿದೆ". - **ಗಿಲ್‌ಬ್ರೈತ್**

**ಪೀಠಿಕೆ :**

ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲವು ನಿರ್ಣಾಯಕ ಪಾತ್ರ ನಿರ್ವಹಿಸುತ್ತದೆ. ಯಾವುದೇ ಒಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಗಾಗಿ ಇತರ ನೈಸರ್ಗಿಕ ಸಂಪನ್ಮೂಲಗಳನ್ನು ದಕ್ಷವಾಗಿ ಬಳಸಲು ಮಾನವ ಸಂಪನ್ಮೂಲದ ಅಗತ್ಯವಿದೆ. ಈ ಮಾನವ ಸಂಪನ್ಮೂಲವು ರಾಷ್ಟ್ರದ ಜನಸಂಖ್ಯೆಯ ಪ್ರಮಾಣ ಮತ್ತು ಗುಣಾತ್ಮಕತೆಯ ಮೇಲೆ ಅವಲಂಬಿಸಿದೆ. ಮಾನವ ಸಂಪನ್ಮೂಲವು ಉತ್ಪಾದನಾ ಚಟುವಟಿಕೆಗಳಿಗೆ ಅಗತ್ಯವಿರುವ ಸಮರ್ಪಕ ಪ್ರಮಾಣದ ಮತ್ತು ಯೋಗ್ಯ ಗುಣಮಟ್ಟದ ಶ್ರಮಬಲವನ್ನು ಒದಗಿಸಿ ಅಭಿವೃದ್ಧಿಯನ್ನು ಸಾಕಾರಗೊಳಿಸುತ್ತದೆ. ಹಾಗಾದರೆ ಮಾನವ ಸಂಪನ್ಮೂಲ ಎಂದರೇನು? ಒಂದು ದೇಶದ ಸರ್ವತೋಮುಖ ಬೆಳವಣಿಗೆಯಲ್ಲಿ ಅದರ ಪಾತ್ರವೇನು? ಜನಸಂಖ್ಯೆಯ ಬೆಳವಣಿಗೆ ಮತ್ತು ಅದರ ಹೆಚ್ಚಳಕ್ಕೆ ಕಾರಣಗಳೇನು? ಜನಸಂಖ್ಯೆಯ ಹೆಚ್ಚಳದ ಪರಿಣಾಮಗಳಾವುವು? ಜನಸಂಖ್ಯಾ ನಿಯಂತ್ರಣದ ಕ್ರಮಗಳಾವುವು? ಮಾನವಶಕ್ತಿ ಯೋಜನೆ ಎಂದರೇನು? ಅದರ ಅಗತ್ಯತೆ ಏನು? ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಅಧ್ಯಾಯದ ಅಧ್ಯಯನದಿಂದ ಕಂಡುಕೊಳ್ಳಬಹುದು.

## ಮಾನವ ಸಂಪನ್ಮೂಲದ ಅರ್ಥವಿವರಣೆ

ಯಾವುದೇ ದೇಶದ ಭೌತಿಕ ಬಂಡವಾಳದ ಬಳಕೆಯು ಆ ದೇಶದ ಮಾನವ ಬಂಡವಾಳವನ್ನು ಅವಲಂಬಿಸಿರುತ್ತದೆ. ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಪ್ರಮುಖವಾದ ಅಂಶವೇ ಮಾನವ ಸಂಪನ್ಮೂಲ. ದೇಶದ ಜನಸಂಖ್ಯೆ, ಅವರು ಹೊಂದಿರುವ ಸಾಮರ್ಥ್ಯ, ನೈಪುಣ್ಯತೆ, ದಕ್ಷತೆ, ಶೈಕ್ಷಣಿಕ ಮಟ್ಟ, ತಂತ್ರಜ್ಞಾನದ ತಿಳುವಳಿಕೆ, ಉದ್ಯಮಶೀಲತ್ವ ಮುಂತಾದ ಲಕ್ಷಣಗಳು ಮಾನವ ಸಂಪನ್ಮೂಲದ ಮೇಲೆ ಪರಿಣಾಮ ಬೀರುತ್ತದೆ. ಆಡಂ ಸ್ಮಿಥ್‌ರವರ ಪ್ರಕಾರ ಮಾನವ ಸಂಪನ್ಮೂಲ ಎಂಬುದು 'ಒಂದು ದೇಶದ ಬಂಡವಾಳ ಸಂಗ್ರಹದಲ್ಲಿ ಆ ದೇಶದಲ್ಲಿ ವಾಸಿಸುವ ಜನರ ಪ್ರಯೋಜನಕಾರಿ ಸಾಮರ್ಥ್ಯಗಳು ಪ್ರಮುಖ ಪಾತ್ರ ವಹಿಸಿದೆ'.

## ಮಾನವ ಸಂಪನ್ಮೂಲದ ಮಹತ್ವ

ಮಾನವ ಸಂಪನ್ಮೂಲ ಮತ್ತು ಆರ್ಥಿಕ ಅಭಿವೃದ್ಧಿಯ ನಡುವೆ ನಿಕಟ ಮತ್ತು ಧನಾತ್ಮಕ ಸಂಬಂಧವಿದೆ. ದಕ್ಷ ಮಾನವ ಸಂಪನ್ಮೂಲವು ಒಂದು ದೇಶದ ಆರ್ಥಿಕ ಪ್ರಗತಿಯ ಅತ್ಯವಶ್ಯಕ ನಿಬಂಧನೆಯಾಗಿದೆ. ಹಾಗಾಗಿ ಒಂದು ದೇಶದ ಮಾನವ ಸಂಪನ್ಮೂಲ ವೃದ್ಧಿಯಾದರೆ ಆ ದೇಶದ ಆರ್ಥಿಕ ಪ್ರಗತಿಯು ಹೆಚ್ಚಾಗುತ್ತದೆ. ಒಂದು ವೇಳೆ ಮಾನವ ಸಂಪನ್ಮೂಲ ಇಲ್ಲವೇ ಮಾನವ ಬಂಡವಾಳದಲ್ಲಿ ಕೊರತೆ ಉಂಟಾದರೆ ಆ ದೇಶವು ಹಿಂದುಳಿದ ಆರ್ಥಿಕತೆಯಾಗುತ್ತದೆ. ಆದ್ದರಿಂದಲೇ ಮಾನವ ಬಂಡವಾಳ ಆರ್ಥಿಕ ಅಭಿವೃದ್ಧಿಯ ಜೀವಾಳವಾಗಿದೆ. ಆಲ್‌ಫ್ರೆಡ್ ಮಾರ್ಷಲ್‌ರವರ 'ಮಾನವ ಅಭಿವೃದ್ಧಿಗಾಗಿ ಮಾಡಿದ ಹೂಡಿಕೆಯೇ ಬಂಡವಾಳ ವಿಧಗಳಲ್ಲಿ ಅತ್ಯಮೂಲ್ಯವಾದುದು' ಎಂಬ ಮಾತು ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಕ್ರಿಯಾತ್ಮಕ ಪಾತ್ರವನ್ನು ತಿಳಿಸುತ್ತದೆ. ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರದ ಪ್ರಾಮುಖ್ಯತೆಯನ್ನು ಈ ಕೆಳಗಿನಂತೆ ತಿಳಿಸಬಹುದು:

1) **ಶ್ರಮದ ಪೂರೈಕೆ:** ದೇಶದಲ್ಲಿನ ವಿವಿಧ ಉತ್ಪಾದನಾ ಚಟುವಟಿಕೆಗಳನ್ನು ದಕ್ಷತೆಯಿಂದ ಕೈಗೊಳ್ಳಲು ಬೇಕಾಗಿರುವ ಮಾನವ ಸಾಮರ್ಥ್ಯ, ನೈಪುಣ್ಯತೆ, ದಕ್ಷತೆ ಹೊಂದಿರುವ ಶ್ರಮವನ್ನು ಮಾನವ ಸಂಪನ್ಮೂಲದಿಂದ ಪೂರೈಸಲಾಗುತ್ತದೆ. ಉದಾಹರಣೆಗೆ ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರು, ನುರಿತ ವೈದ್ಯರು ಮತ್ತು ಶಿಕ್ಷಕರು ಇತ್ಯಾದಿ.

2) **ರಾಷ್ಟ್ರ ರಕ್ಷಣೆ:** ಒಂದು ದೇಶದ ಆಂತರಿಕ ಮತ್ತು ಬಾಹ್ಯ ಭದ್ರತೆಗೆ ಅಗತ್ಯವಿರುವ ಭೂ, ವಾಯು ಹಾಗೂ ನೌಕಾ ಪಡೆಯನ್ನು ಮತ್ತು ದಕ್ಷ ಆಡಳಿತಗಾರರನ್ನು ಮಾನವ ಸಂಪನ್ಮೂಲ ಪೂರೈಸುತ್ತದೆ.

3) **ಭೌತಿಕ ಬಂಡವಾಳದ ಸದ್ಬಳಕೆ:** ದೇಶದಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳಾದ, ಅರಣ್ಯ, ನೀರು, ಭೂಮಿ, ಖನಿಜ ಹಾಗೂ ಶಕ್ತಿ ಸಂಪನ್ಮೂಲಗಳನ್ನು ದೇಶದ ಆರ್ಥಿಕ ಅಭಿವೃದ್ಧಿಗೆ ದಕ್ಷವಾಗಿ ಸದ್ಬಳಕೆ ಮಾಡಿಕೊಳ್ಳಲು ಮಾನವ ಬಂಡವಾಳದ ಅಗತ್ಯವಿರುತ್ತದೆ. ಉತ್ತಮ ಮಾನವ ಬಂಡವಾಳ ಹೊಂದಿದ ದೇಶವು, ಲಭ್ಯವಿರುವ ಭೌತಿಕ ಬಂಡವಾಳವನ್ನು ಉತ್ಪಾದನಾ ಚಟುವಟಿಕೆಯಲ್ಲಿ ಪೋಲಾಗದಂತೆ ಬಳಸಿಕೊಂಡು ಸರ್ವತೋಮುಖ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು.

4) **ಸಂಶೋಧನೆ ಮತ್ತು ಆವಿಷ್ಕಾರ:** ಉತ್ತಮ ಶೈಕ್ಷಣಿಕ ಮಟ್ಟ ಮತ್ತು ನೈಪುಣ್ಯತೆ ಹೊಂದಿರುವ ಮಾನವ ಸಂಪನ್ಮೂಲವು ಸಂಶೋಧನೆ ಮತ್ತು ಆವಿಷ್ಕಾರಗಳ ಮೂಲಕ ಉತ್ಪಾದನಾ ಚಟುವಟಿಕೆಗಳಲ್ಲಿ ನವೀನ ತಂತ್ರಜ್ಞಾನ ಸುಧಾರಣೆಗಳನ್ನು ತರುವಲ್ಲಿ ಉತ್ತೇಜನ ನೀಡುತ್ತದೆ.

5) **ಉತ್ತಮ ನಾಗರಿಕ ಸಮಾಜದ ಸೃಷ್ಟಿ:** ಉತ್ತಮ ನಾಗರಿಕ ಸಮಾಜ ನಿರ್ಮಾಣಕ್ಕೆ ಅಗತ್ಯವಿರುವ ಶೈಕ್ಷಣಿಕ ಮೌಲ್ಯ, ಮಾನವೀಯ ಹಾಗೂ ನೈತಿಕ ಮೌಲ್ಯಗಳನ್ನು ಮಾನವ ಸಂಪನ್ಮೂಲ ಒದಗಿಸುತ್ತದೆ. ಈ ಮೂಲಕ ಸಮಾಜದಲ್ಲಿ ಕೆಟ್ಟದು-ಒಳ್ಳೆಯದು, ಸರಿ-ತಪ್ಪು ನಿರ್ಣಯ ತೆಗೆದುಕೊಳ್ಳುವಲ್ಲಿ ಜನರಿಗೆ ಸಾಮಾನ್ಯ ಜ್ಞಾನವನ್ನು ನೀಡುವ ಮೂಲಕ ನವ ಸಮಾಜ ನಿರ್ಮಾಣ ಮಾಡಬಹುದಾಗಿದೆ.

6) **ಸಾರಿಗೆ–ಸಂಪರ್ಕದ ಅಭಿವೃದ್ಧಿ:** ಒಂದು ದೇಶದ ಆರ್ಥಿಕ ವ್ಯವಸ್ಥೆಯ ಜೀವನಾಡಿಯಾಗಿರುವ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಯು ಉತ್ತಮ ದಕ್ಷ ಕಾರ್ಮಿಕರನ್ನು ಅವಲಂಬಿಸಿರುತ್ತದೆ. ತರಬೇತಿ ಮತ್ತು ಉದ್ಯಮಶೀಲತ್ವ ಹೊಂದಿರುವ ಕಾರ್ಮಿಕರನ್ನು ಒದಗಿಸುವ ಮೂಲಕ ಸಾರಿಗೆ–ಸಂಪರ್ಕದ ಅಭಿವೃದ್ಧಿಗೆ ಸಹಾಯಕವಾಗಿದೆ.

7) **ಜನಸಂಖ್ಯೆಯ ಗುಣಮಟ್ಟದ ಅಭಿವೃದ್ಧಿ:** ಮಾನವ ಸಂಪನ್ಮೂಲ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವ ಶಿಕ್ಷಣ, ಆರೋಗ್ಯ, ತರಬೇತಿ, ಕೌಶಲಗಳು, ಮುಂತಾದವುಗಳು ಜನಸಂಖ್ಯೆಯ ಗುಣಮಟ್ಟವನ್ನು ಹೆಚ್ಚಿಸುವ ಮೂಲಕ ದೇಶದ ಆರ್ಥಿಕ ಅಭಿವೃದ್ಧಿಗೆ ನೆರವಾಗಿದೆ.

## ಭಾರತದಲ್ಲಿ ಜನಸಂಖ್ಯೆಯ ಗಾತ್ರ ಮತ್ತು ಬೆಳವಣಿಗೆ

ಜಗತ್ತಿನ ಒಟ್ಟು ಭೂ ಪ್ರದೇಶದ ಶೇ. 2.4ರಷ್ಟು ಭಾಗವನ್ನು ಭಾರತವು ಆಕ್ರಮಿಸಿಕೊಂಡಿದೆ. ಆದರೆ ಅದು ಜಗತ್ತಿನ ಶೇ. 17ಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಸಲುಹುತ್ತಿದೆ. 2001ರಲ್ಲಿ 102.86 ಕೋಟಿಯಷ್ಟಿದ್ದ ಭಾರತದ ಜನಸಂಖ್ಯೆಯು 2011ರ ಜನಗಣತಿಯ ಪ್ರಕಾರ 121.02 ಕೋಟಿಗೆ ಹೆಚ್ಚಳವನ್ನು ಕಂಡಿದೆ. ಈ ಅವಧಿಯಲ್ಲಿನ ನಿವ್ವಳ ಏರಿಕೆಯು 18.16 ಕೋಟಿಯಾಗಿದೆ. ಇದು ಭಾರತದ ಭೂ ಭಾಗದ ಮೇಲೆ ಜನಸಂಖ್ಯೆಯ ಒತ್ತಡವನ್ನು ಸೂಚಿಸುತ್ತದೆ.

ಭಾರತದ ಜನಸಂಖ್ಯಾ ಬೆಳವಣಿಗೆಯನ್ನು ನಾಲ್ಕು ಹಂತಗಳಾಗಿ ವಿಭಜಿಸಬಹುದು. ಅವುಗಳೆಂದರೆ:

1. ಜಡಸ್ಥಿತಿಯ ಜನಸಂಖ್ಯಾ ಬೆಳವಣಿಗೆ (1891–1921)
2. ವೇಗದ ಜನಸಂಖ್ಯಾ ಬೆಳವಣಿಗೆ (1921–1951)
3. ತೀವ್ರ ಜನಸಂಖ್ಯಾ ಬೆಳವಣಿಗೆ (1951–1981)
4. ಕುಂಠಿತಗೊಳ್ಳುತ್ತಿರುವ ನಿಶ್ಚಿತ ಸೂಚನೆಗಳುಳ್ಳ ಅತಿ ಹೆಚ್ಚಿನ ಜನಸಂಖ್ಯಾ ಬೆಳವಣಿಗೆ (1981–2011)

ಭಾರತದ ಜನಸಂಖ್ಯೆ 1891 ರಲ್ಲಿ 23.6 ಕೋಟಿ ಇತ್ತು. ಅದು 1921 ರವೇಳೆಗೆ 25.1 ಕೋಟಿಗೆ ಏರಿತು. ಮೂವತ್ತು ವರ್ಷದಲ್ಲಿ ಭಾರತದ ಜನಸಂಖ್ಯೆ ಕೇವಲ 1.5 ಕೋಟಿಯಷ್ಟು ಮಾತ್ರ ಹೆಚ್ಚಾಗಿತ್ತು. ಅಂದರೆ ಬೆಳವಣಿಗೆಯ ದರವು ಶೇ.0.19ರಷ್ಟಿತ್ತು. ಜನಸಂಖ್ಯೆಯ ಬೆಳವಣಿಗೆಯು ಜಡಸ್ಥಿತಿಯಲ್ಲಿದ್ದಿತು. ಈ ಅವಧಿಯಲ್ಲಿ ಅಧಿಕ ಮಟ್ಟದ ಜನನ ಮತ್ತು ಮರಣದರಗಳು ಕಂಡುಬರುತ್ತವೆ. ಇದು ಜನಸಂಖ್ಯಾ ಪರಿವರ್ತನೆಯ ಮೊದಲ ಹಂತವಾಗಿದೆ.

1921ರಲ್ಲಿ 25.1 ಕೋಟಿ ಇದ್ದ ಜನಸಂಖ್ಯೆ, 1951ರ ವೇಳೆಗೆ 36.1 ಕೋಟಿಗೆ ಹೆಚ್ಚಾಯಿತು. ಇದನ್ನು ಭಾರತದ ಜನಸಂಖ್ಯಾ ಬೆಳವಣಿಗೆ ದರದ ಎರಡನೆಯ ಹಂತ ಎಂದು ಕರೆಯಲಾಗುತ್ತದೆ. ಇಲ್ಲಿ ಬೆಳವಣಿಗೆ ದರವು ಶೇ. 1.22ರಷ್ಟಿತ್ತು ಹಾಗೂ ಸ್ಥಿರ ಜನಸಂಖ್ಯೆಯ ಬೆಳವಣಿಗೆಯೊಂದಿಗೆ ಜನಸಂಖ್ಯಾ ಪರಿವರ್ತನೆಯ ಎರಡನೇ ಹಂತವನ್ನು ಪ್ರವೇಶಿಸಿತು. ಈ ಹಂತದಲ್ಲಿ ಮರಣ ದರದಲ್ಲಿ ಗಣನೀಯ ಇಳಿಕೆಯಾಗಿದ್ದರಿಂದ

ಜನಸಂಖ್ಯೆಯ ತೀವ್ರ ಬೆಳವಣಿಗೆಗೆ ಕಾರಣವಾಯಿತು. 1921ನೇ ವರ್ಷವನ್ನು ಮಹಾಇಬ್ಭಾಗದ ವರ್ಷ ಎಂತಲೂ ಕರೆಯಲಾಗುತ್ತದೆ. 1911–1921ರ ಅವಧಿಯಲ್ಲಿ ಮೊದಲ ಹಾಗೂ ಒಂದೇ ಬಾರಿಗೆ ಒಟ್ಟು ಜನಸಂಖ್ಯೆಯು ಕಡಿಮೆಯಾಯಿತು. ಆದರೆ ತದ ನಂತರದಲ್ಲಿ ಕಾಲರಾ, ಪ್ಲೇಗ್, ಸಿಡುಬು, ಮುಂತಾದ ಸೋಂಕು ರೋಗಗಳ ನಿಯಂತ್ರಣದ ಕಾರಣದಿಂದಾಗಿ ಜನಸಂಖ್ಯೆಯು ವೇಗವಾಗಿ ಬೆಳೆದಿದೆ.

ಮೂರನೇ ಹಂತದಲ್ಲಿ (1951–1981) ಭಾರತದ ಜನಸಂಖ್ಯೆಯು 36.1 ಕೋಟಿಯಿಂದ 68.3 ಕೋಟಿಗಳಿಗೆ ಹೆಚ್ಚಳವಾಯಿತು. ವಾರ್ಷಿಕವಾಗಿ ಶೇ. 2.14ರಷ್ಟು ಜನಸಂಖ್ಯೆ ಬೆಳವಣಿಗೆಯಾದುದರಿಂದ ತೀವ್ರ ಜನಸಂಖ್ಯಾ ಬೆಳವಣಿಗೆಗೆ ಕಾರಣವಾಯಿತು. ಈ ಹಂತದಲ್ಲಿ ಜನನ ಪ್ರಮಾಣವು ಅಧಿಕ ಮಟ್ಟದಲ್ಲಿ ಮುಂದುವರಿದಿತ್ತು ಆದರೆ ಮರಣದರವು ತೀವ್ರ ಗತಿಯಲ್ಲಿ ಕಡಿಮೆಯಾಗಿತ್ತು. ಈ ಹಂತದಲ್ಲಿ ಕಂಡು ಬಂದ ತೀವ್ರ ಜನಸಂಖ್ಯಾ ಏರಿಕೆಯ ಕಾರಣದಿಂದಾಗಿ ಜನಸಂಖ್ಯಾ ಸ್ಫೋಟ ಕಂಡು ಬಂದಿತು.

ನಾಲ್ಕನೆಯ ಹಂತದಲ್ಲಿ (1981–2011) ಭಾರತದ ಜನಸಂಖ್ಯೆಯ ಬೆಳವಣಿಗೆಯು ಕುಂಠಿತಗೊಳ್ಳುತ್ತಿರುವ ನಿಶ್ಚಿತ ಸೂಚನೆ ಕಂಡುಬರುತ್ತಿದೆ. 1981ರಲ್ಲಿ 68.3 ಕೋಟಿಯಿಂದ ಭಾರತದ ಜನಸಂಖ್ಯೆಯು 2011ರ ವೇಳೆಗೆ 121.02 ಕೋಟಿಗಳಿಗೆ ಹೆಚ್ಚಾಯಿತು. 2001–2011ರ ಅವಧಿಯಲ್ಲಿ ಜನಸಂಖ್ಯೆಯ ಸರಾಸರಿ ವಾರ್ಷಿಕ ಬೆಳವಣಿಗೆ ದರವು ಶೇ. 1.76ರಷ್ಟಿದ್ದು ನಿಧಾನಗತಿಯಲ್ಲಿ ಏರಿಕೆಯಾಗುತ್ತಿರುವುದನ್ನು ಸೂಚಿಸುತ್ತದೆ.

## ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಕಾರಣಗಳು

ಭಾರತದಲ್ಲಿ ಜನಸಂಖ್ಯೆಯು ತೀವ್ರಗತಿಯಲ್ಲಿ ಏರಿಕೆಯಾಗುತ್ತಿದೆ. 1901ರಲ್ಲಿ 23.6 ಕೋಟಿಯಿದ್ದ ಜನಸಂಖ್ಯೆಯು 2011ರ ಜನಗಣತಿಯ ವೇಳೆಗೆ ಭಾರತದ ಒಟ್ಟು ಜನಸಂಖ್ಯೆ 121.02 ಕೋಟಿಗೆ ಹೆಚ್ಚಳವಾಯಿತು. ಪ್ರಸ್ತುತ ಭಾರತವು ವಿಶ್ವದಲ್ಲಿಯೇ ಎರಡನೆಯ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿದೆ. ಭಾರತವನ್ನು ಒಳಗೊಂಡಂತೆ ಯಾವುದೇ ಒಂದು ದೇಶದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಕಾರಣವಾಗುವ ಅಂಶಗಳನ್ನು ಪ್ರಮುಖವಾಗಿ ಎರಡು ಅಂಶಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

1. ಹೆಚ್ಚಿನ ಜನನ ದರಕ್ಕೆ ಕಾರಣವಾಗುವ ಅಂಶಗಳು
2. ಕಡಿಮೆ ಮರಣ ದರಕ್ಕೆ ಕಾರಣವಾಗುವ ಅಂಶಗಳು

## ಜನನ ದರದಲ್ಲಿನ ಹೆಚ್ಚಳಕ್ಕೆ ಪ್ರಮುಖ ಕಾರಣಗಳು

ಭಾರತದಲ್ಲಿ ತೀವ್ರ ಜನಸಂಖ್ಯಾ ಬೆಳವಣಿಗೆಯ ಕಾರಣಗಳನ್ನು ವಿಶ್ಲೇಷಿಸುವ ಮೂಲಕ ಭಾರತದ ಜನಸಂಖ್ಯಾ ಸಮಸ್ಯೆಯ ನೈಜ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು. ಜನಸಂಖ್ಯಾ ಬೆಳವಣಿಗೆಯ ಹೆಚ್ಚಳಕ್ಕೆ ಜನನ ದರಗಳಲ್ಲಿನ ಏರಿಕೆಯು ಪ್ರಮುಖ ಕಾರಣವಾಗಿದೆ. ಜನನ ದರಗಳ ಏರಿಕೆಗೆ ಕಾರಣವಾಗುವ ಅಂಶಗಳನ್ನು ಆರ್ಥಿಕ, ಸಾಮಾಜಿಕ ಮತ್ತು ಭೌಗೋಳಿಕ ಅಂಶಗಳೆಂದು ವಿಂಗಡಿಸಬಹುದಾಗಿದೆ.

## ಆರ್ಥಿಕ ಅಂಶಗಳು

ಜನಸಂಖ್ಯಾ ಏರಿಕೆಗೆ ಕಾರಣವಾಗುವ ಆರ್ಥಿಕ ಅಂಶಗಳೆಂದರೆ:

**1. ಕೃಷಿ ಪ್ರಾಧಾನ್ಯತೆ:** ಭಾರತವು ಒಂದು ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಶೇ. 49ರಷ್ಟು ಜನರಿಗೆ ಕೃಷಿಯೇ ಜೀವನಾಧಾರವಾಗಿದೆ. ಕೃಷಿಯು ಶ್ರಮಸಾಂದ್ರ ತಂತ್ರಜ್ಞಾನ ಬಳಸುತ್ತಿದ್ದು, ಶ್ರಮಕ್ಕೆ ಅಧಿಕ ಬೇಡಿಕೆಯಿರುತ್ತದೆ. ಕಳೆ ಕೀಳುವುದು, ನಾಟಿ ಹಾಕುವುದು, ಕೊಯ್ಲು, ಉತ್ಪನ್ನಗಳ ಸಾಗಾಟ ಮುಂತಾದವುಗಳನ್ನು ಸಾಂಪ್ರಾದಾಯಿಕ ಪದ್ಧತಿಯಲ್ಲಿ ಶ್ರಮಿಕರೇ ನಿರ್ವಹಿಸುತ್ತಿರುವುದರಿಂದ ತಮ್ಮ ಕುಟುಂಬದ ಎಲ್ಲಾ ಸದಸ್ಯರನ್ನು ಕೃಷಿ ಚಟುವಟಿಕೆಗಳಲ್ಲಿ ಬಳಸಿಕೊಳ್ಳುತ್ತಾರೆ. ಇದರಿಂದಾಗಿ ಕೃಷಿಯಲ್ಲಿ ಹೆಚ್ಚಿನ ಜನಸಂಖ್ಯೆಯ ಅಗತ್ಯತೆ ಕಂಡುಬರುತ್ತದೆ.

**2. ವ್ಯಾಪಕವಾದ ಬಡತನ:** ಭಾರತದಲ್ಲಿನ ಜನಸಂಖ್ಯೆ ಏರಿಕೆಗೆ ಮತ್ತೊಂದು ಪ್ರಮುಖ ಕಾರಣವೆಂದರೆ ವ್ಯಾಪಕವಾದ ಬಡತನ. ಜನರು ತಮ್ಮ ಕನಿಷ್ಠ ಮೂಲ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿಯನ್ನು ಬಡತನ ಎಂದು ಕರೆಯುತ್ತೇವೆ. ಬಡವರಿಗೆ ಬೇರೆ ಯಾವ ಸ್ವತ್ತು ಅಥವಾ ಆಸ್ತಿಗಳಿಲ್ಲದೇ ತಮಗೆ ಜನಿಸುವ ಮಕ್ಕಳನ್ನೇ ಸ್ವತ್ತುಗಳೆಂದು ಪರಿಗಣಿಸಿ ಅವರ ದುಡಿಮೆಯಿಂದ ಆದಾಯ ನಿರೀಕ್ಷಿಸುವುದರಿಂದ ಅವರಲ್ಲಿನ ಜನಸಂಖ್ಯೆ ಅಧಿಕವಿರುತ್ತದೆ. 2010–11ರ ಅಂಕಿ–ಅಂಶದ ಪ್ರಕಾರ ಭಾರತದಲ್ಲಿ ಶೇ. 21.9ರಷ್ಟು ಜನರು ಬಡತನ ರೇಖೆಯ ಕೆಳಗೆ ಇದ್ದಾರೆ.

**3. ನಿಧಾನಗತಿಯ ನಗರೀಕರಣ:** ಭಾರತದಲ್ಲಿ ಕೈಗಾರೀಕರಣವು ತೀವ್ರವಾಗಿಲ್ಲದ ಕಾರಣ ನಗರೀಕರಣದ ವೇಗವೂ ಸಹ ನಿಧಾನಗತಿಯಲ್ಲಿದೆ. 2011ರ ಜನಗಣತಿಯ ಪ್ರಕಾರ ಶೇ. 31.16ರಷ್ಟು ಜನಸಂಖ್ಯೆ ಭಾರತದ ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳ ಸರಾಸರಿ ಗಾತ್ರ ಕಡಿಮೆ ಇರುತ್ತದೆ. ಆದರೆ ಭಾರತದಲ್ಲಿ ಶೇ. 68.84ರಷ್ಟು ಜನಸಂಖ್ಯೆ ಗ್ರಾಮೀಣ ಭಾರತದಲ್ಲಿ ವಾಸಿಸುತ್ತಿದ್ದು ಅಲ್ಲಿನ ಸರಾಸರಿ ಕುಟುಂಬ ಗಾತ್ರ ದೊಡ್ಡದಿರುತ್ತದೆ. ಗ್ರಾಮಗಳಲ್ಲಿ ಸಾಮಾನ್ಯ ಶಿಕ್ಷಣ ಹಾಗೂ ಕುಟುಂಬ ಯೋಜನೆಯ ಅರಿವಿನ ಕೊರತೆಯಿಂದಾಗಿ ಜನನ ದರವು ಅಧಿಕವಿರುತ್ತದೆ. ಇದೂ ಸಹ ಜನಸಂಖ್ಯೆಯ ಬೆಳವಣಿಗೆಗೆ ಕಾರಣವಾಗಿದೆ.

## ಸಾಮಾಜಿಕ ಅಂಶಗಳು

ಭಾರತದಲ್ಲಿನ ಸಾಮಾಜಿಕ ವ್ಯವಸ್ಥೆಯು ಸಹ ಜನಸಂಖ್ಯೆಯ ಏರಿಕೆಗೆ ಪ್ರಮುಖ ಕಾರಣವಾಗಿದೆ. ಅವುಗಳೆಂದರೆ:

1. **ಸಾರ್ವತ್ರಿಕ ವಿವಾಹ:** ಭಾರತದಲ್ಲಿ ಮದುವೆ ಎಂಬುದು ಸಾಮಾಜಿಕ ಅವಶ್ಯಕತೆಯಾಗಿದ್ದು ಎಲ್ಲರೂ ವಿವಾಹವಾಗುತ್ತಾರೆ. ಇದರಿಂದ ಸ್ವಾಭಾವಿಕವಾಗಿ ಜನನ ಸಂಖ್ಯೆಯು ಹೆಚ್ಚಳವಾಗುತ್ತದೆ.
2. **ಚಿಕ್ಕ ವಯಸ್ಸಿನಲ್ಲಿ ವಿವಾಹ:** ಭಾರತದಲ್ಲಿ ಮಹಿಳೆಯರಿಗೆ ಕನಿಷ್ಠ ವಿವಾಹದ ವಯಸ್ಸನ್ನು 18 ವರ್ಷಕ್ಕೆ ನಿಗದಿಗೊಳಿಸಿದರೂ, ಭಾರತದ ಅನೇಕ ಪ್ರದೇಶಗಳಲ್ಲಿ 18 ವರ್ಷ ತುಂಬುವ ಮೊದಲೇ ಮಹಿಳೆಯರ

ವಿವಾಹ ಮಾಡುವುದರಿಂದ ಅವರು ತಮ್ಮ ಜೀವಮಾನದಲ್ಲಿ ಹೆರುವ ಮಕ್ಕಳ ಸಂಖ್ಯೆ ಅಧಿಕವಾಗುತ್ತದೆ ಮತ್ತು ಇದು ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗಿದೆ.

3. **ಅವಿಭಕ್ತ ಕುಟುಂಬ:** ಭಾರತದಲ್ಲಿ ಕೌಟುಂಬಿಕ ವ್ಯವಸ್ಥೆಯಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯು ಪ್ರಮುಖವಾದುದ್ದು. ಅವಿಭಕ್ತ ಕುಟುಂಬಗಳಲ್ಲಿ ಸಾಮಾನ್ಯವಾಗಿ ದಂಪತಿಗಳು ಹೆಚ್ಚಿನ ಮಕ್ಕಳನ್ನು ಆಶಿಸುತ್ತಾರೆ.

4. **ಮೂಢ ನಂಬಿಕೆಗಳು:** ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ಮಗುವಾದರೆ ಮಾತ್ರವೇ ಮುಂದೆ ಮೋಕ್ಷ ದೊರೆಯುತ್ತದೆ ಎಂಬಂಥ ಕೆಲವು ಮೂಢನಂಬಿಕೆಗಳಿದ್ದು, ಅದರ ಕಾರಣವಾಗಿ ಬರುವ ಗಂಡು ಮಕ್ಕಳ ಇಚ್ಛೆಯು ಅದರಿಂದಲೂ ಜನಸಂಖ್ಯೆ ಹೆಚ್ಚಾಗುತ್ತದೆ.

5. **ಅನಕ್ಷರತೆ:** ಭಾರತದಲ್ಲಿನ ಅನಕ್ಷರತೆ ಹಾಗೂ ಅಜ್ಞಾನಗಳು ಜನರು ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳುವಲ್ಲಿ ತೊಡಕಾಗುತ್ತಿವೆ. ಇದೂ ಸಹ ಜನಸಂಖ್ಯೆಯ ಏರಿಕೆಗೆ ಪ್ರಮುಖ ಕಾರಣವಾಗಿದೆ.

## ಭೌಗೋಳಿಕ ಅಂಶಗಳು

ಭಾರತದ ಭೂಗೋಳವು ಉಷ್ಣ ಹವಾಮಾನ ಹೊಂದಿದ್ದು, ಜನರು ಬಹುಬೇಗ ಪ್ರೌಢಾವಸ್ಥೆಯನ್ನು ತಲುಪುವುದರಿಂದ ಚಿಕ್ಕ ವಯಸ್ಸಿನಲ್ಲಿಯೇ ವಿವಾಹ ಮಾಡುತ್ತಾರೆ. ಇದರಿಂದ ಮಹಿಳೆಯರ ಫಲವತ್ತತೆ ದರ ಹೆಚ್ಚಾಗುತ್ತದೆ. ಇವೆಲ್ಲವೂ ಜನನ ದರ ಏರಿಕೆಗೆ ಪ್ರಮುಖ ಕಾರಣವಾಗಿದೆ.

## ಮರಣ ದರದಲ್ಲಿನ ಇಳಿಕೆಗೆ ಪ್ರಮುಖ ಕಾರಣಗಳು

ಮರಣ ದರದಲ್ಲಿನ ತೀವ್ರಗತಿಯ ಇಳಿಕೆಯು ಜನಸಂಖ್ಯೆ ಏರಿಕೆಗೆ ಕಾರಣವಾಗಿದೆ. ಅಂತಹ ಪ್ರಮುಖ ಅಂಶಗಳೆಂದರೆ

1. **ಬರಗಾಲ ಮತ್ತು ಕ್ಷಾಮಗಳ ನಿಯಂತ್ರಣ:** ಬರಗಾಲ ಮತ್ತು ಕ್ಷಾಮಗಳು ಮರಣ ದರದ ಏರಿಕೆಗೆ ಕಾರಣವಾಗುತ್ತದೆ. ಭಾರತದಲ್ಲಿ ಸರ್ಕಾರವು ಬರಗಾಲ ಹಾಗೂ ಕ್ಷಾಮವನ್ನು ತಡೆಗಟ್ಟುವ ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ಮರಣದರ ಇಳಿಕೆಯನ್ನು ಸಾಧಿಸಲಾಗಿದೆ.

2. **ಸಾಂಕ್ರಾಮಿಕ ರೋಗಗಳ ನಿಯಂತ್ರಣ:** ಸ್ವಾತಂತ್ರ್ಯಪೂರ್ವದಲ್ಲಿ ಭಾರತದಲ್ಲಿ ಕಾಲರಾ, ಪ್ಲೇಗು, ಸಿಡುಬು ಮುಂತಾದ ಮಾರಕ ಸಾಂಕ್ರಾಮಿಕ ರೋಗಗಳು ಮರಣದರದ ಏರಿಕೆ ಕಾರಣವಾಗಿದ್ದವು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಆರೋಗ್ಯ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ದೇಶಾದ್ಯಂತ ವಿಸ್ತರಿಸುವ ಮೂಲಕ ಹಲವಾರು ಮಾರಕ ಕಾಯಿಲೆಗಳನ್ನು ನಿಯಂತ್ರಿಸಲಾಗಿದೆ. ಉದಾಹರಣೆಗೆ ಮಲೇರಿಯಾ, ವಿಷಮಶೀತಜ್ವರಗಳು ಬಹಳಷ್ಟು ಜನರನ್ನು ಕಾಡಿಸುತ್ತಿತ್ತು. ಭಾರತದಲ್ಲಿ ಮಲೇರಿಯಾ ಮತ್ತು

ಕ್ಷಯರೋಗಗಳ ನಿಯಂತ್ರಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿದೆ. ಇದರಿಂದ ಮರಣದರವು ಕಡಿಮೆಯಾಗಿ ಜನಸಂಖ್ಯೆಯ ತೀವ್ರ ಹೆಚ್ಚಳಕ್ಕೆ ಕಾರಣವಾಗಿದೆ.

3. **ಶೈಕ್ಷಣಿಕ ಸೌಲಭ್ಯದ ವಿಸ್ತರಣೆ:** ಭಾರತದಲ್ಲಿ ಶೈಕ್ಷಣಿಕ ಸೌಲಭ್ಯಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲೆಡೆ ವಿಸ್ತರಿಸಲಾಗಿದ್ದು ಉತ್ತಮ ಶಿಕ್ಷಣ ಪಡೆದ ನಾಗರಿಕರು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಜಾಗೃತರಾಗಿರುತ್ತಾರೆ. ಆರೋಗ್ಯ ಪೂರ್ಣ ಜೀವನ ಶೈಲಿಯ ದೆಸೆಯಿಂದ ಮರಣ ದರ ಇಳಿಕೆಯಾಗುತ್ತದೆ.

4. **ಇತರೆ ಅಂಶಗಳು:** ಭಾರತ ಸ್ವಾತಂತ್ರ್ಯ ಪಡೆದ ನಂತರ ಜನಸಾಮಾನ್ಯರಿಗೆ ಅಗತ್ಯವಿರುವ ಕನಿಷ್ಠ ಮೂಲಸೌಕರ್ಯಗಳನ್ನು ಅಂದರೆ ಪೌಷ್ಠಿಕ ಆಹಾರ, ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯ ಮುಂತಾದ ಸೌಲಭ್ಯಗಳ ವಿಸ್ತರಣೆಯಾಗಿ, ಜನರ ಒಟ್ಟಾರೆ ಆರೋಗ್ಯ ಸುಧಾರಿಸಿ ಮರಣದರವು ಇಳಿಕೆಯಾಗಿದೆ.

## ಜನಸಂಖ್ಯಾ ಸ್ಫೋಟ: ಅರ್ಥ ಮತ್ತು ಪರಿಣಾಮಗಳು

ಒಂದು ದೇಶದ ಜನಸಂಖ್ಯೆಯು ಉತ್ತಮ ಮಾನವ ಸಂಪನ್ಮೂಲವಾಗಿ ಪರಿವರ್ತಿತವಾದಾಗ ಆರ್ಥಿಕ ಪ್ರಗತಿಯಾಗುತ್ತದೆ. ಆದರೆ ಹಣದ ಕೊರತೆಯಿಂದಾಗಿ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಲು ಕಷ್ಟವಾಗುತ್ತದೆ. ಹಾಗಾಗಿ ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯು ದೇಶದ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಗೆ ತಡೆಗೋಡೆಯಾಗಿ ಹಲವಾರು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಲಭ್ಯವಿರುವ ಸಂಪನ್ಮೂಲಗಳು ಜನರಿಗೆ ಸೂಕ್ತ ಪ್ರಮಾಣದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಶಕ್ಯವಾಗದಿದ್ದರೆ ಅದನ್ನು ಜನಸಂಖ್ಯಾ ಸ್ಫೋಟವೆನ್ನಬಹುದು. ಇದರಿಂದ ಹಲವಾರು ತೊಂದರೆಗಳು ಎದುರಾಗಬಹುದಾಗಿದ್ದು, ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1) **ಕಡಿಮೆ ರಾಷ್ಟ್ರೀಯ ಮತ್ತು ತಲಾ ಆದಾಯ:** ಭಾರತದಲ್ಲಿ ರಾಷ್ಟ್ರೀಯ ಆದಾಯದ ಗಾತ್ರದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವನ್ನು ಸಾಧಿಸುತ್ತಿದ್ದರೂ ತೀವ್ರಗತಿಯ ಜನಸಂಖ್ಯೆಯ ಏರಿಕೆಯು ಜನರ ತಲಾದಾಯ ಮಟ್ಟವನ್ನು ಕಡಿಮೆಗೊಳಿಸುತ್ತದೆ ಹಾಗೂ ಅವರ ಜೀವನಮಟ್ಟವು ಕಡಿಮೆಯಿರುತ್ತದೆ.

2) **ಆಹಾರ ಸಮಸ್ಯೆ:** ತೀವ್ರಗತಿಯಲ್ಲಿ ಏರುತ್ತಿರುವ ಜನಸಂಖ್ಯೆಯು ಆಹಾರದ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಟಿ. ಆರ್. ಮಾಲ್ಥಸ್‌ರವರು ಜನಸಂಖ್ಯೆಯ ಬೆಳವಣಿಗೆಯನ್ನು ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸದಿದ್ದರೆ ಅದು ಅಭಿವೃದ್ಧಿಗೆ ಮಾರಕವಾಗುತ್ತದೆ ಎಂದು ವಿವರಿಸಿದ್ದಾರೆ. ಜನಸಂಖ್ಯೆಯ ಬೆಳವಣಿಗೆಯ ದರವು ಆಹಾರ ಉತ್ಪಾದನೆಯ ದರಕ್ಕಿಂತ ಅಧಿಕವಾಗಿದ್ದರೆ ಆಹಾರ ಸಮಸ್ಯೆ ಉದ್ಭವವಾಗುತ್ತದೆ.

3) **ನಿರುದ್ಯೋಗ ಮತ್ತು ಬಡತನ:** ತೀವ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆಯ ಗಾತ್ರವು ಬಡತನ ಮತ್ತು ನಿರುದ್ಯೋಗ ಸಮಸ್ಯೆಯನ್ನು ಹೆಚ್ಚಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಮರೆ ಮಾಚಿದ ಮತ್ತು ಅರೆ ನಿರುದ್ಯೋಗಗಳಲ್ಲದೇ ನಗರ ಪ್ರದೇಶಗಳಲ್ಲಿನ ನಿರುದ್ಯೋಗಗಳು ಬಡತನಕ್ಕೆ ಕಾರಣವಾಗಿವೆ. ಬಡತನ ಮತ್ತು ನಿರುದ್ಯೋಗದ ಸಮಸ್ಯೆಗಳು ಭಾರತದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಾಡುವ ಜ್ವಲಂತ ಸಮಸ್ಯೆಗಳಾಗಿವೆ.

4) **ಅನುತ್ಪಾದಕ ಜನಸಂಖ್ಯೆ:** ಜನಸಂಖ್ಯೆಯ ಬೆಳವಣಿಗೆ ದರ ಹೆಚ್ಚಾದಂತೆ 15 ವರ್ಷಕ್ಕಿಂತ ಕೆಳಪಟ್ಟ ಮಕ್ಕಳು ಮತ್ತು 59 ವರ್ಷಕ್ಕಿಂತ ಮೇಲ್ಪಟ್ಟ ವೃದ್ಧರ ಜನಸಂಖ್ಯೆ ಹೆಚ್ಚುತ್ತಿದೆ. ಈ ಜನಸಂಖ್ಯೆಯು ಸಾಮಾನ್ಯವಾಗಿ ಆರ್ಥಿಕವಾಗಿ ಅನುತ್ಪಾದಕರಾಗಿರುವುದರಿಂದ ಇವರನ್ನು ಅನುತ್ಪಾದಕ ಜನಸಂಖ್ಯೆ ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಶೇ. 44.6ರಷ್ಟು ಜನಸಂಖ್ಯೆಯು ಅನುತ್ಪಾದಕ ಜನಸಂಖ್ಯೆಯಿದ್ದು ಇವರನ್ನು ಇನ್ನುಳಿದ ಶೇ. 55.4ರಷ್ಟು ಕಾರ್ಯನಿರತ ಜನಸಂಖ್ಯೆ ಸಲುಹಬೇಕಾಗಿದೆ.

5) **ಸಾಮಾಜಿಕ ಸೌಲಭ್ಯಗಳ ಹೊರೆ:** ಹೆಚ್ಚುತ್ತಿರುವ ಜನಸಂಖ್ಯೆಯು ಸಾಮಾಜಿಕ ಸೌಲಭ್ಯಗಳ ಹೊರೆಯನ್ನು ಹೆಚ್ಚಿಸುತ್ತದೆ. ಶಿಕ್ಷಣ, ಆರೋಗ್ಯ, ವೈದ್ಯಕೀಯ ಮತ್ತು ವಸತಿ ಸೌಲಭ್ಯಗಳನ್ನು ಸರ್ಕಾರವು ಒದಗಿಸಬೇಕಾಗಿರುವುದರಿಂದ ಸಾಮಾಜಿಕ ಮೂಲ ಸೌಕರ್ಯಗಳ ಮೇಲೆ ಅಧಿಕ ಪ್ರಮಾಣದ ಸಾರ್ವಜನಿಕ ವೆಚ್ಚವನ್ನು ಕೈಗೊಳ್ಳಬೇಕಾಗುತ್ತದೆ.

6) **ಕಡಿಮೆಗೊಳ್ಳುತ್ತಿರುವ ಬಂಡವಾಳ ಸಂಗ್ರಹಣೆ:** ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯು ದೇಶದ ಉಳಿತಾಯ ಮತ್ತು ಬಂಡವಾಳ ಸಂಗ್ರಹಣಾ ಶಕ್ತಿಯನ್ನು ಕಡಿಮೆಗೊಳಿಸುತ್ತದೆ. ಇದು ಆರ್ಥಿಕ ಅಭಿವೃದ್ಧಿಯ ಹಿನ್ನಡೆಗೆ ಕಾರಣವಾಗುತ್ತದೆ.

ಹೀಗೆ ಜನಸಂಖ್ಯೆಯ ಏರಿಕೆಯು ಆರ್ಥಿಕತೆಯ ವಿವಿಧ ಅಂಶಗಳ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುವ ಮೂಲಕ ದೇಶದ ಆರ್ಥಿಕ ಪ್ರಗತಿಗೆ ಹಾಗೂ ಜನರ ಕ್ಷೇಮಾಭಿವೃದ್ಧಿಗೆ ತೊಡಕಾಗಿದೆ. ಈ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಇದು ಇನ್ನಷ್ಟು ಗಂಭೀರ ಸಮಸ್ಯೆಗಳಿಗೆ ಕಾರಣವಾಗುತ್ತದೆ.

## ಜನಸಂಖ್ಯೆ ನಿಯಂತ್ರಣದ ಪ್ರಮುಖ ವಿಧಾನಗಳು

ಭಾರತದಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ

1) ಕೃಷಿಯ ಮೇಲಿನ ಜನಸಂಖ್ಯಾ ಒತ್ತಡವನ್ನು ಕಡಿಮೆಗೊಳಿಸಲು ತೀವ್ರ ಕೈಗಾರಿಕೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು.

2) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವುದು.

3) ಶಿಕ್ಷಣವನ್ನು ವ್ಯಾಪಕಗೊಳಿಸುವ ಮೂಲಕ ಜನನ ದರವನ್ನು ಕಡಿಮೆಗೊಳಿಸಲು ಪ್ರಯತ್ನಿಸುವುದು. ವಿವಾಹ, ಕೌಟುಂಬಿಕ ವ್ಯವಸ್ಥೆ, ಜನಸಂಖ್ಯಾಶಾಸ್ತ್ರದ ಬಗ್ಗೆ ತಿಳುವಳಿಕೆ ಹಾಗೂ ಜಾಗೃತಿ ನೀಡುವುದು.

4) ಸಾರಿಗೆ–ಸಂಪರ್ಕ ಸೌಲಭ್ಯಗಳನ್ನು ವಿಸ್ತರಿಸುವ ಮೂಲಕ ಜನರಲ್ಲಿ ವೈಚಾರಿಕ ಮನೋಭಾವನೆಗಳ ವಿನಿಮಯ ಹಾಗೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆಗೆ ಪ್ರೋತ್ಸಾಹ ನೀಡುವುದು.

5) ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆಯ ಮೇಲಿನ ತಾರತಮ್ಯವನ್ನು ಹೋಗಲಾಡಿಸುವ ಮೂಲಕ ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವುದು.

6) ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳುವುದರ ಮೂಲಕ ಮಗುವನ್ನು ಆಯ್ಕೆಯಿಂದ ಪಡೆಯುವ ಪ್ರವೃತ್ತಿಯನ್ನು ಬೆಳೆಸುವುದು ಮತ್ತು ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳುವುದನ್ನು ಸರ್ವವ್ಯಾಪಿಯಾಗಿ ಮಾಡುವುದು.

7) ಜನರ ಜೀವನ ಮಟ್ಟ ಹೆಚ್ಚಿಸುವುದರ ಮೂಲಕ ಚಿಕ್ಕ ಕುಟುಂಬವನ್ನು ಆಶಿಸುವಂತೆ ಪ್ರೋತ್ಸಾಹಿಸುವುದು.

## ಜನಸಂಖ್ಯಾ ನೀತಿ

ಜನಸಂಖ್ಯಾ ಸ್ಫೋಟದ ಸಮಸ್ಯೆಗಳಿಗೆ ಪರಿಹಾರವನ್ನು ಒಂದು ನಿರ್ದಿಷ್ಟ ಜನಸಂಖ್ಯಾ ನೀತಿಯಿಂದ ಮಾತ್ರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಜನನ ನಿಯಂತ್ರಣದ ವಿಧಾನಗಳ ಮೂಲಕ ಜನಸಂಖ್ಯೆಯ ಬೆಳವಣಿಗೆಯನ್ನು ತಡೆಗಟ್ಟಲು ಜಾರಿಗೆ ತರುವ ಸರ್ಕಾರದ ನೀತಿಯನ್ನು ಜನಸಂಖ್ಯಾ ನೀತಿ ಎನ್ನುವರು. ಯೋಜನಾ ಆಯೋಗದ ಪ್ರಕಾರ ಭಾರತದ ಜನಸಂಖ್ಯಾ ನೀತಿಯು ಎರಡು ಮೂಲಭೂತ ಅಂಶಗಳ ಮೇಲೆ ಆಧಾರಿತವಾಗಿದೆ, ಅವುಗಳೆಂದರೆ:

1) ದೇಶದ ಜನಸಂಖ್ಯೆಯ ಬೆಳವಣಿಗೆ ದರವನ್ನು ಕಡಿಮೆಗೊಳಿಸುವುದು.

2) ಹಂತ ಹಂತವಾಗಿ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದರ ಮೂಲಕ ದೇಶದ ಆರ್ಥಿಕ ಅಭಿವೃದ್ಧಿ ಸಾಧಿಸುವುದು.

## ರಾಷ್ಟ್ರೀಯ ಜನಸಂಖ್ಯಾ ನೀತಿ 1976

ಭಾರತ ಸರ್ಕಾರವು 1976ರಲ್ಲಿ ಸಮಗ್ರ ಜನಸಂಖ್ಯಾ ನೀತಿಯನ್ನು ಘೋಷಿಸಿತು. ಇದರ ಪ್ರಮುಖ ಉದ್ದೇಶ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸುವುದಾಗಿತ್ತು. ಇದು ಜನರು ಸ್ವಇಚ್ಛೆಯಿಂದ ಕುಟುಂಬ ಯೋಜನೆಯನ್ನು ಅನುಸರಿಸುವಂತೆ ಉತ್ತೇಜಿಸಿತು. ಈ ನೀತಿಯ ಪ್ರಮುಖ ಲಕ್ಷಣಗಳೆಂದರೆ:

1) ಜನನ ದರವನ್ನು ಪ್ರತಿ ಸಾವಿರ ಜನರಿಗೆ 35ರಿಂದ 25ಕ್ಕೆ ಇಳಿಸುವುದು.

2) ಜನಸಂಖ್ಯಾ ಬೆಳವಣಿಗೆ ದರವನ್ನು ಶೇ. 1.4ಕ್ಕೆ ಇಳಿಸುವುದು.

3) ಹೆಣ್ಣು ಮಕ್ಕಳ ಮದುವೆಯ ವಯಸ್ಸನ್ನು 15 ರಿಂದ 18 ವರ್ಷಕ್ಕೆ ಹಾಗೂ ಗಂಡು ಮಕ್ಕಳ ವಿವಾಹದ ವಯಸ್ಸನ್ನು 18 ರಿಂದ 21 ವರ್ಷಕ್ಕೆ ನಿಗದಿಗೊಳಿಸಲಾಯಿತು.

4) ವಿವಾಹದ ನೋಂದಣಿಯನ್ನು ಕಡ್ಡಾಯಗೊಳಿಸಲಾಯಿತು.

5) ಜನಸಂಖ್ಯಾ ಸಮಸ್ಯೆಯ ಬಗ್ಗೆ ಯುವಜನರಲ್ಲಿ ಜಾಗೃತಿಯನ್ನು ಮೂಡಿಸಲು ಶೈಕ್ಷಣಿಕ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಹಾಗೂ ಮಹಿಳೆಯರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವುದು.

6) ಗ್ರಾಮೀಣ ಜನತೆಗೆ ಕುಟುಂಬ ಯೋಜನೆಯ ಮಾಹಿತಿಯನ್ನು ಪ್ರಚಾರ ಮಾಡಲು ಮಾಧ್ಯಮಗಳನ್ನು ಬಳಸುವುದು.

7) ಜನಸಂಖ್ಯಾ ಶಿಕ್ಷಣವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವುದು.

## ಹೊಸ ರಾಷ್ಟ್ರೀಯ ಜನಸಂಖ್ಯಾ ನೀತಿ 2000

ಭಾರತ ಸರ್ಕಾರವು 15 ಫೆಬ್ರವರಿ 2000ರಂದು ಹೊಸ ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ಘೋಷಿಸಿತು. ಈ ನೀತಿಯು ಪ್ರಮುಖವಾಗಿ ಸುಸ್ಥಿರ ಆರ್ಥಿಕ ಬೆಳವಣಿಗೆ, ಸಾಮಾಜಿಕ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯೊಂದಿಗೆ 2045ರ ವೇಳಗೆ ಹೆಚ್ಚುತ್ತಿರುವ ಜನಸಂಖ್ಯೆಯ ದರವನ್ನು ಸ್ಥಿರಗೊಳಿಸುವ ದೀರ್ಘಾವಧಿ ಉದ್ದೇಶವನ್ನು ಒಳಗೊಂಡಿದೆ. ಈ ನೀತಿಯ ಪ್ರಮುಖ ಲಕ್ಷಣಗಳೆಂದರೆ:

1) ಪ್ರತಿ ಸಾವಿರ ಜನನಗಳಿಗೆ ಸಂಭವಿಸುವ ಒಂದು ವರ್ಷದ ಒಳಗಿನ ಶಿಶುಗಳ ಮರಣ ಪ್ರಮಾಣವನ್ನು 30ಕ್ಕಿಂತ ಕಡಿಮೆಗೊಳಿಸುವುದು.

2) ಪ್ರತಿ ಲಕ್ಷ ಜನನಗಳಿಗೆ ಸಂಭವಿಸುವ ತಾಯಂದಿರ ಮರಣ ದರವನ್ನು 100ಕ್ಕಿಂತ ಕಡಿಮೆಗೊಳಿಸುವುದು.

3) ಶೇ. 80ರಷ್ಟು ಹೆರಿಗೆಗಳನ್ನು ತರಬೇತಿ ಹೊಂದಿದ ವೈದ್ಯರು, ನರ್ಸ್‌ಗಳಂತಹ ಸಿಬ್ಬಂದಿಯ ನೆರವಿನಿಂದ ಪ್ರಾಥಮಿಕ ಅಥವಾ ಇತರ ಆರೋಗ್ಯ ಸಂಸ್ಥೆಗಳಲ್ಲಿ ಕೈಗೊಳ್ಳುವಂತೆ ಮಾಡುವುದು.

4) ಏಡ್ಸ್ ಹಾಗೂ ಇತರೆ ಸೋಂಕು ರೋಗಗಳ ಬಗ್ಗೆ ಮಾಹಿತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದು.

5) ಇಬ್ಬರು ಮಕ್ಕಳು ಇರುವ ಚಿಕ್ಕ ಕುಟುಂಬವನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವುದು.

6) ಸುರಕ್ಷಿತ ಗರ್ಭಪಾತಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದು.

7) ಬಾಲ್ಯ ವಿವಾಹ ನಿಷೇಧ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು.

8) ಹೆಣ್ಣು ಮಕ್ಕಳ ವಿವಾಹವನ್ನು 21 ವರ್ಷಗಳ ನಂತರ ಕೈಗೊಳ್ಳುವಂತೆ ಪೋಷಕರನ್ನು ಪ್ರೇರೇಪಿಸುವುದು.

9) ಎರಡು ಮಕ್ಕಳ ನಂತರ ಸಂತಾನ ಹರಣ ಚಿಕಿತ್ಸೆಗೆ ಒಳಪಟ್ಟಿರುವ ಬಡತನ ರೇಖೆಗಿಂತ ಕೆಳಗೆ ವಾಸಿಸುವವರಿಗೆ ಆರೋಗ್ಯ ವಿಮೆ ಸೌಲಭ್ಯ ಒದಗಿಸುವುದು.

10) ಜನಸಂಖ್ಯಾ ನೀತಿಯ ಅನುಷ್ಠಾನಕ್ಕಾಗಿ ಪ್ರಧಾನಮಂತ್ರಿಗಳ ನೇತೃತ್ವದಲ್ಲಿ ರಾಷ್ಟ್ರೀಯ ಜನಸಂಖ್ಯಾ ಸಮಿತಿಯನ್ನು ನೇಮಿಸುವುದು.

## ಕುಟುಂಬ ಯೋಜನೆ

ಕುಟುಂಬದ ಗಾತ್ರವನ್ನು ಉದ್ದೇಶಪೂರ್ವಕವಾಗಿ ನಿಯಂತ್ರಿಸುವ ವಿಧಾನಕ್ಕೆ ಕುಟುಂಬ ಯೋಜನೆ ಎನ್ನುವರು. 1952ರಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಭಾರತದಲ್ಲಿ ಜಾರಿಗೊಳಿಸಲಾಯಿತು. ನಂತರ 1977ರಲ್ಲಿ ಈ ಯೋಜನೆಯನ್ನು ಕುಟುಂಬ ಕಲ್ಯಾಣ ಕಾರ್ಯಕ್ರಮ ಎಂದು ಹೆಸರಿಡುವ ಮೂಲಕ ಪುನಃ ಜಾರಿಗೆ ತರಲಾಯಿತು. ಈ ಯೋಜನೆಯ ಪ್ರಮುಖ ಉದ್ದೇಶಗಳೆಂದರೆ:

1) 'ಚಿಕ್ಕ ಕುಟುಂಬ ಚೊಕ್ಕ ಕುಟುಂಬ' ಎಂಬ ಮಾದರಿಯನ್ನು ಅಳವಡಿಸಿಕೊಳುವಂತೆ ಪ್ರೇರೇಪಿಸುವುದು.

2) ಆಕಸ್ಮಿಕವಾಗಿ ಮಗು ಪಡೆಯುವ ಬದಲು ಆಯ್ಕೆಯಿಂದ ಮಗು ಪಡೆಯುವುದು.

3) ಕುಟುಂಬ ಯೋಜನೆಯ ವಿಧಾನಗಳು ಎಲ್ಲಾ ಪ್ರದೇಶಗಳಲ್ಲೂ ಲಭ್ಯವಾಗುವಂತೆ ಕುಟುಂಬ ಯೋಜನಾ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಅದರ ಸೇವೆಗಳು ಸುಲಭವಾಗಿ ದೊರಕುವಂತೆ ಮಾಡುವುದು.

4) ಕುಟುಂಬ ಯೋಜನೆಯ ವಿಧಾನಗಳನ್ನು ಅಳವಡಿಸಿಕೊಂಡವರಿಗೆ ಹಣಕಾಸಿನ ಉತ್ತೇಜನ ನೀಡುವುದು

5) ತಾಯಂದಿರ ಮತ್ತು ಮಕ್ಕಳ ರಕ್ಷಣೆಗಾಗಿ ಸಾರ್ವತ್ರಿಕ ಲಸಿಕೀಕರಣ ನೀಡುವುದು ಹಾಗೂ ಪೌಷ್ಠಿಕ ಆಹಾರ ಒದಗಿಸುವುದು.

6) ಮಹಿಳೆಯರ ಶಿಕ್ಷಣವನ್ನು ಉತ್ತೇಜಿಸುವುದು

ಕುಟುಂಬ ಯೋಜನೆಯು ಒಂದು ಸುಂದರವಾದ ಚಿಕ್ಕ ಸುಖೀ ಕುಟುಂಬದ ಪರಿಕಲ್ಪನೆಯಾಗಿದೆ. ಇದನ್ನು ಎರಡು ವಿಧಾನಗಳಲ್ಲಿ ಜಾರಿಗೊಳಿಸಬಹುದು. ಮೊದಲನೆಯದಾಗಿ ಸಾರ್ವಜನಿಕರು ನೈತಿಕವಾಗಿ ವಿವಾಹದ ವಯಸ್ಸನ್ನು ಮುಂದೂಡುವುದು, ಬ್ರಹ್ಮಚರ್ಯೆ ಪಾಲನೆ, ಮುಂತಾದ ಕ್ರಮಗಳನ್ನು ಸ್ವಯಂ ಇಚ್ಛೆಯಿಂದ ಅನುಸರಿಸುವುದು. ಎರಡನೆಯದಾಗಿ ಗರ್ಭ ನಿರೋಧಕಗಳನ್ನು ಬಳಸುವುದು, ಗರ್ಭಪಾತ ಮಾಡಿಸಿಕೊಳ್ಳುವುದು, ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದರ ಮೂಲಕ ಜನನ ಪ್ರಮಾಣವನ್ನು ನಿಯಂತ್ರಿಸಬಹುದಾಗಿದೆ.

## ಜನಸಾಂದ್ರತೆ

ಭಾರತದ ಜನಸಂಖ್ಯೆಯ ಪ್ರಮುಖ ಅಂಶವೆಂದರೆ ಜನಸಂಖ್ಯೆಯ ಅಸಮಾನ ಹಂಚಿಕೆಯಾಗಿದೆ. ಒಂದು ಕಡೆ ಭಾರತದ ಜನಸಂಖ್ಯೆಯು ನಗರ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಮತ್ತು ಹೆಚ್ಚು ಕೃಷಿ ಉತ್ಪಾದಕತೆಯ

ಪ್ರದೇಶಗಳಲ್ಲಿ ಕೇಂದ್ರೀಕೃತಗೊಂಡಿದ್ದರೆ; ಮತ್ತೊಂದೆಡೆ ಪರ್ವತ ಪ್ರದೇಶಗಳು, ಮರುಭೂಮಿಗಳು ಹಾಗೂ ದಟ್ಟವಾದ ಕಾಡು ಪ್ರದೇಶಗಳಲ್ಲಿ ಜನಸಂಖ್ಯೆಯು ಕಡಿಮೆ ಪ್ರಮಾಣದಲ್ಲಿ ಹಂಚಿಕೆಯಾಗಿದೆ. ಇಂತಹ ಸ್ಥಿತಿಯನ್ನು ಒಂದು ನಿರ್ದಿಷ್ಟ ಪ್ರದೇಶದಲ್ಲಿನ ವಾಸಿಸುತ್ತಿರುವ ಜನರ ಸಂಖ್ಯೆ ಮತ್ತು ಅದರ ವಿತರಣೆಯ ಮೇಲೆ ಪರಿಣಾಮ ಬೀರುವ ಭೌಗೋಳಿಕ ಅಂಶಗಳನ್ನು ಅಧ್ಯಯನ ಮಾಡುವ ಮೂಲಕ ತಿಳಿಯಬಹುದಾಗಿದೆ.

ಪ್ರತಿ ಚದರ ಕೀಲೋಮೀಟರ್ ಪ್ರದೇಶದಲ್ಲಿ ವಾಸಿಸುವ ಜನರ ಸರಾಸರಿ ಸಂಖ್ಯೆಯನ್ನು ಜನಸಾಂದ್ರತೆ ಎಂದು ಕರೆಯಲಾಗುತ್ತದೆ. ಅಂದರೆ ಒಂದು ದೇಶದ ಜನಸಾಂದ್ರತೆಯನ್ನು ಆ ದೇಶದ ಒಟ್ಟು ಜನಸಂಖ್ಯೆಯನ್ನು ಆ ದೇಶದ ಭೌಗೋಳಿಕ ಪ್ರದೇಶದಿಂದ ಭಾಗಿಸುವ ಮೂಲಕ ಪಡೆಯಲಾಗುತ್ತದೆ. 2001ರ ಜನಗಣತಿಯ ಪ್ರಕಾರ ಭಾರತದ ಜನಸಾಂದ್ರತೆ ಪ್ರತಿ ಚದರ ಕೀಲೋಮೀಟರ್‌ಗೆ 324 ಇತ್ತು ಅದು 2011ರ ಜನಗಣತಿಯ ಪ್ರಕಾರ ಪ್ರತಿ ಚದರ ಕೀಲೋಮೀಟರ್‌ಗೆ 382ಕ್ಕೆ ಹೆಚ್ಚಾಗಿದೆ. ಇದು ಜಾಗತಿಕ ಜನಸಾಂದ್ರತೆಯ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಇಡೀ ಪ್ರಪಂಚದಾದ್ಯಂತ ಪ್ರತಿ ಚದರ ಕೀಲೋಮೀಟರ್ ಪ್ರದೇಶದಲ್ಲಿ 46 ಜನರು ವಾಸಿಸುತ್ತಾರೆ. ಭಾರತದ ಜನಸಾಂದ್ರತೆಯ ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ನೀಡಲಾಗಿದೆ:

**1)ಜನಸಾಂದ್ರತೆಯು ನಿರಂತರವಾಗಿ ಏರಿಕೆಯಾಗುತ್ತಿದೆ:** ಭಾರತದಲ್ಲಿ ಜನಸಾಂದ್ರತೆಯು ನಿರಂತರವಾಗಿ ಏರಿಕೆಯಾಗುತ್ತಿದೆ. 1951ರಲ್ಲಿ ಪ್ರತಿ ಚದರ ಕಿಲೋಮೀಟರ್‌ಗೆ 117 ಜನರಿದ್ದ ಜನಸಾಂದ್ರತೆಯು, 1971ರ ವೇಳಗೆ 177, 1991ರ ವೇಳಗೆ 274 ಹಾಗೂ 2011ರ ವೇಳಗೆ 382ಕ್ಕೆ ಹೆಚ್ಚಾಗಿದೆ. ಇದು ಪ್ರತಿ ವ್ಯಕ್ತಿಗೆ ಲಭ್ಯವಿರುವ ಭೂಮಿಯ ಪ್ರಮಾಣದ ಇಳಿಕೆಯನ್ನು ಸಹ ತೋರಿಸುತ್ತದೆ.

**2)ಪ್ರದೇಶವಾರು ಜನಸಾಂದ್ರತೆಯಲ್ಲಿ ಭಿನ್ನತೆ:** ಭಾರತದಲ್ಲಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯದ ಜನಸಾಂದ್ರತೆಯ ಪ್ರಮಾಣವು ವ್ಯತ್ಯಾಸದಿಂದ ಕೂಡಿದೆ. 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಬಿಹಾರ ರಾಜ್ಯವು ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿರುವ ರಾಜ್ಯವಾಗಿದೆ. ಅಲ್ಲಿ ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ 1,106 ಜನರು ವಾಸಿಸುತ್ತಿದ್ದಾರೆ. ಅರುಣಾಚಲ ಪ್ರದೇಶದಲ್ಲಿ ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ ಕೇವಲ 17 ಜನರು ವಾಸಿಸುತ್ತಿದ್ದು ಅತಿ ಕಡಿಮೆ ಜನಸಾಂದ್ರತೆಯ ರಾಜ್ಯವಾಗಿದೆ. ಕರ್ನಾಟಕದ ಜನಸಾಂದ್ರತೆಯ ಪ್ರಮಾಣವು 319 ಆಗಿದೆ. ಕೇಂದ್ರಾಡಳಿತ ಪ್ರದೇಶವಾದ ದೆಹಲಿಯ ಜನಸಾಂದ್ರತೆಯ ಪ್ರಮಾಣವು 11,297 ಆಗಿದೆ. ಜಗತ್ತಿನ ಇತರೆ ದೇಶಗಳಿಗೆ ಹೋಲಿಸಿದಂತೆ ಜನಸಾಂದ್ರತೆಯಲ್ಲಿ ಭಾರತವು ಮಧ್ಯಮ ಪ್ರಮಾಣದ ರಾಷ್ಟ್ರವಾಗಿದೆ.

## ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಪ್ರಮುಖ ಅಂಶಗಳು

ಜನಸಾಂದ್ರತೆಯು ಪ್ರಮುಖವಾಗಿ ನೈಸರ್ಗಿಕ ಅಂಶಗಳು, ಹವಾಮಾನ, ಮಳೆಯ ಹಂಚಿಕೆ, ನೀರಾವರಿ, ಸಾರಿಗೆಯ ಅಭಿವೃದ್ಧಿ, ವ್ಯಾಪಾರ–ವಾಣಿಜ್ಯ, ಕೈಗಾರೀಕರಣ, ನಗರೀಕರಣ ಮುಂತಾದ ಅಂಶಗಳು ಪ್ರಭಾವಿಸುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ;

1) **ಭೌಗೋಳಿಕ ಪ್ರದೇಶ:** ಭೌಗೋಳಿಕ ಪ್ರದೇಶವು ಜನಸಾಂದ್ರತೆಯನ್ನು ಪ್ರಭಾವಿಸುವ ಒಂದು ಪ್ರಬಲವಾದ ಅಂಶವಾಗಿದೆ. ಪರ್ವತ ಪ್ರದೇಶಗಳಿಗೆ ಹೋಲಿಸಿದಂತೆ ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ ಜನಸಾಂದ್ರತೆಯು ಹೆಚ್ಚು ಕೇಂದ್ರೀಕೃತಗೊಂಡಿದೆ. ಏಕೆಂದರೆ ಪರ್ವತ ಪ್ರದೇಶಗಳು ಕೃಷಿ, ಸಾರಿಗೆ, ಕೈಗಾರಿಕೆ ಮತ್ತು ಇತರೆ ಆರ್ಥಿಕ ಚಟುವಟಿಕೆಗಳ ಲಭ್ಯತೆಯನ್ನು ನಿರ್ಬಂಧಿಸುತ್ತವೆ. ಇದು ಜನಸಂಖ್ಯೆಯ ಗಾತ್ರವನ್ನು ಕಡಿಮೆಗೊಳಿಸುತ್ತದೆ. ಹಿಮಾಲಯ ಪ್ರದೇಶವು ಭಾರತದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. 13ರಷ್ಟು ಭಾಗವನ್ನು ಆಕ್ರಮಿಸಿದ್ದರೆ, ರಾಷ್ಟ್ರದ ಶೇ.1ರಿಂದ 2ರಷ್ಟು ಜನರು ಮಾತ್ರ ಅಲ್ಲಿ ವಾಸವಾಗಿದ್ದಾರೆ. ಆದರೆ ವಿಶಾಲವಾದ ಮೈದಾನ ಪ್ರದೇಶಗಳು ಕೃಷಿ, ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳ ಅಭಿವೃದ್ಧಿಗೆ ಉತ್ತಮ ಅವಕಾಶಗಳನ್ನು ಒದಗಿಸುವುದರಿಂದ ಅಲ್ಲಿ ಅಧಿಕ ಸಂಖ್ಯೆಯ ಜನರು ವಾಸವಾಗಿದ್ದಾರೆ.

2) **ಹವಾಮಾನ:** ಹವಾಮಾನವು ಜನಸಾಂದ್ರತೆಯನ್ನು ನಿರ್ಧರಿಸುವ ಮತ್ತೊಂದು ಪ್ರಮುಖ ಅಂಶವಾಗಿದೆ. ಹವಾಮಾನದಲ್ಲಿ ಪ್ರಮುಖವಾಗಿ ಮಳೆಯ ಪ್ರಮಾಣ ಮತ್ತು ತಾಪಮಾನದ ಅಂಶಗಳು ಜನಸಾಂದ್ರತೆಯನ್ನು ಪ್ರಭಾವಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಿಪರೀತ ತಾಪಮಾನವು ಜನಸಂಖ್ಯೆಯನ್ನು ನಿರ್ಬಂಧಿಸಿದರೆ, ಉತ್ತಮ ವಾಯುಗುಣ ಪರಿಸ್ಥಿತಿಗಳು ಜನಸಾಂದ್ರತೆಯ ಕೇಂದ್ರೀಕರಣವನ್ನು ಬೆಂಬಲಿಸುತ್ತದೆ.

3) **ಮಣ್ಣು:** ಭಾರತದಂತಹ ಕೃಷಿ ಪ್ರಧಾನ ರಾಷ್ಟ್ರದಲ್ಲಿ ಜನಸಂಖ್ಯೆಯ ಸಾಂದ್ರತೆಯನ್ನು ನಿರ್ಧರಿಸುವಲ್ಲಿ ಮಣ್ಣು ಪ್ರಮುಖ ಅಂಶವಾಗಿದೆ. ಉತ್ತಮ ಮಣ್ಣಿನ ಫಲವತ್ತತೆಯು ಹೆಚ್ಚಿನ ಜನಸಾಂದ್ರತೆಗೆ ಕಾರಣವಾದರೆ, ಮರುಭೂಮಿ ಮಣ್ಣು, ಪರ್ವತ ಮಣ್ಣುಗಳು ಕಡಿಮೆ ಜನಸಾಂದ್ರತೆಗೆ ಕಾರಣವಾಗುತ್ತದೆ. ಭಾರತದಲ್ಲಿ ಸಿಂಧೂ, ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಹಲವಾರು ಉಪನದಿಗಳ ಕಾರಣದಿಂದಾಗಿ ಕೃಷಿ ಯೋಗ್ಯ ಫಲವತ್ತತೆಯ ಮಣ್ಣು ಆಗಾಧವಾಗಿರುವುದರಿಂದ ಮತ್ತು ದಖ್ಖನ್ ಪ್ರಸ್ಥಭೂಮಿಯಲ್ಲಿಯೂ ಸಹ ಇಂಥದೇ ಕಾರಣದಿಂದ ಹೆಚ್ಚಿನ ಜನಸಾಂದ್ರತೆಯನ್ನು ಕಾಣಬಹುದು.

4) **ನೀರಿನ ಲಭ್ಯತೆ:** ನೀರಿನ ಲಭ್ಯತೆಯು ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನಸಾಂದ್ರತೆಯ ಪ್ರಮಾಣವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಏಕೆಂದರೆ ನೀರು ಕೃಷಿ, ಕೈಗಾರಿಕೆ, ನೀರಾವರಿ ಮತ್ತು ಕುಡಿಯುವ ಉದ್ದೇಶಗಳಿಗಾಗಿ ಮೂಲ ಅವಶ್ಯಕತೆಯಾಗಿದೆ. ನದಿಗಳು ಕಡಿಯುವ ನೀರಿನ ಪ್ರಮುಖ ಮೂಲವಾಗಿರುವುದರಿಂದ ನದಿ ಕಣಿವೆಗಳಲ್ಲಿ ಜನಸಂಖ್ಯೆಯು ಹೆಚ್ಚಾಗಿ ಕೇಂದ್ರೀಕೃತಗೊಂಡಿದೆ.

5) **ಖನಿಜ ಸಂಪನ್ಮೂಲಗಳು:** ಖನಿಜ ಸಂಪನ್ಮೂಲಗಳು ವಿವಿಧ ಪ್ರದೇಶಗಳಿಂದ ಜನರನ್ನು ಆಕರ್ಷಿಸುವ ಪ್ರಮುಖ ಮೂಲವಾಗಿದೆ. ಆದ್ದರಿಂದ ಖನಿಜ ಸಂಪನ್ಮೂಲಗಳ ಲಭ್ಯತೆಯು ಹೆಚ್ಚಿನ ಜನಸಾಂದ್ರತೆಯನ್ನು ನಿರ್ಧರಿಸುತ್ತದೆ.

6) **ಕೈಗಾರಿಕೆಗಳು:** ಕೈಗಾರಿಕೆಗಳ ಬೆಳವಣಿಗೆಯು ಬೃಹತ್ ಪ್ರಮಾಣದ ಉದ್ಯೋಗಾವಕಾಶಗಳ ಸೃಷ್ಟಿಗೆ ಮತ್ತು ನಗರೀಕರಣಕ್ಕೆ ಕಾರಣವಾಗುತ್ತದೆ. ಇದು ಸಹಜವಾಗಿಯೇ ಜನರನ್ನು ಕೈಗಾರಿಕಾ ಪ್ರದೇಶಗಳಿಗೆ ಆಕರ್ಷಿಸುತ್ತದೆ. ಇದರ ಫಲವಾಗಿ ಹೆಚ್ಚಿನ ಜನಸಾಂದ್ರತೆಯು ಕೈಗಾರಿಕಾ ಮತ್ತು ನಗರ ಪ್ರದೇಶಗಳಲ್ಲಿ ಕಂಡುಬರುತ್ತದೆ.

7) **ಸಾರಿಗೆ–ಸಂಪರ್ಕ ವ್ಯವಸ್ಥೆ:** ಸಾರಿಗೆ–ಸಂಪರ್ಕ ಸೌಲಭ್ಯಗಳ ಅಭಿವೃದ್ಧಿಯು ಜನಸಂಖ್ಯೆ ಬೆಳವಣಿಗೆಯೊಂದಿಗೆ ನೇರ ಸಂಬಂಧವನ್ನು ಹೊಂದಿದೆ. ಭಾರತದ ಉತ್ತಮ ಸಾರಿಗೆ–ಸಂಪರ್ಕ ಸೌಲಭ್ಯಗಳನ್ನು ಹೊಂದಿರುವ ಪ್ರದೇಶಗಳು ಸಹಜವಾಗಿ ಅಧಿಕ ಜನಸಾಂದ್ರತೆಯನ್ನು ಹೊಂದಿದ್ದರೆ, ಹಿಮಾಲಯದಂತಹ ಪ್ರದೇಶಗಳಲ್ಲಿ ಸಾರಿಗೆ–ಸಂಪರ್ಕ ಸೌಲಭ್ಯಗಳ ಕೊರತೆಯಿಂದಾಗಿ ಜನಸಾಂದ್ರತೆಯು ಕಡಿಮೆಯಿರುತ್ತದೆ.

## ಭಾರತದಲ್ಲಿ ಮಾನವ ಶಕ್ತಿ ಯೋಜನೆ

ಒಂದು ದೇಶದಲ್ಲಿರುವ ಜನಸಂಖ್ಯೆಯ ಪೂರೈಕೆಯನ್ನು ವಿವಿಧ ಕಸುಬುಗಳಿಗೆ ಅಗತ್ಯವಿರುವಷ್ಟು ಜನರಿಗೆ ಅದಕ್ಕೆ ಬೇಕಾದ ಶಿಕ್ಷಣವನ್ನು ತರಬೇತಿಯನ್ನು ನೀಡಿ, ಕ್ರಿಯಾಶೀಲರನ್ನಾಗಿಸಿ ಬಳಸಿಕೊಳ್ಳುವ ಕಾರ್ಯಕ್ರಮಕ್ಕೆ ಮಾನವ ಶಕ್ತಿ ಯೋಜನೆ ಎಂದು ಕರೆಯುತ್ತಾರೆ. ಇದು ಪ್ರಮುಖವಾಗಿ ದೇಶಲ್ಲಿನ ಒಟ್ಟು ಶ್ರಮದ ಬೇಡಿಕೆಗೆ ಅನುಗುಣವಾಗಿ ಶ್ರಮದ ಪೂರೈಕೆಯನ್ನು ಅಂದಾಜಿಸುತ್ತದೆ. ಇಂತಹ ಮಾನವ ಶಕ್ತಿಯ ಪ್ರಮುಖ ಉದ್ದೇಶವೆಂದರೆ ಶ್ರಮಶಕ್ತಿಯನ್ನು ಉತ್ಪನ್ನಕಾರಕವಾಗಿ ಮತ್ತು ಸಮರ್ಪಕವಾಗಿ ಬಳಸಿಕೊಳ್ಳುವುದಾಗಿದೆ. ಇದಲ್ಲದೇ ನಿರುದ್ಯೋಗ ಸಮಸ್ಯೆಗೆ ಪರಿಹಾರಾತ್ಮಕ ಯೋಜನೆಯಾಗಿಯೂ ಇದನ್ನು ಬಳಸಲಾಗುತ್ತಿದೆ. ಇದು ಕಾರ್ಮಿಕರ ದಕ್ಷತೆ, ಸಾಮರ್ಥ್ಯ ಮತ್ತು ನೈಪುಣ್ಯತೆಯನ್ನು ಹೆಚ್ಚಿಸುತ್ತದೆ. ಮಾನವ ಶಕ್ತಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಪ್ರಮುಖವಾಗಿ ನಾಲ್ಕು ಹಂತಗಳನ್ನು ಅನುಸರಿಸಲಾಗುತ್ತದೆ, ಅವುಗಳೆಂದರೆ:

1) ಒಂದು ನಿರ್ದಿಷ್ಟ ಅವಧಿಯಲ್ಲಿನ ಒಟ್ಟು ಶ್ರಮಬಲದ (ಕಾರ್ಮಿಕರ) ಪೂರೈಕೆಯ ಪ್ರಮಾಣವನ್ನು ಅಂದಾಜಿಸುವುದು.

2) ವಿವಿಧ ಆರ್ಥಿಕ ವಲಯಗಳಲ್ಲಿ ಸೃಷ್ಟಿಸಬಹುದಾದ ಉದ್ಯೋಗಾವಕಾಶಗಳನ್ನು ಅಂದಾಜಿಸುವುದು.

3) ಶ್ರಮದ ಬೇಡಿಕೆಗೆ ಅನುಗುಣವಾಗಿ ಶಿಕ್ಷಣ ಮತ್ತು ವೃತ್ತಿ ತರಬೇತಿಗಳನ್ನು ರೂಪಿಸಿ ನೀಡುವುದು.

4) ಶಿಕ್ಷಣ ಮತ್ತು ತರಬೇತಿ ಪಡೆದ ದಕ್ಷ ಶ್ರಮದ ಬಲವನ್ನು ಉದ್ಯೋಗಗಳಲ್ಲಿ ನೇಮಿಸಿಕೊಳ್ಳುವುದು.

## ಭಾರತದಲ್ಲಿ ಮಾನವ ಶಕ್ತಿ ಯೋಜನೆಯ ಪ್ರಮುಖ ಲಕ್ಷಣಗಳು

1) ಉದ್ಯೋಗಾವಕಾವಶಗಳನ್ನು ಬೇಡಿಕೆಗನುಗುಣವಾಗಿ ಸೃಷ್ಟಿಸುವುದು

2) ಜನರ ಗುಣಮಟ್ಟವನ್ನು ಹೆಚ್ಚಿಸಲು ಅಗತ್ಯ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ನೀತಿ ಜಾರಿಗೆ ತರುವುದು.

3) ವೃತ್ತಿನಿರತ ಕಾರ್ಮಿಕರ ದಕ್ಷತೆಯನ್ನು ಹೆಚ್ಚಿಸಲು ಉತ್ತಮ ತರಬೇತಿಯನ್ನು ಹಂತ ಹಂತವಾಗಿ ನೀಡುವುದು.

4) ಮಾನವ ಶಕ್ತಿಯ ಸಂಪನ್ಮೂಲವನ್ನು ವಲಯವಾರು ದಕ್ಷವಾಗಿ ಹಂಚಿಕೆ ಮಾಡುವುದು ಹಾಗೂ ಬಳಸಿಕೊಳ್ಳುವುದು.

5) ಜನಸಂಖ್ಯಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುವುದು.

6) ಮಾನವ ಬಂಡವಾಳದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವುದು.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. 2011 ಜನಗಣತಿಯ ಪ್ರಕಾರ ________ ರಷ್ಟು ಜನಸಂಖ್ಯೆ ಭಾರತದ ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ.

   ಅ) ಶೇ. 31.16 ಆ) ಶೇ.27.8 ಇ) ಶೇ.41.16 ಈ) ಶೇ.37.8

2. ವಿಶ್ವದಲ್ಲಿ ಕುಟುಂಬ ಯೋಜನೆಯನ್ನು ಮೊದಲ ಬಾರಿಗೆ ಜಾರಿಗೊಳಿಸಿದ ರಾಷ್ಟ್ರ ________

   ಅ) ಚೀನಾ ಆ) ಭಾರತ

   ಇ) ಬಾಂಗ್ಲಾದೇಶ ಈ) ಶ್ರೀಲಂಕಾ

3. ತೀವ್ರ ಜನಸಂಖ್ಯಾ ಏರಿಕೆಗೆ ಪ್ರಮುಖ ಕಾರಣವೆಂದರೆ ________

   ಅ) ಜನನ ದರದ ಏರಿಕೆ

   ಆ) ಮರಣ ದರದ ಇಳಿಕೆ

   ಇ) ಜನನ ದರದಲ್ಲಿ ಏರಿಕೆ ಹಾಗೂ ಮರಣದರಲ್ಲಿ ಇಳಿಕೆ

   ಈ) ಯಾವುದೂ ಅಲ್ಲ

4. ಅತಿ ಕಡಿಮೆ ಜನಸಾಂದ್ರತೆ ಹೊಂದಿರುವ ರಾಜ್ಯ ________

   ಅ) ಅರುಣಾಚಲ ಪ್ರದೇಶ ಆ) ನಾಗಾಲ್ಯಾಂಡ್

   ಇ) ಹಿಮಾಚಲ ಪ್ರದೇಶ ಈ) ಮಧ್ಯಪ್ರದೇಶ

5. ಮೊದಲ ಬಾರಿಗೆ ಜನಸಂಖ್ಯೆಯ ಋಣಾತ್ಮಕ ಬೆಳವಣಿಗೆಯ ದರ ________ ಅವಧಿಯಲ್ಲಿ ಕಂಡಿತು.

ಅ) 1961–1971 ಆ) 1941–1951

ಇ) 1911–1921 ಈ) 1901–1911

## V. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ

1. ಆರ್ಥಿಕ ಅಭಿವೃದ್ಧಿಯ ಜೀವಾಳ ________ ಆಗಿದೆ.
2. 2011ರ ಜನಗಣತಿಯ ಪ್ರಕಾರ ________ ರಾಜ್ಯವು ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿದೆ.
3. ಭಾರತದ ಕಾಯಿದೆಯ ಪ್ರಕಾರ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಕನಿಷ್ಠ ________ ವರ್ಷ ಹಾಗೂ ಗಂಡು ಮಕ್ಕಳ ವಿವಾಹದ ವಯಸ್ಸು ಕನಿಷ್ಠ ________ ಆಗಿದೆ.
4. ಭಾರತದಲ್ಲಿ ________ ರಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು.
5. ಭಾರತದಲ್ಲಿ ಹೆಚ್ಚು ಶ್ರಮಿಕರು ________ ಕ್ಷೇತ್ರವನ್ನು ಹೆಚ್ಚು ಜನರು ತಮ್ಮ ಜೀವನಾಧಾರಕ್ಕಾಗಿ ಆಶ್ರಯಿಸಿದೆ.

## V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ಮಾನವ ಸಂಪನ್ಮೂಲ ಎಂದರೇನು?
2. ಜನಸಾಂದ್ರತೆ ಎಂದರೇನು?
3. ಕುಟುಂಬ ಯೋಜನೆ ಎಂದರೇನು?
4. ಮಾನವ ಶಕ್ತಿ ಯೋಜನೆ ಎಂದರೇನು?
5. 2011 ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ ಎಷ್ಟು?

## V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ

1. ಕುಟುಂಬ ಯೋಜನೆಯ ಎರಡು ಉದ್ದೇಶಗಳನ್ನು ಹೆಸರಿಸಿ.
2. ಜನಸಂಖ್ಯಾ ನೀತಿಯು ಯಾವ ಮೂಲಭೂತ ಅಂಶಗಳ ಮೇಲೆ ಆಧಾರಿತವಾಗಿದೆ?
3. ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಯ ಹಂತಗಳನ್ನು ಬರೆಯಿರಿ.
4. ಜನಸಂಖ್ಯಾ ಸ್ಫೋಟದ ಯಾವುದಾದರೂ 2 ಪರಿಣಾಮಗಳನ್ನು ಬರೆಯಿರಿ.
5. ಜನಸಂಖ್ಯಾ ನಿಯಂತ್ರಣದ ಯಾವುದಾದರೂ ಎರಡು ಕ್ರಮಗಳನ್ನು ಬರೆಯಿರಿ.

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ

1. ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರವನ್ನು ವಿವರಿಸಿ.
2. ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಕಾರಣಗಳನ್ನು ಚರ್ಚಿಸಿ?
3. ಹೊಸ ರಾಷ್ಟ್ರೀಯ ಜನಸಂಖ್ಯಾ ನೀತಿ 2000ನ ಲಕ್ಷಣಗಳನ್ನು ಬರೆಯಿರಿ.
4. ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಪ್ರಮುಖ ಅಂಶಗಳನ್ನು ಚರ್ಚಿಸಿ?
5. ಭಾರತದಲ್ಲಿ ಮಾನವ ಶಕ್ತಿ ಯೋಜನೆಯ ಪ್ರಮುಖ ಲಕ್ಷಣಗಳನ್ನು ಬರೆಯಿರಿ.

### ನಿಯೋಜಿತ ಕಾರ್ಯ

1) ನಿಮ್ಮ ಊರಿನ ಜನಸಂಖ್ಯೆ ಎಷ್ಟು ಎಂದು ತಿಳಿಯಿರಿ.
2) ನಿಮ್ಮ ಊರಿನ ಅಥವಾ ಜಿಲ್ಲೆಯ ಜನಸಾಂದ್ರತೆಯನ್ನು ತಿಳಿಯಿರಿ.

# ಅಧ್ಯಾಯ-4

# ಭೂ ಸುಧಾರಣೆಗಳು, ಹಸಿರು ಕ್ರಾಂತಿ ಮತ್ತು ಕೃಷಿ ಅಭಿವೃದ್ಧಿ

"ಗ್ರಾಮೀಣ ಶ್ರಮಿಕ ರೈತಾಪಿ ವರ್ಗದ ಕಲ್ಯಾಣ ಆಗದ ಹೊರತು ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ"

- **ಮಹಾತ್ಮ ಗಾಂಧೀಜಿ**

'ಕನಿಷ್ಠ ನೈಜ ಕೂಲಿಯ ಶೂನ್ಯ ಸ್ಥಿತಿಯು ನಿರುದ್ಯೋಗವಾಗಿದೆ'. - **ಥಾಮಸ್ ಸೋವೆಲ್**

"ಅನ್ನ ದೇವರ ಮುಂದೆ ಇನ್ನು ದೇವರುಂಟೆ ?" - **ಸರ್ವಜ್ಞ**

**ಪೀಠಿಕೆ :**

ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದರೂ, ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಆಹಾರ ಉತ್ಪಾದನೆಯಲ್ಲಿನ ಕೊರತೆಯಿಂದಾಗಿ ನಿರಂತರವಾಗಿ ಹೆಚ್ಚುತ್ತಿದ್ದ ಜನಸಂಖ್ಯೆಗೆ ಆಹಾರವನ್ನು ಒದಗಿಸಲು ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿ ಇತ್ತು. 1950-51ರಲ್ಲಿ 50.8 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪನ್ನ ಪ್ರಮಾಣವು 2013-14ರ ವೇಳೆಗೆ 254 ದಶಲಕ್ಷ ಟನ್ನುಗಳಿಗೆ ಹೆಚ್ಚಳಗೊಂಡಿದೆ. ಈಗ ಭಾರತವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದ್ದು ಆಹಾರ ಪದಾರ್ಥಗಳನ್ನು ರಫ್ತು ಮಾಡುತ್ತಿದೆ. ಕೃಷಿಯಲ್ಲಿ ಭಾರತ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿದೆ. ಈ ಅಗಾಧ ಬದಲಾವಣೆಗೆ ಭದ್ರ ಬುನಾದಿ ಹಾಕಿದ್ದು ಭೂ ಸುಧಾರಣೆಗಳು, ಹಸಿರು ಕ್ರಾಂತಿ, ನೀರಾವರಿ ಅಭಿವೃದ್ಧಿ, ಯಾಂತ್ರೀಕರಣ ಮತ್ತು ತಾಂತ್ರಿಕತೆಯ ಬಳಕೆಗಳು. ಹಾಗಾದರೆ ಭೂ ಸುಧಾರಣೆಗಳು ಎಂದರೇನು? ಅದರ ಪ್ರಮುಖ ಉದ್ದೇಶಗಳೇನು? ಹಾಗೂ ಜಾರಿಗೊಳಿಸಲಾದ ಪ್ರಮುಖ ಕಾರ್ಯಕ್ರಮಗಳಾವುವು? ಹಸಿರು ಕ್ರಾಂತಿ ಎಂದರೇನು? ಅದರಿಂದ ಆದ ಪ್ರಯೋಜನಗಳೇನು? ಅದರ ಪ್ರತಿಕೂಲ ಪರಿಣಾಮಗಳೇನು? ಭಾರತದಲ್ಲಿ ನೀರಾವರಿ ವ್ಯವಸ್ಥೆಯ ಅಗತ್ಯತೆ ಏನು? ನೀರಾವರಿ ವ್ಯವಸ್ಥೆಯ ಪ್ರಮುಖ ಮೂಲಗಳಾವುವು? ಮುಂತಾದ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಅಧ್ಯಾಯವು ನೀಡುತ್ತದೆ.

## ಭೂ ಸುಧಾರಣೆಗಳು

ಭೂ ಸುಧಾರಣೆ ಎಂದರೆ ಕೃಷಿ ಭೂಮಿ ಒಡೆತನದ ಮತ್ತು ಉಳುಮೆಯ ಸಾಂಸ್ಥಿಕ ಪರಿಸರವನ್ನು ಸುಧಾರಿಸುವುದಾಗಿದೆ. ಉಳುವವನಿಗೆ ಪ್ರೋತ್ಸಾಹ ನೀಡುವುದಲ್ಲದೇ ಕೊರತೆಯಲ್ಲಿರುವ ಭೂ ಸಂಪನ್ಮೂಲವನ್ನು ವಿವೇಚನಯುತವಾಗಿ ಉಪಯೋಗಿಸಿ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು ಅದರ ಪ್ರಮುಖ ಉದ್ದೇಶವಾಗಿದೆ. ಇದರಲ್ಲಿ ಪ್ರಮುಖವಾಗಿ ಉಳುಮೆ ಮಾಡುವವರ ಭೂಮಿಯನ್ನು ಪರವಾಗಿ ಮರು ಹಂಚಿಕೆ ಮಾಡುವ ಕಾರ್ಯ

ಒಳಗೊಂಡಿದೆ. ಮೂಲಭೂತವಾಗಿ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಲು ತಾಂತ್ರಿಕ ಮತ್ತು ಸಾಂಸ್ಥಿಕ ಎರಡು ಅಂಶಗಳು ಕಾರಣವಾಗುತ್ತದೆ.

## 1) ತಾಂತ್ರಿಕ ಅಂಶಗಳು:

ಕೃಷಿಯ ಆದಾನಗಳ ಬಳಕೆಯು ಉತ್ಪಾದಕತೆಯ ಮೇಲೆ ಪ್ರಮುಖವಾದ ಪರಿಣಾಮವನ್ನು ಬೀರಿವೆ. ಸುಧಾರಿತ ಹಾಗೂ ಅಧಿಕ ಇಳುವರಿ ನಿಡುವ ಬೀಜಗಳ ಬಳಕೆ, ರಾಸಾಯನಿಕ ಗೊಬ್ಬರಗಳ ಉಪಯೋಗ, ಕ್ರಿಮಿನಾಶಕಗಳ ಬಳಕೆ, ಆಧುನಿಕ ಯಂತ್ರಗಳಾದ ಟ್ರ್ಯಾಕ್ಟರ್ ಮತ್ತು ಬೆಳೆ ಕೊಯ್ಲು ಯಂತ್ರಗಳ ಬಳಕೆ, ನೀರಾವರಿ ಸೌಲಭ್ಯ ಮುಂತಾದವುಗಳು ಉತ್ಪಾದಕತೆಯನ್ನು ಹೆಚ್ಚಿಸುತ್ತವೆ.

## 2) ಸಾಂಸ್ಥಿಕ ಅಂಶಗಳು:

ಸಾಂಸ್ಥಿಕ ಸುಧಾರಣೆಗಳು ಬೇಸಾಯ ವರ್ಗದವರಿಗೆ ಅನುಕೂಲಕರವಾಗಿ ಭೂ ಮಾಲೀಕತ್ವದ ಮರುವಿತರಣೆಯನ್ನು ಮಾಡುವುದರಿಂದ ಅವರಿಗೆ ಗ್ರಾಮೀಣ ಜೀವನದಲ್ಲಿ ಭಾಗವಹಿಸುವಿಕೆಯ ಅರಿವನ್ನು ಮೂಡಿಸುತ್ತದೆ. ಮಧ್ಯವರ್ತಿಗಳ ನಿರ್ಮೂಲನೆ, ಹಿಡುವಳಿ ಗಾತ್ರದಲ್ಲಿ ಸುಧಾರಣೆ, ಗೇಣಿದಾದರಿಗೆ ಭದ್ರತೆ ಒದಗಿಸುವುದು, ಗೇಣಿ ನಿಯಂತ್ರಣ ಕಾಯ್ದೆ ಇತ್ಯಾದಿಗಳು ಸಾಂಸ್ಥಿಕ ಚೌಕಟ್ಟಿನಲ್ಲಿ ಬರುತ್ತವೆ. ಇದು ಉಳಿಗಮಾನ್ಯ ಪದ್ಧತಿಯ ಕೆಟ್ಟ ಸಂಪ್ರದಾಯವನ್ನು ಹೋಗಲಾಡಿಸಲು ಸಹಾಯಕವಾಗಿದೆ. ಸಣ್ಣ ಗಾತ್ರದ ಹಿಡುವಳಿಗಳು, ಛಿದ್ರಗೊಂಡು ತುಂಡು ತುಂಡಾಗಿ ಹರಡಿ ಹೋಗಿರುವ ಭೂ ಹಿಡುವಳಿಗಳು, ಗೇಣಿ ಹಕ್ಕಿನ ಅಭದ್ರತೆ, ಅಧಿಕ ಗೇಣಿ ಇತ್ಯಾದಿಗಳು ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ತೊಡಕುಗಳಾಗಿವೆ. ಇವುಗಳನ್ನು ಸಕಾರಾತ್ಮಕವಾಗಿ ಬದಲಾಯಿಸಲು ಭೂಸುಧಾರಣೆಯ ಕ್ರಮಗಳನ್ನು ಸರ್ಕಾರಗಳು ಕೈಗೊಂಡಿದ್ದು, ಅವುಗಳಲ್ಲಿ ಪ್ರಮುಖವಾದುವೆಂದರೆ:

1) ಮಧ್ಯವರ್ತಿಗಳ ನಿರ್ಮೂಲನೆ
2) ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸುಧಾರಣೆಗಳು – ಉಳುಮೆ ಮಾಡುವವನ ಪರವಾಗಿ ಭೂಮಿ ಹಂಚಿಕೆ
3) ಗೇಣಿ ಸುಧಾರಣೆಗಳು :

   1) ಗೇಣಿದಾರರಿಗೆ ಭದ್ರತೆ 2) ಗೇಣಿ ನಿಯಂತ್ರಣ ಕಾಯಿದೆ
4) ಭೂ ನಿರ್ವಹಣೆ ಸುಧಾರಣೆ : ಭೂ ಹಿಡುವಳಿಗಳ ಮೇಲೆ ಕನಿಷ್ಟ ಹಾಗೂ ಗರಿಷ್ಠ ಮಿತಿ
5) ಸಹಕಾರಿ ಕೃಷಿಗೆ ಉತ್ತೇಜನ ನೀಡುವುದು

ಭೂ ಸುಧಾರಣೆಗಳು ಕೃಷಿ ವ್ಯವಸ್ಥೆಯ ಸಮಗ್ರ ಭಾಗವಾಗಿದ್ದು, ಅದರಲ್ಲಿ ರೈತನು ಪ್ರಮುಖ ಪಾತ್ರ ವಹಿಸುತ್ತಾನೆ. ಭೂ ಸುಧಾರಣೆಗಳು ಉಳುಮೆ ಮಾಡುವವನಿಗೆ ಭೂ ಮಾಲೀಕತ್ವ ಕೊಡಿಸುವ ಉದ್ದೇಶ ಹೊಂದಿದೆ. ಇದರಿಂದಾಗಿ ಸಾಮಾಜಿಕ ಮತ್ತು ಆರ್ಥಿಕ ದಕ್ಷತೆ ಉಂಟಾಗುತ್ತದೆ.

## ಭೂ ಸುಧಾರಣೆಗಳು ಮಹತ್ವ

1) ಭೂ ಸುಧಾರಣೆಗಳಿಂದ ಉಳುಮೆ ಮಾಡುವವರ ಮತ್ತು ಸರಕಾರದ ನಡುವಿನ ಮಧ್ಯವರ್ತಿಗಳ ನಿರ್ಮೂಲನೆಯಾಗುತ್ತದೆ.

2) ಗೇಣಿ ನಿಯಂತ್ರಣ, ಗೇಣಿಯ ಭದ್ರತೆ ಹಾಗೂ ಉಳುಮೆದಾರರಿಗೆ ಭೂ ಮಾಲೀಕತ್ವ ಒಳಗೊಂಡ ಗೇಣಿ ಸುಧಾರಣಾ ಕ್ರಮಗಳಿಂದ ಗೇಣಿದಾರರ ಉತ್ಪಾದಕತೆ ಮತ್ತು ಆದಾಯ ಹೆಚ್ಚುತ್ತದೆಯಲ್ಲದೇ ಕೃಷಿಯಲ್ಲಿ ಬಂಡವಾಳ ಹೂಡುವಿಕೆಯೂ ಅಧಿಕವಾಗುತ್ತದೆ.

3) ಭೂ ಹಿಡುವಳಿಗಳ ಮೇಲೆ ಗರಿಷ್ಠ ಪರಮಾವಧಿ ಮಿತಿಯನ್ನು ಹಾಕುವುದರಿಂದ ಭೂಮಿಯ ಅಸಮಾನ ಒಡೆತನವನ್ನು ನಿಯಂತ್ರಿಸಬಹುದು.

4) ಭೂ ವಿಭಜನೆ ಮತ್ತು ಛಿದ್ರೀಕರಣಗಳನ್ನು ಹೋಗಲಾಡಿಸಿ ಹಿಡುವಳಿಗಳನ್ನು ಪುನರ್ ಸಂಘಟಿಸುವುದರಿಂದ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಬಹುದು.

5) ಸಹಕಾರಿ ಭೂ ಹಿಡುವಳಿಗಳ ಸಂಘಗಳನ್ನು ಸಂಘಟಿಸಿ ಸಹಕಾರಿ ಕೃಷಿಯನ್ನು ಉತ್ತೇಜಿಸಿದರೆ ರೈತರ ಹಾಗೂ ಗ್ರಾಮೀಣ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ.

## ಭೂ ಸುಧಾರಣೆಗಳನ್ನು ಜಾರಿಗೊಳಿಸಲು ಅಳವಡಿಸಿಕೊಂಡಿರುವ ವಿಧಾನಗಳು

## 1) ಮಧ್ಯವರ್ತಿಗಳ ನಿರ್ಮೂಲನೆ

ಸ್ವಾತಂತ್ರ್ಯಪೂರ್ವ ಭಾರತದ ಭೂ ಹಿಡುವಳಿ ವ್ಯವಸ್ಥೆಯನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಜಮೀನ್ದಾರಿ ಪದ್ಧತಿ, ಮಹಲ್ವಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿ.

## ಜಮೀನ್ದಾರಿ ಪದ್ಧತಿ

1793ರಲ್ಲಿ ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಕಾರ್ನ್‌ವಾಲಿಸ್‌ರವರು ಬಂಗಾಳದಲ್ಲಿ ಮೊದಲ ಬಾರಿಗೆ ಜಾರಿಗೆ ತಂದ ಈ ವ್ಯವಸ್ಥೆಯಡಿ ಒಂದು ಪ್ರದೇಶದ ವ್ಯಾಪ್ತಿಗೆ ಸೇರಿದ ಜಮೀನನ್ನು ಒಬ್ಬ ಜಮೀನ್ದಾರನ ಸುಪರ್ದಿಗೆ ಕೊಟ್ಟು, ಅವರು ಸರ್ಕಾರಕ್ಕೆ ಪ್ರತಿ ವರ್ಷ ನಿಗದಿಯಾದ ಭೂ ಕಂದಾಯವನ್ನು ಕಟ್ಟಬೇಕಾಗುತ್ತಿತ್ತು. ಜಮೀನುದಾರರು ತನ್ನ ಒಡೆತನದಲ್ಲಿದ ಜಮೀನನ್ನು ರೈತರಿಗೆ ಮರುಹಂಚಿಕೆ (ಒಳಗೇಣಿಗೆ) ಮಾಡಿ ಅವರಿಂದ ಕಂದಾಯವನ್ನು ಸಂಗ್ರಹಿಸಿ ಸರ್ಕಾರಕ್ಕೆ ಅದು ನಿಗದಿಪಡಿಸಿದ ಗೇಣಿಯನ್ನು (ಕಂದಾಯ) ಭರಿಸುತ್ತಿದ್ದನು. ಹೀಗೆ ಜಮೀನುದಾರರು ಸರ್ಕಾರ ಮತ್ತು ಸಾಗುವಳಿದಾರ ನಡುವೆ ಮಧ್ಯವರ್ತಿಯಂತೆ ಕೆಲಸ ಮಾಡುತ್ತಿದ್ದರು. ಈ ಪದ್ಧತಿಯನ್ನು ಜಾಗೀರ್‌ದಾರಿ, ಇನಾಮ್‌ದಾರಿ ಎಂದು ಸಹ ಕರೆಯಲಾಗುತ್ತಿತ್ತು. ಆದರೆ ಇವರು ತಾವು ಸರ್ಕಾರಕ್ಕೆ ನೀಡಬೇಕಾದ ಹಣಕ್ಕಿಂತ ಹೆಚ್ಚಿನ ಕಂದಾಯವನ್ನು ಸಂಗ್ರಹಿಸಿ ರೈತರನ್ನು ಶೋಷಣೆ

ಮಾಡಿ ಅವರನ್ನು ಕನಿಷ್ಠ ಸೌಲಭ್ಯಗಳಿಲ್ಲದ ಬದುಕಿಗೆ ನೂಕಿದ್ದರು. ಈ ವ್ಯವಸ್ಥೆಯು ಬಂಗಾಳ, ಉತ್ತರ ಮದ್ರಾಸ್ ಮತ್ತು ಬನಾರಸ್‌ಗಳಲ್ಲಿ ಚಾಲ್ತಿಯಲ್ಲಿ ಇತ್ತು.

## ರೈತವಾರಿ ಪದ್ಧತಿ

ಈ ಪದ್ಧತಿಯಲ್ಲಿ ರೈತರು ಸ್ವತಂತ್ರವಾಗಿ ವ್ಯಕ್ತಿಗತ ಹಿಡುವಳಿಗೆ ಒಡೆಯರಾಗಿರುತ್ತಾರೆ. ಹಾಗಾಗಿ ಸಾಗುವಳಿದಾರರು ಸರ್ಕಾರಕ್ಕೆ ನೇರವಾಗಿ ಭೂ ಕಂದಾಯವನ್ನು ಕಟ್ಟುತ್ತಿದ್ದರು. ರೈತರು ತಮ್ಮ ಹಿಡುವಳಿಗಳನ್ನು ಒಳಗುತ್ತಿಗೆ ನೀಡಲು ಸ್ವತಂತ್ರರಾಗಿದ್ದರು. ಅವರು ನಿಗದಿಯಾದ ಭೂ ಕಂದಾಯವನ್ನು ಸರಿಯಾದ ಸಮಯದಲ್ಲಿ ಕಟ್ಟುತ್ತಿದ್ದರೆ, ಅವರ ಭೂಮಿ ಒಡೆತನದ ಹಕ್ಕು ಖಾಯಂ ಆಗಿ ಅವರ ಬಳಿ ಇರುತ್ತಿತ್ತು. ಇದು ಹಿಂದು ಪರಂಪರೆಯ ಬಳುವಳಿಯಾಗಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ ರೈತವಾರಿ ಪದ್ಧತಿಯನ್ನು 1772ರಲ್ಲಿ ಮದ್ರಾಸ್‌ನಲ್ಲಿ ಥಾಮಸ್ ಮುನ್‌ರೋ ರವರು ಜಾರಿಗೆ ತಂದರು. ಈ ವ್ಯವಸ್ಥೆಯು ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿತ್ತು.

## ಮಹಲ್ವಾರಿ ಪದ್ಧತಿ

ಮಹಲ್ವಾರಿ ಪದ್ಧತಿಯಲ್ಲಿ ಗ್ರಾಮದ ಕೃಷಿ ಭೂಮಿಯ ಒಡೆತನವು ಜಂಟಿಯಾಗಿ ಗ್ರಾಮ ಸಮುದಾಯದ ಒಡೆತನದಲ್ಲಿರುತ್ತದೆ. ಹಾಗಾಗಿ ಭೂ ಕಂದಾಯವನ್ನು ಪಾವತಿಸುವ ಹೊಣೆಗಾರಿಕೆಯು ಜಂಟಿಯಾಗಿ ಗ್ರಾಮ ಸಮುದಾಯದ ಎಲ್ಲಾ ಸದಸ್ಯರ ಮೇಲೆ ಇರುತ್ತದೆ. ನಿಗದಿಯಾದ ನಿರ್ದಿಷ್ಟ ಮೊತ್ತದ ಭೂ ಕಂದಾಯವನ್ನು ಸಮುದಾಯದ ಸದಸ್ಯರು ಗ್ರಾಮದ ಲಂಬರ್ಡ್‌ರ್‌ಗೆ ಪಾವತಿಸುತ್ತಿದ್ದರು. ಈ ಕಾರ್ಯಕ್ಕಾಗಿ ಗ್ರಾಮದ ಲಂಬರ್ಡ್‌ರ್‌ಗೆ ಶೇ. 5ರಷ್ಟು ಕಮಿಷನ್ ಸರ್ಕಾರ ಕೊಡುತ್ತಿತ್ತು. ಈ ವ್ಯವಸ್ಥೆಯನ್ನು ಮೊದಲ ಬಾರಿಗೆ ಅಗ್ರಾ, ಔಧ್‌ನಲ್ಲಿ ಅಸ್ತಿತ್ವಕ್ಕೆ ಬಂದಿತು. ತದನಂತರ ಪಂಜಾಬ್‌ನಲ್ಲಿ ಜನಪ್ರಿಯವಾಯಿತು. ಈ ಪದ್ಧತಿಯು ಮುಸ್ಲಿಂ ಪರಂಪರೆಯ ಬಳುವಳಿಯಾಗಿದ್ದ ಪಂಜಾಬ್‌ನಲ್ಲಿ ಅಭಿವೃದ್ಧಿ ಹೊಂದಿತ್ತು. ಈ ಪದ್ಧತಿಯನ್ನು ಬ್ರಿಟಿಷ್ ಆಳ್ವಿಕೆಯಲ್ಲಿ 1822ರಲ್ಲಿ ವಿಲಿಯಂ ಬೆನ್‌ಟಿಕ್ ರವರು ಜಾರಿಗೆ ತಂದರು.

ಭಾರತದ ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲಿ ಮಧ್ಯವರ್ತಿ ಗೇಣಿ ಪದ್ಧತಿಗಳಾದಂತಹ ಜಮೀನ್ದಾರಿ, ಜಹಗೀರ್ ಪದ್ಧತಿಗಳ ಅಡಿಯಲ್ಲಿ ಶೇ. 40ರಷ್ಟು ಕೃಷಿ ಭೂಮಿಯಿತ್ತು.

ಮದ್ರಾಸ್ ರಾಜ್ಯವು 1948ರಲ್ಲಿ ಮಧ್ಯವರ್ತಿಗಳ ನಿರ್ಮೂಲನೆಯ ಕಾಯ್ದೆಯನ್ನು ಮೊದಲ ಬಾರಿಗೆ ಜಾರಿಗೆ ತಂದಿತ್ತು. ತದನಂತರ ಭಾರತದ ಹಲವು ಇತರೆ ರಾಜ್ಯಗಳು ಇಂತಹುದೇ ಕಾಯ್ದೆಯನ್ನು ಜಾರಿಗೆ ತಂದರು. ದುರಾದೃಷ್ಟವಶಾತ್ ಪಶ್ಚಿಮ ಬಂಗಾಳವು ನಿರಪೇಕ್ಷ ಭೂ ಒಡೆಯರ ಶೋಷಣೆಯಿಂದ ಕೆಟ್ಟ ಪರಿಣಾಮವನ್ನು ಅನುಭವಿಸಿದರೂ ಮಧ್ಯವರ್ತಿಗಳ ನಿರ್ಮೂಲನಾ ಕಾನೂನನ್ನು ಜಾರಿಗೆ ತಂದ ಭಾರತದ ಕಡೆಯ ರಾಜ್ಯವಾಗಿತ್ತು. 1955ರಲ್ಲಿ ಪಶ್ಚಿಮ ಬಂಗಾಳವು ಮಧ್ಯವರ್ತಿಗಳ ನಿರ್ಮೂಲನೆ ಕಾಯಿದೆಯನ್ನು ಜಾರಿ ಮಾಡಿತ್ತು.

## 2) ಗೇಣಿ ಸುಧಾರಣೆಗಳು

ಗೇಣಿ ಸುಧಾರಣೆಗಳಲ್ಲಿ ಪ್ರಮುಖವಾದುವೆಂದರೆ:

ಅ) ಗೇಣಿ ನಿಯಂತ್ರಣ

ಆ) ಗೇಣಿದಾರರ ಭದ್ರತೆ ಮತ್ತು ಭೂ ಹಿಡುವಳಿಗಳ ಮೇಲಿನ ಮಿತಿ

## 2.1 ಗೇಣಿ ನಿಯಂತ್ರಣ

ಜನಸಂಖ್ಯೆ ಒತ್ತಡದಿಂದಾಗಿ ಭೂಮಿಗೆ ಬೇಡಿಕೆ ಹೆಚ್ಚಿದಂತೆ ಗೇಣಿ ಹೆಚ್ಚಾಯಿತು. ಬೆಳೆದ ಬೆಳೆಯಲ್ಲಿ ಅರ್ಧದಷ್ಟನ್ನು ಗೇಣಿಯಾಗಿ ಮಾಲೀಕನಿಗೆ ಕೊಡುವ ಪರಿಪಾಠ ಆರಂಭವಾಯಿತು. ಹಾಗಾಗಿ ಉಳುಮೆ ಮಾಡುವವರ ಹಿತ ಕಾಯಲು ಸರ್ಕಾರ ಗೇಣಿ ನಿಯಂತ್ರಣಕ್ಕೆ ಮುಂದಾಯಿತು. ಮೊದಲ ಹಾಗೂ ಎರಡನೆಯ ಪಂಚವಾರ್ಷಿಕ ಯೋಜನೆಗಳ ಕರಡುಗಳಲ್ಲಿ ಗೇಣಿಯು ಬೆಳೆದ ಬೆಳೆಯ 1/4 ಇಲ್ಲವೇ 1/5ಕ್ಕಿಂತ ಹೆಚ್ಚಾಗಿರಬಾರದೆಂದು ಸಲಹೆ ನೀಡಿತು. ಈ ನಿಟ್ಟಿನಲ್ಲಿ ಅನೇಕ ರಾಜ್ಯ ಸರ್ಕಾರಗಳು ಗೇಣಿಯನ್ನು ನಿಯಂತ್ರಿಸಲು ಆದೇಶ ಹೊರಡಿಸಿದವು. ಗುಜಾರಾತ, ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಗೇಣಿಯನ್ನು ಬೆಳೆಯ ಗರಿಷ್ಟ 1/6ಕ್ಕೆ ನಿಗದಿಗೊಳಿಸಿದ್ದರೆ, ಅಸ್ಸಾಂ, ಕರ್ನಾಟಕ, ಮಣಿಪುರ ಮತ್ತು ತ್ರಿಪುರಾಗಳಲ್ಲಿ ಬೆಳೆಯ 1/4 ಮತ್ತು 1/5ರ ಒಳಗೆ ನಿಗದಿಗೊಳಿಸಲಾಯಿತು; ಪಂಜಾಬ್‌ನಲ್ಲಿ ಮತ್ತು ಜಮ್ಮು ಕಾಶ್ಮೀರದಲ್ಲಿ 1/3, ತಮಿಳುನಾಡಿನಲ್ಲಿ 33.33 ರಿಂದ ಶೇ. 40ರ ಒಳಗೆ, ಆಂಧ್ರಪ್ರದೇಶದಲ್ಲಿ ಬೆಳೆದ ಬೆಳೆಯ 1/4ರಷ್ಟು ಗೇಣಿಯನ್ನು ನಿಗಧಿಗೊಳಿಸಲಾಯಿತು.

ಸ್ವತಂತ್ರ ಭಾರತದಲ್ಲಿ ಹಲವು ರಾಜ್ಯ ಸರ್ಕಾರಗಳು ರೈತಪರವಾದ ಹಲವು ಕಾನೂನುಗಳನ್ನು ರೂಪಿಸಿವೆ. ಆದರೆ ಸರ್ಕಾರಗಳ ದೃಢ ಇಚ್ಛೆ ಇಲ್ಲದ ಕಾರಣ ಹಾಗೂ ಆ ಯೋಜನೆಗಳ ಪ್ರಯೋಜನಗಳ ಅರಿವಿಲ್ಲದ ಅಸಂಘಟಿತ, ಬಡ, ಅನಕ್ಷರಸ್ಥ ರೈತರು ಅವುಗಳ ಪ್ರಯೋಜನ ಪಡೆಯುವಲ್ಲಿ ವಿಫಲರಾದರು. 1948ರಿಂದ 1955ರವರೆಗೂ ವೈಯಕ್ತಿಕ ಉಳುಮೆ ಮಾಡುವ ನೆಪ ಒಡ್ಡಿ ಭೂ ಮಾಲೀಕರು ಲಕ್ಷಾಂತರ ಉಳುಮೆಗಾರರನ್ನು ಒಕ್ಕಲೆಬ್ಬಿಸಿದರು. ಸರ್ಕಾರ ಇದನ್ನು ತಪ್ಪಿಸಲು ಎಚ್ಚೆತ್ತು ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎರಡು ವಿಭಿನ್ನ ವಿಧಾನಗಳ ಮೇಲೆ ಭೂ ಹಿಡುವಳಿಗಳನ್ನು ಹಿಂಪಡೆಯುವ ತಾತ್ಕಾಲಿಕ ರೂಪುರೇಷೆಯನ್ನು ಮಾಡಿತ್ತು.

1) ಎಲ್ಲಾ ಗೇಣಿದಾರರು ತಮ್ಮ ಭೂ ಹಿಡುವಳಿಗಳ ಮೇಲೆ ಸಂಪೂರ್ಣ ಭದ್ರತೆಯನ್ನು ನೀಡುವುದು ಹಾಗೂ ಭೂ ಮಾಲೀಕರಿಗೆ ವೈಯಕ್ತಿಕ ಉಳುಮೆಯ ಹಕ್ಕನ್ನು ನೀಡದೇ ಇರುವುದು.

2) ಭೂ ಮಾಲೀಕರು ಒಂದು ನಿಯಮಿತ ಭೂಮಿಯನ್ನು ವೈಯಕ್ತಿಕ ಉಳಿತಾಯ ಹೊಂದುವುದು. ಆದರೆ ಗೇಣಿದಾರರಿಗೆ ಕನಿಷ್ಠ ಭೂಮಿಯನ್ನು ಕೊಡುವುದು.

ಆದರೆ ಎರಡೂ ಸ್ಥಿತಿಗಳಲ್ಲೂ ಗೇಣಿದಾರರಿಗೆ ಕನಿಷ್ಠ ಉಳುಮೆ ಜಮೀನಿನ ಅಧಿಕಾರವನ್ನು ಕೊಡುವುದು ಹಾಗೂ ಭೂ ಮಾಲೀಕನು ಹೊಂದಬಹುದಾದ ಭೂಮಿಯ ಬಗ್ಗೆ ಮಿತಿಯನ್ನು ಹೇರುವುದು ಸಾಮಾನ್ಯವಾಗಿತ್ತು.

## 2.2. ಭೂ ಹಿಡುವಳಿಗಳ ಮೇಲಿನ ಗರಿಷ್ಠ ಮಿತಿ

ಭೂ ಮಾಲೀಕರು ಸರ್ಕಾರ ನಿಗದಿಗೊಳಿಸಿದ ಭೂ ಹಿಡುವಳಿಗಳಿಗಿಂತ ಹೆಚ್ಚಿನ ಭೂಮಿಯನ್ನು ಹೊಂದಿದ್ದರೆ ಅದನ್ನು ಸರ್ಕಾರ ತನ್ನ ವಶಕ್ಕೆ ಪಡೆದು ಭೂ ರಹಿತ ಜನರಿಗೆ ಅದನ್ನು ಹಂಚಿಕೆ ಮಾಡುವುದು ಭೂ ಹಿಡುವಳಿಗಳ ಮೇಲಿನ ಗರಿಷ್ಠ ಮಿತಿ ಕಾಯಿದೆಯ ಮುಖ್ಯ ಉದ್ದೇಶ. ಸಂಪನ್ಮೂಲಗಳಲ್ಲಿ ಭೂಮಿಯ ಪೂರೈಕೆಗೆ ನಿರ್ದಿಷ್ಟ ಮಿತಿಯಿರುವುದರಿಂದ ಭೂ ಹಿಡುವಳಿಗಳ ಮೇಲೆ ಗರಿಷ್ಠ ಮಿತಿ ಅತ್ಯವಶ್ಯಕವಾಗಿದೆ.

ಭೂ ಹಿಡುವಳಿಗಳ ಮೇಲಿನ ಪರಮಾವಧಿ ಮಿತಿ ನಿಯಮಗಳ ಕುರಿತು 1950ರಲ್ಲಿ ಪ್ರಥಮ ಬಾರಿಗೆ ಶಾಸನ ರೂಪಿಸಿ, 1972ರಲ್ಲಿ ಅದನ್ನು ಪರಿಷ್ಕರಿಸಲಾಯಿತು. 1972ರ ನಂತರ ಕುಟುಂಬದ ಆಧಾರದ ಮೇಲೆ ಭೂ ಹಿಡುವಳಿಗಳ ಮೇಲೆ ಗರಿಷ್ಠ ಮಿತಿಯನ್ನು ನಿಗಧಿ ಮಾಡಲಾಯಿತು. ಬಹುತೇಕ ಎಲ್ಲಾ ರಾಜ್ಯಗಳು ತಮ್ಮ ರಾಜ್ಯಗಳಲ್ಲಿ ಗರಿಷ್ಠ ಭೂ ಹಿಡುವಳಿಗಳ ಮಿತಿಯನ್ನು ಎರಡು ಬೆಳೆ ಬೆಳೆಯುವ ನೀರಾವರಿ ಭೂಮಿ, ಒಂದು ಬೆಳೆ ಬೆಳೆಯುವ ನೀರಾವರಿ ಭೂಮಿ ಹಾಗೂ ಮಳೆಯಾಶ್ರಿತ ಭೂಮಿ ಎಂದು ವಿಂಗಡಿಸಿ ನಿಗದಿಗೊಳಿಸಿದರು. ಉದಾಹರಣೆಗೆ ಕರ್ನಾಟಕದಲ್ಲಿ ಎರಡು ಬೆಳೆಯನ್ನು ಬೆಳೆಯುವ ನೀರಾವರಿ ಭೂಮಿಯಾದರೆ 4.05ರಿಂದ 8.10 ಹೆಕ್ಟೇರ್ ವರ್ಷಕ್ಕೆ ಒಂದು ಬೆಳೆ ಬೆಳೆಯುವ ನೀರಾವರಿ ಭೂಮಿಗೆ 10.12 ರಿಂದ 12.14 ಹೆಕ್ಟೇರ್ ಹಾಗೂ ಮಳೆಯಾಶ್ರಿತ ಭೂಮಿಯಾದರೆ 21.85 ಹೆಕ್ಟೇರ್ ಗರಿಷ್ಠ ಭೂಮಿ ನಿಗಧಿ ಮಾಡಲಾಗಿದೆ.

ಬೇನಾಮಿ ವ್ಯವಹಾರ (ಸ್ವಾಧೀನಪಡಿಸಿಕೊಳ್ಳುವ ಆಸ್ತಿಯ ನಿಷೇದಾತ್ಮಕ ಹಕ್ಕು) ಕಾಯ್ದೆಯ ಅನ್ವಯ ಬೇನಾಮಿ ವ್ಯವಹಾರವನ್ನು ಅನೈತಿಕ ವ್ಯವಹಾರ ಎಂದು ಘೋಷಿಸಿದೆ. ಇದು ಭೂ ಸುಧಾರಣೆಗಳ ಒಂದು ಉತ್ತಮ ಹೆಜ್ಜೆಯಾಗಿದೆ.

### ಭೂ ಸುಧಾರಣೆಗಳ ವಿಫಲತೆಗೆ ಕಾರಣಗಳು:

ಭೂ ಸುಧಾರಣೆಗಳು ಭಾರತದಲ್ಲಿ ವಿಫಲವಾಗಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾಗಿ

1) **ರಾಜಕೀಯ ಇಚ್ಛಾಶಕ್ತಿಯ ಕೊರತೆ:** ಸ್ವಾತಂತ್ರ್ಯ ನಂತರ ಚುನಾಯಿತರಾದ ಬಹುತೇಕ ಎಲ್ಲಾ ಸರ್ಕಾರಗಳು ರೈತ ಪರವಾದ ಧೋರಣೆಗಳನ್ನು ಹೊಂದಿವೆಯಾದರೂ, ಪೂರ್ಣವಾಗಿ ಭೂ ಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಅವುಗಳಿಗೆ ಸಾಧ್ಯವಾಗಿಲ್ಲ. ಅದಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯೇ ಪ್ರಮುಖ ಕಾರಣವಾಗಿದೆ.

2) **ಗೇಣಿದಾರರಿಂದ ಸರ್ಕಾರದ ಮೇಲೆ ಯಾವುದೇ ಒತ್ತಡ ಇಲ್ಲದಿರುವುದು:** ಗೇಣಿದಾರರು ತಮ್ಮ ಪರವಾಗಿ ಭೂಮಿಯನ್ನು ಮರು ಹಂಚಿಕೆ ಮಾಡುವಂತೆ ಇಲ್ಲವೇ ನಿರ್ಧರಿತ ಗೇಣಿಯನ್ನು ಮಾತ್ರವೇ ಸಂಗ್ರಹಿಸುವಂತೆ ಒತ್ತಡ ತರಲು ಸಾಧ್ಯವಾಗಲಿಲ್ಲ. ಇದಕ್ಕೆ ಅವರು ಅಸಂಘಟಿತರಾಗಿರುವುದು, ಅನಕ್ಷರಸ್ಥರಾಗಿರುವುದು ಹಾಗೂ ಬಡವರಾಗಿರುವುದು ಕಾರಣವಾಗಿದೆ.

3) **ಅಸಂಘಟಿತ ರೈತರ ಉತ್ಸಾಹ ಹೀನತೆ:** ರೈತರು ಅಸಂಘಟಿತರಾಗಿರುವುದರಿಂದ ತಮ್ಮ ಹಕ್ಕುಗಳಿಗಾಗಲೀ ಇಲ್ಲವೇ ಭೂ ಸುಧಾರಣೆಗಳ ಜಾರಿಗಾಗಲೀ ಒಕ್ಕೊರಲಿನಿಂದ ಒತ್ತಾಯಿಸಲು ಸಾಧ್ಯವಾಗಿಲ್ಲ.

4) **ಅಧಿಕಾರಶಾಹಿಗಳ ನಿರ್ದಯ ವರ್ತನೆ:** ಅಧಿಕಾರಿಶಾಹಿಗಳು ಜಾರಿಗೆ ಬಂದ ಭೂ ಸುಧಾರಣೆಗಳನ್ನು ಫಲಾನುಭವಿಗಳಿಗೆ ತಲುಪಿಸುವಲ್ಲಿ ಉತ್ಸಾಹ ತೋರಲಿಲ್ಲ. ಭ್ರಷ್ಟಾಚಾರದಲ್ಲಿ ತೊಡಗಿಕೊಂಡ ಅಧಿಕಾರಿಗಳು ಇಚ್ಛಾಶಕ್ತಿಯಿಲ್ಲದ ರಾಜಕೀಯ ಶಕ್ತಿಯ ಕೊರತೆಯ ಲಾಭ ಪಡೆದು ಭಾರತದಲ್ಲಿ ಭೂ ಸುಧಾರಣೆಗಳು ಯಶಸ್ವಿಯಾಗದ ಹಾಗೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು.

5) **ಭೂದಾಖಲೆಗಳ ಸರಿಯಾದ ಮಾಹಿತಿ ಇಲ್ಲದಿರುವುದು:** ಅನೇಕ ರೈತರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಲ್ಲಿ ಭಾಗವಾಗಿ ಬಂದಿರುತ್ತದೆಯಾದರೂ ಅದರ ದಾಖಲೆಗಳು ಅವರ ಬಳಿ ಇರುವುದಿಲ್ಲ. ಅನೇಕ ಬಾರಿ ಆಸ್ತಿಯು ನಿಧನರಾಗಿರುವ ಅವರ ಪೂರ್ವಜರ ಹೆಸರಿನಲ್ಲಿಯೇ ಇರುತ್ತದೆ, ಇನ್ನು ಕೆಲವು ಬಾರಿ ರೈತರ ಬಳಿ ಸರಿಯಾದ ಭೂ ದಾಖಲೆಗಳೇ ಇರುವುದಿಲ್ಲ.

## ಹಸಿರು ಕ್ರಾಂತಿ

ಕಡಿಮೆ ಕಾಲಾವಧಿಯಲ್ಲಿ ಅಧಿಕ ಇಳುವರಿಯ ಬಿತ್ತನೆ ಬೀಜಗಳು, ರಾಸಾಯನಿಕಗಳು, ಕ್ರಿಮಿನಾಶಕಗಳು, ಮತ್ತು ನೀರಾವರಿ ಸೌಲಭ್ಯಗಳು ಮುಂತಾದವುಗಳನ್ನು ಕ್ರಮಬದ್ಧವಾಗಿ ಬಳಸಿಕೊಂಡು ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಿ ಆಹಾರ ಉತ್ಪಾದನೆಯನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವುದಕ್ಕೆ ಹಸಿರು ಕ್ರಾಂತಿ ಎಂದು ಕರೆಯಲಾಯಿತು. ಸಾಮಾನ್ಯ ಅರ್ಥದಲ್ಲಿ ಹಸಿರು ಕ್ರಾಂತಿಯೆಂದರೆ ಕಡಿಮೆ ಕಾಲಾವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿನ ಶ್ರೀಘ್ರ ಹೆಚ್ಚಳವಾಗಿದೆ. ಭಾರತದಲ್ಲಿ ಹಸಿರು ಕ್ರಾಂತಿಯ ಅವಧಿಯು ಕೃಷಿ ಉತ್ಪಾದಕತೆಯ ಹೆಚ್ಚಳದಲ್ಲಿ ಒಂದು ಮೈಲುಗಲ್ಲಾಗಿದೆ.

ಪ್ರೊ. ನಾರ್ಮನ್ ಬೋರ್ಲಾಗ್‌ರವರು ಮೆಕ್ಸಿಕೋದಲ್ಲಿ ಗೋಧಿಯ ಹೊಸ ಅಧಿಕ ಇಳುವರಿ ಬೀಜಗಳನ್ನು ಅಭಿವೃದ್ಧಿಪಡಿಸುವ ಮೂಲಕ ಹೆಚ್ಚಿನ ಉತ್ಪಾದಕತೆಗೆ ನಾಂದಿ ಹಾಡಿದರು. ಆದ್ದರಿಂದಲೇ ಅವರನ್ನು ವಿಶ್ವದ **'ಹಸಿರು ಕ್ರಾಂತಿಯ ಪಿತಾಮಹ'** ಎಂದು ಕರೆಯುತ್ತೇವೆ. 1965ರಲ್ಲಿ ಮೆಕ್ಸಿಕೋದಲ್ಲಿ ನಾರ್ಮನ್ ಬೋರ್ಲಾಗ್‌ರವರು ಕಂಡುಹಿಡಿದ ಅಧಿಕ ಇಳುವರಿ ಬೀಜಗಳನ್ನು ಉತ್ಪಾದನೆಯಲ್ಲಿ ಬಳಸಿದರ ಪ್ರತಿಫಲವಾಗಿ ಗೋಧಿಯ ಉತ್ಪಾದನೆಯ ಮಟ್ಟವು ಒಂದು ಹೆಕ್ಟೇರ್‌ಗೆ 5000 ಕಿಲೋ ಗ್ರಾಮ್‌ಗಳಿಂದ 6000 ಕಿಲೋ ಗ್ರಾಮ್‌ಗಳವರೆಗೆ ಹೆಚ್ಚಿತು. ಈ ಅಧಿಕ ಇಳುವರಿ ಬೀಜಗಳು ನೀರಾವರಿ ಸೌಲಭ್ಯಗಳು ಮತ್ತು ರಾಸಾಯನಿಕಗಳು, ಕ್ರಿಮಿನಾಶಕಗಳ ಅಗತ್ಯತೆಯನ್ನು ಹೊಂದಿತ್ತು.

ಹಸಿರು ಕ್ರಾಂತಿಯು ಭಾರತದಲ್ಲಿ 1960–61ರಲ್ಲಿ ದೇಶದ ಆಯ್ದ ಏಳು ಜಿಲ್ಲೆಗಳಲ್ಲಿ ಅಧಿಕ ಇಳುವರಿ ಬೀಜಗಳನ್ನು ಬಳಸುವ ಒಂದು ಪ್ರಾಯೋಗಿಕ ಯೋಜನೆಯಾಗಿ ಪ್ರಾರಂಭವಾಯಿತು. ನಂತರ 1966ರ ಮುಂಗಾರು ಅವಧಿಯಲ್ಲಿ ಸಾಂದ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳುವ ಮೂಲಕ ಬೀಜ–ಗೊಬ್ಬರ–ನೀರು–

ತಂತ್ರಜ್ಞಾನ ಕಾರ್ಯಕ್ರಮವೆಂದು ಬಹಳಷ್ಟು ಪ್ರದೇಶಗಳಿಗೆ ಅದನ್ನು ವಿಸ್ತರಿಸಲಾಯಿತು. ಪ್ರಾರಂಭದಲ್ಲಿ ಇದನ್ನು 1.89 ದಶ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಜಾರಿಗೊಳಿಸಿ ನಂತರ ಇಡೀ ದೇಶದಾದ್ಯಂತ ವಿಸ್ತರಿಸಲಾಯಿತು. ಅಲ್ಲಿಂದೀಚೆಗೆ ಈ ತಂತ್ರಜ್ಞಾನದ ಬಳಕೆ ಗಣನೀಯವಾಗಿ ವಿಸ್ತೃತಗೊಂಡಿದೆ. ಇದರ ಪರಿಣಾಮವಾಗಿ ಆಹಾರ ಉತ್ಪಾದನೆಯಲ್ಲಿ ಗಮನಾರ್ಹ ಹೆಚ್ಚಳವಾಯಿತು. ಇದನ್ನು ಹಸಿರು ಕ್ರಾಂತಿ ಎಂದು ಕರೆಯಲಾಗಿದೆ.

## ಹಸಿರು ಕ್ರಾಂತಿಯು ಒಳಗೊಂಡಿರುವ ಪ್ರಮುಖ ವಿಧಾನಗಳು

ಕೃಷಿಯಲ್ಲಿನ ಹೊಸ ತಂತ್ರಜ್ಞಾನವು ಪ್ರಮುಖವಾಗಿ ಅಧಿಕ ಇಳುವರಿ ಬಿತ್ತನೆ ಬೀಜಗಳು, ರಾಸಾಯನಿಕಗಳು, ಕ್ರಿಮಿನಾಶಕಗಳು ಮತ್ತು ನೀರಾವರಿ ಸೌಲಭ್ಯಗಳನ್ನು ಒಳಗೊಂಡಿದ್ದು ಇತರೆ ವಿಧಾನಗಳು ಸಹ ಕೃಷಿ ಉತ್ಪಾದನೆಯಲ್ಲಿನ ಗಣನೀಯ ಪ್ರಗತಿಗೆ ಹಾಗೂ ಹೊಸ ತಂತ್ರಜ್ಞಾನ ಅಳವಡಿಕೆಗೆ ಸಹಕಾರಿಯಾಗಿದೆ. ಅವುಗಳೆಂದರೆ:

1) **ಸಾರ್ವಜನಿಕ ಸಂಸ್ಥೆಗಳ ಪಾತ್ರ:** ರಾಷ್ಟ್ರೀಯ ಬೀಜ ನಿಗಮ, ಕೃಷಿ ಪೂರಕ ಕೈಗಾರಿಕೆಗಳ ನಿಗಮ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಮುಂತಾದ ಹೊಸ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಾಗುವಳಿದಾರರಿಗೆ ವಿವಿಧ ಸೇವೆಗಳನ್ನು ಒದಗಿಸಿ ಹೊಸ ತಂತ್ರಜ್ಞಾನ ಬಳಸಲು ಉತ್ತೇಜನ ನೀಡಲಾಯಿತು. ಹೊಸ ಕೃಷಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಬೇಕಾಗುವ ಹಣಕಾಸಿನ ಸಹಾಯವನ್ನು ಒದಗಿಸಲು ಹಣಕಾಸು ಸಂಸ್ಥೆಗಳನ್ನೂ ರೂಪಿಸಲಾಯಿತು.

2) **ಆದಾನಗಳ ಪ್ಯಾಕೇಜ್ ಕಾರ್ಯಕ್ರಮ:** ಹಸಿರು ಕ್ರಾಂತಿಯು ಸಾಗುವಳಿದಾರರಿಗೆ ನಿರಂತರವಾಗಿ ಸುಧಾರಿಸಿದ ಬೀಜಗಳು, ರಾಸಾಯನಿಕಗಳು, ಬೆಳೆ ಸಂರಕ್ಷಣಾ ವಿಧಾನಗಳನ್ನು ಮತ್ತು ನೀರಿನ ಬಳಕೆಯ ಆದಾನಗಳ ಪ್ಯಾಕೇಜ್‌ನ್ನು ಒದಗಿಸುವ ಪ್ರಯತ್ನ ಮಾಡಲಾಗಿದೆ.

3) **ಬೆಂಬಲ ಬೆಲೆ:** ಕೃಷಿಗೆ ಸೂಕ್ತವಾದ ಬೆಲೆ ದೊರಕುವಂತಾಗಲೂ ಕೃಷಿ ಬೆಲೆ ಆಯೋಗವನ್ನು ಸ್ಥಾಪಿಸಲಾಯಿತು. ಇದರ ಅಡಿಯಲ್ಲಿ 1964ರಿಂದ ದೇಶದಾದ್ಯಂತ ಕೃಷಿ ಬೆಳೆಗಳಿಗೆ ಸೂಕ್ತವಾದ ಬೆಂಬಲ ಬೆಲೆ ನೀಡುವ ನೀತಿಯನ್ನು ಜಾರಿಗೊಳಿಸಲಾಯಿತು. ಕೃಷಿ ಉತ್ಪಾದನೆಗೆ ಉತ್ತೇಜನ ನೀಡುವ ಸಲುವಾಗಿ ಆಹಾರ ಧಾನ್ಯಗಳಿಗೆ ಬೆಂಬಲ ಬೆಲೆಗಳ ಘೋಷಣೆಯನ್ನು ಆರಂಭಿಸಲಾಯಿತು.

4) **ಕೃಷಿ ಯಾಂತ್ರೀಕರಣ ಮತ್ತು ಸುಧಾರಿಸಿದ ಸಲಕರಣೆಗಳು:** ಹಸಿರು ಕ್ರಾಂತಿಯು ಕೃಷಿಯಲ್ಲಿ ನವೀನ ತಂತ್ರಜ್ಞಾನ ಅಳವಡಿಕೆಗೆ ಅಗತ್ಯವಿರುವ ಟ್ರ್ಯಾಕ್ಟರ್, ಕಳೆ ಕೀಳುವ ಯಂತ್ರ, ಫಸಲನ್ನು ಕಟಾವು ಮಾಡುವ ಯಂತ್ರ ಮೊದಲಾದ ಸುಧಾರಿಸಿದ ಕೃಷಿ ಉಪಕರಣಗಳ ಬಳಕೆಗೆ ಹೆಚ್ಚಿನ ಒತ್ತನ್ನು ನೀಡಿತು. ಸಾಗುವಳಿದಾರರು ಸುಧಾರಿಸಿದ ಆದಾನಗಳು ಮತ್ತು ಮೂಲಸೌಕರ್ಯಗಳನ್ನು ಅಳವಡಿಸಿಕೊಳ್ಳುವಂತೆ ಉತ್ತೇಜಿಸಲು ವಿವಿಧ ರಾಜ್ಯಗಳಲ್ಲಿ ಕೃಷಿ ಪೂರಕ ಕೈಗಾರಿಕಾ ನಿಗಮವನ್ನು ಸ್ಥಾಪಿಸಲಾಯಿತು.

5) **ಬಹುಬೆಳೆ ಪದ್ಧತಿ:** ಭಾರತದಲ್ಲಿ ಬಹುಬೆಳೆ ಪದ್ಧತಿ ಕಾರ್ಯಕ್ರಮವನ್ನು ಹಸಿರುಕ್ರಾಂತಿಯ ಮುಖಾಂತರ ಪರಿಚಯಿಸಲಾಯಿತು. ಇದರ ಮುಖ್ಯ ಉದ್ದೇಶ ರೈತರು ತಮ್ಮ ಹೊಲದಲ್ಲಿ ಒಂದು ವರ್ಷದಲ್ಲಿ ಮೂರು

ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಬೆಳೆಯುವ ಮೂಲಕ ಉತ್ಪಾದನೆಯನ್ನು ಹೆಚ್ಚಿಸುವುದಾಗಿದೆ. ಇದು ಉತ್ಪಾದನೆಯಲ್ಲಿ ಹೆಚ್ಚಳವಲ್ಲದೇ ರೈತರಿಗೆ ಸಾಕಷ್ಟು ಆದಾಯವನ್ನು ತಂದುಕೊಡುತ್ತದೆ.

6) **ಸಸ್ಯ ಸಂರಕ್ಷಣಾ ವಿಧಾನಗಳು:** ಸಸ್ಯ ಸಂರಕ್ಷಣೆಯು ನವೀನ ಕೃಷಿ ತಂತ್ರಜ್ಞಾನದ ಮತ್ತೊಂದು ಪ್ರಮುಖ ವಿಧಾನವಾಗಿದೆ. ರೋಗ ಮತ್ತು ಕ್ರಿಮಿಕೀಟಗಳು ಬೆಳೆಯ ನಷ್ಟಕ್ಕೆ ಕಾರಣವಾಗುತ್ತದೆ. ಹಸಿರುಕ್ರಾಂತಿ ಕಾರ್ಯಕ್ರಮವು ಬೀಜಗಳ ಸಂರಕ್ಷಣೆ ಮತ್ತು ಬೆಳೆ ಸಂರಕ್ಷಣೆಗೆ ಬೇಕಾದ ಕ್ರಿಮಿನಾಶಕ ಮತ್ತು ಕೀಟನಾಶಕಗಳ ಬಳಕೆಯನ್ನು ಒಳಗೊಂಡಿದೆ.

7) **ಸಾಲ ಸೌಲಭ್ಯಗಳು:** ರೈತರಿಗೆ ಅಗತ್ಯವಿರುವ ಸಾಕಷ್ಟು ಪ್ರಮಾಣದ ಹಣಕಾಸನ್ನು ಕಡಿಮೆ ಬಡ್ಡಿದರದಲ್ಲಿ ಸಾಂಸ್ಥಿಕ ಹಣಕಾಸಿನ ಮೂಲಗಳು ಒದಗಿಸುವ ಮೂಲಕ ಕೃಷಿಯಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಗೆ ಸಹಕಾರಿಯಾಗಿದೆ. ಭಾರತದಲ್ಲಿ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕೃಷಿಗೆ ಅಗತ್ಯವಿರುವ ಹಣಕಾಸನ್ನು ಒದಗಿಸುವುದರಲ್ಲಿ ನಿರತವಾಗಿವೆ.

8) **ಮಣ್ಣಿನ ಸಂರಕ್ಷಣೆ:** ಹಸಿರು ಕ್ರಾಂತಿಯನ್ನು ವಿಸ್ತರಿಸಲು ಮೊದಲಿಗೆ ಮಣ್ಣಿನ ಸವೆತವನ್ನು ತಡೆಗಟ್ಟುವುದು ನಂತರ ಶುಷ್ಕ ಭೂಮಿಯನ್ನು ಹಾಗೂ ಬಂಜರು ಭೂಮಿಯಲ್ಲಿ ಸಾಗುವಳಿ ಮಾಡಲು ಉತ್ತೇಜಿಸುವುದು. ಈ ಮೂಲಕ ಸಾಗುವಳಿ ಮಾಡಬಹುದಾದ ಪ್ರದೇಶವನ್ನು ವಿಸ್ತರಿಸುವುದಾಗಿದೆ.

9) **ಮಾರುಕಟ್ಟೆ ಸೌಲಭ್ಯಗಳು:** ಪ್ರಾರಂಭದಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಅನಿಯಂತ್ರಿತ ಮಂಡಿಗಳಲ್ಲಿ, ಜಾತ್ರೆಗಳಲ್ಲಿ ಮಾರಾಟ ಮಾಡುತ್ತಿದ್ದು, ಮಧ್ಯವರ್ತಿಗಳ ದೆಸೆಯಿಂದಾಗಿ ಸೂಕ್ತವಾದ ಬೆಲೆ ಸಿಗುತ್ತಿರಲಿಲ್ಲ. ಕೃಷಿ ಮಾರುಕಟ್ಟೆ ವ್ಯವಸ್ಥೆಯು ಹಲವಾರು ದೋಷಗಳಿಂದ ಕೂಡಿತ್ತು. ಕ್ರಮಬದ್ಧವಾದ ನಿಯಂತ್ರಿತ ಮಾರುಕಟ್ಟೆ ಹಾಗೂ ಸಹಕಾರಿ ಮಾರುಕಟ್ಟೆಗಳ ಸ್ಥಾಪನೆಯಿಂದ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನ ಮಾಡಲಾಗಿದೆ.

10) **ಗ್ರಾಮೀಣ ವಿದ್ಯುದೀಕರಣ:** ಕೃಷಿ ವಲಯಕ್ಕೆ ವಿದ್ಯುತ್‌ನ್ನು ಸಮರ್ಪಕವಾಗಿ ಪೂರೈಸುವ ಸಲುವಾಗಿ ಗ್ರಾಮೀಣ ವಿದ್ಯುದೀಕರಣ ನಿಗಮವನ್ನು ಸ್ಥಾಪಿಸಲಾಯಿತು. 1950–51 ರಲ್ಲಿ ಕೇವಲ 3000 ಹಳ್ಳಿಗಳಲ್ಲಿ ಮಾತ್ರ ವಿದ್ಯುತ್ ಸಂಪರ್ಕವಿತ್ತು. ಅದು 2014ರವೇಳೆಗೆ 5.32 ಲಕ್ಷ ಹಳ್ಳಿಗಳಿಗೆ ವಿಸ್ತೃತವಾಯಿತು. ಇದರಿಂದ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಾದ ಕೊಳವೆ ಬಾವಿ, ಪಂಪ್ ಸೆಟ್, ಹನಿ ನೀರಾವರಿ, ತುಂತುರು ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ. ಈ ಮೂಲಕ ಕೃಷಿ ಉತ್ಪಾದನೆ ಹೆಚ್ಚಳಕ್ಕೆ ನೆರವಾಗಿದೆ.

ಒಟ್ಟಾರೆಯಾಗಿ ಹಸಿರುಕ್ರಾಂತಿಯ ಪ್ರಗತಿಯಿಂದ ಸಾಗುವಳಿ ಮಾಡಬಹುದಾದ ಪ್ರದೇಶ ಮತ್ತು ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿತು. ಅಧಿಕ ಇಳುವರಿ ಬಿತ್ತನೆ ಬೀಜಗಳಾದ ಗೋಧಿ, ಭತ್ತ, ಜೋಳ, ಹತ್ತಿ ಹಾಗೂ ಇತರೆ ಎಣ್ಣೆಕಾಳುಗಳ ಇಳುವರಿಯು ದುಪ್ಪಟ್ಟು ಹೆಚ್ಚಳವನ್ನು ಸಾಧಿಸಿತು. ಆದ್ದರಿಂದಲೇ ಹಸಿರುಕ್ರಾಂತಿಯು ಭಾರತದ ಕೃಷಿ ಇತಿಹಾಸದಲ್ಲಿಯೇ ಒಂದು ಮೈಲುಗಲ್ಲಾಗಿದೆ.

## ಹಸಿರು ಕ್ರಾಂತಿಯ ಪ್ರಯೋಜನೆಗಳು

ಹಸಿರು ಕ್ರಾಂತಿಯಿಂದ ಆಗುವ ಪ್ರಯೋಜನಗಳಲ್ಲಿ ಮುಖ್ಯವಾದವುಗಳೆಂದರೆ

1) **ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ:** ಕೃಷಿಯಲ್ಲಿ ಹೊಸ ತಂತ್ರಜ್ಞಾನದ ನೇರ ಪರಿಣಾಮವೆಂದರೆ ಕೃಷಿ ಉತ್ಪಾದನೆಯಲ್ಲಿನ ಶೀಘ್ರ ಹೆಚ್ಚಳವಾಗಿರುವುದು. ಹಸಿರು ಕ್ರಾಂತಿಯ ಅವಧಿಯಲ್ಲಿ ಗೋಧಿ ಮತ್ತು ಅಕ್ಕಿ ಉತ್ಪಾದನೆಯಲ್ಲಿ ಗಮನಾರ್ಹವಾದ ಹೆಚ್ಚಳ ಸಾಧಿಸಲಾಯಿತು. 1960–61ರ ಅವಧಿಯಲ್ಲಿ 11 ದಶಲಕ್ಷ ಟನ್ನುಗಳಷ್ಟು ಇದ್ದ ಗೋಧಿಯ ಉತ್ಪಾದನೆಯು 2013–14ರ ವೇಳೆಗೆ 95.8 ದಶಲಕ್ಷ ಟನ್ನುಗಳಿಗೆ ಹೆಚ್ಚಳವಾಯಿತು. ಅದೇ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯ ಪ್ರಮಾಣವು 82 ದಶಲಕ್ಷ ಟನ್ನುಗಳಿಂದ 254 ದಶ ಲಕ್ಷ ಟನ್ನುಗಳಿಗೆ ಹೆಚ್ಚಾಗಿದೆ.

2) **ಕೃಷಿ ಉತ್ಪಾದಕತೆಯಲ್ಲಿನ ಹೆಚ್ಚಳ:** ಕೃಷಿಯಲ್ಲಿ ಸುಧಾರಿಸಿದ ಬಿತ್ತನೆ ಬೀಜಗಳ ಬಳಕೆ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಮತ್ತು ಕ್ರಮಬದ್ಧವಾದ ಹಾಗೂ ಸಮರ್ಪಕವಾದ ನೀರಾವರಿ ಸೌಲಭ್ಯದ ಕಾರಣದಿಂದಾಗಿ ಪ್ರತಿ ಹೆಕ್ಟೇರ್ ಪ್ರದೇಶದಲ್ಲಿನ ಆಹಾರದ ಇಳುವರಿಯ ಪ್ರಮಾಣವು ಹೆಚ್ಚಳವಾಯಿತು. 1960–61ರ ಅವಧಿಯಲ್ಲಿ ಪ್ರತಿ ಹೇಕ್ಟೆರ್ ಪ್ರದೇಶದಲ್ಲಿ 850 ಕೆ.ಜಿ.ಗಳಷ್ಟಿದ್ದ ಗೋಧಿಯ ಉತ್ಪಾದನೆಯ ಪ್ರಮಾಣವು 2013–14 ರವೇಳೆಗೆ 3059 ಕೆ.ಜಿ.ಗಳಿಗೆ ಹೆಚ್ಚಾಯಿತು. ಹಾಗೆಯೇ 1960–61ರ ಅವಧಿಯಲ್ಲಿ ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ 710 ಕಿಲೋ ಗ್ರಾಂಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯ ಪ್ರಮಾಣವು 2013–14ರ ವೇಳೆಗೆ 2059 ಕಿಲೋ ಗ್ರಾಂಗಳಿಗೆ ಹೆಚ್ಚಾಯಿತು.

3) **ಉದ್ಯೋಗಾವಕಾಶಗಳ ಸೃಷ್ಟಿ:** ಆಧುನಿಕ ಕೃಷಿ ತಂತ್ರಜ್ಞಾನದ ಕಾರಣದಿಂದಾಗಿ ಉದ್ಯೋಗಾವಕಾಶಗಳು ಹೆಚ್ಚಾಗಿವೆ. ಸಾಂದ್ರ ಬೇಸಾಯ, ಬಹುಬೆಳೆ ಪದ್ಧತಿ, ನೀರಾವರಿ ಸೌಲಭ್ಯಗಳು, ಮಾರುಕಟ್ಟೆ ಮತ್ತು ಸಾರಿಗೆಯ ಗಾತ್ರದ ವಿಸ್ತರಣೆ ಮುಂತಾದವು ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ.

4) **ಬೆಳೆ ರಚನಾ ಪದ್ಧತಿಯಲ್ಲಿನ ಬದಲಾವಣೆ:** ಹಸಿರು ಕ್ರಾಂತಿಯು ಬೆಳೆ ರಚನಾ ಪದ್ಧತಿಯಲ್ಲಿನ ಮಹತ್ತರ ಬದಲಾವಣೆಗೆ ನೆರವಾಗಿದೆ. ಹಸಿರು ಕ್ರಾಂತಿಯ ಪೂರ್ವದಲ್ಲಿ ರೈತರು ಸಾಮಾನ್ಯವಾಗಿ ಗೋಧಿ, ಭತ್ತ, ಜೋಳ ಹಾಗೂ ಮುಂತಾದ ಆಹಾರ ಬೆಳೆಗಳಿಗೆ ಮಾತ್ರ ಸೀಮಿತವಾಗಿದ್ದು, ಹಸಿರು ಕ್ರಾಂತಿಯ ನಂತರದ ಅವಧಿಯಲ್ಲಿ ರೈತರು ಎಣ್ಣೆಕಾಳು ಬೀಜಗಳು, ವಾಣಿಜ್ಯ ಬೆಳೆಗಳನ್ನು ಬೆಳೆಯುವುದರ ಕಡೆ ಹೆಚ್ಚಿನ ಆಸಕ್ತಿ ವಹಿಸುವ ಮೂಲಕ ಜೀವನಾಧಾರ ಬೇಸಾಯದಿಂದ ವಾಣಿಜ್ಯ ಬೇಸಾಯಕ್ಕೆ ರೈತರು ಹೆಚ್ಚಿನ ಒಲವು ತೋರುತ್ತಿದ್ದಾರೆ.

5) **ರೈತರಿಗೆ ಅಧಿಕ ಆದಾಯ:** ಹಸಿರು ಕ್ರಾಂತಿಯ ತರುವಾಯ ರೈತರ ಆರ್ಥಿಕ ಸ್ಥಿತಿಯು ಉತ್ತಮಗೊಂಡಿದೆ. ಕೃಷಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಾಕಷ್ಟು ಆದಾಯವನ್ನು ಒದಗಿಸುವ ಮೂಲಕ ರೈತರ ಜೀವನ ಮಟ್ಟವನ್ನು ಸುಧಾರಿಸಿದೆ.

6) **ಕೈಗಾರಿಕೆಗಳ ಅಭಿವೃದ್ಧಿ:** ಹಸಿರುಕ್ರಾಂತಿಯು ಕೈಗಾರಿಕೆಗಳ ಮೇಲೆ ಅನುಕೂಲಕರ ಪರಿಣಾಮಗಳನ್ನು ಬೀರಿದೆ. ಕೃಷಿಯಲ್ಲಿ ಯಾಂತ್ರೀಕರಣದ ಅಳವಡಿಕೆಯಿಂದ ಟ್ರ್ಯಾಕ್ಟರ್ ಉತ್ಪಾದಿಸುವ ಘಟಕಗಳು, ರಾಸಾಯನಿಕ ಗೊಬ್ಬರಗಳ ಕಾರ್ಖಾನೆ, ಕ್ರಿಮಿನಾಶಕಗಳ ಕಾರ್ಖಾನೆಗಳು ಹಾಗೂ ವಿವಿಧ ಹೈಬ್ರಿಡ್ ಬೀಜ ತಯಾರಿಸುವ ಕಂಪನಿಗಳು ವಿಸ್ತೃತಗೊಂಡಿವೆ.

## ಹಸಿರು ಕ್ರಾಂತಿಯ ದುಷ್ಪರಿಣಾಮಗಳು

ಹಸಿರು ಕ್ರಾಂತಿಯು ಉತ್ಪನ್ನದಲ್ಲಿ ಹೆಚ್ಚಳ ಮತ್ತು ರೈತರಿಗೆ ಸಾಕಷ್ಟು ಆದಾಯವನ್ನು ಸೃಷ್ಟಿ ಮಾಡುವ ಮೂಲಕ ಗ್ರಾಮೀಣ ಪ್ರದೇಶಗಳ ಸಂರಚನೆಯನ್ನು ಬದಲಿಸಿತು. ಆದರೆ ಹಸಿರು ಕ್ರಾಂತಿಯು ದುಷ್ಪರಿಣಾಮಗಳನ್ನು ಕೂಡ ಬೀರಿದೆ. ಅವುಗಳಲ್ಲಿ ಪ್ರಮುಖವಾಗಿ;

1) **ವೈಯಕ್ತಿಕ ಅಸಮಾನತೆ:** ಹಸಿರು ಕ್ರಾಂತಿಯು ಗ್ರಾಮೀಣ ವಲಯದ ಆರ್ಥಿಕತೆಯಲ್ಲಿ ಎರಡು ಬಗೆಯ ರೈತ ವರ್ಗವನ್ನು ಸೃಷ್ಟಿಸಿ ಅವರ ನಡುವೆ ಆದಾಯ ಆಸಮಾನತೆಯ ಕಂದಕವನ್ನು ಹೆಚ್ಚು ಮಾಡಿದೆ. ಅವರೆಂದರೆ 1) ಶ್ರೀಮಂತ ರೈತರು – ಸಾಮಾನ್ಯವಾಗಿ ಮಧ್ಯಮ ಹಾಗೂ ದೊಡ್ಡ ಭೂ ಹಿಡುವಳಿದಾರರು 2) ಬಡರೈತರು ಹಾಗೂ ಕೃಷಿ ಕಾರ್ಮಿಕರು – ಸಾಮಾನ್ಯವಾಗಿ ಅತಿ ಸಣ್ಣ ಹಾಗೂ ಸಣ್ಣ ಭೂ ಹಿಡುವಳಿದಾರರು ಹಾಗೂ ಕೃಷಿ ಕಾರ್ಮಿಕರು. ಏಕೆಂದರೆ ಹಸಿರು ಕ್ರಾಂತಿಯ ಬಹುಪಾಲು ಪ್ರಯೋಜನ ಪಡೆದವರೆಂದರೆ ದೊಡ್ಡ ಭೂ ಹಿಡುವಳಿದಾರರಾಗಿದ್ದಾರೆ. ಕೃಷಿಯಲ್ಲಿ ಯಾಂತ್ರೀಕರಣಕ್ಕೆ ಬೇಕಾದ ಸೌಲಭ್ಯಗಳಾದ ನೀರಾವರಿ ಸೌಲಭ್ಯ, ಕೃಷಿ ಹಣಕಾಸು ಮುಂತಾದವು ಸುಲಭವಾಗಿ ದೊಡ್ಡ ರೈತರಿಗೆ ಲಭ್ಯವಾಯಿತು.

2) **ಸೀಮಿತ ಹರಡುವಿಕೆ:** ಹಸಿರುಕ್ರಾಂತಿಯು ಭತ್ತ ಮತ್ತು ಗೋಧಿ ಬೆಳೆಗಳಿಗೆ ಮಾತ್ರ ಸೀಮಿತವಾಗಿತ್ತು. ಕೃಷಿಯಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆ, ಅಧಿಕ ಇಳುವರಿ ಬಿತ್ತನೆ ಬೀಜಗಳನ್ನು 1966–67ರಲ್ಲಿ ಕೇವಲ 1.98 ದಶಲಕ್ಷ ಹೇಕ್ಟೇರ್ ಪ್ರದೇಶದಲ್ಲಿ ಮಾತ್ರ ಪ್ರಾರಂಭಿಸಲಾಗಿದ್ದು, ಇದು ಒಟ್ಟು ಬೆಳೆ ಬೆಳೆದ ಪ್ರದೇಶದ ಶೇ. 30ರಷ್ಟಿತ್ತು. ಅದರಲ್ಲೂ ಕೇವಲ ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು.

3) **ಪ್ರಾದೇಶಿಕ ಅಸಮಾನತೆ:** ಹಸಿರು ಕ್ರಾಂತಿಯಿಂದ ಪ್ರಾದೇಶಿಕ ಅಸಮಾನತೆಯೂ ಹೆಚ್ಚಾಯಿತು. ಹಸಿರು ಕ್ರಾಂತಿಯ ಪ್ರಯೋಜನಗಳು ದೇಶದ ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ಹಾಗಾಗಿ ದೇಶದ ಇತರೆ ಭಾಗಗಳಲ್ಲಿ ಹಸಿರು ಕ್ರಾಂತಿಯು ಬೆಳವಣಿಗೆಯ ಲಾಭ ಪಡೆಯಲಾಗಲಿಲ್ಲ. ಪಂಜಾಬ್, ಹರಿಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶಗಳಲ್ಲಿ ಮಾತ್ರ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಗಮನಾರ್ಹ ಹೆಚ್ಚಳ ಸಾಧಿಸಲಾಯಿತು. ಆದರೆ ದೇಶದ ಇತರೆ ಭಾಗಗಳು ಆಹಾರದ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿದ್ದು, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹಸಿರು ಕ್ರಾಂತಿಯಿಂದ ಲಾಭ ಪಡೆದ ಪ್ರದೇಶಗಳನ್ನು ಅವಲಂಬಿಸಬೇಕಾಯಿತು.

4) **ಅಧಿಕ ವೆಚ್ಚ:** ಹಸಿರುಕ್ರಾಂತಿಯ ಅಳವಡಿಕೆಯು ಸಾಂಪ್ರದಾಯಿಕ ಸಾಗುವಳಿ ಪದ್ಧತಿಗಿಂತ ತುಂಬಾ ದುಬಾರಿಯಾದದ್ದು. ಸಾಂಪ್ರದಾಯಿಕ ಪದ್ಧತಿಯಲ್ಲಿ ಭೂಮಿಯನ್ನು ಹೊರತುಪಡಿಸಿದರೆ ಸಾಗುವಳಿಗೆ ಬಳಸುವ ಎತ್ತುಗಳಿಂದ ಹಿಡಿದು ಕಡಿಮೆ ಪ್ರಮಾಣದ ವೆಚ್ಚವನ್ನು ಮಾತ್ರ ಭರಿಸಬೇಕಾಗಿತ್ತು, ಆದರೆ ಆಧುನಿಕ ಕೃಷಿ ಪದ್ಧತಿಯು ತುಂಬಾ ದುಬಾರಿಯಾಗಿದ್ದು, ಅಲ್ಲಿ ರಾಸಾಯನಿಕಗಳು, ಕ್ರಿಮಿನಾಶಕಗಳು ಹಾಗೂ ಹೈಬ್ರಿಡ್ ಬೀಜಗಳ ಕೊಳ್ಳುವಿಕೆಯಿಂದಾಗಿ ಕೃಷಿ ಉತ್ಪಾದನೆಯ ವೆಚ್ಚ ಅಧಿಕವಾಯಿತು. ಆದರೆ ಭಾರತದ ಬಹುತೇಕ ರೈತರು ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಕೃಷಿ ಕಾರ್ಮಿಕರಾಗಿದ್ದು ಕೃಷಿ ಯಾಂತ್ರೀಕರಣದ ಸೌಲಭ್ಯಗಳನ್ನು ತಮ್ಮ ಕೃಷಿ ಭೂಮಿಯಲ್ಲಿ ಅಳವಡಿಸಿಕೊಳ್ಳಲು ಹೆಚ್ಚಿನ ವೆಚ್ಚ ಭರಿಸಲಾಗಲಿಲ್ಲ.

5) **ಬಂಡವಾಳಶಾಹಿ ಕೃಷಿ ಪದ್ಧತಿಯ ಬೆಳವಣಿಗೆ:** ಕೃಷಿಯಲ್ಲಿ ನವೀನ ತಂತ್ರಜ್ಞಾನವು ಬಂಡವಾಳಶಾಹಿ ಕೃಷಿ ಪದ್ಧತಿಯನ್ನು ಉತ್ತೇಜಿಸುತ್ತದೆ. ಏಕೆಂದರೆ ನವೀನ ತಂತ್ರಜ್ಞಾನವು ಬೀಜಗಳು, ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳು, ಯಂತ್ರಗಳ ಮೇಲೆ ಹೆಚ್ಚಿನ ಹೂಡಿಕೆಯ ಅಗತ್ಯವಿರುತ್ತದೆ. ದೊಡ್ಡ ಪ್ರಮಾಣದ ರೈತರು ಇದರ ಲಾಭಗಳನ್ನು ಪಡೆಯುವ ಮೂಲಕ ಹೊಸ ಬಂಡವಾಳಶಾಹಿ ಕೃಷಿ ಪದ್ಧತಿಯ ಅಸ್ತಿತ್ವಕ್ಕೆ ಕಾರಣವಾಗುತ್ತದೆ.

6) **ಗಂಡಾಂತರದ ಸಾಧ್ಯತೆ ಹೆಚ್ಚು:** ಕೃಷಿಯಲ್ಲಿನ ಹೊಸ ತಂತ್ರಜ್ಞಾನವು ಸಾಂಪ್ರಾದಾಯಿಕ ಸಾಗುವಳಿ ವಿಧಾನಕ್ಕಿಂತ ಹೆಚ್ಚು ಗಂಡಾಂತರ ಅನಿಶ್ಚಿತತೆಯಿಂದ ಕೂಡಿರುತ್ತದೆ. ಉದಾಹರಣೆಗೆ ಒಂದು ವೇಳೆ ನೀರಾವರಿ ಪೂರೈಕೆಯಲ್ಲಿ ಹೆಚ್ಚಳ ಅಥವಾ ಕೊರತೆ ಉಂಟಾದಾಗ ಅದು ಬೆಳೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ. ಈ ಪದ್ಧತಿಯಲ್ಲಿ ಸಸ್ಯಗಳಿಗೆ ಮತ್ತು ಬೀಜಗಳಿಗೆ ಸಮರ್ಪಕವಾಗಿ ಮತ್ತು ಕ್ರಮಬದ್ಧವಾಗಿ ಕಾಲಕ್ಕೆ ಸರಿಯಾಗಿ ಕ್ರಿಮಿನಾಶಕಗಳನ್ನು ಸಿಂಪಡಿಸದಿದ್ದರೆ ಬೆಳೆ ನಷ್ಟವಾಗುತ್ತದೆ. ಹೀಗೆ ಆಧುನಿಕ ಕೃಷಿ ಪದ್ಧತಿಯು ಹೆಚ್ಚು ಅನಿಶ್ಚಿತತೆಗಳನ್ನು ಒಳಗೊಂಡಿರುವುದರಿಂದ ಗಂಡಾಂತರದ ಸಾಧ್ಯತೆ ಹೆಚ್ಚಿದೆ.

7) **ಆರೋಗ್ಯಕ್ಕೆ ಹಾನಿಕರ:** ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳವು ಬೆಳೆಯುತ್ತಿರುವ ಜನಸಂಖ್ಯೆಗೆ ಹಸಿರು ಕ್ರಾಂತಿಯ ಅಗತ್ಯತೆಯನ್ನು ತೋರಿಸುತ್ತದೆ. ಆದರೆ ಇದು ಎಲ್ಲ ಬಗೆಯ ಪೋಷಕಾಂಶಗಳನ್ನು ಪೂರೈಸುವುದಿಲ್ಲ. ಭಾರತದಲ್ಲಿ ಪ್ರೊಟೀನ್‌ನ ತಲಾ ಲಭ್ಯತೆಯು ಅತಿ ಕಡಿಮೆಯಿದೆ. ಭಾರತದ ಮೂರು ಜನರಲ್ಲಿ ಒಬ್ಬರು ಕಡಿಮೆ ಮಟ್ಟದ ಪ್ರೊಟೀನ್‌ನ್ನು ಸೇವಿಸುತ್ತಿದ್ದಾರೆ. ಅಲ್ಲದೇ ಆಧುನಿಕ ಕೃಷಿಯಲ್ಲಿ ಬಳಸುತ್ತಿರುವ ರಾಸಾಯನಿಕಗಳಿಂದ ಹಲವಾರು ಅನಾರೋಗ್ಯಗಳು ಕಂಡುಬಂದಿವೆ. ಉದಾಹರಣೆಗೆ ಕೇರಳದ ಕಾಸರಗೋಡಿನ ತೋಟಗಳಲ್ಲಿ ಬಳಸುವ ಎಂಡೋಸಲ್ಫಾನ್ ಕ್ರಿಮಿನಾಶಕವು ಅಲ್ಲಿನ ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

8) **ಪರಿಸರ ಮಾಲಿನ್ಯ:** ಆಧುನಿಕ ಕೃಷಿ ಪದ್ಧತಿಯಲ್ಲಿ ಅಧಿಕ ಉತ್ಪಾದನೆಯನ್ನು ಪಡೆಯುವ ಸಲುವಾಗಿ ಅಗತ್ಯಕ್ಕಿಂತ ಹೆಚ್ಚಿನ ಕ್ರಿಮಿನಾಶಕಗಳನ್ನು ಬಳಸುವುದರಿಂದ ಭೂಮಿಯು ತನ್ನ ಸತ್ವವನ್ನು ಕ್ರಮೇಣವಾಗಿ

ಕಳೆದುಕೊಳ್ಳುತ್ತದೆ, ಬಂಜರು ಭೂಮಿಯಾಗಿ ಪರಿವರ್ತನೆ ಹೊಂದುತ್ತದೆ. ಇದಲ್ಲದೇ ಸಾಕಷ್ಟು ಸ್ಥಳೀಯ ಸ್ವಾಭಾವಿಕ ಜೈವಿಕ ಪ್ರಭೇಧಗಳ ನಾಶಕ್ಕೂ ಕಾರಣವಾಗುತ್ತದೆ. ಉದಾಹರಣೆಗೆ ಕ್ರಿಮಿನಾಶಕಗಳ ಹೆಚ್ಚಿನ ಬಳಕೆಯಿಂದಾಗಿ ಜೀರುಂಡೆಯಂತಹ ಕೀಟಗಳು ಇಲ್ಲವಾಗಿದೆ. ಅದಲ್ಲದೇ ರೈತನ ಮಿತ್ರ ಎಂದೇ ಕರೆಯಲ್ಪಡುವ ಎರೆಹುಳು ಇಂದು ವಿನಾಶದ ಅಂಚಿನಲ್ಲಿವೆ.

## ಎರಡನೇ ಹಸಿರು ಕ್ರಾಂತಿ

ಜನಸಂಖ್ಯೆಯ ಬೆಳವಣಿಗೆ ದರಕ್ಕಿಂತ ಅಧಿಕ ದರದಲ್ಲಿ ಆಹಾರ ಉತ್ಪಾದನೆ ಮಾಡುವುದು ಹಾಗೂ ಆಹಾರ ಧಾನ್ಯಗಳನ್ನು ಮತ್ತು ಇತರ ಪದಾರ್ಥಗಳನ್ನು ರಫ್ತು ಮಾಡಿ ಇನ್ನೂ ಹೆಚ್ಚಿನ ಲಾಭ ಗಳಿಸಲು ಭಾರತ ಸರ್ಕಾರವು ಎರಡನೇ ಹಸಿರು ಕ್ರಾಂತಿಗೆ ಸಜ್ಜಾಗುತ್ತಿದೆ. ಈ ಸಂದರ್ಭದಲ್ಲಿ ಹಸಿರು ಕ್ರಾಂತಿಯನ್ನು ಇನ್ನಷ್ಟು ವ್ಯಾಪಕಗೊಳಿಸಲು ಅಳವಡಿಸಿಕೊಳ್ಳಬಹುದಾದ ಪ್ರಮುಖ ಸಲಹೆಗಳೆಂದರೆ:

1) **ಎಲ್ಲಾ ಆಹಾರ ಮತ್ತು ಆಹಾರೇತರ ಬೆಳೆಗಳಿಗೆ ವಿಸ್ತರಣೆ:** ಆಧುನಿಕ ಸಾಗುವಳಿ ಪದ್ಧತಿಯನ್ನು ಇತರೆ ಆಹಾರ ಮತ್ತು ಆಹಾರೇತರ ಬೆಳೆಗಳಾದ ಎಣ್ಣೆಕಾಳು, ಹತ್ತಿ, ಕಬ್ಬು, ಸೆಣಬು ಇತ್ಯಾದಿಗಳಿಗೂ ವಿಸ್ತರಿಸುವುದು. ದೇಶದ ಕೆಲವೇ ಪ್ರದೇಶಗಳಿಗೆ ಸೀಮಿತವಾಗಿರುವ ಹೊಸ ಕೃಷಿ ತಂತ್ರಜ್ಞಾನವನ್ನು ಎಲ್ಲಾ ಭಾಗಗಳಿಗೂ ವಿಸ್ತರಿಸುವುದು.

2) **ಸಮರ್ಪಕವಾದ ನೀರಾವರಿ ಸೌಲಭ್ಯವನ್ನು ಸೃಷ್ಟಿಸುವುದು:** ನೀರು ಆಧುನಿಕ ಕೃಷಿ ಪದ್ಧತಿಯ ಮೂಲಾಧಾರವಾಗಿದೆ. ಆದ್ದರಿಂದ ಸರ್ಕಾರಿ ಸಂಸ್ಥೆಗಳು ನೀರಾವರಿ ಮೂಲಗಳನ್ನು ಉತ್ತೇಜಿಸುವ ಯೋಜನೆಗಳನ್ನು ಜಾರಿಗೊಳಿಸುವುದು.

3) **ಮಣ್ಣಿನ ಪರೀಕ್ಷೆ:** ಮಣ್ಣಿನ ಸತ್ವಕ್ಕೆ ತಕ್ಕಂತೆ ಬೀಜ-ಗೊಬ್ಬರಗಳನ್ನು ಬಳಸಲು ಅನುವು ಮಾಡಿಕೊಳ್ಳಲು ಎಲ್ಲ ಜಮೀನಿನ ಮಣ್ಣಿನ ಪರೀಕ್ಷೆಯನ್ನು ಕಾಲಕಾಲಕ್ಕೆ ಮಾಡಿ ಸಂಬಂಧಪಟ್ಟ ರೈತರಿಗೆ ತಿಳಿಸುವುದು.

4) **ಹಸಿರು ಕ್ರಾಂತಿ ವಿಸ್ತರಣೆ:** ಹಸಿರು ಕ್ರಾಂತಿಯನ್ನು ಶುಷ್ಕ ಮತ್ತು ಅರೆ ಶುಷ್ಕ ಹಾಗೂ ಮಳೆಯಾಶ್ರಿತ ಪ್ರದೇಶಗಳಿಗೂ ವಿಸ್ತರಿಸುವುದು.

5) **ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆ:** ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸುಲಭವಾಗಿ ಮತ್ತು ಸಮರ್ಪಕವಾಗಿ ಕೃಷಿ ಆದಾನಗಳನ್ನು ಪೂರೈಸುವುದು. ಇವರನ್ನು ಹೊಸ ಕೃಷಿ ತಂತ್ರಜ್ಞಾನದಡಿಯಲ್ಲಿ ತರಲು ಸಾಂಸ್ಥಿಕ ಬದಲಾವಣೆಗಳನ್ನು ತರುವುದು. ಭೂ ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೆ ತರುವುದು.

6) **ಬಹು ಬೆಳೆಗೆ ಪ್ರೋತ್ಸಾಹ:** ದೇಶದಲ್ಲಿ ಸ್ಥಿರ ಉತ್ಪಾದನೆಯನ್ನು ಸಾಧಿಸಲು ಬಹುಬೆಳೆ ಪದ್ಧತಿಯನ್ನು ಅನುಸರಿಸುವಂತೆ ಪ್ರೋತ್ಸಾಹಿಸುವುದು.

7) **ಕೃಷಿ ಸಾಂದ್ರ ತಂತ್ರಜ್ಞಾನ:** ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಸಾಂದ್ರ ತಂತ್ರಜ್ಞಾನವನ್ನು ಪರಿಚಯಿಸುವುದು ಮತ್ತು ಅದನ್ನು ಉಪಯೋಗಿಸಲು ಅನುವಾಗುವಂತೆ ಅವರಿಗೆ ತಜ್ಞರಿಂದ ತರಬೇತಿ ನೀಡುವುದು.

## ಭಾರತದಲ್ಲಿ ನೀರಾವರಿ ವ್ಯವಸ್ಥೆ

ಕೃಷಿಯ ಪ್ರಗತಿಯಲ್ಲಿ ನೀರಾವರಿಗೆ ಅತ್ಯಂತ ಮಹತ್ವಪೂರ್ಣ ಸ್ಥಾನವಿದೆ. ಬೇಸಾಯಕ್ಕೆ ನೀರಾವರಿಯು ಒಂದು ಪ್ರಮುಖ ಆದಾನವಾಗಿದೆ. ಕಾಲುವೆ, ಕೊಳವೆಬಾವಿ, ಕರೆಗಳ ಮೂಲಕ ಕೃಷಿ ಭೂಮಿಗೆ ನೀರು ಹಾಯಿಸುವುದನ್ನು ನೀರಾವರಿ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ನೀರಾವರಿ ಸೌಲಭ್ಯಗಳನ್ನು ಸಮರ್ಪಕವಾಗಿ ಪೂರೈಸದ ಹೊರತು ಕೃಷಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗುವುದಿಲ್ಲ. ನೀರಾವರಿಯ ಕೊರತೆಯು ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತದೆ. ಭಾರತದ ಒಟ್ಟು ಸಾಗವಳಿ ಪ್ರದೇಶದ ಶೇ. 44ರಷ್ಟು ಪ್ರದೇಶ ಮಾತ್ರ ನೀರಾವರಿಗೆ ಒಳಪಟ್ಟಿದ್ದು ಉಳಿದ ಶೇ. 56ರಷ್ಟು ಸಾಗುವಳಿ ಭೂಮಿಯು ಮಳೆಯನ್ನೇ ಆಶ್ರಯಿಸಿದೆ.

ಭಾರತದಲ್ಲಿ ನೀರಾವರಿ ವ್ಯವಸ್ಥೆಯು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತುಂಬಾ ವ್ಯತ್ಯಾಸವಿದೆ. ಭಾರತದಲ್ಲಿ ಹೆಚ್ಚಾಗಿ ಕರೆ–ಕುಂಟೆ, ಕಾಲುವೆ, ಬಾವಿ, ಕೊಳವೆ ಬಾವಿ, ಜಲಾಶಯ, ವಿವಿಧೋದ್ದೇಶ ನೀರಾವರಿಗಳ ಮೂಲಕ ಕೃಷಿ ಚಟುವಟಿಕೆಗಳಿಗೆ ಬಳಸಲಾಗುತ್ತದೆ.

## ನೀರಾವರಿಯ ಅಗತ್ಯತೆ ಮತ್ತು ಮಹತ್ವ

ಭಾರತದಲ್ಲಿ ಮಳೆಯು ಅನಿಶ್ಚಿತತೆ, ಅಕಾಲಿಕ, ವ್ಯತ್ಯಾಸಾತ್ಮಕದಿಂದ ಬೀಳುವುದಲ್ಲದೇ, ಕೆಲವೊಮ್ಮೆ ನಿರ್ದಿಷ್ಟ ಋತುಗಳಲ್ಲಿ ಅಸಮಾನ ಪ್ರಮಾಣದಲ್ಲಿ ಬೀಳುತ್ತದೆ. ಕೆಲವು ಪ್ರದೇಶಗಳಲ್ಲಿ ಅಧಿಕ ಮಳೆಯ ಮೂಲಕ ಪ್ರವಾಹಕ್ಕೆ ಕಾರಣವಾದರೆ, ಇತರೆ ಕೆಲವು ಪ್ರದೇಶಗಳಲ್ಲಿ ಮಳೆಯಾಗದೇ ಅಥವಾ ಅಗತ್ಯಕ್ಕಿಂತ ಕಡಿಮೆ ಮಳೆ ಬೀಳುವ ಮೂಲಕ ಬರಗಾಲಕ್ಕೆ ಕಾರಣವಾಗುತ್ತದೆ. ಇವರಡೂ ಸಮಸ್ಯೆಗಳು ಕೃಷಿ ಪ್ರಗತಿಗೆ ಮಾರಕವಾಗಿದ್ದು, ಅವುಗಳನ್ನು ಹೋಗಲಾಡಿಸಲು ನೀರಾವರಿಯು ಪ್ರಮುಖ ಮೂಲಭೂತ ಸೌಕರ್ಯವಾಗಿದೆ.

ಭಾರತದಲ್ಲಿ ಜನಸಂಖ್ಯೆಯು ನಿರಂತರವಾಗಿ ಏರಿಕೆಯಾಗುತ್ತಿದ್ದು ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಲು ಕೃಷಿಗೆ ನೀರಾವರಿ ಸೌಲಭ್ಯಗಳ ಅಗತ್ಯತೆಯು ಪ್ರಮುಖವಾಗಿದೆ. ನೀರಾವರಿ ಸೌಲಭ್ಯಗಳ ಹೆಚ್ಚಳದಿಂದ ಮಾತ್ರ ಹೊಸ ಅಥವಾ ಇತರೆ ಭೂಮಿಯನ್ನು ಸಾಗುವಳಿಗೆ ಅಳವಡಿಸಲು ಸಾಧ್ಯವಾಗುತ್ತದೆ. ಇದಲ್ಲದೇ ನೀರಾವರಿಯಿಂದ ಬಹುಬೆಳೆಯ ಪದ್ಧತಿಯನ್ನು ಅನುಸರಿಸಲು ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಆ ಮೂಲಕ ಗ್ರಾಮೀಣ ಜನರ ಆದಾಯದಲ್ಲಿ ಹೆಚ್ಚಳವಾಗಿ ಕೃಷಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುತ್ತದೆ.

ಭಾರತದಲ್ಲಿ ಬೆಳೆಯಲಾಗುವ ಪ್ರಮುಖ ಬೆಳೆಗಳಾದ ಭತ್ತ, ಕಬ್ಬು, ಸಣಬು, ಹತ್ತಿ ಮುಂತಾದ ಬೆಳೆಗಳಿಗೆ ಅತಿ ಹೆಚ್ಚಿನ ನೀರಿನ ಅಗತ್ಯತೆ ಇರುತ್ತದೆ. ಒಂದು ಅಂದಾಜಿನ ಪ್ರಕಾರ ಒಂದು ಕಿಲೊ ಗ್ರಾಮ್‌ನಷ್ಟು ಭತ್ತದ ಉತ್ಪಾದನೆಯು 5 ಟನ್ನುಗಳಷ್ಟು ನೀರನ್ನು ಬಳಸಿಕೊಳ್ಳುತ್ತದೆ. ಅಂದರೆ ಒಂದೇ ಭೌಗೋಳಿಕ ಪ್ರದೇಶದಲ್ಲಿ

ಮಳೆಯಾಶ್ರಿತ ಬೆಳೆಗಳನ್ನು ಬೆಳೆಯುವುದಕ್ಕೆ ಬಳಸಿದ್ದ ನೀರಿಗಿಂತ ಶೇ. 50ರಿಂದ ಶೇ. 100ರಷ್ಟು ಹೆಚ್ಚಿನ ಪ್ರಮಾಣದ ನೀರನ್ನು ನೀರಾವರಿ ಬೆಳೆಗಳನ್ನು ಬೆಳೆಯಲು ಬಳಸಲಾಗುತ್ತದೆ.

1960ರ ದಶಕದ ಮಧ್ಯದ ನಂತರ ಭಾರತವು ಕೃಷಿಯಲ್ಲಿ ಹಸಿರು ಕ್ರಾಂತಿಯ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹಸಿರು ಕ್ರಾಂತಿ ಸಾಧಿಸಿತ್ತು. ಅದನ್ನು ಸಾಧ್ಯವಾಗಿಸಿದ್ದ ಅಧಿಕ ಇಳುವರಿಯ ಬಿತ್ತನೆ ಬೀಜಗಳು, ಅಧಿಕ ರಾಸಾಯನಿಕಗಳು, ಕ್ರಿಮಿನಾಶಕಗಳ ಬಳಕೆಗೆ ನೀರಾವರಿಯು ಅತ್ಯಂತ ಪ್ರಮುಖ ಆದಾನವಾಗಿದೆ.

## ಭಾರತದಲ್ಲಿ ನೀರಾವರಿಯ ಪ್ರಮುಖ ಮೂಲಗಳು

ಭಾರತದಲ್ಲಿ ಲಭ್ಯವಿರುವ ಮೇಲ್ಮೈಜಲ, ಅಂತರ್ಜಲದ ಮೂಲಕ ಕೃಷಿಗೆ ನೀರಾವರಿಯನ್ನು ಬಳಸಲಾಗುತ್ತದೆ. ಅವುಗಳಲ್ಲಿ ಕಾಲುವೆಗಳು, ಬಾವಿಗಳು, ಕೆರೆಗಳು, ಆಧುನಿಕ ನೀರಾವರಿ ಪದ್ಧತಿಗಳು ಪ್ರಮುಖವು.

**1) ಕೆರೆಗಳು:** ಪ್ರಾಚೀನ ಕಾಲದಿಂದಲೂ ಕೆರೆಗಳು ನೀರಾವರಿಯ ಪ್ರಮುಖ ಮೂಲವಾಗಿದೆ. ಮಳೆಯ ಕೊರತೆಯ ಸಂದರ್ಭದಲ್ಲಿ ಕೆರೆಯ ನೀರನ್ನು ಕೃಷಿ ಭೂಮಿಗೆ ಬಳಸಲಾಗುತ್ತದೆ. ಭಾರತದಲ್ಲಿ ದಖ್ಖನ್ ಪ್ರಸ್ಥಭೂಮಿ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ ಕರೆಗಳನ್ನು ನೀರಾವರಿಯ ಮೂಲಗಳಾಗಿ ಸಾಮಾನ್ಯವಾಗಿ ಬಳಸಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೊಳವೆ ಬಾವಿಗಳ ಅತಿಯಾದ ಬಳಕೆಯಿಂದ ಕೆರೆಗಳನ್ನು ನಿರ್ಲಕ್ಷಿಸಿ ಕೆರೆಗಳಲ್ಲಿ ಹೂಳು ತೆಗೆಯದೇ ಅವುಗಳು ನಶಿಸಲಾರಂಭಿಸಿವೆ. ಸರ್ಕಾರವು ಕೆರೆಗಳ ಪುನರ್ ನವೀಕರಣಕ್ಕೆ ಹೆಚ್ಚಿನ ಒತ್ತನ್ನು ನೀಡಿದ್ದು, ಹೂಳೆತ್ತುವ ಕಾರ್ಯವನ್ನು ಆರಂಭಿಸಿದೆ. ಆ ಮೂಲಕ ಅವುಗಳನ್ನು ನೀರಾವರಿ ಯೋಗ್ಯವನ್ನಾಗಿ ಮಾಡುವ ಕಾರ್ಯ ನಿರ್ವಹಿಸುತ್ತಿದೆ. ಒಟ್ಟು ನೀರಾವರಿ ಕೃಷಿ ಭೂ ಪ್ರದೇಶದಲ್ಲಿ ಕೆರೆ ನೀರಾವರಿಯ ಕೊಡುಗೆಯು ಶೇ. 8 ರಷ್ಟಿದೆ.

**2) ಬಾವಿ ನೀರಾವರಿ:** ಬಾವಿಗಳು ಭಾರತದ ಅತ್ಯಂತ ಬಹು ಪುರಾತನವಾದ ನೀರಾವರಿ ಮೂಲವಾಗಿವೆ. ಇವುಗಳು ಹೆಚ್ಚಾಗಿ ಸಮತಟ್ಟಾದ, ಕರಾವಳಿ ಹಾಗೂ ಕೆಲವು ದ್ವೀಪ ಪ್ರದೇಶಗಳಲ್ಲಿ ಕಾಣಬಹುದಾಗಿದೆ. ಇದು ತುಂಬಾ ಕಡಿಮೆ ವೆಚ್ಚದಾಗಿದ್ದು, ಯಾವಾಗ ಅಗತ್ಯವಿರುತ್ತದೋ ಆಗ ಬಳಸಬಹುದಾಗಿರುತ್ತದೆ. ಭಾರತದಲ್ಲಿಯೇ ಅತಿ ಹೆಚ್ಚು ಬಾವಿ ನೀರಾವರಿಯನ್ನು ಉತ್ತರ ಪ್ರದೇಶವು ಹೊಂದಿದ್ದು ನಂತರದ ಸ್ಥಾನದಲ್ಲಿ ಕ್ರಮವಾಗಿ ಪಂಜಾಬ್, ಹರಿಯಾಣ, ಬಿಹಾರ, ಗುಜರಾತ್ ಮತ್ತು ಆಂಧ್ರಪ್ರದೇಶಗಳು ಇವೆ.

ಬಾವಿ ನೀರಾವರಿಯಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ 1) ತೆರೆದ ಬಾವಿ ಮತ್ತು 2) ಕೊಳವೆ ಬಾವಿ. ತೆರೆದ ಬಾವಿಗಳಿಂದ ನೀರಿನ ಲಭ್ಯತೆಯ ಪ್ರಮಾಣ ಕಡಿಮೆಯಿರುವುದರಿಂದ ಕಡಿಮೆ ಪ್ರಮಾಣದ ಭೂಮಿಯಲ್ಲಿ ಸಾಗುವಳಿ ಮಾಡಬಹುದಾಗಿದೆ. ಬಾವಿ ನೀರನ್ನು ರಾಟೆಗಳ ಸಹಾಯದಿಂದ ಅಥವಾ ಎತ್ತುಗಳ ಸಹಾಯದಿಂದ ನೀರನ್ನು ಕೃಷಿ ಭೂಮಿಗೆ ಹಾಯಿಸಲಾಗುತ್ತದೆ.

ಕೊಳವೆ ಬಾವಿಗಳು ಅತಿ ಹೆಚ್ಚು ಆಳದ ಮತ್ತು ಹೆಚ್ಚಿನ ಅಂತರ್ಜಲ ನೀರನ್ನು ಬಳಸಲು ಅನುವು ಮಾಡಿಕೊಡುತ್ತದೆ. ಇತ್ತೀಚಿನ ದಿನಗಳಲ್ಲಿ ಕೃಷಿ ಭೂಮಿಗೆ ನೀರನ್ನು ಒದಗಿಸುವ ಪ್ರಮುಖ ನೀರಾವರಿಯ ಮೂಲವಾಗಿ ಬಹುತೇಕ ದೇಶದ ಎಲ್ಲಾ ಪ್ರದೇಶಗಳಲ್ಲೂ ಇಂದು ಕೊಳವೆ ನೀರಾವರಿಯು ಅಭಿವೃದ್ಧಿಗೊಂಡಿದೆ. ಸುಮಾರು 200ರಿಂದ 1500 ಅಡಿಗಳವರೆಗೆ ಭೂಮಿಯನ್ನು ಕೊರೆದು, ಯಂತ್ರವನ್ನು ಅಳವಡಿಸಿ ನೀರನ್ನು ಹೊರತೆಗೆದು ಕೃಷಿ ಭೂಮಿಗೆ ಹಾಯಿಸಲಾಗುತ್ತದೆ. ಸಾಮಾನ್ಯವಾಗಿ ಕೊಳವೆ ಬಾವಿಯಿಂದ ನೀರಾವರಿ ಬೆಳೆಗಳನ್ನು ಅಂದರೆ ತೋಟದ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಬಳಸಲಾಗುತ್ತದೆ.

ಕೃಷಿಕರು ತಮ್ಮ ಸಾಗುವಳಿ ಭೂಮಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಸಲು ಸರ್ಕಾರ ಹಾಗೂ ಇತರೆ ಕೃಷಿ ಅಭಿವೃದ್ಧಿ ಸಂಸ್ಥೆಗಳು ಹಣಕಾಸಿನ ಸಹಾಯವನ್ನು ಮತ್ತು ಸಹಾಯಧನವನ್ನು ಒದಗಿಸುತ್ತವೆ. ಭಾರತದ ಒಟ್ಟು ನೀರಾವರಿಯಲ್ಲಿ ತೆರೆದ ಬಾವಿ ಮತ್ತು ಕೊಳವೆ ಬಾವಿಗಳ ಕೊಡುಗೆಯು ಶೇ 58.7ರಷ್ಟಿದೆ.

**3)ಕಾಲುವೆಗಳು:** ಕಾಲುವೆಗಳು ನೀರಾವರಿಯ ಮತ್ತೊಂದು ಪ್ರಮುಖ ಮೂಲವಾಗಿದೆ. ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ನೀರನ್ನು ಜಲಾಶಯಗಳಲ್ಲಿ ಸಂಗ್ರಹಿಸಿ ಕಾಲುವೆಗಳ ಮೂಲಕ ಕೃಷಿ ಭೂಮಿಗೆ ಹಾಯಿಸಲಾಗುತ್ತದೆ. ಭಾರತವು ಸಾಕಷ್ಟು ನದಿಗಳನ್ನು ಹೊಂದಿದ್ದು ನದಿಯ ನೀರನ್ನು ಸಮರ್ಪಕವಾಗಿ ಬಳಸಲು ಜಲಾಶಯವನ್ನು ಕಟ್ಟಲಾಗುತ್ತದೆ ಹಾಗೂ ಕಾಲುವೆಗಳ ಮೂಲಕ ಹೊಲ ಗದ್ದೆಗಳಿಗೆ ಹಾಯಿಸಲಾಗುತ್ತದೆ. ಆದ್ದರಿಂದಲೇ ಕಾಲುವೆ ನೀರಾವರಿಯು ಭಾರತದ ನೀರಾವರಿಯ ವ್ಯವಸ್ಥೆಯಲ್ಲೇ ಪ್ರಮುಖ ಪ್ರಾಶಸ್ತ್ಯ ಹೊಂದಿದೆ. ಭಾರತದ ಒಟ್ಟು ನೀರಾವರಿಯಲ್ಲಿ ಕಾಲುವೆ ನೀರಾವರಿಯ ಕೊಡುಗೆಯು ಶೇ 31.5ರಷ್ಟಿದೆ.

**4)ಹನಿ ನೀರಾವರಿ ಮತ್ತು ತುಂತುರು ನೀರಾವರಿ:** ನೀರಾವರಿಯ ಸಮಸ್ಯೆಯನ್ನು ಹೋಗಲಾಡಿಸಲು ಆಧುನಿಕ ನೀರಾವರಿ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಸಾಕಷ್ಟು ಶ್ರಮಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಪದ್ಧತಿಗಳು ಹೆಚ್ಚು ಜನಪ್ರಿಯವಾಗಿವೆ. ಇವುಗಳನ್ನು ಕಿರು ನೀರಾವರಿ ಯೋಜನೆಗಳೆಂತಲೂ ಕರೆಯುತ್ತಾರೆ.

## ಹನಿ ನೀರಾವರಿ

ಹನಿ ನೀರಾವರಿ ಎಂಬುದು ಮಣ್ಣಿನ ಮೇಲ್ಮೈ ಮೇಲೆ ನಿಧಾನವಾಗಿ ಜಿನುಗುವಿಕೆಗೆ ಅವಕಾಶ ನೀಡುವ ಕಿರಿದಾದ ಕೊಳವೆಗಳ ಮೂಲಕ ನೇರವಾಗಿ ಸಸ್ಯಗಳ ಬೇರುಗಳಿಗೆ ನೀರು ಹಾಯಿಸುವುದನ್ನು ಹನಿ ನೀರಾವರಿ ಎನ್ನಲಾಗುತ್ತದೆ. ಸಸ್ಯಗಳಿಗೆ ಅಗತ್ಯವಿರುವಷ್ಟು ಮಾತ್ರವೇ ನೀರು ಮತ್ತು ಪೋಷಕಾಂಶಗಳನ್ನು ನಿರಂತರವಾಗಿ ಪೂರೈಸುವುದರಿಂದ ಸಾಕಷ್ಟು ಪ್ರಮಾಣದ ನೀರು ಮತ್ತು ರಸಗೊಬ್ಬರ ಉಳಿತಾಯವಾಗುತ್ತದೆ. ಈ ಮೂಲಕ ಅಧಿಕ ಇಳುವರಿಯನ್ನು ಸಾಧಿಸಬಹುದಾಗಿದೆ. ಸಾಮಾನ್ಯವಾಗಿ ಈ ನೀರಾವರಿ ಪದ್ಧತಿಯನ್ನು ಎಲ್ಲಾ ರೀತಿಯ ಸಾಲು ಬೆಳೆಗಳಿಗೂ ಹಾಗೂ ತೋಟಗಾರಿಕಾ ಬೆಳೆಗಳಲ್ಲೂ ಅನುಸರಿಸಬಹುದಾಗಿದೆ. ನೀರಿನ ಅಭಾವವಿರುವ ಕಡೆಗಳಲ್ಲಿ ಹನಿ ನೀರಾವರಿ ಪದ್ಧತಿಯು ಹೆಚ್ಚು ಜನಪ್ರಿಯವಾಗಿದೆ.

## ಹನಿ ನೀರಾವರಿಯ ಪ್ರಮುಖ ಪ್ರಯೋಜನಗಳು

ಹನಿ ನೀರಾವರಿಯಿಂದ ಸಾಕಷ್ಟು ಪ್ರಯೋಜನಗಳಿದ್ದು ಅವುಗಳಲ್ಲಿ ಪ್ರಮುಖವಾಗಿ

1) ನಿರ್ದಿಷ್ಟ ಪ್ರದೇಶಕ್ಕೆ ಅಗತ್ಯವಿರುವಷ್ಟು ನೀರನ್ನು ಸಮರ್ಪಕವಾಗಿ ಪೂರೈಸುವ ಮೂಲಕ ನೀರಾವರಿ ಸಮಸ್ಯೆಯನ್ನು ಹೋಗಲಾಡಿಸಬಹುದಾಗಿದೆ.

2) ಸ್ಥಳೀಯ ನೀರಾವರಿಯನ್ನು ಬಳಸುವುದರಿಂದ ರಸಗೊಬ್ಬರ ಮತ್ತು ಪೌಷ್ಠಿಕಾಂಶಗಳ ನಷ್ಟವನ್ನು ತಡೆಗಟ್ಟಬಹುದಾಗಿದೆ.

3) ನೀರಾವರಿಯ ಸಮರ್ಪಕ ನಿರ್ವಹಣೆಯಿಂದ ನೀರಾವರಿಯ ದಕ್ಷತೆ ಹೆಚ್ಚಾಗುತ್ತದೆ ಹಾಗೂ ನೀರಾವರಿ ವೆಚ್ಚದಲ್ಲಿ ಉಳಿತಾಯವಾಗುತ್ತದೆ.

4) ಕುಡಿಯಲು ಯೋಗ್ಯವಲ್ಲದ ಮರುಬಳಕೆಯ ನೀರನ್ನು ಇತರೆ ಕಾರ್ಯಗಳಿಗೆ ಸುರಕ್ಷಿತವಾಗಿ ಬಳಸಬಹುದು.

5) ಮಣ್ಣಿನ ಸವೆತವನ್ನು ತಡೆಗಟ್ಟುತ್ತದೆ.

6) ಸಸ್ಯಗಳಿಗೆ ನೀರಿನ ಹಂಚಿಕೆಯು ಸಮಪ್ರಮಾಣವಾಗಿರುತ್ತದೆ. ಹಾಗೂ ಸಸ್ಯಗಳ ಬುಡದಲ್ಲಿ ನೀರು ನಿಲ್ಲುವಿಕೆಯ ಸಮಸ್ಯೆ ಕಂಡುಬರುವುದಿಲ್ಲ.

7) ಕಳೆಯ ಬೆಳವಣಿಗೆ ಕಡಿಮೆಯಾಗುವುದರಿಂದ ಕೂಲಿಯ ಉಳಿತಾಯವಾಗುತ್ತದೆ.

8) ಈ ವಿಧಾನವನ್ನು ಸಮತಟ್ಟಾದ ಪ್ರದೇಶದಲ್ಲಿಯೂ ಅಲ್ಲದೇ, ಹಳ್ಳ, ಗುಡ್ಡಗಾಡು ಮತ್ತು ಇತರೆ ಪ್ರದೇಶಗಳಲ್ಲಿಯೂ ಬಳಸಬಹುದು.

9) ನೀರಾವರಿ ಆವೃತ್ತ ಪ್ರದೇಶವನ್ನು ಹೆಚ್ಚಿಸಬಹುದು.

## ತುಂತುರು ನೀರಾವರಿ

ನೀರನ್ನು ತಿರುಗುವ ಗಿರಣಿಗಳ ಮೂಲಕ ಮಳೆಯ ರೂಪದಲ್ಲಿ ತುಂತುರು ಹನಿಗಳಾಗಿ ಬೆಳೆಯ ಮೇಲೆ ಸಮನಾಗಿ ಬೀಳುವಂತೆ ಮಾಡುವ ವಿಧಾನಕ್ಕೆ ತುಂತುರು ನೀರಾವರಿ ಎನ್ನುವರು. ಭಾರತದಲ್ಲಿ 1970ರವರೆಗೂ ತುಂತುರು ನೀರಾವರಿ ವ್ಯವಸ್ಥೆಯು ಕೇವಲ ಕಾಫಿ, ಚಹಾ ಹಾಗೂ ನೆಡು ತೋಪು ಬೆಳೆಗಳಿಗೆ ಗುಡ್ಡಗಾಡು ಪ್ರದೇಶಗಳಲ್ಲಿ ಮಾತ್ರ ಬಳಸಲಾಗುತ್ತಿತ್ತು. ಈಗ ಅಂತರ್ಜಲ ಕೊರತೆಯಿರುವ ಹರಿಯಾಣ, ಪಂಜಾಬ್, ರಾಜಸ್ಥಾನ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಗುಜರಾತ್, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಹಂತ ಹಂತವಾಗಿ ತುಂತುರು ನೀರಾವರಿಯನ್ನು ವಿಸ್ತರಿಸಲಾಯಿತು. ಭಾರತದಲ್ಲಿ ಅಂದಾಜು 10 ದಶಲಕ್ಷ ಹೆಕ್ಟೇರ್ ಪ್ರದೇಶವು ತುಂತುರು ನೀರಾವರಿಯಿಂದ ಆವೃತ್ತವಾಗಿದೆ. ತುಂತುರು ನೀರಾವರಿಯ ಅಳವಡಿಕೆಯಿಂದ ಇತರೆ ಮೇಲ್ಮೈ

ನೀರಾವರಿಗೆ ಹೋಲಿಸಿದಂತೆ ಶೇ. 50ರಷ್ಟು ನೀರಿನ ಉಳಿತಾಯ ಹಾಗೂ ಶೇ. 15ರಿಂದ 25ರಷ್ಟು ಉತ್ಪಾದಕತೆಯ ಹೆಚ್ಚಳವನ್ನು ಸಾಧಿಸಬಹುದು.

## ತುಂತುರು ನೀರಾವರಿಯ ಪ್ರಯೋಜನಗಳು

ತುಂತುರು ನೀರಾವರಿಯ ಪ್ರಮುಖ ಪ್ರಯೋಜನಗಳೆಂದರೆ:

1) ಭತ್ತ, ಸೆಣಬು ಬೆಳೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ರೀತಿಯ ಬೆಳೆಗಳಿಗೂ ತುಂತುರು ನೀರಾವರಿ ಸೂಕ್ತವಾಗಿದೆ. ತರಕಾರಿಗಳು, ಕಾಫಿ, ಚಹಾ, ತೋಟದ ಬೆಳೆಗಳು, ಹೂ ಬಿಡುವ ಬೆಳೆಗಳಿಗೂ ತುಂತುರು ನೀರಾವರಿಯನ್ನು ಅಳವಡಿಸಿಕೊಳ್ಳಬಹುದಾಗಿದೆ.

2) ಈ ನೀರಾವರಿ ಪದ್ಧತಿಯು ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಪರಿಣಾಮಕಾರಿ ಬಳಕೆಗೆ ಅನುವು ಮಾಡಿಕೊಡುತ್ತದೆ.

3) ಒಟ್ಟಾರೆ ಕೂಲಿಯ ವೆಚ್ಚವನ್ನು ಕಡಿಮೆಗೊಳಿಸುತ್ತದೆ.

4) ಮೇಲ್ಮೈ ನೀರಾವರಿಗೆ ಬದಲಾಗಿ ಬಳಸುವುದರಿಂದ ಮಣ್ಣಿನ ಸವೆತವನ್ನು ತಡೆಗಟ್ಟಬಹುದು.

5) ನೀರಾವರಿಗೆ ಒಳಪಟ್ಟ ಪ್ರದೇಶವನ್ನು ಈ ನೀರಾವರಿ ಪದ್ಧತಿಯಿಂದ ವಿಸ್ತರಿಸಬಹುದು.

## ನೀರಾವರಿ ಯೋಜನೆಯ ವಿಧಗಳು

ಭಾರತದಲ್ಲಿ ಕೃಷಿಗೆ ಅಗತ್ಯವಿರುವ ನೀರಾವರಿಯನ್ನು ಒದಗಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಇಂತಹ ನೀರಾವರಿ ಯೋಜನೆಗಳನ್ನು ಭಾರತದ ಯೋಜನಾ ಆಯೋಗವು ಸಾಗುವಳಿ ಮಾಡಬಹುದಾದ ಪ್ರದೇಶಗಳ ಆಧಾರದ ಮೇಲೆ ಮೂರು ಪ್ರಕಾರಗಳಾಗಿ ವಿಂಗಂಡಿಸಿದೆ. ಅವುಗಳೆಂದರೆ

**1)** **ಸಣ್ಣ ನೀರಾವರಿ ಯೋಜನೆ:** 2000 ಹೆಕ್ಟೇರ್‌ಗಿಂತ ಕಡಿಮೆ ಸಾಗುವಳಿ ಮಾಡಬಹುದಾದ ಕೃಷಿ ಭೂಮಿಗೆ ನೀರಾವರಿಯನ್ನು ಒದಗಿಸುವ ಸಾಮರ್ಥ್ಯ ಹೊಂದಿರುವ ಯೋಜನೆಗಳಿಗೆ ಸಣ್ಣ ನೀರಾವರಿ ಯೋಜನೆ ಎಂದು ಕರೆಯಲಾಗುತ್ತದೆ.

**2)** **ಮಧ್ಯಮ ಪ್ರಮಾಣದ ನೀರಾವರಿ ಯೋಜನೆ:** 2000 ಹೆಕ್ಟೇರ್‌ನಿಂದ 10,000 ಹೆಕ್ಟೇರ್ ಸಾಗುವಳಿ ಮಾಡಬಹುದಾದ ಕೃಷಿ ಭೂಮಿಗೆ ನೀರಾವರಿಯನ್ನು ಒದಗಿಸುವ ಸಾಮರ್ಥ್ಯ ಹೊಂದಿರುವ ಯೋಜನೆಗಳಿಗೆ ಮಧ್ಯಮ ಪ್ರಮಾಣದ ನೀರಾವರಿ ಯೋಜನೆ ಎಂದು ಕರೆಯಲಾಗುತ್ತದೆ.

**3)** **ಬೃಹತ್ ಪ್ರಮಾಣದ ನೀರಾವರಿ ಯೋಜನೆ:** 10,000 ಹೆಕ್ಟೇರ್‌ಗಿಂತ ಹೆಚ್ಚಿನ ಸಾಗುವಳಿ ಮಾಡಬಹುದಾದ ಕೃಷಿ ಭೂಮಿಗೆ ನೀರಾವರಿಯನ್ನು ಒದಗಿಸುವ ಸಾಮರ್ಥ್ಯ ಹೊಂದಿರುವ ಯೋಜನೆಗಳಿಗೆ ಬೃಹತ್ ಪ್ರಮಾಣದ ನೀರಾವರಿ ಯೋಜನೆ ಎಂದು ಕರೆಯಲಾಗುತ್ತದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಬ್ರಿಟಿಷರ ಕಾಲದಲ್ಲಿ ರೈತರೇ ನೇರವಾಗಿ ಕಂದಾಯವನ್ನು ಸರ್ಕಾರಕ್ಕೆ ಕಟ್ಟುತ್ತಿದ್ದ ಪದ್ಧತಿಯನ್ನು ________ಎಂದು ಕರೆಯುತ್ತಾರೆ

   ಅ) ರೈತವಾರಿ  ಆ) ಮಹಲ್ವಾರಿ

   ಇ) ಜಮೀನ್ದಾರಿ  ಈ) ಎಲ್ಲವೂ

2. ಮಧ್ಯವರ್ತಿಗಳ ನಿರ್ಮೂಲನಾ ಕಾನೂನನ್ನು ಜಾರಿಗೆ ತಂದ ಭಾರತದ ಕಡೆಯ ರಾಜ್ಯ________.

   ಅ) ಕರ್ನಾಟಕ  ಆ) ಮಹಾರಷ್ಟ್ರ

   ಇ) ಪಶ್ಚಿಮ ಬಂಗಾಳ  ಈ) ಉತ್ತರ ಪ್ರದೇಶ

3. ಹಸಿರು ಕ್ರಾಂತಿ ಎಂದರೆ________.

   ಅ) ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳ  ಆ) ಹಣ್ಣುಗಳ ಉತ್ಪಾದನೆಯಲ್ಲಿನ ಹೆಚ್ಚಳ

   ಇ) ಹಾಲಿನ ಉತ್ಪಾದನೆಯಲ್ಲಿನ ಹೆಚ್ಚಳ  ಈ) ಮೀನಿನ ಉತ್ಪಾದನೆಯಲ್ಲಿನ ಹೆಚ್ಚಳ

4. ಪ್ರಸ್ತುತ ಕೃಷಿ ಭೂಮಿಗೆ ನೀರನ್ನು ಒದಗಿಸುವ ಪ್ರಮುಖ ನೀರಾವರಿಯ ಮೂಲ________.

   ಅ) ಕೆರೆ  ಆ) ಕಾಲುವೆ

   ಇ) ಮೇಲ್ಮೈ ಬಾವಿ  ಈ) ಕೊಳವೆ ಬಾವಿ

5. ಮಣ್ಣಿನ ಮೇಲ್ಮೈ ಮೇಲೆ ನಿಧಾನವಾಗಿ ಜಿನುಗುವಿಕೆಗೆ ಅವಕಾಶ ನೀಡುವ ಕಿರಿದಾದ ಕೊಳವೆಗಳ ಮೂಲಕ ನೇರವಾಗಿ ಸಸ್ಯಗಳ ಬೇರುಗಳಿಗೆ ನೀರು ಹಾಯಿಸುವುದನ್ನು ________ ಎನ್ನಲಾಗುತ್ತದೆ.

   ಅ) ಹನಿ ನೀರಾವರಿ  ಆ) ತುಂತುರು ನೀರಾವರಿ

   ಇ) ಕೊಳವೆ ಬಾವಿ ನೀರಾವರಿ  ಈ) ಚಾನಲ್ ಮೂಲಕ ನೀರು

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಭಾರತದ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಯ ಪ್ರಸ್ತುತ ಪ್ರಮಾಣವು ________ ಆಗಿದೆ.
2. ಹಸಿರುಕ್ರಾಂತಿಯು ಪ್ರಾರಂಭದಲ್ಲಿ ________ ಬೆಳೆಗಳಿಗೆ ಮಾತ್ರ ಸೀಮಿತವಾಗಿತ್ತು.
3. ರೈತನ ಮಿತ್ರ ________ ಆಗಿದೆ.
4. ಭಾರತದ ಅತ್ಯಂತ ಬಹು ಪುರಾತನವಾದ ನೀರಾವರಿ ಮೂಲ________ ಆಗಿದೆ.
5. ಕಾಲುವೆ, ಕೊಳವೆಬಾವಿ, ಕರೆಗಳ ಮೂಲಕ ಕೃಷಿ ಭೂಮಿಗೆ ನೀರು ಹಾಯಿಸುವುದನ್ನು ________ ಎಂದು ಕರೆಯಲಾಗುತ್ತದೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ಭೂ ಸುಧಾರಣೆ ಎಂದರೇನು?
2. ಹಸಿರು ಕ್ರಾಂತಿ ಎಂದರೇನು?
3. ನೀರಾವರಿ ಎಂದರೇನು?
4. ಆಧುನಿಕ ನೀರಾವರಿ ಪದ್ಧತಿಗಳು ಯಾವುವು?
5. ಹಸಿರು ಕ್ರಾಂತಿಯ ಪಿತಾಮಹ ಯಾರು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ

1. ಭೂ ಸುಧಾರಣೆಯ ಪ್ರಮುಖ ಉದ್ದೇಶಗಳೇನು?
2. ನೀರಾವರಿಯ ಮೂಲಗಳಾವುವು?
3. ಗೇಣಿ ಸುಧಾರಣೆಗಳು ಯಾವುವು?
4. ಸಣ್ಣ ಗಾತ್ರದ ಹಿಡುವಳಿಗೆ ಕಾರಣಗಳನ್ನು ಬರೆಯಿರಿ.
5. ಭಾರತದ ನೀರಾವರಿ ಯೋಜನೆಯ ಪ್ರಕಾರಗಳಾವುವು?

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ

1. ಭೂ ಸುಧಾರಣೆಗಳನ್ನು ಜಾರಿಗೊಳಿಸಲು ಅಳವಡಿಸಿಕೊಂಡಿರುವ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಹಸಿರು ಕ್ರಾಂತಿಯು ಒಳಗೊಂಡಿರುವ ಪ್ರಮುಖ ಅಂಶಗಳಾವುವು?
3. ಹಸಿರು ಕ್ರಾಂತಿಯ ಪ್ರತಿಕೂಲ ಪರಿಣಾಮಗಳನ್ನು ಪರಿಶೀಲಿಸಿರಿ.
4. ಭಾರತದ ಕೃಷಿ ಅಭಿವೃದ್ಧಿಯಲ್ಲಿ ನೀರಾವರಿಯ ಅಗತ್ಯತೆಯನ್ನು ವಿಶ್ಲೇಷಿಸಿ.
5. ಭಾರತದ ನೀರಾವರಿ ವ್ಯವಸ್ಥೆಯಲ್ಲಿನ ಪ್ರಮುಖ ಮೂಲಗಳನ್ನು ವಿವರಿಸಿ.
6. ಆಧುನಿಕ ನೀರಾವರಿ ಪದ್ಧತಿಗಳು ಭಾರತದ ಕೃಷಿ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ? ವಿವರಿಸಿ.

### ನಿಯೋಜಿತ ಕಾರ್ಯ

1) ನಿಮ್ಮ ಊರಿನಲ್ಲಿ ಅಥವಾ ಜಿಲ್ಲೆಯಲ್ಲಿ ಸಾಗುವಳಿ ಮಾಡುವ ಬೆಳೆಗಳನ್ನು ಪಟ್ಟಿ ಮಾಡಿರಿ.
2) ನಿಮ್ಮ ಊರಿನಲ್ಲಿ ಅಥವಾ ಜಿಲ್ಲೆಯಲ್ಲಿನ ಪ್ರಮುಖ ನೀರಾವರಿ ಮೂಲ ಯಾವುದು ಎಂಬ ಮಾಹಿತಿ ಪಡೆಯಿರಿ.

ಅಧ್ಯಾಯ-5

# ಕೃಷಿ ಹಣಕಾಸು

" ಭಾರತದ ನೈಜ ಪ್ರಗತಿಯು ಹಳ್ಳಿಗಳ ಅಭಿವೃದ್ಧಿಯಲ್ಲಿ ಅಡಗಿದೆಯೇ ವಿನಹ ನಗರಗಳಲ್ಲಿನ ಕೈಗಾರಿಕಾ ವಿಸ್ತರಣೆ ಜಾಲದಿಂದಲ್ಲ"

**-ಮಹಾತ್ಮ ಗಾಂಧೀಜಿ**

**ಪೀಠಿಕೆ :**

ಹಣಕಾಸು ಎಲ್ಲ ಆರ್ಥಿಕ ಚಟುವಟಿಕೆಗಳ ಜೀವನಾಡಿಯಾಗಿದೆ. ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಉತ್ಪಾದಕರು, ಕೃಷಿಕರು, ಅನುಭೋಗಿಗಳು, ವ್ಯವಹಾರಸ್ಥರಿಗೆಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಹಣಕಾಸಿನ ಅಗತ್ಯವಿರುತ್ತದೆ. ಕೆಲವರಿಗೆ ಹಣಕಾಸು ಉತ್ಪಾದಕ ಅವಶ್ಯಕತೆಗಳಿಗೆ ಬೇಕಾದರೆ ಮತ್ತೆ ಕೆಲವರಿಗೆ ಅನುತ್ಪಾದಕ ಉದ್ದೇಶಗಳಿಗೆ ಬೇಕಾಗುತ್ತದೆ. ಆದ್ದರಿಂದಲೇ ಹಣಕಾಸು ಆರ್ಥಿಕತೆಯ ಅವಿಭಾಜ್ಯ ಅಂಗವಾಗಿ ಉಳಿದುಕೊಂಡಿದೆ. ಗ್ರಾಮೀಣ ಅಭಿವೃದ್ಧಿಯು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದಂತಹ ಚಟುವಟಿಕೆಗಳ ಪ್ರಗತಿಯನ್ನು ಅವಲಂಬಿಸಿದೆ. ಅದರಲ್ಲೂ ಕೃಷಿ ವಲಯದ ಅಭಿವೃದ್ಧಿಯು ಹಣಕಾಸಿನ ಸ್ಥಿತಿಗತಿಗಳನ್ನು ಅವಲಂಬಿಸಿದೆ. ಕೃಷಿಯ ಚಟುವಟಿಕೆಯಲ್ಲಿ ಭಾಗವಹಿಸುವ ಬಹುತೇಕ ಸಾಗುವಳಿದಾರರ, ಕೃಷಿ ಕಾರ್ಮಿಕರ ಆದಾಯವು ತುಂಬಾ ಕಡಿಮೆಯಿದ್ದು, ಕೇವಲ ಅವರ ಜೀವನಾವಶ್ಯಕತೆಗಳನ್ನು ಪೂರೈಸುತ್ತದೆ. ಕೃಷಿಯಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು, ಶಾಶ್ವತವಾದ ಸುಧಾರಣಾ ಕಾರ್ಯಗಳನ್ನು ಕೈಗೊಳ್ಳಲು ಹಾಗೂ ಬೆಳೆ ನಷ್ಟ ಉಂಟಾದಾಗ ತಮ್ಮ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹಾಗೂ ಬೆಳೆಯನ್ನು ತೆಗೆಯಲು ವಿವಿಧ ಮೂಲಗಳಿಂದ ಹಣಕಾಸನ್ನು ಆಶಿಸುತ್ತಾರೆ. ಹಾಗಾದರೆ ಕೃಷಿ ಹಣಕಾಸು ಎಂದರೇನು? ಕೃಷಿ ಹಣಕಾಸಿನ ಅಗತ್ಯತೆ ಏನು? ಕೃಷಿ ಹಣಕಾಸನ್ನು ಒದಗಿಸುವ ಮೂಲಗಳು ಯಾವುವು? ಭಾರತದಲ್ಲಿ ಕೃಷಿ ಹಣಕಾಸಿನ ಸ್ಥಿತಿಗತಿ ಏನು? ಈ ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಅಧ್ಯಾಯದ ಅಧ್ಯಯನದಿಂದ ತಿಳಿದುಕೊಳ್ಳಬಹುದು.

## ಕೃಷಿ ಹಣಕಾಸು

ಕೃಷಿ ಉತ್ಪಾದನೆಯಲ್ಲಿ ಬಳಸುವ ಇತರೆ ಆದಾನಗಳಿಗಿಂತ ಹಣಕಾಸು ಕೃಷಿಯಲ್ಲಿ ಪ್ರಮುಖ ಆದಾನವಾಗಿದೆ. ಕೃಷಿ ಹಣಕಾಸು ಎಂಬುದು ಕೃಷಿ ಘಟಕಗಳಿಗೆ ಸಂಬಂಧಿಸಿದ ಹಣಕಾಸಿನ ಸಂಪನ್ಮೂಲಗಳನ್ನು ಕ್ರೂಢೀಕರಿಸುವುದು ಮತ್ತು ಅದರ ನಿರ್ವಹಣೆಗೆ ಸಂಬಂಧಿಸಿದ್ದಾಗಿದೆ. ಸರಳವಾಗಿ ಹೇಳುವುದಾದರೆ ಕೃಷಿ ಹಣಕಾಸು ಎಂಬುದು ಕೃಷಿಯಲ್ಲಿ ಬಂಡವಾಳವನ್ನು ಕ್ರೂಢೀಕರಿಸವುದು ಮತ್ತು ಬಳಸುವಿಕೆಗೆ ಸಂಬಂಧಿಸಿದ್ದಾಗಿದ್ದು ಅದು ಕೃಷಿ ಹಣಕಾಸಿನ ಪೂರೈಕೆ ಮತ್ತು ಬೇಡಿಕೆಗಳನ್ನು ಅಂದಾಜಿಸುತ್ತದೆ. ಗ್ರಾಮೀಣ ರೈತರು, ಕೃಷಿ ಕಾರ್ಮಿಕರು, ಸಾಗುವಳಿದಾರರು ಕೃಷಿ

ಮತ್ತು ಕೃಷಿಯೇತರ ಚಟುವಟಿಕೆಗಳಿಗಾಗಿ ಬಳಸುವ ಹಣಕಾಸನ್ನು ಕೃಷಿ ಹಣಕಾಸು ಎಂದು ಕರೆಯಲಾಗುತ್ತದೆ. ಇದನ್ನು ಕೃಷಿ ಸಾಲ ಎಂತಲೂ ಕರೆಯುತ್ತಾರೆ.

ಭಾರತವು ಇಡೀ ವಿಶ್ವದಲ್ಲಿಯೇ ಅತ್ಯಧಿಕ ಸಂಖ್ಯೆಯ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊಂದಿರುವ ದೇಶವಾಗಿದೆ. ಅವರ ಆದಾಯದ ಪ್ರಮುಖ ಮೂಲ ಕೃಷಿ ಚಟುವಟಿಕೆಯಾಗಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಸಾಮಾನ್ಯವಾಗಿ ಲಭ್ಯವಿದ್ದ ಕೃಷಿ ಆದಾನಗಳನ್ನು ಬಳಸಿ ನಡೆಸುತ್ತಿದ್ದರಿಂದ ಅಷ್ಟಾಗಿ ಬಾಹ್ಯ ಹಣಕಾಸಿನ ಅಗತ್ಯತೆಯಿರಲಿಲ್ಲ. ಆದರೆ ಆಧುನಿಕ ಕೃಷಿಯು ವಾಣಿಜ್ಯೀಕರಣಗೊಂಡು ಹೊಸ ತಂತ್ರಜ್ಞಾನ ಮತ್ತು ಆಧುನಿಕ ಕೃಷಿ ಉಪಕರಣಗಳ ಬಳಕೆಯ ಹೆಚ್ಚಳದಿಂದಾಗಿ ಬಾಹ್ಯ ಹಣಕಾಸಿನ ಅಗತ್ಯತೆಯನ್ನು ಹೆಚ್ಚಿಸಿದೆ. ಕೃಷಿಯಲ್ಲಿ ಹಣಕಾಸಿನ ಬೇಡಿಕೆಯು ಹಲವಾರು ಉದ್ದೇಶಗಳಿಗಾಗಿ ಇರಬಹುದಾಗಿದ್ದು ಅಂತಹ ಉದ್ದೇಶಗಳು ಕೃಷಿ ಹಣಕಾಸಿನ ಅಗತ್ಯತೆಯನ್ನು ತಿಳಿಸುತ್ತವೆ. ಅಂತಹ ಪ್ರಮುಖ ಅವಶ್ಯಕತೆಗಳೆಂದರೆ:

1) **ಕೃಷಿ ಭೂಮಿಯ ಅಭಿವೃದ್ಧಿ:** ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುವುದು ಕೃಷಿ ಹಣಕಾಸಿನ ಪ್ರಮುಖ ಉದ್ದೇಶವಾಗಿದೆ. ಬಾವಿಗಳ ನಿರ್ಮಾಣ, ಕೊಳವೆ ಬಾವಿ ಕೊರೆಸುವುದು, ಕೃಷಿ ಹೊಂಡಗಳ ನಿರ್ಮಾಣ ಮುಂತಾದ ಚಟುವಟಿಕೆಗಳನ್ನು ಒಳಗೊಂಡಿದೆ. ಇದು ಲಭ್ಯವಿರುವ ಭೂಮಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

2) **ಹಣ ಪಾವತಿ:** ರೈತರು ಭೂಮಿಗೆ ಗೇಣಿಯನ್ನು, ಕೃಷಿ ಕಾರ್ಮಿಕರಿಗೆ ಕೂಲಿಯನ್ನು ಪಾವತಿಸಲು ಹಾಗೂ ಇತರ ದೈನಂದಿನ ವೆಚ್ಚಗಳನ್ನು ಭರಿಸಲು ಹಣಕಾಸಿನ ಅಗತ್ಯತೆ ಇರುತ್ತದೆ.

3) **ಕೃಷಿ ಉತ್ಪಾದಕತೆಯ ಹೆಚ್ಚಳ:** ಕೃಷಿ ಉತ್ಪಾದಕತೆಯು ಕೃಷಿಯಲ್ಲಿ ಹೂಡುವಳಿಯಾಗಿ ಬಳಸಲಾಗುವ ಉತ್ತಮ ಸುಧಾರಿತ ಬೀಜಗಳು, ರಸಗೊಬ್ಬರಗಳು, ಕ್ರಿಮಿನಾಶಕಗಳು, ನೀರಾವರಿ ಮತ್ತು ಇಂಧನ ಸೌಲಭ್ಯಗಳ ಸಮರ್ಪಕ ಬಳಕೆಯನ್ನು ಅವಲಂಬಿಸಿರುತ್ತದೆ. ಇವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಹೆಚ್ಚಿನ ಪ್ರಮಾಣದ ಹಣಕಾಸಿನ ಅಗತ್ಯವಿರುತ್ತದೆ.

4) **ಕೃಷಿ ಸಲಕರಣೆಗಳು:** ಕೃಷಿ ಚಟುವಟಿಕೆಯನ್ನು ಸಮರ್ಥವಾಗಿ ನಿರ್ವಹಿಸಲು ಅಗತ್ಯವಿರುವ ನೇಗಿಲು, ಯಂತ್ರಗಳು, ಟ್ರ್ಯಾಕ್ಟರ್ ಮುಂತಾದ ಸಲಕರಣೆಗಳನ್ನು ಕೊಂಡುಕೊಳ್ಳಲು ಕೃಷಿ ಹಣಕಾಸಿನ ಅಗತ್ಯವಿರುತ್ತದೆ.

5) **ನೈಸರ್ಗಿಕ ಅಂಶಗಳು:** ಭಾರತದ ಬಹುತೇಕ ಸಾಗುವಳಿ ಭೂಮಿಯು ಮಳೆಯಾಶ್ರಿತವಾಗಿದೆ. ಬರಗಾಲ, ಪ್ರವಾಹ, ಬೆಳೆ ರೋಗ ಇತ್ಯಾದಿಗಳು ಕೃಷಿಯಲ್ಲಿ ನಿರಂತರವಾಗಿ ಕಂಡುಬರುತ್ತಿದ್ದು ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಇಂತಹ ಬಿಕ್ಕಟ್ಟಿನಿಂದ ರೈತರು ಹೊರಬರಲು ಕೃಷಿ ಹಣಕಾಸಿನ ಅಗತ್ಯವಿದೆ.

6) **ಆಧುನಿಕ ಕೃಷಿ ಪದ್ಧತಿ:** ಭಾರತದಲ್ಲಿನ ಬಹುತೇಕ ರೈತರು ಸಣ್ಣ ಹಾಗೂ ಅತಿ ಸಣ್ಣ ರೈತರಾಗಿದ್ದು, ಅವರು ಆಧುನಿಕ ಕೃಷಿ ಪದ್ದತಿಯನ್ನು ತಮ್ಮ ಸಾಗುವಳಿ ಭೂಮಿಯಲ್ಲಿ ಅಳವಡಿಸಿಕೊಳ್ಳಲು ಹೆಚ್ಚಿನ ಬಂಡವಾಳ ಅಗತ್ಯವಿರುತ್ತದೆ. ಅದಕ್ಕೆ ಕೃಷಿ ಹಣಕಾಸಿನ ಅಗತ್ಯವಿದೆ.

7) **ಇತರೆ ಉದ್ದೇಶಗಳು:** ರೈತರು ಈಗಾಗಲೇ ಮಾಡಿಕೊಂಡಿರುವ ಸಾಲಗಳನ್ನು ಮರುಪಾವತಿಸಲು ಹಾಗೂ ನಿರ್ದಿಷ್ಟವಲ್ಲದ ಇತರ ಉದ್ದೇಶಗಳ ಈಡೇರಿಕೆಗಾಗಿಯೂ ಹಣಕಾಸು ಬೇಕಾಗುತ್ತದೆ.

## ಕೃಷಿ ಹಣಕಾಸಿನ ಪ್ರಕಾರಗಳು

ಭಾರತದಲ್ಲಿನ ರೈತರಿಗೆ ಅಗತ್ಯವಿರುವ ಹಣಕಾಸನ್ನು ಅವರು ಬಳಸುವ ಉದ್ದೇಶಗಳ ಆಧಾರದ ಮೇಲೆ ಎರಡು ವಿಧಗಳಾಗಿ ವಿಂಗಂಡಿಸಲಾಗಿದೆ. ಅವುಗಳೆಂದರೆ: 1) ಉತ್ಪಾದಕ ಉದ್ದೇಶಗಳು 2) ಅನುತ್ಪಾದಕ ಉದ್ದೇಶಗಳು

## ಉತ್ಪಾದಕ ಸಾಲ

ರೈತರು ಹಣಕಾಸನ್ನು ಉತ್ಪಾದನಾ ಕಾರ್ಯಗಳಿಗೆ ಬಳಸಿಕೊಂಡರೆ ಅದನ್ನು ಉತ್ಪಾದಕ ಹಣಕಾಸು ಎನ್ನುವರು. ದನಕರುಗಳ ಖರೀದಿ, ಕೃಷಿ ಸಲಕರಣೆಗಳು, ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕಗಳು, ಅಧಿಕ ಇಳುವರಿ ನೀಡುವ ಬೀಜಗಳು ಹಾಗೂ ಯಂತ್ರೋಪಕರಣಗಳ ಮೇಲೆ ಮಾಡಲಾಗುವ ಹಣವು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಈ ರೀತಿ ಗಳಿಸಿದ ಆದಾಯದಿಂದ ರೈತರು ಸಾಲದ ಮರುಪಾವತಿಯನ್ನು ಸುಲಭವಾಗಿ ಮಾಡಬಹುದಾಗಿದೆ. ಇದು ಕೃಷಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತವೆ. ಆದ್ದರಿಂದ ಇದು ಉತ್ಪಾದಕ ಸಾಲವೆಂದು ಪರಿಗಣಿಸಲ್ಪಡುತ್ತದೆ.

## ಅನುತ್ಪಾದಕ ಸಾಲ

ರೈತರು ತಮ್ಮ ಕೃಷಿ ಉತ್ಪಾದಕ ಚಟುವಟಿಕೆಗಳಿಗೆ ಸಾಲವನ್ನು ಪಡೆದು ಅದನ್ನು ಇತರೆ ಅನುತ್ಪಾದಕ ಉದ್ದೇಶಗಳಿಗೆ ಅಂದರೆ ಬೇರೆ ಸಾಲದ ಮರುಪಾವತಿ, ಮನೆಯಲ್ಲಿ ಸಾಮಾಜಿಕ ಕಾರ್ಯಕ್ಕಾಗಿ ಮತ್ತು ಅನುಭೋಗಕ್ಕಾಗಿ ಬಳಸಿದರೆ ಅದನ್ನು ಅನುತ್ಪಾದಕ ಕೃಷಿ ಸಾಲ ಅಥವಾ ಅನುಭೋಗ ಸಾಲ ಎನ್ನುತ್ತೇವೆ.

ಕೃಷಿಕರಿಗೆ ಅಗತ್ಯವಿರುವ ಹಣಕಾಸನ್ನು ಅವರಿಗೆ ನೀಡುವ ಕಾಲಾವಧಿಯ ಆಧಾರದ ಮೇಲೆ 3 ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ: 1) ಅಲ್ಪಾವಧಿಯ ಸಾಲ 2) ಮಧ್ಯಮಾವಧಿ ಸಾಲ ಹಾಗೂ 3) ದೀರ್ಘಾವಧಿ ಸಾಲ

## ಅಲ್ಪಾವಧಿಯ ಕೃಷಿ ಸಾಲ

ಕೃಷಿ ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು, ದನಕರುಗಳಿಗೆ ಬೇಕಾಗುವ ಆಹಾರ ಹಾಗು ಮೇವು ಕೊಳ್ಳಲು, ತಕ್ಷಣದ ಕೃಷಿ ಚಟುವಟಿಕೆಗಳಿಗೆ ಹಾಗೂ ಇತರ ಉತ್ಪಾದಕ ಉದ್ದೇಶಗಳಿಗೆ 9 ತಿಂಗಳುಗಳಿಂದ 15 ತಿಂಗಳುಗಳಿಗೆ ಮಾಡುವ ಸಾಲವನ್ನು ಅಲ್ಪಾವಧಿ ಸಾಲ ಎನ್ನುತ್ತಾರೆ. ಇಂತಹ ಸಾಲವನ್ನು ಲೇವಾದೇವಿಗಾರರು ಮತ್ತು ವ್ಯಾಪಾರಿಗಳಲ್ಲದೇ ಸಹಕಾರಿ ಸಂಸ್ಥೆಗಳು ಹಾಗೂ ಬ್ಯಾಂಕುಗಳು ಒದಗಿಸುತ್ತವೆ. ಇದನ್ನು ಬೆಳೆ ಸಾಲವೆಂತಲೂ ಕರೆಯುತ್ತಾರೆ.

## ಮಧ್ಯಮಾವಧಿ ಕೃಷಿ ಸಾಲ

ರೈತರು ಎತ್ತು ಹಾಗೂ ಹಸುಗಳನ್ನು, ಸಣ್ಣ ಪ್ರಮಾಣದ ಕೃಷಿ ಸಲಕರಣೆಗಳನ್ನು ಕೊಳ್ಳಲು, ಬಾವಿಗಳ ಮರು ನಿರ್ಮಾಣ, ಭೂಮಿ ಅಭಿವೃದ್ಧಿ ಮುಂತಾದ ಕೃಷಿ ಚಟುವಟಿಕೆಗಳಿಗೆ ಬೇಕಾಗುವ ಸಾಲವನ್ನು ಮಧ್ಯಮಾವಧಿ ಸಾಲವೆಂದು ಕರೆಯಲಾಗುತ್ತದೆ. ಲೇವಾದೇವಿಗಾರರಲ್ಲದೇ ವಾಣಿಜ್ಯ ಬ್ಯಾಂಕುಗಳು ಈ ವಿಧದ ಹಣಕಾಸನ್ನು ಒದಗಿಸುತ್ತವೆ. ಮಧ್ಯಮಾವಧಿ ಕೃಷಿ ಸಾಲವನ್ನು 15 ತಿಂಗಳುಗಳಿಂದ 5 ವರ್ಷಗಳ ಅವಧಿಗೆ ನೀಡಲಾಗುತ್ತದೆ. ಈ ಸಾಲದ ಪ್ರಮಾಣವು ಅಲ್ಪಾವಧಿ ಸಾಲಕ್ಕಿಂತ ಹೆಚ್ಚಾಗಿದ್ದು ದೀರ್ಘಾವಧಿ ಸಾಲಕ್ಕಿಂತ ಕಡಿಮೆಯಿರುತ್ತದೆ. ಈ ಸಾಲವನ್ನು ಪೂರ್ವ ನಿರ್ಧರಿತ ಕಂತುಗಳಲ್ಲಿ ಮರುಪಾವತಿ ಮಾಡಲಾಗುತ್ತದೆ.

## ದೀರ್ಘಾವಧಿ ಸಾಲ

ಸಾಮಾನ್ಯವಾಗಿ ಕೃಷಿ ಭೂಮಿಯಲ್ಲಿ ಶಾಶ್ವತ ಸುಧಾರಣೆಗಳನ್ನು ಮಾಡಲು, ಭಾರಿ ಕೃಷಿ ಯಂತ್ರಗಳು ಸಲಕರಣೆಗಳನ್ನು ಕೊಳ್ಳಲು, ಹೆಚ್ಚುವರಿ ಕೃಷಿ ಭೂಮಿಯನ್ನು ಕೊಳ್ಳಲು, ಕೊಳವೆ ಬಾವಿ ಕೊರೆಸಲು, ಹಳೆಯ ಸಾಲವನ್ನು ಮರುಪಾವತಿಸಲು ಪಡೆದುಕೊಳ್ಳುವ ಸಾಲವು ದೀರ್ಘಾವಧಿ ಸಾಲವಾಗಿದೆ. ದೀರ್ಘಾವಧಿ ಕೃಷಿ ಸಾಲದ ಅವಧಿಯು 5 ವರ್ಷಗಳಿಂದ 20 ವರ್ಷಗಳ ಅವಧಿಯವರೆಗೂ ಇದ್ದು ಇಂತಹ ಸಾಲಗಳ ಮೇಲಿನ ಬಡ್ಡಿದರವು ಸಾಮಾನ್ಯವಾಗಿ ಕಡಿಮೆಯಿರುತ್ತದೆ. ಈ ಸಾಲವನ್ನೂ ಸಹ ಪೂರ್ವ ನಿರ್ಧರಿತ ಕಂತುಗಳಲ್ಲಿ ಮರುಪಾವತಿ ಮಾಡಲಾಗುತ್ತದೆ.

## ಕೃಷಿ ಹಣಕಾಸಿನ ಮೂಲಗಳು

ಭಾರತದಲ್ಲಿ ಕೃಷಿ ಹಣಕಾಸನ್ನು ಒದಗಿಸುವ ಮೂಲಗಳನ್ನು ಪ್ರಮುಖವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ 1) ಸಾಂಸ್ಥಿಕೇತರ ಹಣಕಾಸಿನ ಮೂಲಗಳು 2) ಸಾಂಸ್ಥಿಕ ಹಣಕಾಸಿನ ಮೂಲಗಳು

## ಸಾಂಸ್ಥಿಕೇತರ ಹಣಕಾಸಿನ ಮೂಲಗಳು

ಸಾಲದ ಖಾಸಗಿ ಮೂಲಗಳಾದ ಲೇವಾದೇವಿಗಾರರು, ಜಮೀನ್ದಾರರು, ವ್ಯಾಪಾರಿಗಳು ಹಾಗೂ ದಲ್ಲಾಳಿಗಳು ಮತ್ತು ರೈತರ ಸಂಬಂಧಿಕರು, ಸ್ನೇಹಿತರು ಇವರುಗಳು ಸಾಂಸ್ಥಿಕೇತರ ಹಣಕಾಸಿನ ಪ್ರಮುಖ ಮೂಲಗಳಾಗಿವೆ. ಇವು ಕೃಷಿಗೆ ಹಣಕಾಸು ಒದಗಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದ್ದು, ಸಾಂಪ್ರಾದಾಯಿಕ ಹಣಕಾಸಿನ ಸಂಸ್ಥೆಗಳೆಂತಲೂ ಕರೆಯಲಾಗುತ್ತದೆ. ಸಾಂಸ್ಥಿಕೇತರ ಹಣಕಾಸಿನ ಮೂಲಗಳಲ್ಲಿ ಪ್ರಮುಖವಾಗಿರುವವರೆಂದರೆ:

1) **ಲೇವಾದೇವಿಗಾರರು:** ಅನಾದಿ ಕಾಲದಿಂದಲೂ ಲೇವಾದೇವಿಗಾರರು ಕೃಷಿಗೆ ಸಾಲವನ್ನು ನೀಡುವ ಪ್ರಮುಖ ಖಾಸಗಿ ಮೂಲವಾಗಿದ್ದಾರೆ. ಇವರನ್ನು ಕೃಷಿ ಲೇವಾದೇವಿಗಾರರು ಮತ್ತು ವೃತ್ತಿಪರ

ಲೇವಾದೇವಿಗಾರರು ಎಂದು ವಿಂಗಡಿಸಬಹುದಾಗಿದೆ. ಕೃಷಿ ಲೇವಾದೇವಿಗಾರರು ಸಾಗುವಳಿಗೆ ಅಗತ್ಯವಾದ ಉತ್ಪಾದಕ ಮತ್ತು ಅನುತ್ಪಾದಕ ಉದ್ದೇಶಗಳಿಗೆ ಸಾಲವನ್ನು ನೀಡುತ್ತಾರೆ. ಆದರೆ ವೃತ್ತಿಪರ ಹಣದ ಲೇವಾದೇವಿಗಾರರ ಪ್ರಮುಖ ಕಸಬು ಸಾಲ ನೀಡುವುದೇ ಆಗಿದ್ದು ಯಾವುದೇ ಉದ್ದೇಶಕ್ಕೂ ಸಾಲ ನೀಡುತ್ತಾರೆ. ಲೇವಾದೇವಿಗಾರರು ಸಾಮಾನ್ಯವಾಗಿ ಅಧಿಕ ಮತ್ತು ಅನುಚಿತ ಅಧಿಕ ಬಡ್ಡಿದರ ವಿಧಿಸುತ್ತಾರೆ. 1951–52ರ 'ಅಖಿಲ ಭಾರತ ಸಾಲ ಸಮೀಕ್ಷೆ'ಯ ಪ್ರಕಾರ ಒಟ್ಟು ಗ್ರಾಮೀಣ ಸಾಲದಲ್ಲಿ ಶೇ. 70ರಷ್ಟು ಪಾಲನ್ನು ಹಣದ ಲೇವಾದೇವಿಗಾರರು ಹೊಂದಿದ್ದು, 2012–13ರ "ರೈತ ಕುಟುಂಬಗಳ ಪರಿಸ್ಥಿತಿ ಪರಿಶೀಲನಾ ಸಮೀಕ್ಷೆ"ಯ ಪ್ರಕಾರ ಅವರ ಪಾಲು ಶೇ. 40ರಷ್ಟಕ್ಕಿಳಿದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕುಗಳ ಸ್ಥಾಪನೆಯ ಹೊರತಾಗಿಯೂ, ಪ್ರಸ್ತುತ ಗ್ರಾಮೀಣ ಭಾಗದಲ್ಲಿ ಇವರ ಪಾತ್ರ ಅಧಿಕವಾಗಿಯೇ ಇದೆ. ಇದು ಅವರು ಹೊಂದಿದ ಅನುಕೂಲತೆಗಳ ದೆಸೆಯಿಂದಾಗಿದ್ದು, ಅವು ಯಾವುವೆಂದರೆ:

1. ಲೇವಾದೇವಿಗಾರರು ಯಾವುದೇ ಉದ್ದೇಶಕ್ಕೂ ಸಾಲ ನೀಡುತ್ತಾರೆ.
2. ಲೇವಾದೇವಿಗಾರರು ಗ್ರಾಮೀಣ ಕುಟುಂಬಗಳೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದು ರೈತರು ಅವರಿಂದ ಸುಲಭವಾಗಿ ಸಾಲ ಪಡೆಯಬಹುದಾಗಿದೆ.
3. ಅವರ ಸಾಲದ ವ್ಯವಹಾರವು ತುಂಬಾ ಸರಳ, ಸುಲಭ ಹಾಗೂ ಹೊಂದಾಣಿಕೆಯುಳ್ಳದ್ದಾಗಿರುತ್ತದೆ.
4. ಯಾವುದೇ ರೀತಿಯ ವಿಧಿವಿಧಾನಗಳನ್ನು ಅನುಸರಿಸದೇ ಸಾಲಗಳನ್ನು ಸಕಾಲದಲ್ಲಿ ಪೂರೈಸುತ್ತಾರೆ.

ಆದರೆ ಅವರ ಕಾರ್ಯಾಚರಣೆಯು ಹಲವಾರು ಅನಾನುಕೂಲತೆಗಳಿಂದ ಕೂಡಿದ್ದು, ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

1. ವಾಸ್ತವವಾಗಿ ಸಾಲ ನೀಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದ ಮೊತ್ತವನ್ನು ಕರಾರುಪತ್ರ(ಬಾಂಡು)ಗಳಲ್ಲಿ ನಮೂದಿಸುವ ಪರಿಪಾಠವಿಟ್ಟುಕೊಂಡಿರುತ್ತಾರೆ.
2. ಸಾಲ ಅಥವಾ ಬಡ್ಡಿಯ ಮರುಪಾವತಿ ಮಾಡಿದಾಗ ಯಾವುದೇ ರೀತಿಯ ರಸೀದಿ/ಸ್ವೀಕೃತಿಗಳನ್ನು ನೀಡುವುದಿಲ್ಲ.
3. ಲೇವಾದೇವಿಗಾರರು ಅಧಿಕ ಬಡ್ಡಿದರವಲ್ಲದೇ ಚಕ್ರ ಬಡ್ಡಿಯನ್ನೂ ವಿಧಿಸುತ್ತಾರೆ. ಇದರ ಪರಿಣಾಮವಾಗಿ ಸಾಲದ ಹೊರೆಯು ಅಧಿಕವಾಗಿರುತ್ತದೆ.
4. ಲೇವಾದೇವಿಗಾರರು ಉತ್ಪಾದಕ ಮತ್ತು ಅನುತ್ಪಾದಕ ಉದ್ದೇಶಗಳೆರಡಕ್ಕೂ ಸಾಲ ನೀಡುತ್ತಾರೆ.

**2)** **ಜಮೀನ್ದಾರರು:** ಸಣ್ಣ ರೈತರು ಮತ್ತು ಗೇಣಿದಾರರು ತಮ್ಮ ದೈನಂದಿನ ಹಣಕಾಸಿನ ಅವಶ್ಯಕತೆಗಳಿಗಾಗಿ ಜಮೀನ್ದಾರರು ಮತ್ತು ಭೂ ಒಡೆಯರನ್ನು ಅವಲಂಬಿಸಿದ್ದಾರೆ. ಇವರು ರೈತರಿಗೆ ನೀಡುವ ಸಾಲದ ಮೇಲೆ ಅಧಿಕ ಬಡ್ಡಿ ದರವನ್ನು ವಿಧಿಸುತ್ತಾರೆ. ಆದರೆ ಜಮೀನ್ದಾರಿ ಪದ್ಧತಿಯ ನಿರ್ಮೂಲನೆ ಕಾಯಿದೆ

ಜಾರಿಗೆ ತಂದ ನಂತರ ಜಮೀನ್ದಾರರ ಸಂಖ್ಯೆ ಬಹುತೇಕ ಕಡಿಮೆಯಾಗಿದ್ದರಿಂದ ಅವರು ರೈತರು ಮತ್ತು ಗೇಣಿದಾರರಿಗೆ ಸಾಲ ನೀಡುವುದು ಕಡಿಮೆಯಾಗಿದೆ. ಆದಾಗ್ಯೂ ಕೃಷಿಯಲ್ಲಿ ಹಸಿರು ಕ್ರಾಂತಿಯನ್ನು ಅಳವಡಿಸಿಕೊಂಡ ನಂತರ ಕೃಷಿ ಕಾರ್ಯಾಚರಣೆ ದುಬಾರಿಯಾಗಿರುವುದರಿಂದ ಮತ್ತೆ ಕೆಲ ಸಣ್ಣ ಹಾಗೂ ಅತಿಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ದೊಡ್ಡ ಭೂ ಒಡೆಯರನ್ನು ತಮಗೆ ಬೇಕಾದ ಅಗತ್ಯ ಸಾಲಗಳಿಗೆ ಅವಲಂಬಿಸಲಾರಂಭಿಸಿದ್ದಾರೆ.

3) **ವ್ಯಾಪಾರಸ್ಥರು ಮತ್ತು ದಲ್ಲಾಳಿಗಳು:** ವ್ಯಾಪಾರಸ್ಥರು ಮತ್ತು ದಲ್ಲಾಳಿಗಳು ಕೃಷಿಕರಿಗೆ ಬೆಳೆ ಸಾಲವನ್ನು, ಬೆಳೆ ಕೊಯ್ಲಿನ ನಂತರ ತಮಗೇ ಮಾರಬೇಕೆಂಬ ನಿಬಂಧನೆಯ ಮೇರೆಗೆ ಕೊಡುತ್ತಾರೆ. ಹಾಗೆ ಕೊಟ್ಟ ಸಾಲವನ್ನು ಅವರು ಬೆಲೆ ಕಟಾವಿಗೆ ಬೆಳೆಯನ್ನು ಕಡಿಮೆ ಬೆಲೆಗೆ ಕೊಂಡು ಸಾಲ ಹಾಗೂ ಬಡ್ಡಿಯನ್ನು ಮುರಿದುಕೊಂಡು ಉಳಿದ ಅಲ್ಪ ಮೊತ್ತವನ್ನು ಕೃಷಿಕರಿಗೆ ಕೊಡುತ್ತಾರೆ. ಇವರು ವಿಧಿಸುವ ಬಡ್ಡಿ ದರ ಕೂಡ ಅಧಿಕವಾಗಿಯೇ ಇರುತ್ತದೆ.

4) **ಸಂಬಂಧಿಕರು ಮತ್ತು ಸ್ನೇಹಿತರು:** ಸಾಂಸ್ಥಿಕೇತರ ಹಣಕಾಸಿನ ಪ್ರಮುಖ ಮೂಲಗಳಲ್ಲಿ ಒಬ್ಬರು ಸಂಬಂಧಿಕರು ಮತ್ತು ಸ್ನೇಹಿತರು. ಇವರು ನೀಡುವ ಸಾಲವು ಸಾಮಾನ್ಯವಾಗಿ ಬಡ್ಡಿದರ ರಹಿತ ಮತ್ತು ಯಾವುದೇ ಷರತ್ತುಗಳಿಲ್ಲದೇ ಕೊಡುತ್ತಾರೆ. ಆದರೆ ಇವರು ಕಡಿಮೆ ಮೊತ್ತವನ್ನು ಕೆಲವೊಮ್ಮೆ ಮಾತ್ರ ಸಾಲವನ್ನು ಕೊಡುತ್ತಾರೆ.

ಸಾಂಸ್ಥಿಕೇತರ ಹಣಕಾಸಿನ ಅನುಕೂಲಗಳು: ಒಟ್ಟಾರೆ ಸಾಂಸ್ಥಿಕೇತರ ಹಣಕಾಸಿನ ಮೂಲಗಳ ಪ್ರಮುಖ ಅನುಕೂಲಗಳೆಂದರೆ:

1) ಸಾಲ ಕೊಡುವವರು ಸಾಲ ತೆಗೆದುಕೊಳ್ಳುವವರ ನಡುವಿನ ಪರಸ್ಪರ ವಿಶ್ವಾಸದಿಂದ ವೈಯಕ್ತಿಕ ಆಧಾರದ ಮೇಲೆ ನೇರವಾಗಿ ಸಾಲ ನೀಡುತ್ತಾರೆ.

2) ಸಾಲ ಪಡೆಯುವ ಪ್ರಕ್ರಿಯೆಯು ಇತರೆ ಹಣಕಾಸಿನ ಮೂಲಗಳಿಗೆ ಹೋಲಿಸಿದಂತೆ ಸುಲಭ, ಸರಳವಾಗಿದ್ದು, ಆಡಳಿತಾತ್ಮಕ ವಿಳಂಬ ಅಪರೂಪವೆಂದೇ ಹೇಳಬಹುದು.

3) ಅಧಿಕ ಬಡ್ಡಿದರವಿದ್ದರೂ ಮರುಪಾವತಿಯ ಅವಧಿಯನ್ನು ಸುಲಭವಾಗಿ ಮರುಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

4) ಈ ಮೇಲಿನ ಕಾರಣದಿಂದಾಗಿ ಈ ಹಣಕಾಸಿನ ಮೂಲಗಳು ಅತ್ಯಂತ ಜನಪ್ರಿಯ ಮೂಲಗಳಾಗಿವೆ.

5) ಸಾಲವನ್ನು ಯಾವ ಸಂದರ್ಭದಲ್ಲಾದರೂ ಪಡೆಯುವ ಅವಕಾಶಗಳಿರುತ್ತವೆ.

ಸಾಂಸ್ಥಿಕೇತರ ಹಣಕಾಸಿನ ಅನಾನುಕೂಲಗಳು: ಸಾಂಸ್ಥಿಕೇತರ ಹಣಕಾಸಿನ ಪ್ರಮುಖ ಅನಾನುಕೂಲಗಳೆಂದರೆ:

1) ಅಧಿಕ ಬಡ್ಡಿದರ ವಿಧಿಸುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ.

2) ಕೃಷಿ ವಿಸ್ತರಣೆ ಮತ್ತು ಆಧುನೀಕರಣಕ್ಕೆ ರೈತರ ಅಗತ್ಯವಾದ ಸಾಲ ಪೂರೈಸುವಲ್ಲಿ ಅಸಮರ್ಪಕವಾಗಿದೆ.

3) ದುಬಾರಿ ಬಡ್ಡಿದರ, ಚಕ್ರ ಬಡ್ಡಿಗಳಿಂದ ರೈತರು ಅನೇಕ ಬಾರಿ ತಮ್ಮ ಜಮೀನನ್ನು ಇಲ್ಲವೇ ಇತರೆ ಬೆಲೆ ಬಾಳುವ ವಸ್ತುಗಳನ್ನು ಮರುಪಾವತಿಗಾಗಿ ಕಳೆದುಕೊಳ್ಳುತ್ತಾರೆ.

4) ಸಾಲ ನೀಡುವವರು ರೈತರು ಮತ್ತು ಕೃಷಿ ಕಾರ್ಮಿಕರಿಗೆ ಲೆಕ್ಕ ತಿರುಚುವ ಮೂಲಕ ಸುಳ್ಳು ಲೆಕ್ಕಗಳನ್ನು ನೀಡಿ ಶೋಷಿಸುತ್ತಾರೆ.

## ಸಾಂಸ್ಥಿಕ ಹಣಕಾಸಿನ ಮೂಲಗಳು

ಖಾಸಗಿಯಾಗಿ ಸಾಲ ಪೂರೈಸಿ ರೈತರನ್ನು ಅವರ ಶೋಷಣೆಯಿಂದ ತಪ್ಪಿಸಲು ಭಾರತದ ಸರ್ಕಾರವು ವಿವಿಧ ಹಂತದಲ್ಲಿ ಸಂಘಟಿತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಪ್ರಯತ್ನ ಮಾಡಿದೆ. ಬ್ಯಾಂಕುಗಳ ರಾಷ್ಟ್ರೀಕರಣ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸ್ಥಾಪನೆಯಲ್ಲದೇ ಸಹಕಾರಿ ಪತ್ತಿನ (ಸಾಲ ನೀಡುವ) ಸಂಘಗಳ ಬಲವರ್ಧನೆಯಂಥ ಕ್ರಮಗಳ ಮೂಲಕ ಕೃಷಿಗೆ ಸಾಂಸ್ಥಿಕ ಮೂಲಗಳ ಮೂಲಕ ಹಣಕಾಸು ಒದಗಿಸುವ ಕಾರ್ಯ ಮಾಡಿದೆ. ಸರ್ಕಾರ, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕು ಹಾಗೂ ನಬಾರ್ಡ್ ಕೃಷಿಗೆ ಹಣಕಾಸು ಪೂರೈಸುವ ಪ್ರಮುಖ ಸಾಂಸ್ಥಿಕ ಹಣಕಾಸಿನ ಮೂಲಗಳಾಗಿವೆ.

## ವಾಣಿಜ್ಯ ಬ್ಯಾಂಕುಗಳು

ಪ್ರಾರಂಭದಲ್ಲಿ ವಾಣಿಜ್ಯ ಬ್ಯಾಂಕುಗಳ ಕಾರ್ಯಾಚರಣೆಯು ನಗರದ ಪ್ರದೇಶಗಳಿಗೆ ಹಾಗೂ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಮಾತ್ರ ಸೀಮಿತವಾಗಿದ್ದಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಒಟ್ಟು ಗ್ರಾಮೀಣ ಸಾಲದಲ್ಲಿ ವಾಣಿಜ್ಯ ಬ್ಯಾಂಕುಗಳ ಪಾಲು ಶೇ. 0.9 ರಷ್ಟು ಮಾತ್ರವಿತ್ತು. 1969ರಲ್ಲಿ 14 ವಾಣಿಜ್ಯ ಬ್ಯಾಂಕುಗಳನ್ನು ಹಾಗೂ 1980ರಲ್ಲಿ 6 ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ, ಗ್ರಾಮೀಣ ಪ್ರದೇಶಗಳಿಗೆ ಅವುಗಳ ಶಾಖೆಗಳನ್ನು ವಿಸ್ತರಿಸುವ ಮೂಲಕ ಗ್ರಾಮೀಣ ಸಾಲದ ಗತಿಯನ್ನು ಬದಲಿಸಲಾಯಿತು. ಇಂದು ವಾಣಿಜ್ಯ ಬ್ಯಾಂಕುಗಳು ಕೃಷಿಗೆ ನೇರ ಮತ್ತು ಪರೋಕ್ಷ ಹಣಕಾಸು ಸಹಾಯವನ್ನು ನೀಡುತ್ತಿವೆ. ವಾಣಿಜ್ಯ ಬ್ಯಾಂಕುಗಳು ಕೃಷಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುತ್ತವೆ. ಪರೋಕ್ಷ ಹಣಕಾಸು ರೈತರಿಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಹಾಗೂ ಇತರೆ ಆದಾನಗಳ ಖರೀದಿಗೆ ಸಾಲ ಸೌಲಭ್ಯ ಒದಗಿಸುತ್ತವೆ. ಸಾಂಸ್ಥಿಕ ಹಣಕಾಸಿನ ಒಟ್ಟು ಕೃಷಿ ಸಾಲದಲ್ಲಿ ವಾಣಿಜ್ಯ ಬ್ಯಾಂಕುಗಳ ಪಾಲು ಶೇ. 72.48ರಷ್ಟಾಗಿದೆ.

## ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು

ಸಣ್ಣ ಮತ್ತು ಅತಿಸಣ್ಣ ರೈತರಿಗೆ ಹಣಕಾಸಿನ ನೆರವನ್ನು ಒದಗಿಸಲು 1975ರಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಈ ಬ್ಯಾಂಕು ಯಾವುದಾದರೊಂದು ವಾಣಿಜ್ಯ ಬ್ಯಾಂಕಿನಿಂದ ಪ್ರಾಯೋಜಿಸಲ್ಪಟ್ಟಿರುತ್ತದೆ. ಪ್ರತಿಯೊಂದು ಗ್ರಾಮೀಣ ಬ್ಯಾಂಕಿನ ಷೇರು ಬಂಡವಾಳದಲ್ಲಿ ಕೇಂದ್ರ ಸರ್ಕಾರದಿಂದ

ಶೇ. 50ರಷ್ಟು, ಸಂಬಂಧಪಟ್ಟ ರಾಜ್ಯದಿಂದ ಶೇ. 15ರಷ್ಟು ಹಾಗೂ ಪ್ರಾಯೋಜಕ ಬ್ಯಾಂಕಿನಿಂದ ಶೇ. 35ರಷ್ಟು ವಂತಿಗೆಯಿರುತ್ತದೆ.

## ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪ್ರಮುಖ ಉದ್ದೇಶಗಳು

1) ಗ್ರಾಮೀಣ ಆರ್ಥಿಕತೆಯನ್ನು ಸಶಕ್ತಗೊಳಿಸಲು ವ್ಯವಸಾಯ, ಗುಡಿ ಕೈಗಾರಿಕೆ, ವ್ಯಾಪಾರ ಮುಂತಾದ ಉತ್ಪಾದಕ ಚಟುವಟಿಕೆಗಳಿಗೆ ಸಾಲವನ್ನು ಪೂರೈಸುವುದು.

2) ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳಲ್ಲಿನ ಸಣ್ಣ ಮತ್ತು ಅತಿ ಸಣ್ಣ ರೈತರು, ಭೂರಹಿತ ಕಾರ್ಮಿಕರು, ದುರ್ಬಲ ವರ್ಗದವರು ಹಾಗೂ ಗ್ರಾಮೀಣ ಕುಶಲಕರ್ಮಿಗಳಿಗೆ ಅಗತ್ಯ ಸಾಲ ಮತ್ತು ಮುಂಗಡಗಳನ್ನು ಪೂರೈಸುವುದು.

3) ಗ್ರಾಮೀಣ ಪ್ರದೇಶಗಳಲ್ಲಿನ ಜನರಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು ಬೆಳೆಸುವುದು.

4) ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿನ ಜನರಲ್ಲಿ ಸಣ್ಣ ಉಳಿತಾಯ ಪ್ರವೃತ್ತಿಯನ್ನು ಬೆಳೆಸುವ ಮೂಲಕ ಬಂಡವಾಳ ಸಂಚಯನಕ್ಕೆ ಸಹಾಯಕವಾಗುವುದು.

ಭಾರತದಲ್ಲಿ 2013ರ ಮಾರ್ಚ್ ಕೊನೆಯ ವೇಳೆಗೆ 64 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, 17,856 ಶಾಖೆಗಳೊಂದಿಗೆ 635 ಜಿಲ್ಲೆಗಳಲ್ಲಿ ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಸಾಂಸ್ಥಿಕ ಹಣಕಾಸಿನ ಒಟ್ಟು ಕೃಷಿ ಸಾಲದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪಾಲು ಶೇ. 11.31ರಷ್ಟಿದೆ.

## ಭೂ ಅಭಿವೃದ್ಧಿ ಬ್ಯಾಂಕುಗಳು /ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು

ಮೊದಲು ಭೂ ಅಭಿವೃದ್ಧಿ ಬ್ಯಾಂಕುಗಳೆಂದು ಕರೆಯಲ್ಪಡುತ್ತಿದ್ದ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಸಹಕಾರಿ ವಲಯದಲ್ಲಿ ಬರುತ್ತಿದ್ದು, ರೈತರಿಗೆ ಅಗತ್ಯವಿರುವ ದೀರ್ಘಾವಧಿ ಸಾಲವನ್ನು ನೀಡುತ್ತವೆ. ರೈತರು ತಮ್ಮ ಜಮೀನಿನಲ್ಲಿ ಶಾಶ್ವತವಾದ ಭೂಮಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಗತ್ಯವಿರುವ ಸಾಲವನ್ನು ನೀಡುತ್ತದೆ. ಸಾಮಾನ್ಯವಾಗಿ ಕೃಷಿಯಲ್ಲಿ ಬಾವಿ ತೆರೆಯವುದು, ಕೊಳವೆಬಾವಿ ನಿರ್ಮಾಣ, ಆಧುನಿಕ ಕೃಷಿ ಉಪಕರಣಗಳ ಬಳಕೆಗೆ ಅಗತ್ಯವಿರುವ ಹಣಕಾಸನ್ನು ಒದಗಿಸುತ್ತವೆ.

## ಸಹಕಾರಿ ಪತ್ತಿನ ಸಂಘಗಳು

ಸಹಕಾರಿ ಪತ್ತಿನ ಸಂಘಗಳು ಕೃಷಿಗೆ ಹಣಕಾಸನ್ನು ಒದಗಿಸುವ ಮತ್ತೊಂದು ಪ್ರಮುಖ ಸಾಂಸ್ಥಿಕ ಮೂಲವಾಗಿದೆ. ಇವು ಪ್ರಮುಖವಾಗಿ ಸಹಕಾರ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತವೆ. ಸಹಕಾರಿ ಪತ್ತಿನ ಸಂಘಗಳು ರೈತರಿಗೆ, ಕೃಷಿ ಕಾರ್ಮಿಕರಿಗೆ ಅಗತ್ಯವಿರುವ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಒದಗಿಸುವ ಮೂಲಕ ಕೃಷಿ ಹಣಕಾಸಿನ ಪ್ರಮುಖ ಮೂಲವಾಗಿದೆ. ಇವು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ

ಸ್ಥಾಪಿಸಲ್ಪಟ್ಟಿದ್ದು, ಗ್ರಾಮೀಣ ಜನರ ಅವಶ್ಯಕತೆಗೆ ತಕ್ಕಂತೆ ಹಣಕಾಸಿನ ನೆರವನ್ನು ಒದಗಿಸುತ್ತದೆ. ಒಟ್ಟು ಕೃಷಿ ಸಾಲದಲ್ಲಿ ಸಹಕಾರಿ ಬ್ಯಾಂಕುಗಳ ಸಾಲದ ಪ್ರಮಾಣವು 1951–52 ರಲ್ಲಿ ಶೇ. 3.1 ರಷ್ಟಿದ್ದು, ಅದು 2013–14 ರವೇಳೆಗೆ ಶೇ. 16.21 ರಷ್ಟಕ್ಕೆ ಹೆಚ್ಚಳವಾಗಿದೆ.

## ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕು (ನಬಾರ್ಡ್)

ನಬಾರ್ಡ್ ಬ್ಯಾಂಕನ್ನು 12 ಜುಲೈ 1982ರಂದು ಮುಂಬೈಯಲ್ಲಿ ಸ್ಥಾಪಿಸಲಾಯಿತು. ಇದು ಕೃಷಿ ಹಣಕಾಸು ಪೂರೈಸುವ ಅಭಿವೃದ್ಧಿ ಬ್ಯಾಂಕಾಗಿದೆ. ಗ್ರಾಮೀಣ ಅಭಿವೃದ್ಧಿಗೆ ಅಗತ್ಯವಿರುವ ಹಣಕಾಸನ್ನು ಪೂರೈಸುವ ಸಹಕಾರಿ ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಬೇಕಾದ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘವಧಿ ಸಾಲಗಳನ್ನು ಒದಗಿಸುತ್ತದೆ. ವ್ಯವಸಾಯ, ಪಶುಸಂಗೋಪನೆ, ಸಣ್ಣ ಕೈಗಾರಿಕೆ, ಗ್ರಾಮೀಣ ಕೈಗಾರಿಕೆ, ಗ್ರಾಮೀಣ ಕರಕುಶಲತೆ ಮುಂತಾದ ಆರ್ಥಿಕ ಚಟುವಟಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಉತ್ತೇಜಿಸುವ ಮೂಲಕ ಸಮಗ್ರ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವ ಪ್ರಮುಖ ಧ್ಯೇಯವನ್ನು ಹೊಂದಿದೆ. ಆದ್ದರಿಂದಲೇ ಕೃಷಿ ಕ್ಷೇತ್ರದ ಒಂದು ಮಹತ್ವದ ಅಭಿವೃದ್ಧಿ ಬ್ಯಾಂಕಾಗಿದೆ.

## ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕಿನ ಪ್ರಮುಖ ಕಾರ್ಯಗಳು

1) ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಮಾತ್ರವಲ್ಲದೇ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯನೀತಿ ಹಾಗೂ ಯೋಜನೆಗಳನ್ನು ಜಾರಿಗೆ ತರುತ್ತದೆ.

2) ಗ್ರಾಮೀಣ ಪ್ರದೇಶದ ಆರ್ಥಿಕ ಚಟುವಟಿಕೆಗಳಿಗೆ ಬಂಡವಾಳ ಒದಗಿಸುವ ಮತ್ತು ಸಾಲ ನೀಡುವ ಸಂಸ್ಥೆಗಳಿಗೆ ಮೂಲ ಬ್ಯಾಂಕಾಗಿದೆ.

3) ಕೃಷಿ ಹಣಕಾಸು ಚಟುವಟಕೆಯಲ್ಲಿ ತೊಡಗಿರುವ ಸಂಸ್ಥೆಗಳೊಡನೆ ಸಮನ್ವಯ ಸಾಧಿಸುವುದು. ಮತ್ತು ಪುನಃಹಣಕಾಸು ನೀಡಿರುವ ಯೋಜನೆಗಳ ಮೇಲುಸ್ತುವಾರಿ ವಹಿಸುವುದು.

4) 1998–99ರಲ್ಲಿ ಕಿಸಾನ್ ಕ್ರೆಡಿಟ್ ಯೋಜನೆಯ ಮೂಲಕ ಕೃಷಿಕರಿಗೆ ಅಲ್ಪಾವಧಿ ಸಾಲವನ್ನು ನೀಡುವುದು ಮತ್ತು ನಗದು ಸಾಲವನ್ನು ದಕ್ಷವಾಗಿ ಬಳಸಲು ಅನುವು ಮಾಡಿಕೊಡಲಾಯಿತು.

5) ಕೃಷಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ಅಧ್ಯಯನ ಮಾಡಲು ಮತ್ತು ಅವುಗಳಿಗೆ ಸೂಕ್ತ ಪರಿಹಾರ ಕೈಗೊಳ್ಳಲು 'ಸಂಶೋಧನೆ ಮತ್ತು ಅಭಿವೃದ್ಧಿ ನಿಧಿಯನ್ನು' ಸ್ಥಾಪಿಸಿದೆ.

## ಸರ್ಕಾರ

ಸರ್ಕಾರವು ಕೃಷಿ ವಲಯಕ್ಕೆ ನೇರ ಮತ್ತು ಪರೋಕ್ಷ ಹಣಕಾಸುಗಳ ಮೂಲಕ ಕೃಷಿ ಹಣಕಾಸನ್ನು ಪೂರೈಸುವ ಪ್ರಮುಖ ಸಾಂಸ್ಥಿಕ ಮೂಲವಾಗಿದೆ. ಸರ್ಕಾರವು ಸಾಗುವಳಿದಾರರಿಗೆ ನೀಡುವ ಹಣಕಾಸನ್ನು ತಕ್ಕಾವಿ ಸಾಲ ಎಂತಲೂ ಕರೆಯಲಾಗುತ್ತದೆ. ಸಾಮಾನ್ಯವಾಗಿ ಕ್ಷಾಮ, ಬರಗಾಲ, ಪ್ರವಾಹ ಮುಂತಾದವುಗಳ ಸಂದರ್ಭದಲ್ಲಿ

ಸರ್ಕಾರವು ತಕ್ಕಾವಿ ಸಾಲವನ್ನು ರೈತರಿಗೆ ಒದಗಿಸುತ್ತದೆ. ಸರ್ಕಾರವು ಕೃಷಿ ಅಭಿವೃದ್ಧಿಗೆ ಅಗತ್ಯವಿರುವ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ವಿಸ್ತರಿಸಲು ಭೂಸುಧಾರಣಾ ಕಾಯ್ದೆ 1883 ಮತ್ತು ಕೃಷಿಕರ ಸಾಲಗಳ ಕಾಯಿದೆ 1884ನ್ನು ಜಾರಿಗೆ ತಂದಿದೆ.

ರೈತರ ಅಗತ್ಯತೆಗಳಿಗೆ ತಕ್ಕಂತೆ ಸಹಾಯಧನ ಗೊಬ್ಬರಗಳನ್ನು ಹಂಚಿಕೆ ಮಾಡುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ದುರ್ಬಲವರ್ಗದವರಿಗೆ ಆರ್.ಬಿ.ಐ.ನ ಸಲಹೆಯ ಮೇರೆಗೆ ಸರ್ಕಾರವು ಅತಿ ಕಡಿಮೆ ಬಡ್ಡಿದರದಲ್ಲಿ ಸಾಲಗಳನ್ನು ನೀಡುತ್ತದೆ. ಹಾಗೂ ಸಹಕಾರಿ ಬ್ಯಾಂಕುಗಳ ಬಂಡವಾಳ ಮತ್ತು ಡಿಬೆಂಚರುಗಳ ಪಾಲಿಗೆ ಕೊಡುಗೆಯನ್ನು ನೀಡುತ್ತದೆ. ಹೀಗೆ ಸರ್ಕಾರವು ರೈತರಿಗೆ ಅಗತ್ಯವಿರುವ ಸಾಂಸ್ಥಿಕ ಹಣಕಾಸನ್ನು ಉತ್ತೇಜಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ವೃದ್ಧಿಸಲು ಸರ್ಕಾರವು ನಿರ್ಣಾಯಕ ಪಾತ್ರ ವಹಿಸುತ್ತದೆ.

### ಅನುಕೂಲತೆಗಳು

1) ಸರ್ಕಾರವು ದೀರ್ಘಕಾಲದವರೆಗೆ ಸಾಲವನ್ನು ಒದಗಿಸುತ್ತದೆ.
2) ಅತಿ ಕಡಿಮೆ ಬಡ್ಡಿದರ ವಿಧಿಸುತ್ತದೆ.
3) ರೈತರ ಅನುಕೂಲಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಉದಾಹರಣೆಗೆ ಸಾಲ ಮರುಪಾವತಿಯ ಯೋಜನೆಯು ರೈತರಿಗೆ ಅನುಕೂಲಕರವಾಗಿರುವಂತೆ ವಾರ್ಷಿಕವಾಗಿ ಸಮಪ್ರಮಾಣದ ಕಂತುಗಳಲ್ಲಿ ತೀರಿಸುವಂತೆ ಅವಕಾಶ ನೀಡುತ್ತದೆ.

### ಅನಾನುಕೂಲತೆಗಳು

1) ಭೂರಹಿತ ಕೃಷಿ ಕಾರ್ಮಿಕರು ತಮ್ಮ ಸಂದಿಗ್ಧ ಕಾಲದಲ್ಲಿಯೂ ಸಹ ಸರ್ಕಾರದಿಂದ ಸಾಲ ಹಣ ಪಡೆಯುವಲ್ಲಿ ವಂಚಿತರಾಗಿದ್ದಾರೆ.
2) ಕೃಷಿ ಹಣಕಾಸನ್ನು ಮಂಜೂರು ಮಾಡುವುದರಲ್ಲಿ ವಿಳಂಬ, ಅಸಮರ್ಪಕವಾದ ನಿಯಮಗಳ ಹೇರಿಕೆ, ಅನುಕೂಲಕರವಲ್ಲದ ವಸೂಲಿ ವಿಧಾನಗಳ ಕಾರಣದಿಂದ ತಕ್ಕಾವಿ ಸಾಲವು ರೈತರಲ್ಲಿ ಅಷ್ಟಾಗಿ ಜನಪ್ರಿಯಗೊಂಡಿಲ್ಲ.

### ಭಾರತೀಯ ಸ್ಟೇಟ್ ಬ್ಯಾಂಕು

ಮುಂಬೈ, ಕಲ್ಕತ್ತಾ ಮತ್ತು ಚೆನ್ನೈನಲ್ಲಿನ ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ಒಟ್ಟಾಗಿ ಸೇರಿಸಿ ಭಾರತೀಯ ಇಂಪೀರಿಯಲ್ ಬ್ಯಾಂಕನ್ನು 1921 ರಲ್ಲಿ ಸ್ಥಾಪಿಸಲಾಯಿತು. ಜುಲೈ 1, 1955ರಂದು ಬ್ಯಾಂಕಿನ ವ್ಯವಹಾರವನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಿ ಕೃಷಿಗೆ ಅಗತ್ಯ ನೆರವು ನೀಡಲು ಇಂಪೀರಿಯಲ್ ಬ್ಯಾಂಕನ್ನು ಭಾರತೀಯ ಸ್ಟೇಟ್ ಬ್ಯಾಂಕು ಎಂದು ಮರುನಾಮಕರಣ ಮಾಡಿ ರಾಷ್ಟ್ರೀಕರಣಗೊಳಿಸಲಾಯಿತು.

ಈ ಬ್ಯಾಂಕು ವಿಶೇಷ ಕಾರ್ಯಕ್ರಮಗಳ ಅಡಿಯಲ್ಲಿ ಕೃಷಿಗೆ ಅಗತ್ಯವಿರುವ ಹಣಕಾಸನ್ನು ಕಡಿಮೆ ಬಡ್ಡಿದರದಲ್ಲಿ ನೇರವಾಗಿ ಪೂರೈಸುತ್ತಿದೆ ಹಾಗೂ ಸಹಕಾರಿ ಸಂಘಗಳಿಗೆ ಸುಲಭ ದರದಲ್ಲಿ ಸಾಲ ಮತ್ತು ಮುಂಗಡ ಹಣಕಾಸು ಪೂರೈಸುವುದರ ಮೂಲಕ ಪರೋಕ್ಷವಾಗಿ ಹಣಕಾಸು ಒದಗಿಸುತ್ತಿದೆ. ದಾಸ್ತಾನು ಮಳಿಗೆಗಳನ್ನು ದೇಶದಾದ್ಯಂತ ಸ್ಥಾಪಿಸಲು ವಿಶೇಷ ಹಣಕಾಸು ಸೌಲಭ್ಯ ನೀಡುತ್ತಿದೆ. ಅದರದೇ ಆದ ಕೃಷಿ ಅಭಿವೃದ್ಧಿ ಶಾಖೆಗಳೂ ಕಾರ್ಯ ನಿರ್ವಹಿಸುತ್ತಿವೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಕೃಷಿಕರಿಗೆ ಅಗತ್ಯವಿರುವ ಹಣಕಾಸನ್ನು ಕಾಲಾವಧಿಯ ಆಧಾರದ ಮೇಲೆ ________ ಪ್ರಕಾರಗಳಾಗಿ ವಿಂಗಡಿಸಲಾಗಿದೆ.

ಅ) 2 ಆ) 3 ಇ) 4 ಈ) 5

2) ಸಾಂಸ್ಥಿಕೇತರ ಹಣಕಾಸಿನ ಮೂಲದ ಪ್ರಮುಖ ಉದಾಹರಣೆಯೆಂದರೆ ________

ಅ) ವಾಣಿಜ್ಯ ಬ್ಯಾಂಕು ಆ) ಭೂ ಅಭಿವೃದ್ಧಿ ಬ್ಯಾಂಕು

ಇ) ಸರ್ಕಾರ ಈ) ಲೇವಾದೇವಿಗಾರರು

3) ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು ________

ಅ) ನಬಾರ್ಡ್ ಆ) ಭೂ ಅಭಿವೃದ್ಧಿ ಬ್ಯಾಂಕು

ಇ) ಸಹಕಾರಿ ಬ್ಯಾಂಕು ಈ) ಪ್ರಾದೇಶಿಕ ಗ್ರಾಮೀಣ ಬ್ಯಾಂಕು

4) 2013ರ ಮಾರ್ಚ್ ವೇಳೆಗೆ ಭಾರತದಲ್ಲಿ ______ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಇದ್ದವು.

ಅ) 64 ಆ) 74 ಇ) 84 ಈ) 94

5) ಭಾರತೀಯ ಸ್ಟೇಟ್ ಬ್ಯಾಂಕನ್ನು ರಾಷ್ಟ್ರೀಕರಣಗೊಳಿಸಿದ ವರ್ಷ ______.

ಅ) 1955 ಆ) 1965

ಇ) 1975 ಈ) 1985

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1) ಎಲ್ಲಾ ಆರ್ಥಿಕ ಚಟುವಟಿಕೆಗಳ ಜೀವನಾಡಿ ________ ಆಗಿದೆ.

2) ಸರ್ಕಾರವು ಸಾಗುವಳಿದಾರರಿಗೆ ನೀಡುವ ಹಣಕಾಸನ್ನು _______ ಎಂದು ಕರೆಯಲಾಗುತ್ತದೆ.

3) ನಬಾರ್ಡ್ ಬ್ಯಾಂಕನ್ನು _______ ರಂದು ಸ್ಥಾಪಿಸಲಾಯಿತು.

4) 1969ರಲ್ಲಿ _______ ವಾಣಿಜ್ಯ ಬ್ಯಾಂಕುಗಳನ್ನು ಹಾಗೂ 1980ರಲ್ಲಿ_______ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1) ಕೃಷಿ ಹಣಕಾಸು ಎಂದರೇನು?

2) ಅಲ್ಪಾವಧಿ ಸಾಲ ಎಂದರೇನು?

3) ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಯಿತು?

4) ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು ಯಾವುದು?

5) ಸಾಂಸ್ಥಿಕೇತರ ಕೃಷಿ ಹಣಕಾಸಿನ ಪ್ರಮುಖ ದೋಷ ಬರೆಯಿರಿ.

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1) ಕೃಷಿ ಹಣಕಾಸಿನ ಸಾಂಸ್ಥಿಕ ಮೂಲಗಳಾವುವು?

2) ಕೃಷಿ ಹಣಕಾಸಿನ ಸಾಂಸ್ಥಿಕೇತರ ಮೂಲಗಳು ಯಾವುವು?

3) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪ್ರಮುಖ ಉದ್ದೇಶಗಳೇನು?

4) ಕೃಷಿ ಹಣಕಾಸಿನ ಪ್ರಕಾರಗಳಾವುವು?

5) ಹಣದ ಲೇವಾದೇವಿಗಾರರು ರೈತರನ್ನು ಹೇಗೆ ಶೋಷಿಸುತ್ತಾರೆ?

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ

1) ಕೃಷಿ ಹಣಕಾಸಿನ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ಸಾಂಸ್ಥಿಕ ಹಣಕಾಸಿನ ಅನುಕೂಲ ಹಾಗೂ ಅನಾನುಕೂಲತೆಗಳನ್ನು ಬರೆಯಿರಿ.

3) ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಪ್ರಮುಖ ಕಾರ್ಯಗಳನ್ನು ಬರೆಯಿರಿ.

4) ಕೃಷಿ ಹಣಕಾಸಿನ ಪೂರೈಕೆಯಲ್ಲಿ ಸರ್ಕಾರದ ಪಾತ್ರವನ್ನು ವಿಶ್ಲೇಷಿಸಿ.

5) ಕೃಷಿ ಹಣಕಾಸಿನ ಪ್ರಕಾರಗಳನ್ನು ವಿವರಿಸಿ.

### ನಿಯೋಜಿತ ಕಾರ್ಯ

1) ನಿಮ್ಮ ಊರಿನ ಜಿಲ್ಲೆಯ ಕೃಷಿಕರ ಹಣಕಾಸಿನ ಮೂಲಗಳ ಬಗ್ಗೆ ಪಟ್ಟಿ ಮಾಡಿರಿ.

2) ನಿಮ್ಮ ಊರಿನ ಅಥವಾ ಜಿಲ್ಲೆಯ ಹಣದ ಲೇವಾದೇವಿಗಾರರು ರೈತರಿಗೆ ವಿಧಿಸುವ ಬಡ್ಡಿ ಎಷ್ಟು ಎಂಬ ಮಾಹಿತಿ ಪಡೆದುಕೊಳ್ಳಿ.

## ಅಧ್ಯಾಯ-6

# ಭಾರತದ ಕೈಗಾರಿಕಾಭಿವೃದ್ಧಿ

'ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ' - **ಸರ್.ಎಂ.ವಿಶ್ವೇಶ್ವರಯ್ಯ**

'ಜೇನು ನೊಣದಂತೆ ನಾವು ನಮ್ಮ ಕೈಗಾರಿಕೆಗಳ ನಿರ್ಮಾಣವನ್ನು ವಿನೋದದಿಂದ ಮಾಡೋಣ' - **ಒಲಿವರ್ ಗೋಲ್ಡ್‌ಸ್ಮಿತ್**

**ಪೀಠಿಕೆ :**

ಬ್ರಿಟಿಷ್‌ರ ಆಳ್ವಿಕೆಯಲ್ಲಿ ಭಾರತದಲ್ಲಿ ಕೈಗಾರಿಕಾ ರಚನೆಯು ತುಂಬಾ ದುರ್ಬಲ ಮತ್ತು ಅಸಮತೋಲನದಿಂದ ಕೂಡಿತ್ತು. ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕು, ಹತ್ತಿ ಹಾಗೂ ಸೆಣಬಿನ ಕೈಗಾರಿಕೆಗಳನ್ನು ಹೊರತು ಪಡಿಸಿದರೆ ಇತರೆ ಕೈಗಾರಿಕೆಗಳು ಅಷ್ಟಾಗಿ ಅಭಿವೃದ್ಧಿ ಹೊಂದಿರಲಿಲ್ಲ. ಭಾರತವು ಅಭಿವೃದ್ಧಿ ಹೊಂದಲು ಕೈಗಾರೀಕರಣವು ಅತ್ಯಂತ ಪ್ರಮುಖವೆಂದು ಅರಿತ ಸರ್ಕಾರಗಳು ಕೈಗಾರೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿತ್ತು. ಕೈಗಾರೀಕರಣ ಎಂದರೇನು? ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳು ನಿರ್ವಹಿಸುವ ಪಾತ್ರವೇನು? 1991 ರ ಕೈಗಾರಿಕಾ ನೀತಿಯ ಪ್ರಮುಖ ಲಕ್ಷಣಗಳೇನು? ಭಾರತದಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಮಹತ್ವವೇನು? ಮತ್ತು ಅವುಗಳು ಎದುರಿಸುವ ಸಮಸ್ಯೆಗಳು ಯಾವುವು? ಅವುಗಳ ಸಮಸ್ಯೆಗಳನ್ನು ಹೋಗಲಾಡಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? ಎಂಬ ಪ್ರಶ್ನೆಗಳಿಗೆ ಈ ಅಧ್ಯಾಯದಲ್ಲಿ ಉತ್ತರಗಳನ್ನು ಅಭ್ಯಸಿಸುವ ಪ್ರಯತ್ನ ಮಾಡಲಾಗಿದೆ.

**ಕೈಗಾರೀಕರಣ**

ಕೈಗಾರಿಕೆಗಳನ್ನು ದೇಶದಾದ್ಯಂತ ಸ್ಥಾಪಿಸಿ ವಿಸ್ತರಿಸುವುದರ ಮೂಲಕ ಅವುಗಳಿಗೆ ಪೂರಕವಾದ ಸಾರಿಗೆ, ಸಂಪರ್ಕ, ವಿದ್ಯುತ್‌ಸ್ಥಾವರ ಮುಂತಾದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದನ್ನು ಕೈಗಾರೀಕರಣ ಎನ್ನುತ್ತೇವೆ. ಸರ್.ಎಂ.ವಿಶ್ವೇಶ್ವರಯ್ಯನವರು ಬಹಳ ಹಿಂದೆಯೇ ಭಾರತಕ್ಕೆ ಕೈಗಾರೀಕರಣದ ಅಗತ್ಯತೆಯನ್ನು ಹೇಳುತ್ತಾ **'ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ'** ಎಂಬ ಅಭಿವೃದ್ಧಿಯ ಬೀಜಮಂತ್ರವನ್ನು ತೋರಿದ್ದರು. ಭಾರತವು ಸ್ವಾತಂತ್ರ್ಯ ಪಡೆದ ನಂತರ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹೆಚ್ಚಿನ ಗಮನವನ್ನು ನೀಡಿತು. ಹಲವಾರು ಕೈಗಾರಿಕಾ ನೀತಿಗಳನ್ನು ಜಾರಿಗೊಳಿಸಿತ್ತು. ಇದರಿಂದಾಗಿ ಭಾರತದ ಅರ್ಥವ್ಯವಸ್ಥೆಯನ್ನು ಅನಭಿವೃದ್ಧಿ ಸ್ಥಿತಿಯಿಂದ ಅಭಿವೃದ್ಧಿ ಹೊಂದುತ್ತಿರುವ ಹಂತಕ್ಕೆ ಕರೆದೊಯ್ಯಲು ಸಾಧ್ಯವಾಯಿತು.

## ಭಾರತದಲ್ಲಿ ಕೈಗಾರಿಕಾಭಿವೃದ್ಧಿಯ ಮಹತ್ವ:

ಕೈಗಾರೀಕರಣದಿಂದ ಪ್ರಮುಖವಾಗಿ

1) ಸಂಪನ್ಮೂಲಗಳ ಸಮರ್ಪಕ ಬಳಕೆ, ಉತ್ಪಾದನೆಯಲ್ಲಿ ಯಾಂತ್ರೀಕರಣ ಮತ್ತು ಆಧುನಿಕ ತಂತ್ರಜ್ಞಾನ

2) ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆ

3) ಶ್ರಮದ ವಿಭಜನೆ

4) ಆರ್ಥಿಕತೆಯ ರಾಚನಿಕ ಬದಲಾವಣೆ

5) ಕೃಷಿಗೆ ಅಗತ್ಯ ಆದಾನಗಳ ಬಳಕೆಯ ಉತ್ತೇಜನದ ಮೂಲಕ ಕೈಗಾರೀಕರಣಗೊಳಿಸುವುದಾಗಿದೆ.

ಪ್ರಪಂಚದಲ್ಲಿ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಿದ ಎಲ್ಲಾ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳಾಗಿವೆ. ಉದಾ;– ಅಮೇರಿಕಾ, ಜಪಾನ್, ಇಂಗ್ಲೆಂಡ್, ಕೆನಡಾ ದೇಶಗಳು. ಕೈಗಾರಿಕಾಭಿವೃದ್ಧಿಯು ಮುಂದುವರಿದ ದೇಶಗಳ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಈ ದೇಶಗಳ ರಾಷ್ಟ್ರೀಯ ಆದಾಯ ಮತ್ತು ತಲಾದಾಯವು ಇತರೆ ರಾಷ್ಟ್ರಗಳಿಗೆ ಹೋಲಿಸಿದಂತೆ ಗಣನೀಯವಾಗಿ ಹೆಚ್ಚಾಗಿದ್ದು ಜನರ ಜೀವನ ಮಟ್ಟವು ಉತ್ತಮವಾಗಿದೆ. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿಯು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಅವುಗಳಲ್ಲಿ ಪ್ರಮುಖವಾಗಿ:

1) **ಕೃಷಿಯ ಪ್ರಗತಿಗೆ ಕೊಡುಗೆ:** ಕೈಗಾರಿಕೆಗಳು ಕೃಷಿಯ ಅಭಿವೃದ್ಧಿಗೆ ಅಗತ್ಯವಿರುವ ಆದಾನಗಳನ್ನು ಪೂರೈಕೆ ಮಾಡುತ್ತವೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

2) **ದೇಶದ ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ:** ದೇಶವು ಯಥೇಚ್ಛವಾಗಿರುವ ನೈಸರ್ಗಿಕ ಖನಿಜ ಸಂಪನ್ಮೂಲಗಳನ್ನು ಹೊಂದಿದ್ದು, ಅವುಗಳ ಸದ್ಬಳಕೆ ಮಾಡಿಕೊಳ್ಳಲು ಕೈಗಾರಿಕಾ ಘಟಕಗಳು ಸಹಕಾರಿಯಾಗಿವೆ.

3) **ಉದ್ಯೋಗಾವಕಾಶಗಳ ಸೃಷ್ಟಿ:** ಕೈಗಾರಿಕಾ ವಲಯದ ಅಭಿವೃದ್ಧಿಯು ನೇರವಾಗಿ ಮತ್ತು ಪರೋಕ್ಷವಾಗಿ ಹಲವಾರು ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿ ದೇಶದ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುತ್ತದೆ. ಸಾಕಷ್ಟು ಅಸಂಘಟಿತ ವಲಯದ ಕೈಗಾರಿಕಾ ಕಾರ್ಮಿಕರಿಗೆ ಆದಾಯದ ಪ್ರಮುಖ ಮೂಲವಾಗಿದೆ. ಸಣ್ಣ ಉದ್ದಿಮೆಗಳನ್ನು ಪೋಷಿಸಿ ಮತ್ತು ಪ್ರೋತ್ಸಾಹಿಸಿ ಉದ್ಯೋಗ ನಿರ್ಮಾಣಕ್ಕೆ ಪೂರಕವಾಗುವ ಕಾರ್ಯವನ್ನು ಜರುಗಿಸುತ್ತದೆ.

4) **ವಿವಿಧ ವಲಯಗಳ ಸಮತೋಲನ ಅಭಿವೃದ್ಧಿ:** ದೇಶದಲ್ಲಿ ಕೈಗಾರೀಕರಣದ ಬೆಳವಣಿಗೆಯು ವಿವಿಧ ವಲಯಗಳ ನಡುವೆ ಸಮತೋಲನದ ಅಭಿವೃದ್ಧಿ ಸಾಧಿಸಲು ಹಾಗೂ ಇತರೆ ಆರ್ಥಿಕತೆ ವಲಯಗಳನ್ನು ಅಭಿವೃದ್ಧಿಗೊಳಿಸಲು ಸಹಾಯಕವಾಗುತ್ತದೆ.

5) **ಬಂಡವಾಳ ಸಂಚಯನವನ್ನು ಹೆಚ್ಚಿಸುವುದು:** ಕೈಗಾರೀಕರಣದ ಬೆಳವಣಿಗೆಯು ದೇಶದ ಬಂಡವಾಳ ಸಂಚಯನದ ದರ ಮತ್ತು ಗಾತ್ರವನ್ನು ಹೆಚ್ಚಿಸುವುದಲ್ಲದೆ ಉದ್ಯೋಗವನ್ನು ಸೃಷ್ಟಿಸಿ, ಜನರ ಆದಾಯ ಮತ್ತು ಉಳಿತಾಯದ ಮಟ್ಟವನ್ನು ಹೆಚ್ಚಿಸುತ್ತದೆ.

6) **ಜನರ ಜೀವನಮಟ್ಟ ಸುಧಾರಣೆ:** ದೇಶದ ಒಟ್ಟು ರಾಷ್ಟ್ರೀಯ ಆದಾಯಕ್ಕೆ ಕೈಗಾರಿಕಾ ವಲಯದಿಂದ ಪ್ರಮುಖ ಕೊಡುಗೆಗಳನ್ನು ನೀಡುತ್ತಿದೆ. ಹಾಗೆಯೇ ಕೈಗಾರಿಕಾ ವಲಯವು ಉದ್ಯೋಗಿಗಳಿಗೆ ಸಾಪೇಕ್ಷವಾಗಿ ಹೆಚ್ಚಿನ ಆದಾಯವನ್ನು ತಂದುಕೊಡುತ್ತದೆ. ಇದು ಜನರ ತಲಾದಾಯವು ಹೆಚ್ಚಾಗಿಸುವ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸುತ್ತದೆ.

7) **ಕೃಷಿಯ ಮೇಲಿನ ಒತ್ತಡವನ್ನು ಕಡಿಮೆಗೊಳಿಸುತ್ತದೆ:** ದೇಶದ ಕೃಷಿ ವಲಯವು ಶೇ. 48.9ರಷ್ಟು ಜನರಿಗೆ ಉದ್ಯೋಗವನ್ನು ನೀಡುತ್ತಿದೆ. ಇದರಿಂದಾಗಿ ಕೃಷಿಯಲ್ಲಿ ಮರೆಮಾಚಿದ ಉದ್ಯೋಗ ಹೆಚ್ಚಾಗಿದ್ದು, ಕೃಷಿಕರ ಬದುಕು ತೀರಾ ಸಂಕಷ್ಟದಲ್ಲಿದೆ. ಕೈಗಾರಿಕೆಗಳ ಅಭಿವೃದ್ಧಿಯು ಕೃಷಿಯ ಮೇಲಿನ ಅಧಿಕ ಅವಲಂಬಿತ ಕೃಷಿಕಾರ್ಮಿಕರನ್ನು ಕೈಗಾರಿಕಾ ವಲಯಕ್ಕೆ ವರ್ಗಾಯಿಸುವುದರ ಮೂಲಕ ಒತ್ತಡವನ್ನು ಕಡಿಮೆಗೊಳಿಸುತ್ತದೆ.

8) **ವಿದೇಶಿ ವಿನಿಮಯ ಗಳಿಕೆ:** ಕೈಗಾರೀಕರಣದ ಅಭಿವೃದ್ಧಿಯು ವಿದೇಶಿ ವ್ಯಾಪಾರದ ಪ್ರಗತಿಗೆ ನೆರವಾಗುತ್ತದೆ. ಇದು ವಿದ್ಯುತ್ ಬಿಡಿಭಾಗಗಳು, ಕಂಪ್ಯೂಟರ್‌ಗಳು, ಕಾರುಗಳು, ಇಂಜಿನಿಯರಿಂಗ್ ಸರಕುಗಳು ಮುಂತಾದವುಗಳನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದಿಸಿ ವಿವಿಧ ದೇಶಗಳಿಗೆ ಉತ್ಪನ್ನವನ್ನು ರಫ್ತುಗೊಳಿಸಲು ಪ್ರೇರೇಪಣೆ ನೀಡುತ್ತದೆ. ಇದರಿಂದ ವಿದೇಶಿ ವ್ಯಾಪಾರ ಉತ್ತೇಜನಗೊಳ್ಳುತ್ತದೆ ಹಾಗೂ ವಿದೇಶಿ ವಿನಿಮಯ ಗಳಿಕೆ ಸಾಧ್ಯವಾಗುತ್ತದೆ.

9) **ಸ್ವಾವಲಂಬನೆಯ ಸಾಧನೆ:** ಆರ್ಥಿಕತೆಯಲ್ಲಿ ಕೈಗಾರೀಕರಣವು ದೇಶವು ಸ್ವಾವಲಂಬನೆಯನ್ನು ಸಾಧಿಸಲು ಸಹಾಯ ಮಾಡುತ್ತದೆ. ಅಗತ್ಯವಾಗಿ ಬೇಕಾಗಿರುವ ಹಲವು ಸರಕುಗಳನ್ನು ಆಮದು ಮಾಡಿಕೊಳುವ ವಸ್ತುಗಳ ಬದಲಾಗಿ ಸ್ವದೇಶದಲ್ಲಿಯೇ ಆ ವಸ್ತುಗಳನ್ನು ಉತ್ಪಾದಿಸುವ ಕ್ರಿಯೆಗೆ ಆಮದು ಬದಲೀಕರಣ ಉತ್ಪಾದನೆ ಎನ್ನುತ್ತೇವೆ. ಆಮದು ಬದಲೀಕರಣ ಸಾಧಿಸುವುದರ ಮೂಲಕ ರಫ್ತುಗಳ ಮೇಲಿನ ಅವಲಂಬನೆಯನ್ನು ತಪ್ಪಿಸುತ್ತದೆ. ಇದರಿಂದ ದೇಶವು ಸ್ವಾವಲಂಬನೆಯನ್ನು ಸಾಧಿಸಬಹುದಾಗಿದೆ.

10) **ಮಾರುಕಟ್ಟೆಗಳ ಅಭಿವೃದ್ಧಿ:** ದೇಶದಲ್ಲಿನ ವಿವಿಧ ರೀತಿಯ ಕಚ್ಚಾ ಸರಕುಗಳು ಮತ್ತು ಅಂತಿಮ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿಯು ವಿವಿಧ ರೀತಿಯ ಕೈಗಾರಿಕೆಗಳು ಉತ್ಪಾದಿಸುವ ಉತ್ಪನ್ನಗಳ ಅಭಿವೃದ್ಧಿಯಿಂದ ಸಾಧ್ಯವಾಗುತ್ತದೆ.

11) **ಸಾರಿಗೆ ಮತ್ತು ಸಂಪರ್ಕಗಳ ಅಭಿವೃದ್ಧಿ:** ಕೈಗಾರಿಕೆಗಳಿಗೆ ಅಗತ್ಯವಿರುವ ಕಚ್ಚಾವಸ್ತುಗಳನ್ನು ಗಣಿಗಳಿಂದ, ಗ್ರಾಮೀಣ ಪ್ರದೇಶಗಳಿಂದ ಕೈಗಾರಿಕಾ ಪ್ರದೇಶಗಳಿಗೆ ಹಾಗೂ ಕೈಗಾರಿಕೆಯು ಉತ್ಪಾದಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ದೇಶದ ಮೂಲೆ ಮೂಲೆಗೂ ಸಾಗಿಸಲು ಎಲ್ಲಾ ರೀತಿಯ ಸಾರಿಗೆ ಮಾಧ್ಯಮಗಳು ಬೆಳೆಯುತ್ತವೆ.

12) **ರಾಷ್ಟ್ರ ರಕ್ಷಣೆ:** ಕೈಗಾರಿಕೆಗಳು ದೇಶದ ಆಂತರಿಕ ಮತ್ತು ಬಾಹ್ಯ ಭದ್ರತೆಗೆ ಅಗತ್ಯವಿರುವ ರಕ್ಷಣಾ ಸಾಮಾಗ್ರಿಗಳನ್ನು ಪೂರೈಸುತ್ತದೆ.

### ಕೈಗಾರಿಕಾ ನೀತಿ

ಭಾರತಕ್ಕೆ ಸ್ವಾತಂತ್ರ್ಯ ಪಡೆದಾಗ, ಕೈಗಾರಿಕೆಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದವು. ಅವುಗಳಲ್ಲಿ ಪ್ರಮುಖವಾದುವೆಂದರೆ: ಕಚ್ಚಾ ಸರಕುಗಳ ಕೊರತೆ, ಬಂಡವಾಳದ ಅಭಾವ, ತಂತ್ರಜ್ಞಾನದ ಕೊರತೆ, ಮುಂತಾದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಲು ಪರಿಣಾಮಕಾರಿಯಾದ ಕೈಗಾರಿಕಾ ನೀತಿಯ ಅವಶ್ಯಕತೆಯಿತ್ತು. ಆ ನಿಟ್ಟಿನಲ್ಲಿ ಭಾರತ ಸರ್ಕಾರವು 1948 ಏಪ್ರಿಲ್ 6ರಂದು ಹೊಸ ಕೈಗಾರಿಕಾ ನೀತಿಯನ್ನು ಘೋಷಿಸಿತು. ಇದಾದ ನಂತರ ಕೈಗಾರೀಕರಣವನ್ನು ಬಲಪಡಿಸಲು ಹಾಗೂ ಕೈಗಾರಿಕೆಗಳ ಬೆಳವಣಿಗೆಯ ವೇಗವನ್ನು ಹೆಚ್ಚಿಸಲು ಮತ್ತು ಆಯಾ ದಿನಮಾನಗಳಿಗೆ ಅವಶ್ಯಕವಿರುವಂತ ಅಂಶಗಳನ್ನೊಳಗೊಂಡ ಕೈಗಾರಿಕಾ ನೀತಿಗಳನ್ನು 1956, 1977, 1980, 1990 ಹಾಗೂ 1991ರಲ್ಲಿ ಘೋಷಿಸಲಾಯಿತು.

## 1991 ರ ಹೊಸ ಕೈಗಾರಿಕ ನೀತಿ

ಸ್ವತಂತ್ರ ಭಾರತದ ಆರ್ಥಿಕ ಇತಿಹಾಸದಲ್ಲಿ 1991 ಅತ್ಯಂತ ಮಹತ್ವದ ವರ್ಷವಾಗಿದೆ. ಏಕೆಂದರೆ 1990ರ ಸಮಯದಲ್ಲಿ ಭಾರತದ ಅರ್ಥವ್ಯವಸ್ಥೆ ಸಂಕಷ್ಟಕ್ಕೆ ಸಿಲುಕಿತ್ತು. ಕೈಗಾರಿಕಾ ಉತ್ಪಾದನೆ ಕಡಿಮೆಯಾಗಿ ವಸ್ತುಗಳ ಅಭಾವ ಉಂಟಾಗಿತ್ತು. ಹಣದುಬ್ಬರ ಶೇ.16ರಷ್ಟು ಆಗಿದ್ದಿತು. ರಫ್ತು ವ್ಯಾಪಾರ ಕಡಿಮೆಯಾಗಿ ವಿದೇಶಿ ವಿನಿಮಯದ ತೀವ್ರ ಕೊರತೆ ಉಂಟಾಗಿತ್ತು. ಸಾರ್ವಜನಿಕ ವಲಯದ ಕೈಗಾರಿಕೆಗಳು ತೀವ್ರ ನಷ್ಟ ಅನುಭವಿಸಿದ್ದವು. ದೇಶದಲ್ಲಿ ಬಂಡವಾಳದ ಕೊರತೆ ಉಂಟಾಗಿತ್ತು. ಇಂತಹ ಸಂದರ್ಭದಲ್ಲಿ ಹಳೆಯ ಹೊಸ ಕೈಗಾರಿಕಾ ನೀತಿಯನ್ನು ಘೋಷಿಸಲಾಯಿತು. ಭಾರತದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಅಂಶಗಳನ್ನು ಭಾರತದ ಅರ್ಥಿಕತೆಯಲ್ಲಿ ತರುವ ಉದ್ದೇಶದಿಂದ ಹೊಸ ಕೈಗಾರಿಕಾ ನೀತಿಯನ್ನು 1991ರಲ್ಲಿ ಜಾರಿಗೊಳಿಸಲಾಯಿತು. 1991ರ ಹೊಸ ಕೈಗಾರಿಕಾ ನೀತಿಯ ಪ್ರಮುಖ ಲಕ್ಷಣಗಳು ಹೀಗಿವೆ:

**1. ಕೈಗಾರಿಕಾ ಪರವಾನಿಗೆಯನ್ನು (ಲೈಸೆನ್ಸ್) ರದ್ದು ಪಡಿಸುವುದು:** ಹೊಸ ಕೈಗಾರಿಕಾ ನೀತಿಯು ಹೂಡಿಕೆಯ ಮಟ್ಟವನ್ನು ಪರಿಗಣಿಸದೇ ಎಲ್ಲಾ ಕೈಗಾರಿಕೆಗಳ ಸ್ಥಾಪನೆ ಹಾಗೂ ಕಾರ್ಯಚರಣೆಗಾಗಿ ಅವು ಪಡೆದುಕೊಳ್ಳುತ್ತಿದ್ದ ಪರವಾನಿಗೆಯನ್ನು (ಲೈಸೆನ್ಸ) ರದ್ದುಪಡಿಸಿತು. ಇದು ಆರ್ಥಿಕತೆಯ ಉದಾರೀಕರಣಕ್ಕೆ ಸಾಕ್ಷಿಯಾಯಿತು. ಆದರೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ, ಪರಿಸರ ಸಂಬಂಧಿ ಅಪಾಯಕಾರಿ ಸ್ವರೂಪದ ತಯಾರಿಕಾ ಉತ್ಪನ್ನಗಳು ಮತ್ತು ಪ್ರಮುಖ ಅನುಭೋಗಿ ಸರಕುಗಳ ಉತ್ಪಾದನೆಯ ಕೈಗಾರಿಕೆಗಳಿಗೆ ಪರವಾನಿಗೆಯನ್ನು ಪಡೆಯುವಂತೆ ನಿರ್ದೇಶಿಸಿತ್ತು.

**2. ವಿದೇಶಿ ಹೂಡಿಕೆ ಮತ್ತು ತಂತ್ರಜ್ಞಾನ:** ರಫ್ತು ಸರಕುಗಳ ತಯಾರಿಕೆಯಲ್ಲಿ ತೊಡಗುವ ಕಂಪನಿಗಳನ್ನು ಉತ್ತೇಜಿಸುವುದಕ್ಕಾಗಿ ಸರ್ಕಾರವು ವಿದೇಶಿ ನೇರ ಹೂಡಿಕೆಗೆ ಅವಕಾಶವನ್ನು ಒದಗಿಸಿತು. ಅಧಿಕ ಆದ್ಯತಾ ಕೈಗಾರಿಕೆಗಳಲ್ಲಿ ಶೇ. 51ರವರೆಗೆ ವಿದೇಶಿ ನೇರ ಹೂಡಿಕೆಗೆ ಅನುಮತಿ ನೀಡಲಾಯಿತು. ರಫ್ತು ಚಟುವಟಿಕೆಗಳಲ್ಲಿ ತೊಡಗಿರುವ ಸ್ವದೇಶಿ ಉದ್ದಿಮೆ/ಕಂಪನಿಗಳಲ್ಲಿ ಷೇರು ಬಂಡವಾಳದಲ್ಲಿ ವಿದೇಶಿ ವ್ಯಾಪಾರ ಕಂಪನಿಗಳು ಶೇ. 51 ರಷ್ಟು ಪಾಲನ್ನು ಹೊಂದುವ ಅವಕಾಶ ನೀಡಲಾಯಿತು.

**3. ಸಾರ್ವಜನಿಕ ವಲಯಗಳ ಪಾತ್ರ ಕನಿಷ್ಠಗೊಳಿಸಿದ್ದು:** 1956ರಲ್ಲಿ 17 ಉತ್ಪಾದನಾ ಕ್ಷೇತ್ರಗಳಿಗೆ ಮೀಸಲಾಗಿದ್ದ ಸಾರ್ವಜನಿಕ ವಲಯದ ಪಾತ್ರವನ್ನು 1991ರ ವೇಳೆಗೆ ಕೇವಲ 13 ಕೈಗಾರಿಕೆಗಳನ್ನು ಮಾತ್ರ ಕೆಲವೇ ಕ್ಷೇತ್ರಗಳಿಗೆ ಮೀಸಲಿರಿಸಲಾಯಿತು. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕೇವಲ ಒಂದು ಕೈಗಾರಿಕೆ ಮಾತ್ರ ಸಾರ್ವಜನಿಕ ವಲಯಕ್ಕೆ ಮೀಸಲಿರಿಸಿದೆ. ಅಣುಶಕ್ತಿ ಭದ್ರತೆ ಮಾತ್ರ ಸಾರ್ವಜನಿಕ ವಲಯದ ಏಕಸ್ವಾಮ್ಯದಲ್ಲಿದೆ. ಸಾರ್ವಜನಿಕ ವಲಯದಲ್ಲಿ ಹೂಡಿಕೆ ಹಿಂತೆಗೆತಕ್ಕೆ ಅವಕಾಶ ಮಾಡಿಕೊಡುವ ಮೂಲಕ ಖಾಸಗೀಕರಣಕ್ಕೆ ಪ್ರೋತ್ಸಾಹ ನೀಡಲಾಯಿತ್ತು. ಸಾರ್ವಜನಿಕ ಸ್ವಾಮ್ಯದ ಸರ್ಕಾರಿ ಸಮಬಂಡವಾಳವನ್ನು ಖಾಸಗಿ ವಲಯದವರಿಗೆ ಮಾರಾಟ ಮಾಡುವುದಕ್ಕೆ ಹೂಡಿಕೆ ಹಿಂತೆಗೆತ ಎನ್ನಲಾಗುತ್ತದೆ. ಇದರಿಂದಾಗಿ ಸರಕಾರಿ ಸ್ವಾಮ್ಯದ ಉದ್ದಿಮೆಗಳು ಉತ್ತಮವಾಗಿ ಕಾರ್ಯಾಚರಣೆ ಮಾಡಿ ನಷ್ಟದಿಂದ ಹೊರಬಂದಿವೆ.

**4. ಕೈಗಾರಿಕಾ ಪ್ರಾದೇಶಿಕ ನೀತಿಯ ಉದಾರೀಕರಣ:** ಹೊಸ ಕೈಗಾರಿಕಾ ನೀತಿಯು 1 ಮಿಲಿಯನ್ ಜನಸಂಖ್ಯೆಗಿಂತ ಹೆಚ್ಚು ಜನಸಂಖ್ಯೆಯಿರುವ ನಗರೇತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಕೇಂದ್ರದಿಂದ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ. ಆದರೆ 1 ಮಿಲಿಯನ್ ಜನಸಂಖ್ಯೆಗಿಂತ ಹೆಚ್ಚು ಜನಸಂಖ್ಯೆಯಿರುವ ನಗರಗಳಲ್ಲಿ ಕೈಗಾರಿಕೆಗಳ ವಿಷಯವಾಗಿ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಮಾಲೀನ್ಯೇತರ ಸ್ವರೂಪದ ಕೈಗಾರಿಕೆಗಳನ್ನು ಜನರ ವಾಸಸ್ಥಳದ ಪರಿಧಿಯಿಂದ 23 ಕಿ.ಮೀ ದೂರದಲ್ಲಿ ಸ್ಥಾಪಿಸಬೇಕು ಎಂಬ ಷರತ್ತು ವಿಧಿಸಿದೆ.

**5. ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ:** ಭಾರತದಲ್ಲಿ ವಿದೇಶಿ ಕಂಪನಿಗಳ ಕಾರ್ಯ ನಿರ್ವಹಣೆಯನ್ನು ನಿಯಂತ್ರಿಸಲು ಸರ್ಕಾರವು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆಯನ್ನು (FERA ಫೆರಾ) 1947ರಲ್ಲಿ ಜಾರಿಗೆ ತಂದಿತು. 1973ರಲ್ಲಿ ಈ ಕಾಯಿದೆಯನ್ನು ವ್ಯಾಪಕವಾಗಿ ತಿದ್ದುಪಡಿಮಾಡಲಾಯಿತು. 1973ರ ಫೆರಾ ಕಾಯಿದೆಯ ಪ್ರಮುಖ ಉದ್ದೇಶಗಳೆಂದರೆ ಅ) ಭಾರತದ ಅಮೂಲ್ಯವಾದ ವಿದೇಶಿ ವಿನಿಮಯ ಸಂಪತ್ತನ್ನು ಸಂಗ್ರಹಿಸುವುದು. ಆ) ವಿದೇಶಿ ಹೂಡಿಕೆದಾರರಿಗೆ ನಿಧಿಯನ್ನು ಉನ್ನತ ತಂತ್ರಜ್ಞಾನವನ್ನು ತರಲು ಬಳಸುವಂತೆ ಉತ್ತೇಜಿಸುವುದು.

FERA (1973) ಕಾಯ್ದೆಯ ಕೆಲ ವಿಭಾಗಗಳು ಸಾಕಷ್ಟು ಟೀಕೆಗೆ ಗುರಿಯಾಗಿದ್ದವು. ಉದಾಹರಣೆಗೆ, ಯಾವುದಾದರೂ ವ್ಯಕ್ತಿಯನ್ನು ಫೆರಾ ಅಡಿಯಲ್ಲಿ ಬಂಧಿಸಿದರೆ, ಆ ವ್ಯಕ್ತಿಯೂ ತನ್ನ ಬಳಿ ವಿದೇಶಿ ವಿನಿಮಯದ ಪರವಾನಗಿ ಇದೆ ಎಂದು ರುಜುವಾತುಪಡಿಸುವ ಕಾರ್ಯ ಆ ವ್ಯಕ್ತಿಯದೇ ಆಗಿರುತ್ತಿತ್ತು. ಇದರಿಂದ ಅನೇಕ ಅರ್ಹ, ನೈಜ ವ್ಯಕ್ತಿಗಳಿಗೆ ತೊಂದರೆಯಾಗುತ್ತಿತ್ತು.

ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆಯನ್ನು ಜುಲೈ 1998ರಂದು ಸಂಸತ್ತಿನಲ್ಲಿ 1973ರ ಫೆರಾ (FERA) ಕಾಯಿದೆಯನ್ನು ರದ್ದುಪಡಿಸಿ ಫೆಮಾ (FEMA)ವನ್ನು ಅದರ ಜಾಗದಲ್ಲಿ ಜಾರಿಗೆ ತರಲಾಯಿತು. ಭಾರತದಲ್ಲಿ ವಿದೇಶಿ ವಿನಿಮಯ ಮಾರುಕಟ್ಟೆಯ ಕ್ರಮಬದ್ಧ ನಿರ್ವಹಣೆ ಮತ್ತು ಅಭಿವೃದ್ಧಿಗೊಳಿಸಿ, ಬಾಹ್ಯ ವ್ಯಾಪಾರ ಮತ್ತು ಪಾವತಿಗಳ ಸುಗಮತೆಗೆ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಕಾನೂನುಗಳನ್ನು ಸರಳೀಕರಿಸುವುದಲ್ಲದೇ ಸಂಬಂಧಿಸಿದ ಎಲ್ಲ ನಿಯಮಗಳನ್ನು ಕ್ರೂಢೀಕರಿಸುವುದು ಫೆಮಾದ ಉದ್ದೇಶವಾಗಿತ್ತು.

## ಕೈಗಾರಿಕೆಗಳ ವರ್ಗೀಕರಣ

ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಪ್ರಮುಖವಾಗಿ ಕೈಗಾರಿಕೆಗಳನ್ನು ಸಂಘಟಿತ ಮತ್ತು ಅಸಂಘಟಿತ ಕೈಗಾರಿಕೆಗಳೆಂದು ವಿಂಗಡಿಸಲಾಗುತ್ತದೆ.

ಕೈಗಾರಿಕೆಗಳ ಒಡೆತನದ ಆಧಾರದ ಮೇಲೆ ಕೈಗಾರಿಕೆಗಳನ್ನು ಸಾರ್ವಜನಿಕ ವಲಯದ ಕೈಗಾರಿಕೆಗಳು ಮತ್ತು ಖಾಸಗಿವಲಯದ ಕೈಗಾರಿಕೆಗಳು ಎಂದು ವಿಂಗಡಿಸಬಹುದಾಗಿದೆ. ಸಾರ್ವಜನಿಕ ವಲಯದ ಕೈಗಾರಿಕೆಗಳು ಸರ್ಕಾರದ ಒಡೆತನದಲ್ಲಿರುತ್ತವೆ. ಇವುಗಳನ್ನು ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು ಎಂದು ವರ್ಗೀಕರಿಸಲಾಗಿದೆ. ಖಾಸಗಿ ವಲಯದ ಕೈಗಾರಿಕೆಗಳು ಖಾಸಗಿ ವ್ಯಕ್ತಿಗಳ ಒಡೆತನದಲ್ಲಿರುತ್ತವೆ.

ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆಯ ಆಧಾರದ ಮೇಲೆ ಕೈಗಾರಿಕೆಗಳನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಎಂದು ವರ್ಗೀಕರಿಸಲಾಗಿದೆ. 2006ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಕಾಯಿದೆಯಡಿಯಲ್ಲಿ ಉದ್ಯಮಗಳನ್ನು ತಯಾರಿಕಾ ಮತ್ತು ಸೇವಾ ಉದ್ಯಮಗಳೆಂದು ವರ್ಗೀಕರಿಸಲಾಗಿದೆ (ಕೋಷ್ಟಕ 6.1 ನೋಡಿರಿ).

**ಕೋಷ್ಟಕ 6.1: ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆಯ ಆಧಾರದ ಮೇಲೆ ಕೈಗಾರಿಕೆಗಳ ವರ್ಗೀಕರಣ**

| ಉದ್ಯಮ | ತಯಾರಿಕಾ ಕೈಗಾರಿಕೆ ಹೂಡಿಕೆ ಮಿತಿ | ಸೇವಾ ಕೈಗಾರಿಕೆ ಹೂಡಿಕೆ ಮಿತಿ |
|---|---|---|
| ಸೂಕ್ಷ್ಮ | 25 ಲಕ್ಷ ರೂಪಾಯಿಗಳವರೆಗೆ | 10 ಲಕ್ಷ ರೂಪಾಯಿಗಳವರೆಗೆ |
| ಸಣ್ಣ | 5 ಕೋಟಿ ರೂಪಾಯಿಗಳವರೆಗೆ | 2 ಕೋಟಿ ರೂಪಾಯಿಗಳವರೆಗೆ |
| ಮಧ್ಯಮ | 10 ಕೋಟಿ ರೂಪಾಯಿಗಳವರೆಗೆ | 5 ಕೋಟಿ ರೂಪಾಯಿಗಳವರೆಗೆ |

ಸರಕು ಕೈಗಾರಿಕೆ ಅಡಿಯಲ್ಲಿ ಗರಿಷ್ಠ ರೂ. 25 ಲಕ್ಷ ರೂಪಾಯಿ ಬಂಡವಾಳ ಹೂಡಿದರೆ ಸೂಕ್ಷ್ಮ ಕೈಗಾರಿಕೆ ಎಂದೂ, ರೂ.25 ಲಕ್ಷಕ್ಕಿಂತ ಹೆಚ್ಚು ಹಾಗೂ ರೂ. 5 ಕೋಟಿಗಿಂತ ಕಡಿಮೆ ಬಂಡವಾಳ ಹೂಡಿದರೆ ಸಣ್ಣ ಕೈಗಾರಿಕೆ ಎಂತಲೂ ಹಾಗೂ ರೂ.5 ಕೋಟಿಗಿಂತ ಹೆಚ್ಚು ಹಾಗೂ ರೂ. 10 ಕೋಟಿಗಳವರೆಗೆ ಬಂಡವಾಳ ಹೂಡಿದರೆ ಮಧ್ಯಮ ವರ್ಗದ ಉದ್ಯಮ ಎಂದು ವ್ಯಾಖ್ಯಾನಿಸಲಾಗಿದೆ.

ಹಾಗೆಯೇ ಸೇವಾ ಕೈಗಾರಿಕೆ ಹೂಡಿಕೆಯಲ್ಲಿ ಗರಿಷ್ಟ ರೂ.10 ಲಕ್ಷ ರೂಪಾಯಿ ಬಂಡವಾಳ ಹೂಡಿದರೆ ಸೂಕ್ಷ್ಮ ಕೈಗಾರಿಕೆ ಎಂದೂ, ರೂ. 10 ಲಕ್ಷಕ್ಕಿಂತ ಹೆಚ್ಚು ಹಾಗೂ ರೂ. 2 ಕೋಟಿಗಿಂತ ಕಡಿಮೆ ಬಂಡವಾಳ ಹೂಡಿದರೆ ಸಣ್ಣ ಕೈಗಾರಿಕೆ ಎಂತಲೂ ಹಾಗೂ ರೂ. 2 ಕೋಟಿಗಿಂತ ಹೆಚ್ಚು ಹಾಗೂ ರೂ.5 ಕೋಟಿಗಳವರೆಗೆ ಬಂಡವಾಳ ಹೂಡಿದರೆ ಮಧ್ಯಮ ವರ್ಗದ ಉದ್ಯಮ ಎಂದು ವ್ಯಾಖ್ಯಾನಿಸಲಾಗಿದೆ.

## ಸಣ್ಣ ಪ್ರಮಾಣದ ಕೈಗಾರಿಕೆಯ ಲಕ್ಷಣಗಳು

ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರಮುಖ ಲಕ್ಷಣಗಳೆಂದರೆ

1) ನಗರ ಮತ್ತು ಅರೆ–ನಗರ ಪ್ರದೇಶಗಳಂತಹ ಸ್ಥಳೀಯ ಪ್ರದೇಶಗಳಲ್ಲಿ ಸುಲಭವಾಗಿ ಸ್ಥಾಪಿಸಬಹುದಾಗಿದೆ.

2) ಕೈಗಾರಿಕಾ ಘಟಕಗಳ ಹೂಡಿಕೆಯ ಮಿತಿಯು ಕಡಿಮೆಯಿರುತ್ತದೆ.

3) ಕೂಲಿಯ ಆಧಾರದ ಮೇಲೆ ಶ್ರಮವನ್ನು ನೇಮಿಸಿಕೊಳ್ಳಲಾಗುತ್ತದೆ.

4) ಸ್ವಯಂ ಬೆಂಬಲ ನೀಡುವ ಕಾರ್ಮಿಕರು ಮತ್ತು ಸಣ್ಣ ಉದ್ಯಮಶೀಲಗಾರರಿಂದ ನಡೆಸಲ್ಪಡುತ್ತದೆ.

5) ಸ್ಥಳೀಯ ಪ್ರದೇಶಗಳಲ್ಲಿ ಲಭ್ಯವಿರುವ ಕಚ್ಚಾ ಸಂಪನ್ಮೂಲಗಳನ್ನು ಬಳಸಿಕೊಳ್ಳಲಾಗುತ್ತದೆ.

## ಸಣ್ಣ ಪ್ರಮಾಣದ ಕೈಗಾರಿಕೆಗಳ ಮಹತ್ವ

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಸಣ್ಣ ಕೈಗಾರಿಕೆಗಳು ಮಹತ್ವದ ಪಾತ್ರವನ್ನು ಹೊಂದಿವೆ. ಸಣ್ಣ ಕೈಗಾರಿಕೆಗಳು ಹೆಚ್ಚು ಉದ್ಯೋಗಗಳನ್ನು ಒದಗಿಸುತ್ತದೆ. ಇದು ದಕ್ಷ ಸಂಪನ್ಮೂಲಗಳ ಬಳಕೆಗೆ ಸಹಾಯ ಮಾಡುತ್ತವೆ. ಸಮಾಜದಲ್ಲಿನ ವಿವಿಧ ವರ್ಗಗಳ ನಡುವೆ ರಾಷ್ಟ್ರೀಯ ಆದಾಯವನ್ನು ಸಮನವಾಗಿ ವಿತರಿಸುವ ಮೂಲಕ ಆರ್ಥಿಕ ಸಮಾನತೆಯನ್ನು ಸಾಧಿಸಲೂ ಸಹಾಯ ಮಾಡುತ್ತವೆ. ಭಾರತದಲ್ಲಿ ಎಲ್ಲರಿಗೂ ಉದ್ಯೋಗ ಒದಗಿಸಬೇಕಾದರೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದರಿಂದ ಮಾತ್ರ ಸಾಧ್ಯ. ಭಾರತದಂತ ದೇಶಕ್ಕೆ ಸಣ್ಣ ಕೈಗಾರಿಕೆಗಳ ಮಹತ್ವ ಈ ಕೆಳಗಿನಂತಿದೆ:

1) **ಉದ್ಯೋಗ ನಿರ್ಮಾಣ:** ಸಣ್ಣ ಕೈಗಾರಿಕೆಗಳು ಶ್ರಮ ಆಧಾರಿತ ಕೈಗಾರಿಕೆಗಳಾಗಿದ್ದು, ಭಾರತದಂತಹ ಅಧಿಕ ಶ್ರಮ ಜನಸಂಖ್ಯೆಗೆ ಉದ್ಯೋಗ ಒದಗಿಸುವ ಸಾಮರ್ಥ್ಯ ಹೊಂದಿದೆ. ಇಂದು ದೇಶದಾದ್ಯಂತ ಸಣ್ಣ ಕೈಗಾರಿಕೆಗಳು ವಿಕೇಂದ್ರಿಕರಣಗೊಂಡಿದ್ದು ಮುಕ್ತ ನಿರುದ್ಯೋಗ ಹಾಗೂ ಅರೆ ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.

2) **ಉತ್ಪಾದನೆ ಮತ್ತು ಹೂಡಿಕೆಯಲ್ಲಿ ಹೆಚ್ಚಳ:** ಗೃಹ ಮತ್ತು ಸಣ್ಣ ಕೈಗಾರಿಕೆಗಳ ಉತ್ಪಾದನಾ ಪ್ರಮಾಣವು ದಿನೇ ದಿನೇ ಹೆಚ್ಚುತ್ತಿದೆ. ದೇಶದ ಕೈಗಾರಿಕಾ ಉತ್ಪಾದನೆಯಲ್ಲಿ ಶೇಕಡ 40ರಷ್ಟು ಆಗಿದೆ.

3) **ಕಡಿಮೆ ಬಂಡವಾಳ:** ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಕಡಿಮೆ ಬಂಡವಾಳ ಸಾಕಾಗುತ್ತದೆ. ಮಿತ ಬಂಡವಾಳದಿಂದ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳಿಂದ ಶೀಘ್ರವಾಗಿ ಪ್ರತಿಫಲ ಪಡೆಯಬಹುದಾಗಿದೆ. ಈ ಅನುಕೂಲತೆಗಳಿಂದಾಗಿ ಸರ್ಕಾರ ಸಣ್ಣ ಕೈಗಾರಿಕೆಗಳ ಮೇಲೆ ಹೆಚ್ಚು ಬಂಡವಾಳ ಹೂಡಿಕೆಗೆ ಪ್ರೋತ್ಸಾಹಿಸುತ್ತಿದೆ.

4) **ರಫ್ತು ಅಭಿವೃದ್ಧಿ:** ಸಣ್ಣ ಕೈಗಾರಿಕೆಗಳು ಉತ್ಪಾದಿಸುವ ಸಿದ್ಧ ಉಡುಪುಗಳು, ಚರ್ಮದ ವಸ್ತಗಳು, ಕರಕುಶಲ ವಸ್ತುಗಳು, ಆಭರಣಗಳು, ಎಲೆಕ್ಟ್ರಾನಿಕ್ ವಸ್ತುಗಳು, ದ್ವಿಚಕ್ರ ವಾಹನಗಳು, ಆಹಾರದ ವಸ್ತುಗಳು ಮುಂತಾದ ಸಾವಿರಾರು ವಸ್ತುಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ.

5) **ಸ್ಥಳೀಯ ಸಂಪನ್ಮೂಲಗಳ ದಕ್ಷ ಬಳಕೆ:** ಸಣ್ಣ ಕೈಗಾರಿಕೆಗಳು ಸ್ಥಳೀಯವಾಗಿ ಲಭ್ಯವಾಗುವ ನೈಸರ್ಗಿಕ ಸಂಪನ್ಮೂಲಗಳು ಮತ್ತು ಮಾನವ ಶಕ್ತಿಯನ್ನು ಬಳಸಿಕೊಳ್ಳುತ್ತವೆ. ಗ್ರಾಮೀಣ ಭಾಗದಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಬಳಸಿಕೊಂಡು ಕೃಷಿ ಸಲಕರಣೆಗಳು, ಚರ್ಮದ ವಸ್ತುಗಳು, ಬಟ್ಟೆ, ಸಾರಿಗೆ ವಸ್ತುಗಳು, ಆಹಾರದ ವಸ್ತುಗಳು, ಬಿದಿರಿನ ವಸ್ತುಗಳು ಮುಂತಾದವುಗಳನ್ನು ತಯಾರಿಸುತ್ತದೆ. ಇದರಿಂದ ಗ್ರಾಮೀಣ ಜನರಿಗೆ ಹೆಚ್ಚು ಉದ್ಯೋಗಗಳು ದೊರೆಯುತ್ತವೆ.

6) **ಪ್ರಾದೇಶಿಕ ಅಸಮತೋಲನ ನಿವಾರಣೆ:** ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ಸರ್ಕಾರ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುತ್ತಿದೆ. ನಗರ ಪ್ರದೇಶಗಳಲ್ಲಿ ದೊಡ್ಡ ಕೈಗಾರಿಕೆಗಳು ಕೇಂದ್ರೀಕರಣಗೊಂಡಿದ್ದು ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಆದ್ದರಿಂದ ಸಣ್ಣ ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ, ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಸ್ಥಾಪಿಸುವ ಮೂಲಕ ಪ್ರಾದೇಶಿಕ ಅಸಮತೋಲನ ನಿವಾರಣೆ ಸಾಧ್ಯವಾಗುತ್ತದೆ.

7) **ಸಂಪತ್ತಿನ ಅಸಮಾನ ಹಂಚಿಕೆಯನ್ನು ಕಡಿಮೆಗೊಳಿಸುವುದು:** ಬೃಹತ್ ಕೈಗಾರಿಕೆಗಳು ಆದಾಯ ಮತ್ತು ಸಂಪತ್ತಿನ ಕೇಂದ್ರೀಕರಣಕ್ಕೆ ಕಾರಣವಾದರೆ ಸಣ್ಣ ಕೈಗಾರಿಕೆಗಳು ಸಂಪತ್ತಿನ ಸಮಾನ ಹಂಚಿಕೆಗೆ ಸಹಾಯ ಮಾಡುತ್ತವೆ. ಈ ಕೈಗಾರಿಕೆಗಳ ಲಾಭ ಲಕ್ಷಾಂತರ ಸಣ್ಣ ಉದ್ಯಮಿಗಳು ಹಾಗೂ ಕೋಟ್ಯಾಂತರ ಕಾರ್ಮಿಕರಲ್ಲಿ ಹಂಚಿಕೆಯಾಗುತ್ತದೆ. ಇದರಿಂದಾಗಿ ಸರ್ಕಾರ ಈ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತವೆ.

8) **ದೊಡ್ಡ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ:** ಸಣ್ಣ ಕೈಗಾರಿಕೆಗಳ ಉಪ ವಸ್ತುಗಳನ್ನು ಬಳಸಿಕೊಳ್ಳುವುದು ಹಾಗೂ ದೊಡ್ಡ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳು, ಬಿಡಿ ಭಾಗಗಳನ್ನು ಒದಗಿಸುವ ಮೂಲಕ ದೊಡ್ಡ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗುತ್ತವೆ.

9) **ಕಾರ್ಖಾನೆ ಸಮಸ್ಯೆಗಳು ಹಾಗೂ ಪರಿಸರ ಸಮಸ್ಯೆಗಳಿಂದ ಮುಕ್ತ:** ಸಣ್ಣ ಕೈಗಾರಿಕೆಗಳು ಕಾರ್ಮಿಕರ ಸಮಸ್ಯೆಗಳು, ಮಾಲೀಕ–ಕಾರ್ಮಿಕ ಸಂಘರ್ಷದಂತಹ ಸ್ಥಿತಿಗಳು ಇರುವುದಿಲ್ಲ. ಅಲ್ಲದೇ ನೀರಿನ ಮಾಲಿನ್ಯ, ವಾಯುಮಾಲಿನ್ಯ ಮತ್ತು ತ್ಯಾಜ್ಯ ಮಾಲಿನ್ಯಗಳಂತಹ ಗಂಭೀರ ಸಮಸ್ಯೆಗಳಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳು ಮುಕ್ತವಾಗಿರುತ್ತದೆ.

## ಸಣ್ಣ ಕೈಗಾರಿಕೆಗಳ ಸಮಸ್ಯೆಗಳು

ಸ್ವಾತಂತ್ರ್ಯ ನಂತರ ಸರ್ಕಾರದ ಪ್ರೋತ್ಸಾಹದ ಹೊರತಾಗಿಯೂ ಸಹ ಸಣ್ಣ ಪ್ರಮಾಣದ ಕೈಗಾರಿಕೆಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಪ್ರಮುಖವಾಗಿ:

1. **ಕಚ್ಚಾ ಸರಕುಗಳ ಸಮಸ್ಯೆ:** ಸಣ್ಣ ಕೈಗಾರಿಕೆಗಳು ತಮಗೆ ಬೇಕಾದ ಕಚ್ಚಾ ವಸ್ತುಗಳ ಸಮಸ್ಯೆಯನ್ನು ನಿರಂತರವಾಗಿ ಎದುರಿಸುತ್ತಿದೆ. ಅಲ್ಲದೇ ಕಳಪೆ ಗುಣಮಟ್ಟದ ಕಚ್ಚಾವಸ್ತುಗಳಿಂದಾಗಿ ಉತ್ತಮ ಗುಣಮಟ್ಟದ ಸರಕುಗಳನ್ನು ಉತ್ಪಾದಿಸುವಲ್ಲಿ ವಿಫಲವಾಗಿದೆ. ಇದರಿಂದ ಉತ್ಪಾದನಾ ವೆಚ್ಚ ಹೆಚ್ಚುತ್ತದೆ.
2. **ಹಣಕಾಸಿನ ಸಮಸ್ಯೆ:** ಸಣ್ಣ ಕೈಗಾರಿಕೆಗಳು ಮತ್ತೊಂದು ಪ್ರಮುಖ ಸಮಸ್ಯೆಯೆಂದರೆ ಹಣಕಾಸಿನ ತೀವ್ರ ಕೊರತೆಯಾಗಿದೆ. ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಸಾಕಷ್ಟು ಹಣಕಾಸನ್ನು ಪೂರೈಸುವ ಹಣಕಾಸಿನ ಸಂಸ್ಥೆಗಳ ಕೊರತೆಯನ್ನು ಗ್ರಾಮೀಣ ಮತ್ತು ಅರೆ ನಗರ ಪಟ್ಟಣ ಪ್ರದೇಶಗಳು ಎದುರಿಸುತ್ತಿವೆ.
3. **ತಂತ್ರಜ್ಞಾನದ ಕೊರತೆ:** ಗೃಹ ಮತ್ತು ಸಣ್ಣ ಕೈಗಾರಿಕೆಗಳು ಇಂದಿಗೂ ಹಳೆಯ ತಂತ್ರಜ್ಞಾನ ಮತ್ತು ಯಂತ್ರಗಳನ್ನೇ ಉತ್ಪಾದನೆಯಲ್ಲಿ ಬಳಸುತ್ತಿವೆ. ಇದರಿಂದ ವಸ್ತುಗಳ ಗುಣಮಟ್ಟ ಕುಸಿದು ಉತ್ಪಾದನಾ ವೆಚ್ಚ ಹೆಚ್ಚುತ್ತಿದೆ. ತಮ್ಮ ಪೂರ್ಣ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳಲು ವಿಫಲವಾಗುತ್ತಿವೆ.
4. **ವಿದ್ಯುತ್ ಸಮಸ್ಯೆ:** ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್‌ಚ್ಛಕ್ತಿಯ ಅಸಮರ್ಪಕ ಪೂರೈಕೆ ಮತ್ತು ವಿದ್ಯುತ್ತಿನ ಲೋಡ್ ಶೆಡ್ಡಿಂಗ್‌ನಿಂದಾಗಿ ಸಣ್ಣ ಕೈಗಾರಿಕೆಗಳು ತುಂಬಾ ತೊಂದರೆಗೊಳಗಾಗಿವೆ.
5. **ಮಾರುಕಟ್ಟೆ ಸಮಸ್ಯೆಗಳು:** ಗೃಹ ಮತ್ತು ಸಣ್ಣ ಕೈಗಾರಿಕೆಗಳು ಉತ್ಪಾದಿಸಿದ ಸರಕುಗಳಿಗೆ ಮಾರುಕಟ್ಟೆ ಒದಗಿಸುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಬೃಹತ್ ಪ್ರಮಾಣದ ಕೈಗಾರಿಕೆಗಳು ಕಡಿಮೆ ವೆಚ್ಚದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪಾದಿಸುವ ಸರಕುಗಳನ್ನು ಉತ್ಪಾದಿಸಿ ತುಂಬಾ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಇದರಿಂದಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸರಕುಗಳಿಗೆ ಬೇಡಿಕೆ ಇಲ್ಲದೇ ನಷ್ಟವನ್ನು ಅನುಭವಿಸುತ್ತಿವೆ.
6. **ಅಧಿಕ ಉತ್ಪಾದನಾ ವೆಚ್ಚ:** ಸಣ್ಣ ಪ್ರಮಾಣದ ಕೈಗಾರಿಕೆಗಳು ಹಳೆಯ ಯಂತ್ರಗಳು ಮತ್ತು ತಂತ್ರಜ್ಞಾನ, ಕಚ್ಚಾವಸ್ತುಗಳ ಬೆಲೆ ಏರಿಕೆ, ಅದಕ್ಷ ಕಾರ್ಮಿಕ ವರ್ಗ ಮುಂತಾದ ಕಾರಣಗಳಿಂದಾಗಿ ಉತ್ಪಾದನಾ ವೆಚ್ಚದ ಅಧಿಕಗೊಳ್ಳುತ್ತದೆ. ಇದರಿಂದ ಈ ಸರಕುಗಳನ್ನು ಸ್ಪರ್ಧಾತ್ಮಕ ಬೆಲೆಗಳಲ್ಲಿ ಮಾರಾಟ ಮಾಡಲಾಗುವುದಿಲ್ಲ.

7. **ದೊಡ್ಡ ಕೈಗಾರಿಕೆಗಳ ಪೈಪೋಟಿ:** ದೊಡ್ಡ ಕೈಗಾರಿಕೆಗಳು ಆಧುನಿಕ ಯಂತ್ರ, ತಂತ್ರಜ್ಞಾನ, ಶ್ರಮ ವಿಭಜನೆಗಳನ್ನು ಬಳಸಿಕೊಂಡು ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸುತ್ತವೆ. ಇದರಿಂದ ಸಣ್ಣ ಕೈಗಾರಿಕೆಗಳು ದೇಶೀಯ ಬಲಿಷ್ಠ ಕಂಪನಿಗಳ ಪ್ರಬಲ ಸ್ಪರ್ಧೆ ಎದುರಿಸಬೇಕಾಗಿದೆ. ಇದು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ದೊಡ್ಡ ಪೆಟ್ಟಾಗಿದೆ.

## ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಪ್ರಮುಖ ಕ್ರಮಗಳು

ಸಣ್ಣ ಪ್ರಮಾಣದ ಕೈಗಾರಿಕೆಗಳ ಸಮಸ್ಯೆಗಳನ್ನು ಪರಿಶೀಲಿಸಲು, ಅವುಗಳಿಗೆ ರಕ್ಷಣೆ ಒದಗಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಮತ್ತು ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ ಪ್ರಮುಖವಾಗಿ

1) **ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ:** ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆಯು ಸಣ್ಣ ಪ್ರಮಾಣದ ಘಟಕಗಳಿಗೆ ಅಗತ್ಯವಿರುವ ತಾಂತ್ರಿಕ ಮತ್ತು ನಿರ್ವಹಣೆ ಸೇವೆ, ಮಾರುಕಟ್ಟೆ ಸೌಲಭ್ಯ, ಸಲಹೆ ಮತ್ತು ನೆರವನ್ನು ನೀಡುವ ಮೂಲಕ ಸಣ್ಣ ಕೈಗಾರಿಕೆಗಳ ಸುರಕ್ಷಿತ ಅಭಿವೃದ್ಧಿಗೆ ಸಹಾಯಕವಾಗಿದೆ. ಇದನ್ನು 1954ರಲ್ಲಿ ಸ್ಥಾಪಿಸಲಾಯಿತು.

2) **ಮಂಡಳಿ ಮತ್ತು ನಿಗಮಗಳ ಸ್ಥಾಪನೆ:** ಗುಡಿ ಮತ್ತು ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸುವುದಕ್ಕಾಗಿ ಸರ್ಕಾರವು ಹಲವು ಮಂಡಳಿ ಮತ್ತು ನಿಗಮಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

    1) ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

    2) ಅಖಿಲ ಭಾರತ ಕರಕುಶಲ ಕೈಗಾರಿಕೆಗಳ ಮಂಡಳಿ

    3) ಅಖಿಲ ಭಾರತ ನಾರಿನ ಮಂಡಳಿ

    4) ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಮಂಡಳಿ

    5) ಕೇಂದ್ರೀಯ ರೇಷ್ಮೆ ಮಂಡಳಿ ಮುಂತಾದವುಗಳು.

3) **ರಾಷ್ಟ್ರೀಯ ಕೈಗಾರಿಕೆಗಳ ನಿಗಮ:** ಭಾರತ ಸರ್ಕಾರವು 1955ರಲ್ಲಿ ರಾಷ್ಟ್ರೀಯ ಕೈಗಾರಿಕೆಗಳ ನಿಗಮವನ್ನು ಸ್ಥಾಪಿಸಿತು. ಇದು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಅಗತ್ಯವಿರುವ ಎಲ್ಲಾ ರೀತಿಯ ಕಚ್ಚಾವಸ್ತುಗಳನ್ನು ಪೂರೈಸುವಲ್ಲಿ ಸಹಾಯಕವಾಗಿದೆ. ಅಲ್ಲದೇ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಮಾರ್ಗದರ್ಶನ ನೀಡುತ್ತದೆ.

4) **ಸಣ್ಣ ಹೂಡಿಕೆ ಮಂಡಳಿ:** ಸಣ್ಣ ಪ್ರಮಾಣದ ವಲಯದಲ್ಲಿ ಜನರು ತಮ್ಮ ಉಳಿತಾಯವನ್ನು ಹೂಡಿಕೆ ಮಾಡಲು ಆಸಕ್ತಿ ಹೊಂದಿರುವ ಜನರಿಗೆ ಸಮರ್ಪಕವಾದ ಮಾರ್ಗದರ್ಶನ ನೀಡುತ್ತದೆ.

5) **ಕೈಗಾರಿಕಾ ಎಸ್ಟೇಟ್‌ಗಳು:** ಸಣ್ಣ ಉದ್ದಿಮೆಗಳಿಗೆ ಉತ್ತಮವಾದ ಮತ್ತು ಸಮರ್ಪಕವಾದ ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿ, ನೀರು, ರಸ್ತೆ ಇತ್ಯಾದಿಗಳನ್ನು ಒದಗಿಸಲು ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ ಅಲ್ಲಿನ ಮೂಲಭೂತ ಸೌಕರ್ಯಗಳು ಅಭಿವೃದ್ಧಿಯಾಗುವುದಲ್ಲದೆ, ಉದ್ಯೋಗ ಸೃಷ್ಟಿಯ ಪ್ರಮಾಣವು ಅಧಿಕಗೊಳ್ಳುತ್ತದೆ.

6) **ಸಂಶೋಧನೆ ಮತ್ತು ಅಭಿವೃದ್ಧಿ:** ಸರ್ಕಾರವು ಹೊಸ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಹಲವು ಅಖಿಲ ಭಾರತ ಮಂಡಳಿ ಮತ್ತು ಸಂಘಟನೆಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

   1) ಕೇಂದ್ರೀಯ ಜೇನುಸಾಕಾಣಿಕೆ ಮತ್ತು ಸಂಶೋಧನಾ ಸಂಸ್ಥೆ

   2) ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ

   3) ಗ್ರಾಮೀಣ ಕೈಗಾರಿಕೆಗಳ ಸಂಶೋಧನಾ ಸಂಸ್ಥೆ

   4) ಭಾರತೀಯ ಕೃಷಿ ಸಂಶೋಧನಾ ಮಂಡಳಿ

7) **ರಫ್ತು ಉತ್ತೇಜನ:** ಸರ್ಕಾರವು ರಫ್ತುಗಳನ್ನು ಉತ್ತೇಜಿಸಲು ಹಲವಾರು ಕ್ರಮಗಳನ್ನು ತೆಗೆದು ಕೊಂಡಿದೆ. ರಫ್ತುಸರಕುಗಳ ತಯಾರಿಕೆಯಲ್ಲಿ ನಿರತವಾಗಿರುವ ಉದ್ದಿಮೆಗಳಿಗೆ ಅಗತ್ಯ ಕಚ್ಚಾವಸ್ತುಗಳ ಪೂರೈಕೆ ಮತ್ತು ಸಾಲ ಪೂರೈಕೆಗೆ ಆದ್ಯತೆಯನ್ನು ನೀಡಿದೆ. ಇದಕ್ಕಾಗಿ ರಫ್ತು ಉತ್ತೇಜನ ಮಂಡಳಿಯನ್ನು ಸ್ಥಾಪಿಸಲಾಗಿದೆ.

8) **ಕಾರ್ಮಿಕರಿಗೆ ತರಬೇತಿ ಸೌಲಭ್ಯ:** ಕೈಗಾರಿಕಾ ಕಾರ್ಮಿಕರ ಉದ್ಯಮಶೀಲತ್ವ, ನೈಪುಣ್ಯತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಗುಣಮಟ್ಟದ ತರಬೇತಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಹಲವು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

   1) ಕೇಂದ್ರೀಯ ಸಲಕರಣೆ ಕೊಠಡಿ ಮತ್ತು ತರಬೇತಿ ಕೇಂದ್ರ, ಕೊಲ್ಕತ್ತಾ,

   2) ಕೇಂದ್ರೀಯ ಸಲಕರಣಾ ವಿನ್ಯಾಸ ಸಂಸ್ಥೆ, ಹೈದ್ರಾಬಾದ್

   3) ಸಣ್ಣ ಕೈಗಾರಿಕೆಗಳ ವಿಸ್ತರಣಾ ತರಬೇತಿ ಸಂಸ್ಥೆ, ಹೈದ್ರಾಬಾದ್

   4) ಕೇಂದ್ರೀಯ ಕೈಮಗ್ಗ ಸಲಕರಣ ಸಂಸ್ಥೆ, ಜಲಂಧಾರ್

9) **ಜಿಲ್ಲಾ ಕೈಗಾರಿಕಾ ಕೇಂದ್ರ:** ದೇಶದಾದ್ಯಂತ ಪ್ರತಿ ಜಿಲ್ಲೆಗೂ ಒಂದು ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇವು ಪ್ರಮುಖವಾಗಿ ನಿರ್ವಹಿಸುವ ಕಾರ್ಯಗಳೆಂದರೆ:–

   1) ಲಭ್ಯವಿರುವ ಕಚ್ಚಾ ಸರಕುಗಳು ಮತ್ತು ಇತರೆ ಸಂಪನ್ಮೂಲಗಳ ಆರ್ಥಿಕ ಸಮೀಕ್ಷೆ ನಡೆಸುವುದು.

   2) ಯಂತ್ರಗಳ ಪೂರೈಕೆ.

3) ಸಾಲಸೌಲಭ್ಯ ಒದಗಿಸುವುದು.

4) ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು.

5) ಪ್ರತಿ ಜಿಲ್ಲೆಗಳಲ್ಲಿಯೂ ಸಂಶೋಧನಾ ಮತ್ತು ವಿಸ್ತರಣಾ ಸೆಲ್‌ಗಳನ್ನು ಸ್ಥಾಪಿಸುವುದು.

10) **ಹಣಕಾಸಿನ ಸಹಾಯ:** ಸರ್ಕಾರವು ಸಣ್ಣ ಕೈಗಾರಿಕೆಗಳನ್ನು ಆದ್ಯತಾ ವಲಯ ಎಂದು ಪರಿಗಣಿಸಿ ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಹೆಚ್ಚಿನ ಸಾಲ ಒದಗಿಸಲು ಕ್ರಮ ಕೈಗೊಂಡಿದೆ. ಅಲ್ಲದೆ ಸಣ್ಣ ಕೈಗಾರಿಕೆಗಳಿಗೆ ಸಾಲದ ಮೇಲೆ ಸಬ್ಸಿಡಿ ಸೌಲಭ್ಯಗಳನ್ನು ಒದಗಿಸುತ್ತದೆ. ಇಂದು ಪ್ರತಿ ರಾಜ್ಯವೂ ರಾಜ್ಯ ಹಣಕಾಸು ನಿಗಮವನ್ನು ಸ್ಥಾಪಿಸಿದ್ದು, ಸಣ್ಣ ಉತ್ಪಾದಕರಿಗೆ ಮಧ್ಯಮಾವಧಿ ಸಾಲ ಒದಗಿಸಲಾಗುತ್ತಿದೆ. ಅಲ್ಲದೇ ಕೈಗಾರಿಕಾ ಸಹಕಾರಿ ಸಂಘಗಳು, ಬ್ಯಾಂಕ್‌ಗಳು ಸಣ್ಣ ಕೈಗಾರಿಕೆಗಳಿಗೆ ಸಾಲ ಒದಗಿಸುವಲ್ಲಿ ನಿರತವಾಗಿವೆ.

ಹೀಗೆ ಹಲವಾರು ಕ್ರಮಗಳನ್ನು ದಕ್ಷವಾಗಿ ಜಾರಿಗೊಳಿಸುವ ಮುಖಾಂತರ ಸರ್ಕಾರವು ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಿದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಭಾರತದ ಹೊಸ ಕೈಗಾರಿಕಾ ನೀತಿಯು ________ ವರ್ಷ ಜಾರಿಯಾಯಿತು.

ಅ) 1991 ಆ) 1990 ಇ) 1995 ಈ) 2000

2) 'ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ' ಎಂದು ಹೇಳಿದವರು ________

ಅ) ಸರ್.ಎಂ.ವಿಶ್ವೇಶ್ವರಯ್ಯ ಆ) ಮಹಾತ್ಮ ಗಾಂಧೀಜಿ

ಇ) ಅಮರ್ತ್ಯಸೇನ್ ಈ) ದಾದಾಬಾಯಿ ನವರೋಜಿ

3) ಸರಕು ತಯಾರಿಕಾ ವಲಯದಲ್ಲಿ ಸೂಕ್ಷ್ಮ ಕೈಗಾರಿಕೆಗಳ ಹೂಡಿಕೆ ಮಿತಿ ________ ಆಗಿದೆ.

ಅ) 25 ಲಕ್ಷ ಕೋಟಿ ರೂಪಾಯಿಗಳವರೆಗೆ ಆ) 10 ಲಕ್ಷ ಕೋಟಿ ರೂಪಾಯಿಗಳವರೆಗೆ

ಇ) 5 ಕೋಟಿ ರೂಪಾಯಿಗಳವರೆಗೆ ಈ) 25 ಕೋಟಿ ರೂಪಾಯಿಗಳವರೆಗೆ

4) ಸೇವಾ ವಲಯದಲ್ಲಿ ಸಣ್ಣ ಕೈಗಾರಿಕೆಗಳ ಹೂಡಿಕೆ ಮಿತಿ ________ ಆಗಿದೆ.

ಅ) 25 ಲಕ್ಷ ಕೋಟಿ ರೂಪಾಯಿಗಳವರೆಗೆ ಆ) 10 ಲಕ್ಷ ಕೋಟಿ ರೂಪಾಯಿಗಳವರೆಗೆ

ಇ) 5 ಕೋಟಿ ರೂಪಾಯಿಗಳವರೆಗೆ ಈ) 2 ಕೋಟಿ ರೂಪಾಯಿಗಳವರೆಗೆ

5) ಭಾರತ ಸರ್ಕಾರವು ________ ವರ್ಷದಲ್ಲಿ ರಾಷ್ಟ್ರೀಯ ಕೈಗಾರಿಕೆಗಳ ನಿಗಮವನ್ನು ಸ್ಥಾಪಿಸಿತು.

ಅ) 1955 ಆ) 1950 ಇ) 1991 ಈ) 1973

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1) ಭಾರತ ಸರ್ಕಾರವು _______ ರಂದು ಮೊದಲ ಕೈಗಾರಿಕಾ ನೀತಿಯನ್ನು ಘೋಷಿಸಿತು.

2) ಫೆರಾ ಕಾಯಿದೆಯನ್ನು ರದ್ದುಪಡಿಸಿ ಅದರ ಜಾಗದಲ್ಲಿ _______ ವನ್ನು ಜಾರಿಗೆ ತರಲಾಗಿದೆ.

3) ಭಾರತದ 1991ರ ಹೊಸ ಕೈಗಾರಿಕಾ ನೀತಿಯಲ್ಲಿ ಸರುಕುಗಳ ರಫ್ತು ಮಾಡುವ ವಿದೇಶಿ ಕಂಪನಿಗಳು _______ ಈಕ್ವಿಟಿಯನ್ನು ಹೊಂದಲು ಅವಕಾಶ ನೀಡಲಾಯಿತು.

4) ಭಾರತ ಸರ್ಕಾರವು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆಯನ್ನು _______ ರಲ್ಲಿ ಜಾರಿಗೆ ತಂದಿತು.

5) ಸಾರ್ವಜನಿಕ ವಲಯದ ಕೈಗಾರಿಕೆಗಳು _______ ಒಡೆತನದಲ್ಲಿರುತ್ತವೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1) ಕೈಗಾರೀಕರಣ ಎಂದರೇನು?

2) ಆಮದು ಬದಲೀಕರಣ ಎಂದರೇನು?

3) ಸಣ್ಣ ಪ್ರಮಾಣದ ಕೈಗಾರಿಕೆ ಎಂದರೇನು?

4) ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆಯನ್ನು ಯಾವಾಗ ಸ್ಥಾಪಿಸಲಾಯಿತು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ

1) 1973 ರ ಫೆರಾ ಕಾಯಿದೆಯ ಪ್ರಮುಖ ಉದ್ದೇಶಗಳಾವುವು?

2) ಫೆಮಾದ ಉದ್ದೇಶವೇನು?

3) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ವ್ಯಾಖ್ಯಾನಿಸಿ.

4) ಕೈಗಾರಿಕೆಗಳ ವರ್ಗೀಕರಣಗಳನ್ನು ತಿಳಿಸಿ.

5) ಸಣ್ಣ ಪ್ರಮಾಣದ ಕೈಗಾರಿಕೆಗಳ ಸಮಸ್ಯೆಗಳನ್ನು ಬರೆಯಿರಿ.

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ

1) ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿಯ ಮಹತ್ವ ಬರೆಯಿರಿ.

2) 1991 ರ ಹೊಸ ಕೈಗಾರಿಕಾ ನೀತಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

3) ಸಣ್ಣ ಪ್ರಮಾಣದ ಕೈಗಾರಿಕೆಗಳ ಮಹತ್ವ ಬರೆಯಿರಿ.

4) ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಪ್ರಮುಖ ಕ್ರಮಗಳನ್ನು ವಿವರಿಸಿ.

### ನಿಯೋಜಿತ ಕಾರ್ಯ

1) ನಿಮ್ಮ ಊರಿನಲ್ಲಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಬಗ್ಗೆ ಮಾಹಿತಿ ಪಡೆದು ಪಟ್ಟಿ ಮಾಡಿ.

2) ನಿಮ್ಮ ಊರಿನ/ ಜಿಲ್ಲೆಯ ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಪಟ್ಟಿ ಮಾಡಿರಿ.

# ಅಧ್ಯಾಯ-7 ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರು

"ಎಲ್ಲಾ ಶ್ರಮವು ಉತ್ಪಾದನೆ ಕಡೆಗೆ ನಿರ್ದೇಶಿಸಿದೆ" - **ಆಲ್‌ಫ್ರೆಡ್ ಮಾರ್ಷಲ್**

"ಕಾರ್ಮಿಕ ರಂಗದಲ್ಲಿ ತನ್ನ ಸ್ಥಾನವನ್ನು ಪಡೆಯಲು ಕೆಲಸ ಮಾಡಲು ಇಚ್ಛಿಸುವ ಪ್ರತಿ ಮಹಿಳೆಯನ್ನು ಶಕ್ತಗೊಳಿಸಲು ಸಮಾನ ಕೆಲಸಕ್ಕೆ ಸಮಾನ ವೇತನ ತತ್ವವನ್ನು ಅನುಷ್ಠಾನಗೊಳಿಸಬೇಕು" - **ಮಾವೊ ತ್ಸೆ ತುಂಗ್**

"ಮಾನವೀಯತೆಗೆ ಘನತೆ ಹಾಗೂ ಪ್ರಾಮುಖ್ಯತೆ ಕೊಡಿಸಿ ಅದನ್ನು ಮೇಲ್ದರ್ಜೆಗೆ ಏರಿಸಲು ಪ್ರಯತ್ನಿಸುವ ಎಲ್ಲಾ ಕಾರ್ಮಿಕರು ನೋವಿನಲ್ಲೂ ಶ್ರೇಷ್ಟತೆ ಮೆರೆಯುತ್ತಾರೆ" - **ಮಾರ್ಟಿನ್ ಲೂಥರ್ ಕಿಂಗ್**

**ಪೀಠಿಕೆ:**

ಕಾರ್ಮಿಕರ ಶ್ರಮವು ಎಲ್ಲಾ ಉತ್ಪಾದನಾ ಚಟುವಟಿಕೆಯ ಮೂಲ ಉತ್ಪಾದನಾಂಗವಾಗಿದೆ. ದೇಶದಲ್ಲಿ ಲಭ್ಯವಿರುವ ಭೌತಿಕ ಸಂಪನ್ಮೂಲಗಳು, ನೈಸರ್ಗಿಕ ಸಂಪನ್ಮೂಲಗಳನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ಸಮಗ್ರವಾಗಿ, ದಕ್ಷವಾಗಿ ಬಳಸಿಕೊಳ್ಳುವ ಮೂಲಕ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವಲ್ಲಿ ಮತ್ತು ವಿತರಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಆ ನಿಟ್ಟಿನಲ್ಲಿ ಕಾರ್ಮಿಕರು ಎಂದರೆ ಯಾರು? ಕೃಷಿ ಕಾರ್ಮಿಕರು ಎಂದರೆ ಯಾರು? ಕೃಷಿ ಕಾರ್ಮಿಕರ ಲಕ್ಷಣಗಳೇನು? ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳೇನು? ಅವರ ಸ್ಥಾನಮಾನ ಸುಧಾರಣೆಗಾಗಿ ಕೈಗೊಂಡಿರುವ ಪ್ರಮುಖ ಕ್ರಮಗಳಾವುವು? ಹಾಗೆಯೇ ಕೈಗಾರಿಕಾ ಕಾರ್ಮಿಕರು ಎಂದರೆ ಯಾರು? ಕೈಗಾರಿಕಾ ಕಾರ್ಮಿಕರ ವಿಧಗಳಾವುವು? ಕೈಗಾರಿಕಾ ಕಾರ್ಮಿಕರ ಲಕ್ಷಣಗಳೇನು ? ಕಾರ್ಮಿಕ ಸಂಘ ಎಂದರೇನು? ಮತ್ತು ಅದರ ಉದ್ದೇಶಗಳಾವುವು? ರಾಷ್ಟ್ರಮಟ್ಟದ ಕಾರ್ಮಿಕ ಸಂಘಗಳಾವುವು? ಕಾರ್ಮಿಕ ನೀತಿ ಎಂದರೇನು? ಕಾರ್ಮಿಕ ನೀತಿಯ ಪ್ರಮುಖ ಉದ್ದೇಶಗಳಾವುವು ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಈ ಅಧ್ಯಯನದ ಅಧ್ಯಾಯದಿಂದ ತಿಳಿದುಕೊಳ್ಳಬಹುದಾಗಿದೆ.

**ಕಾರ್ಮಿಕರ ಅರ್ಥ**

ಕಾರ್ಮಿಕರು ಉತ್ಪಾದನೆಯ ಪ್ರಮುಖ ಹಾಗೂ ಪ್ರಾಥಮಿಕ ಅಂಶವಾಗಿದ್ದಾರೆ. ಕಾರ್ಮಿಕರು ತಮ್ಮ ದೈಹಿಕ ಹಾಗೂ ಮಾನಸಿಕ ಪ್ರಯತ್ನದ ಫಲವಾಗಿ ಸರಕು ಮತ್ತು ಸೇವೆಗಳ ಸೃಷ್ಟಿ ಮಾಡುವವರು. ಹಣಕಾಸಿನ ಪ್ರತಿಫಲಕ್ಕಾಗಿ ಕೈಗೊಳ್ಳುವ ದೈಹಿಕ ಹಾಗೂ ಮಾನಸಿಕ ಕೆಲಸ ಮಾಡುವವರನ್ನು ಕಾರ್ಮಿಕರು ಎಂದು ಕರೆಯುತ್ತಾರೆ.

## ಕಾರ್ಮಿಕರ ಗಾತ್ರ

ಒಂದು ದೇಶದ ಕಾರ್ಮಿಕ ಗಾತ್ರವನ್ನು ಅದರ ವಯಸ್ಕ ಜನಸಂಖ್ಯೆಯ ಗಾತ್ರ ಮತ್ತು ವಯಸ್ಕರಲ್ಲಿ ಕೆಲಸ ಮಾಡುತ್ತಿರುವ ಇಲ್ಲವೇ ತಮ್ಮ ಶ್ರಮಬಲವನ್ನು ಕೂಲಿಗಾಗಿ ಅಥವಾ ವೇತನಕ್ಕಾಗಿ ನೀಡಲು ಸಿದ್ಧರಿರುವ ವರ್ಗವನ್ನು ತಿಳಿಸುತ್ತದೆ.

## ಕಾರ್ಮಿಕರ ಲಕ್ಷಣಗಳು

**ಕಾರ್ಮಿಕರ ಪ್ರಮುಖ ಲಕ್ಷಣಗಳೆಂದರೆ :**

1) **ಕಾರ್ಮಿಕರ ಉತ್ಪಾದಕತೆಯನ್ನು ಶೇಖರಿಸಿಡಲು ಸಾಧ್ಯವಿಲ್ಲ:** ಕಾರ್ಮಿಕರ ಉತ್ಪಾದಕತೆಯನ್ನು ಉಪಯೋಗಿಸದೇ ಇದ್ದ ಪಕ್ಷದಲ್ಲಿ ಅದು ನಶಿಸಿ ಹೋಗುತ್ತದೆ. ಶ್ರಮಿಕರ ಉತ್ಪಾದಕತೆಯನ್ನು ಸಂಗ್ರಹಿಸಲು ಇಲ್ಲವೇ ಮುಂದೂಡಲು ಸಾಧ್ಯವಿಲ್ಲ. ಕಾಲ ಕಳೆದಂತೆ ಶ್ರಮಿಕರ ಉತ್ಪಾದಕತೆಯನ್ನು ಬಳಸದೆ ಇದ್ದರೆ ಅದು ನಶಿಸಿ ಹೋಗುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ.

2) **ಶ್ರಮವನ್ನು ಕಾರ್ಮಿಕನಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ:** ಭೂಮಿ ಹಾಗೂ ಬಂಡವಾಳವನ್ನು ಅದರ ಮಾಲೀಕರಿಂದ ಬೇರ್ಪಡಿಸಬಹುದು. ಆದರೆ ಶ್ರಮಿಕನಿಂದ ಶ್ರಮವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಉದಾಹರಣೆಗೆ ಒಬ್ಬ ಉಪಾಧ್ಯಾಯರ ಬೋಧನಾ ಸಾಮರ್ಥ್ಯವನ್ನು ಉಪಾಧ್ಯಾಯರಿಂದ ಬೇರ್ಪಡಿಸಿ ಶಾಲೆಗೆ ತಂದು ವಿದ್ಯಾರ್ಥಿಗಳಿಗೆ ಭೋಧಿಸಲು ಸಾಧ್ಯವಾಗುವುದಿಲ್ಲ.

3) **ಕಾರ್ಮಿಕರ ದುರ್ಬಲ ಚೌಕಾಶಿ ಸಾಮರ್ಥ್ಯ:** ಕಾರ್ಮಿಕರು ತಮ್ಮ ಶ್ರಮಬಲವನ್ನು ಸಂಗ್ರಹಿಸಲು ಸಾಧ್ಯವಾಗುವುದಿಲ್ಲ ಹಾಗೂ ಅವರಲ್ಲಿ ಅನೇಕರು ಬಡವರು, ದುರ್ಬಲರು ಹಾಗೂ ಅಸಂಘಟಿತರಾಗಿರುವುದರಿಂದ ಅವರ ಬಳಿ ಹೆಚ್ಚು ವೇತನಕ್ಕಾಗಿ ಆಗ್ರಹಿಸುವ ಚೌಕಾಶಿ ಸಾಮರ್ಥ್ಯ ಕಡಿಮೆ ಇರುತ್ತದೆ.

4) **ಕಾರ್ಮಿಕರು ಯಂತ್ರಗಳಲ್ಲ:** ಪ್ರತಿ ಕಾರ್ಮಿಕನಿಗೆ ತನ್ನದೇ ಆದ ಅಭಿರುಚಿ, ಆಹಾರ ಅಭ್ಯಾಸ ಹಾಗೂ ಭಾವನೆಗಳು ಇರುತ್ತವೆ. ಕಾರ್ಮಿಕರು ಯಂತ್ರದಂತೆ ದಿನದುದ್ದಕ್ಕೂ ಕೆಲಸ ಮಾಡಲು ಸಾಧ್ಯವಿಲ್ಲ. ಅವರಿಗೆ ನಿಯಮಿತವಾಗಿ ವಿರಾಮ ಹಾಗೂ ವಿಶ್ರಾಂತಿ ಅತ್ಯಗತ್ಯವಾಗಿರುತ್ತದೆ. ಶ್ರಮಿಕನಿಲ್ಲದೇ ಯಂತ್ರಗಳು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ.

5) **ಕಾರ್ಮಿಕನು ತನ್ನ ಶ್ರಮಬಲವನ್ನು ಮಾತ್ರ ಮಾರಾಟ ಮಾಡುತ್ತಾನೆ:** ಹಣಕಾಸಿನ ಪ್ರತಿಫಲಕ್ಕಾಗಿ ಶ್ರಮಿಕನು ತನ್ನ ಶ್ರಮವನ್ನು ಮಾತ್ರ ಮಾರಾಟ ಮಾಡುತ್ತಾನೆಯೇ ಹೊರತು ತಮ್ಮನ್ನೇ ಅಲ್ಲ. ಹಾಗಾಗಿ ನಿಜಾರ್ಥದಲ್ಲಿ ಕಾರ್ಮಿಕರ ಯಜಮಾನನಾಗಲು ಯಾರಿಗೂ ಸಾಧ್ಯವಿಲ್ಲ.

6) **ಉತ್ಪಾದನೆಯ ಆರಂಭ ಹಾಗೂ ಕೊನೆಯು ಕಾರ್ಮಿಕನಿಂದಲೇ ಆಗುತ್ತದೆ:** ಕಾರ್ಮಿಕನ ಸಹಾಯದಿಂದಲೇ ಭೂಮಿ, ಬಂಡವಾಳ ಹಾಗೂ ಇತರೆ ಸಂಪನ್ಮೂಲಗಳನ್ನು ಬಳಸಿ ಉತ್ಪಾದನೆ ಮಾಡಲಾಗುತ್ತದೆ.

ಉತ್ಪಾದನೆಯನ್ನು ಮನುಷ್ಯನ ಅಗತ್ಯತೆಗಳನ್ನು ಪೂರೈಸಲು ನಿರ್ಮಿಸಲಾಗುತ್ತದೆ, ಹಾಗಾಗಿ ಅದನ್ನು ಅನುಭೋಗಿಸುತ್ತಾನೆ. ಈ ಕಾರಣಕ್ಕಾಗಿ ಉತ್ಪಾದನೆಯ ಆರಂಭ ಹಾಗೂ ಕೊನೆ ಕಾರ್ಮಿಕನಿಂದಲೇ ಆಗುತ್ತದೆ.

7) **ಕಾರ್ಮಿಕರ ದಕ್ಷತೆಯಲ್ಲಿ ಭಿನ್ನತೆ ಇರುತ್ತದೆ:** ಕೆಲವು ಕಾರ್ಮಿಕರ ಸಾಮರ್ಥ್ಯ, ತರಬೇತಿ ಹಾಗೂ ಕೌಶಲ್ಯದಿಂದಾಗಿ ಹೆಚ್ಚು ದಕ್ಷರಾಗಿರುತ್ತಾರೆ. ಇನ್ನು ಕೆಲವರು ಕೌಶಲ್ಯದ ಹಾಗೂ ತರಬೇತಿಯ ಕೊರತೆಯಿಂದ ಕಡಿಮೆ ದಕ್ಷರಾಗಿರುತ್ತಾರೆ.

## ಗ್ರಾಮೀಣ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರು

ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದು ಹಣರೂಪಿ ಕೂಲಿ ಇಲ್ಲವೇ ಕಾಳಿಗಾಗಿ ಕೂಲಿ ಮಾಡುವ ಕೃಷಿ ಇಲ್ಲವೇ ಕೃಷಿಯೇತರ ಚಟುವಟಿಕೆಗಳಲ್ಲಿ ಕೈ ಕೆಲಸ ಮಾಡುವ ಕಾರ್ಮಿಕರನ್ನು ಗ್ರಾಮೀಣ ಕಾರ್ಮಿಕರು ಎಂದು ಕರೆಯಲಾಗುತ್ತದೆ.

ವ್ಯಕ್ತಿಯು ತನ್ನ ಶ್ರಮಬಲವನ್ನು ಹಣರೂಪಿ ಕೂಲಿ ಇಲ್ಲವೇ ಕಾಳಿಗಾಗಿ ಕೃಷಿ ವೃತ್ತಿಯಲ್ಲಿ ಕಾರ್ಯ ನಿರ್ವಹಿಸಿದರೆ ಅವನನ್ನು ಕೃಷಿ ಕಾರ್ಮಿಕ ಎನ್ನುತ್ತೇವೆ. ಕೃಷಿ ವೃತ್ತಿಗಳಲ್ಲಿ ಪ್ರಮುಖವಾಗಿ

1) ಕೃಷಿ
2) ಹೈನುಗಾರಿಕೆ
3) ತೋಟಗಾರಿಕೆ ಹಾಗೂ ಯಾವುದೇ ತೋಟಗಾರಿಕೆಯ ಸರಕಿನಲ್ಲಿ ಕಾರ್ಯನಿರ್ವಹಣೆ
4) ಜಾನುವಾರುಗಳ ಸಾಕಾಣಿಕೆ
5) ಕೋಳಿ ಸಾಕಾಣಿಕೆ
6) ಜೇನು ಸಾಕಾಣಿಕೆ
7) ಕೃಷಿ ಉತ್ಪನ್ನಗಳ ಶೇಖರಣೆ ಹಾಗೂ ಅವುಗಳನ್ನು ಸಾಗಿಸಲು ಸಾಗಾಣಿಕೆ ವ್ಯವಸ್ಥೆ ಮಾಡುವವರು.

## ಕೃಷಿ ಕಾರ್ಮಿಕರ ಲಕ್ಷಣಗಳು

1) ಕೃಷಿ ಕಾರ್ಮಿಕರು ಹಣದ ಕೂಲಿ ಇಲ್ಲವೇ ಕೂಲಿಗಾಗಿ ಕಾಳನ್ನು ಪಡೆಯಲು ಇತರರ ಹೊಲ, ಗದ್ದೆಗಳಲ್ಲಿ, ಹೈನುಗಾರಿಕೆಯಲ್ಲಿ, ತೋಟಗಾರಿಕೆಯಲ್ಲಿ, ಜಾನುವಾರುಗಳ ಸಾಕಾಣಿಕೆಯಲ್ಲಿ, ಕೋಳಿ ಹಾಗೂ ಜೇನು ಸಾಕಾಣಿಕೆಯಲ್ಲಿ ಕಾರ್ಯನಿರ್ವಹಿಸುತ್ತಾರೆ.
2) ಕೃಷಿ ಕಾರ್ಮಿಕರ ಕೂಲಿ ಇತರೆ ಕಾರ್ಮಿಕರಿಗಿಂತ ಸಾಮಾನ್ಯವಾಗಿ ಕಡಿಮೆ ಇರುತ್ತದೆ

3) ಕೃಷಿ ಕಾರ್ಮಿಕರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲರಾಗಿರುತ್ತಾರೆ.

4) ಬಹುತೇಕ ಕೃಷಿ ಕಾರ್ಮಿಕರು ಅನಕ್ಷರಸ್ಥರಾಗಿರುತ್ತಾರೆ

5) ಕೃಷಿ ಕಾರ್ಮಿಕರು ಸಂಘಟಿತರಾಗಿರುವುದಿಲ್ಲ.

6) ಮಹಿಳಾ ಕೃಷಿ ಕಾರ್ಮಿಕರಿಗೆ ಪುರುಷ ಕೃಷಿ ಕಾರ್ಮಿಕರಿಗಿಂತ ಕಡಿಮೆ ಕೂಲಿ ಕೊಡಲಾಗುತ್ತದೆ. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಶಾಸನದ ಹೊರತಾಗಿಯೂ ಈ ತಾರತಮ್ಯವನ್ನು ನೋಡಬಹುದಾಗಿದೆ.

## ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ

ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

**1) ಕಡಿಮೆ ಜೀವನ ಮಟ್ಟ:** ಕೃಷಿ ಕಾರ್ಮಿಕರಿಗೆ ಕಡಿಮೆ ಆದಾಯವಿರುವುದರಿಂದ ಅವರ ಜೀವನಮಟ್ಟವು ಕಡಿಮೆ ಇರುತ್ತದೆ.

**2) ಕಡಿಮೆ ಚೌಕಾಶಿ ಸಾಮರ್ಥ್ಯ:** ಕೃಷಿ ಕಾರ್ಮಿಕರು ಅಸಂಘಟಿತರಾಗಿರವುದರಿಂದ ಕಡಿಮೆ ಚೌಕಾಶಿ ಸಾಮರ್ಥ್ಯವನ್ನು ಹೊಂದಿರುತ್ತಾರೆ.

**3) ಸಾಲದ ಸುಳಿಯಲ್ಲಿ ಸಿಲುಕಿರುತ್ತಾರೆ:** ಆದಾಯ ಕಡಿಮೆ ಇರುವುದರಿಂದ ಕೃಷಿ ಕಾರ್ಮಿಕರು ಬಡತನದಲ್ಲಿ ಜೀವನ ನಡೆಸುತ್ತಾರೆ. ಕನಿಷ್ಟ ಅಗತ್ಯಗಳನ್ನು ಪೂರೈಸಿಕೊಳ್ಳಲು ಕಷ್ಟವಾಗುತ್ತದೆ. ಹಾಗಾಗಿ ಅನೇಕರು ತಮ್ಮ ಜೀವನ ನಿರ್ವಹಣೆಗೆ ಸಾಲವನ್ನು ಹಣದ ಲೇವಾದೇವಿಗಾರರಿಂದ ಪಡೆಯುತ್ತಾರೆ. ಅಸಲಿಗೆ ಬಡ್ಡಿ, ಚಕ್ರಬಡ್ಡಿ ಸೇರಿಸಿ ಸಾಲವನ್ನು ಹಿರಿದಾಗಿಸುವುದರಿಂದ ಸಾಲದ ಸುಳಿಗೆ ಸಿಲುಕುತ್ತಾರೆ.

**4) ಋತುಮಾನ ಉದ್ಯೋಗ ಹಾಗೂ ವಲಸೆಯ ಪ್ರವೃತ್ತಿ:** ಕೃಷಿ ಕಾರ್ಮಿಕರಿಗೆ ಬಿತ್ತನೆ, ಸುಗ್ಗಿ ಹಾಗೂ ಕಟಾವು ಸಂದರ್ಭಗಳಲ್ಲಿ ಉದ್ಯೋಗ ದೊರಕುತ್ತದೆ, ಉಳಿದ ಸಂದರ್ಭದಲ್ಲಿ ಕೆಲಸ ಹುಡುಕಿಕೊಂಡು ನಗರ ಇಲ್ಲವೇ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ.

**5) ಸಾಮಾಜಿಕ ಭದ್ರತಾ ಕ್ರಮಗಳ ಅಭಾವ:** ಕೈಗಾರಿಕಾ ಮತ್ತು ಸೇವಾ ವಲಯದ ಕಾರ್ಮಿಕರಿಗೆ ಲಭಿಸುವ ಅಪಘಾತ ವಿಮೆ, ವೈದ್ಯಕೀಯ ಭತ್ಯೆ, ಅಂಗವಿಕಲತಾ ಭತ್ಯೆ, ಅನಾರೋಗ್ಯಕ್ಕೆ ನೆರವು, ನಿರುದ್ಯೋಗ ಭತ್ಯೆ, ವೃದ್ದಾಪ್ಯ ವೇತನ ಮೊದಲಾದ ಎಲ್ಲಾ ಸಾಮಾಜಿಕ ಭದ್ರತಾ ಸೌಲಭ್ಯಗಳು ಕೃಷಿಕಾರ್ಮಿಕರಿಗೆ ಲಭಿಸಿಲ್ಲ. ಹೀಗಾಗಿ ಕೃಷಿ ಕಾರ್ಮಿಕರ ಸ್ಥಿತಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದೆ ಎನ್ನಬಹುದು.

## ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಸುಧಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳು

ಕೃಷಿ ಕಾರ್ಮಿಕರ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ಉತ್ತಮಪಡಿಸಲು ಸರ್ಕಾರ ಅನೇಕ ಕ್ರಮಗಳನ್ನು/ಕಾಯ್ದೆಗಳನ್ನು ಜಾರಿಗೊಳಿಸಿದೆ. ಅವುಗಳಲ್ಲಿ ಪ್ರಮುಖವಾಗಿ: –

## 1) ಜೀತಪದ್ಧತಿಯ ನಿರ್ಮೂಲನೆ:

ಜೀತಪದ್ದತಿಯು ಕೃಷಿ ಕಾರ್ಮಿಕರ ಬಡತನ ಹಾಗೂ ಅಸಹಾಯಕತೆಯಿಂದಾಗಿ ಉಗಮವಾಗಿದೆ. ಈ ಅನಿಷ್ಠ ಪದ್ಧತಿ ಶತಮಾನಗಳಿಂದ ಅಸ್ತಿತ್ವದಲ್ಲಿತ್ತು. ಜೀತಕಾರ್ಮಿಕ ಎಂದರೆ ಕೃಷಿ ಕಾರ್ಮಿಕರು ಜಮೀನುದಾರರಿಂದ ಪಡೆದ ಸಾಲದ ಮರುಪಾವತಿಗಾಗಿ ಕೃಷಿ ಕಾರ್ಮಿಕರನ್ನು ಬಲವಂತದಿಂದ ತನ್ನ ಜಮೀನಿನಲ್ಲಿ ಇಲ್ಲವೇ ಮನೆಗಳಲ್ಲಿ ಕೆಲಸಕ್ಕೆ ನೇಮಿಸುತ್ತಾರೆ. ವರ್ಷಗಳೇ ಕಳೆದರೂ ಪಡೆದ ಸಾಲ ತೀರಿಲ್ಲವೆಂದು ಹೇಳಿ ಅವನ ತರುವಾಯ ಆತನ ಮಕ್ಕಳನ್ನು ಬಲವಂತದಿಂದ ಕೆಲಸಕ್ಕೆ ನೇಮಿಸಿಕೊಂಡು ಅವರ ಶ್ರಮಬಲವನ್ನು ಬಳಸಿಕೊಳ್ಳುತ್ತಾರೆ.

ಪಣಿಯಾಸ್, ಹಲಿಯಾ, ಮುಲಿಯಾ, ಕಮಿಯಾ, ಹರಿಸ್ ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಜೀತ ಕಾರ್ಮಿಕರನ್ನು ತನ್ನ ಕುಟುಂಬದ ನಿರ್ವಹಣೆಗಾಗಿ ಸಾಲ ಪಡೆದು, ಆ ಸಾಲಕ್ಕೆ ಬಲವಂತದಿಂದ ಸ್ವತಃ ತನ್ನನ್ನೇ ಗಿರವಿ ಇಡುವ ಸ್ಥಿತಿ. ಸರ್ಕಾರವು ಜೀತಪದ್ಧತಿಯ ನಿರ್ಮೂಲನೆ ಕಾಯಿದೆ 1976ನ್ನು ಜಾರಿಗೆ ತಂದಿದ್ದರಿಂದ ಜೀತ ಪದ್ಧತಿಯು ಬಹುತೇಕ ಕಡಿಮೆಯಾಗಿದೆ.

## 2) ಕನಿಷ್ಠಕೂಲಿ ಕಾಯಿದೆ ಜಾರಿ:

ಕೃಷಿ ಕಾರ್ಮಿಕರು ಪಡೆಯುವ ಕೂಲಿಯಲ್ಲಿ ನಾಮರೂಪಿ ಕೂಲಿ ಮತ್ತು ನೈಜ ಕೂಲಿಗಳೆಂಬ ಎರಡು ಬಗೆಗಳಿವೆ. ಕಾರ್ಮಿಕ ತಾನು ಮಾಡಿದ ಸೇವೆಗೆ ಹಣದ ಮುಖೇನ ಪಡೆಯುವ ಕೂಲಿಯು ನಾಮರೂಪಿ ಕೂಲಿ ಎನಿಸಿಕೊಂಡರೆ, ಕಾರ್ಮಿಕ ತಾನು ಗಳಿಸಿದ ಹಣದ ಕೂಲಿ ಎಷ್ಟು ಪ್ರಮಾಣದ ಸರಕು ಸೇವೆಗಳನ್ನು ಕೊಳ್ಳುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ತಿಳಿಸುವುದು ನೈಜಕೂಲಿ ಅಂದರೆ ನಾಮರೂಪಿ/ಹಣರೂಪಿ ಕೂಲಿಯ ಕೊಳ್ಳುವ ಸಾಮರ್ಥ್ಯವೇ ನೈಜಕೂಲಿ. ಭಾರತದಲ್ಲಿ ಕೃಷಿ ಕಾರ್ಮಿಕರ ಕೂಲಿಯ ದರಗಳು ಇತರೆ ಕಾರ್ಮಿಕರಿಗೆ ಹೋಲಿಸಿದರೆ ಅತ್ಯಂತ ಕಡಿಮೆ. ಹೀಗಾಗಿ ಅವರ ಜೀವನ ಸ್ಥಿತಿ ಶೋಚನೀಯವಾಗಿದೆ.

ಇದನ್ನು ಸರಿಪಡಿಸಲು ಸರ್ಕಾರ 1948ರಲ್ಲಿ ಕನಿಷ್ಠ ವೇತನ ಕಾಯಿದೆಯನ್ನು ಅಂಗೀಕರಿಸಿತು. ಇದರ ಅನ್ವಯ ಎಲ್ಲಾ ರಾಜ್ಯಗಳು ಅಲ್ಲಿನ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಾರ್ಮಿಕರ ವೇತನ/ಕೂಲಿಯ ಮಟ್ಟವನ್ನು ನಿರ್ಧರಿಸುವಂತಾಯಿತು. 1974ರ ವೇಳೆಗೆ ಎಲ್ಲಾ ರಾಜ್ಯ ಸರ್ಕಾರಗಳು ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತಂದವು. ಆದರೂ ಸರ್ಕಾರಗಳು ಇಚ್ಛಾಶಕ್ತಿಯ ಕೊರತೆಯಿಂದಾಗಿ ಪೂರ್ಣ ಪ್ರಮಾಣದಲ್ಲಿ ಇದು ಜಾರಿಯಾಗಿಲ್ಲ.

## 3) ಭೂರಹಿತ ಕಾರ್ಮಿಕರಿಗೆ ಭೂಮಿ ಹಾಗೂ ನಿವೇಶನ ಹಂಚಿಕೆ

ಭೂ ಹಿಡುವಳಿಯ ಗರಿಷ್ಟಮಿತಿ ಹೇರಿಕೆಯಂತಹ ಕಾನೂನು ಜಾರಿಯಿಂದ ಜಮೀನುದಾರರಿಂದ ಹೆಚ್ಚುವರಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು, ಅಂತಹ ಜಮೀನನ್ನು ಭೂರಹಿತ ಕಾರ್ಮಿಕರನ್ನು ಗುರುತಿಸಿ ವಿತರಣೆ ಮಾಡಿತ್ತು.

## 4) ಉದ್ಯೋಗ ಸೃಷ್ಟಿಸುವ ಯೋಜನೆಗಳ ಅನುಷ್ಠಾನ

ಕೃಷಿಯು ಋತು ಆಧಾರಿತ ಕಸುಬಾಗಿದೆಯಲ್ಲದೇ, ಹೆಚ್ಚುವರಿ ಕೃಷಿ ಕಾರ್ಮಿಕರನ್ನು ಕೃಷಿ ಚಟುವಟಿಕೆಯು ಅವಲಂಬಿಸಿರುವುದರಿಂದ ಅವರ ಆದಾಯವು ಕಡಿಮೆ ಇದ್ದು ಜೀವನ ಮಟ್ಟವು ಕಡಿಮೆ ಇದೆ. ಹಾಗಾಗಿ ಸರ್ಕಾರಗಳು ಗ್ರಾಮೀಣ ಪ್ರದೇಶದಲ್ಲಿ ಜನರ ಜೀವನಮಟ್ಟ ಉತ್ತಮಗೊಳಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿತ್ತು. ಅವುಗಳಲ್ಲಿ ಪ್ರಮುಖವಾಗಿ ಸಣ್ಣ ರೈತರ ಅಭಿವೃದ್ದಿ ಸಂಸ್ಥೆ, ಅತೀ ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಅಭಿವೃದ್ದಿ ಸಂಸ್ಥೆ, ಬರ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ, ಕೂಲಿಗಾಗಿ ಕಾಳು ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂ ರಹಿತರಿಗೆ ಉದ್ಯೋಗ ಧೃಡೀಕರಣ ಯೋಜನೆ, ಗ್ರಾಮೀಣ ಉದ್ಯೋಗ ಭರವಸೆ ಯೋಜನೆ, ಜವಹಾರ್ ರೋಜ್ಗಾರ್ ಯೋಜನೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಖಾತ್ರಿ ಉದ್ಯೋಗ ಯೋಜನೆಗಳಾಗಿವೆ.

### ಕೈಗಾರಿಕಾ ಕಾರ್ಮಿಕರು

ಉತ್ಪಾದನಾ ಘಟಕಗಳನ್ನು ಒಳಗೊಂಡಂತೆ ಎಲ್ಲಾ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಶ್ರಮಿಕರನ್ನು ಕೈಗಾರಿಕಾ ಕಾರ್ಮಿಕರು ಇಲ್ಲವೇ ಔದ್ಯಮಿಕ ಶ್ರಮಿಕರು ಎಂದು ಕರೆಯಲಾಗುತ್ತದೆ. ಕೈಗಾರಿಕಾ ಕಾರ್ಮಿಕರು ತಮ್ಮ ಅಸಹನೆಯನ್ನು, ಬೇಡಿಕೆಯನ್ನು ಮುಂದಿಡಲು ಬಳಸುವ ನಾಲ್ಕು ಪ್ರಮುಖ ಅಸ್ತ್ರಗಳೆಂದರೆ 1) ಸ್ಟ್ರೈಕ್ 2) ಬಾಯ್ಕಾಟ್ 3) ಕೆಲಸ ಮಾಡದೇ ಹೊರಗುಳಿಯುವುದು ಹಾಗೂ 4) ಮುತ್ತಿಗೆ ಹಾಕುವುದು ಆಗಿವೆ.

### ಸಾರ್ವಜನಿಕ ಮತ್ತು ಖಾಸಗಿ ವಲಯದ ಕಾರ್ಮಿಕರು

ಸರ್ಕಾರಿ ವಲಯದ ಉದ್ಯಮಗಳಲ್ಲಿ ದುಡಿಯುವ ಕಾರ್ಮಿಕರನ್ನು ಸಾರ್ವಜನಿಕ ವಲಯದ ಕಾರ್ಮಿಕರು ಎನ್ನಲಾಗುತ್ತದೆ. ಇವರು ಸಂಘಟಿತರಾಗಿರುತ್ತಾರೆ.

ಖಾಸಗಿ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರನ್ನು ಖಾಸಗಿ ವಲಯದ ಕಾರ್ಮಿಕರೆಂದು ಕರೆಯಲಾಗುತ್ತದೆ. ಇತ್ತೀಚಿನ ಖಾಸಗೀಕರಣ ನೀತಿಯಿಂದ ಖಾಸಗಿ ವಲಯದ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಇಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಕಾರ್ಮಿಕರು ಸಹ ಸೇರಿರುತ್ತಾರೆ. ಇವರಲ್ಲಿ ಬಹುತೇಕರು ಅಸಂಘಟಿತರಾಗಿರುತ್ತಾರೆ.

### ಸಂಘಟಿತ ಮತ್ತು ಅಸಂಘಟಿತ ಕೈಗಾರಿಕಾ ಕಾರ್ಮಿಕರು

ಕಾರ್ಮಿಕ ಸಂಘಗಳನ್ನು ಕಟ್ಟಿಕೊಂಡು ಒಗ್ಗಟ್ಟಿನಿಂದ ಕೂಡಿದ ಕಾರ್ಮಿಕರನ್ನು ಸಂಘಟಿತ ಕಾರ್ಮಿಕರು ಎಂದು ಕರೆಯುತ್ತಾರೆ. ಇವರು ಕಾರ್ಖಾನೆ ಕಾಯ್ದೆಗೆ ಒಳಪಟ್ಟ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಾಗಿರುತ್ತಾರೆ. ಕಾರ್ಮಿಕ ಸಂಘಗಳನ್ನು ಕಟ್ಟಿಕೊಳ್ಳಲಾಗದೆ ಇರುವ ಕಾರ್ಮಿಕರನ್ನು ಅಸಂಘಟಿತ ಕೈಗಾರಿಕಾ ಕಾರ್ಮಿಕರೆಂದು ಕರೆಯಲಾಗುತ್ತದೆ.

## ಕೈಗಾರಿಕಾ ಕಾರ್ಮಿಕರ ಲಕ್ಷಣಗಳು

ಭಾರತದ ಕೈಗಾರಿಕಾ ಕಾರ್ಮಿಕರ ಪ್ರಮುಖ ಲಕ್ಷಣಗಳೆಂದರೆ

1) **ಅರೆ ಕುಶಲಕರ್ಮಿಗಳು:** ಔದ್ಯೋಗಿಕ ಕಾರ್ಮಿಕರಲ್ಲಿ ಅನೇಕರು ಅರೆ ಕುಶಲ ಕರ್ಮಿಗಳಾಗಿದ್ದಾರೆ. ಅವರಿಗೆ ಸೂಕ್ತ ತರಬೇತಿ ದೊರಕದೆ ಅವರ ಪೂರ್ಣ ಶ್ರಮ ಉತ್ಪಾದಕತೆಗೆ ಲಭ್ಯವಾಗುತ್ತಿಲ್ಲ.

2) **ಕಡಿಮೆ ದಕ್ಷತೆ:** ಅರೆ ಕುಶಲತೆ ಹಾಗೂ ಸೂಕ್ತ ತರಬೇತಿ ಇಲ್ಲದ ಕಾರ್ಮಿಕರ ಉತ್ಪಾದನಾ ಸಾಮರ್ಥ್ಯ ಮುಂದುವರೆದ ರಾಷ್ಟ್ರಗಳ ಕಾರ್ಮಿಕರಿಗಿಂತ ಕಡಿಮೆ ಇದೆ.

3) **ಒಗ್ಗಟ್ಟಿನ ಅಭಾವ:** ಸಂಘಟಿತ ಕಾರ್ಮಿಕರಲ್ಲೂ ಅನೇಕ ಕಾರ್ಮಿಕ ಸಂಘಗಳ ಅಸ್ತಿತ್ವವಿದ್ದು, ಅನೇಕ ಬಾರಿ ಅವರಲ್ಲಿ ಒಮ್ಮತವೇ ಇಲ್ಲದಿರುವುದು ಕಾಣಬಹುದಾಗಿದೆ.

4) **ಅಸಂಘಟಿತ ಕಾರ್ಮಿಕರಿಗೆ ದೊರಕದ ಸಾಮಾಜಿಕ ಭದ್ರತೆ:** ಭಾರತದಲ್ಲಿ ಶೇ.92 ರಷ್ಟು ಉದ್ಯೋಗಿಗಳು ಅಸಂಘಟಿತ ವಲಯದಲ್ಲಿದೆ. ಇಲ್ಲಿನ ಬಹುತೇಕರಿಗೆ ಸಾಮಾಜಿಕ ಭದ್ರತೆಯ ಸೌಲಭ್ಯಗಳು ಪೂರ್ಣವಾಗಿ ಲಭ್ಯವಾಗುತ್ತಿಲ್ಲ.

5) **ನಾಯಕತ್ವದ ಕೊರತೆ:** ಕಾರ್ಮಿಕರಲ್ಲಿ ಮುಂದಾಳುಗಳ ಕೊರತೆ ಇದೆ. ಕೆಲವು ಕಾರ್ಮಿಕ ಸಂಘಗಳಲ್ಲಿ ಕಾರ್ಮಿಕ ಮುಂದಾಳುಗಳು ಹೊರಗಿನ ರಾಜಕಾರಣಿಗಳಾಗಿರುತ್ತಾರೆ. ಇವರಿಗೆ ಕಾರ್ಮಿಕರ ಸಮಸ್ಯೆಗಳು ಸರಿಯಾಗಿ ಅರ್ಥವಾಗದೆ, ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ.

## ಕೈಗಾರಿಕಾ ಕಾರ್ಮಿಕ ಕ್ಷೇತ್ರದ ಪ್ರಮುಖ ಸಮಸ್ಯೆಗಳೆಂದರೆ

1) ಹೆಚ್ಚುತ್ತಿರುವ ನಿರುದ್ಯೋಗ ಹಾಗೂ ಅರೆ ನಿರುದ್ಯೋಗ ದರ.

2) ಉತ್ಪಾದಕ ಉದ್ಯೋಗ ಸೃಷ್ಟಿಯ ದರದಲ್ಲಿ ಮಂದಗತಿಯ ಬೆಳವಣಿಗೆ.

3) ಅಸಂಘಟಿತ ಕ್ಷೇತ್ರದಲ್ಲಿ ಕಾರ್ಮಿಕರಿಗೆ ಇನ್ನು ಮರೀಚಿಕೆಯಾಗಿರುವ ಸುರಕ್ಷತೆ ಹಾಗೂ ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳು.

4) ಕೌಶಲ್ಯ ವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮಗಳು ನಿಗದಿತ ಗುರಿಯನ್ನು ಹಾಗೂ ಮಟ್ಟವನ್ನು ಮುಟ್ಟಲು ಸಾಧ್ಯವಾಗಿಲ್ಲ.

5) ವ್ಯತಿರಿಕ್ತ ಕಾರ್ಮಿಕ ಸಂಬಂಧಗಳನ್ನು ಕಡಿಮೆಗೊಳಿಸಿ ಕಾರ್ಮಿಕರಿಗೆ ಮಾರುಕಟ್ಟೆಯಲ್ಲಿ ಉದ್ಯೋಗ ಭದ್ರತೆ, ಕೆಲಸದ ಭದ್ರತೆ ಹಾಗೂ ಆದಾಯದ ಭದ್ರತೆಯನ್ನು ಒದಗಿಸುವುದು.

## ಕಾರ್ಮಿಕ ಸಂಘಗಳು

ಕೈಗಾರಿಕಾ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಎಲ್ಲರೂ ಒಟ್ಟಾಗಿ, ಒಗ್ಗಟ್ಟಿನಿಂದ ಕಟ್ಟಿಕೊಳ್ಳುವ ಸಂಘಗಳಿಗೆ ಕಾರ್ಮಿಕ ಸಂಘಗಳೆಂದು ಕರೆಯುತ್ತಾರೆ. ಕಾರ್ಮಿಕರು ಒಗ್ಗಟ್ಟಾಗಿ ಮಾಲೀಕರೊಡನೆ ಹೋರಾಡಿ ಮಾತುಕತೆ ಮಾಡಿ ಸರಿಯಾದ ವೇತನ, ಭತ್ಯೆಗಳು, ಉತ್ತಮ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಾರ್ಮಿಕ ಸಂಘಗಳು ನೆರವಾಗುತ್ತವೆ.

## ಕಾರ್ಮಿಕ ಸಂಘಗಳ ಉದ್ದೇಶಗಳು

ಕಾರ್ಮಿಕ ಸಂಘಗಳು ಕಾರ್ಮಿಕರ ಸಮಸ್ಯೆಗಳನ್ನು ಪರಿಹಾರಕ್ಕಾಗಿ ಹಾಗೂ ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮ ಪಡಿಸುವುದಕ್ಕಾಗಿ ಕಾರ್ಮಿಕ ಸಂಘಗಳು ಶ್ರಮಿಸುತ್ತವೆ. ಹಾಗಾಗಿ ಕಾರ್ಮಿಕ ಸಂಘಗಳ ಪ್ರಮುಖ ಉದ್ದೇಶಗಳೆಂದರೆ

1) ಕೈಗಾರಿಕಾ ಕಾರ್ಮಿಕರಿಗೆ ಉತ್ತಮ ವೇತನ ಭತ್ಯೆಗಳನ್ನು ಒದಗಿಸುವುದು.
2) ಕಾರ್ಮಿಕರಿಗೆ ಕೆಲಸದ ಭದ್ರತೆಯನ್ನು ಒದಗಿಸುವುದು.
3) ಕಾರ್ಮಿಕರಲ್ಲಿ ಒಗ್ಗಟ್ಟು ಹಾಗೂ ಏಕತೆಯನ್ನು ಹೆಚ್ಚಿಸುವುದು.
4) ಉತ್ತಮ ಕೆಲಸದ ಸೌಲಭ್ಯಗಳನ್ನು ಒದಗಿಸುವುದು.
5) ಕಾರ್ಮಿಕರ ಜೀವನ ಮಟ್ಟವನ್ನು ಸುಧಾರಿಸುವುದು.
6) ಕಾರ್ಮಿಕರು ಮತ್ತು ಮಾಲಿಕರ ನಡುವೆ ಉತ್ತಮ ಸಂಬಂಧ ಏರ್ಪಡಿಸುವುದು.
7) ಕಾರ್ಮಿಕರ ಹಕ್ಕುಗಳನ್ನು ರಕ್ಷಣೆ ಮಾಡುವುದು ಹಾಗೂ ಶೋಷಣೆಯನ್ನು ತಪ್ಪಿಸುವುದು.

## ರಾಷ್ಟ್ರೀಯ ಮಟ್ಟದ ಕಾರ್ಮಿಕ ಸಂಘಟನೆಗಳು

ಇಂದು ಭಾರತದಲ್ಲಿ ಅನೇಕ ರಾಷ್ಟ್ರಮಟ್ಟದ ಕಾರ್ಮಿಕ ಸಂಘಟನೆಗಳು ಕಾರ್ಯ ನಿರ್ವಹಿಸುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ.

**1)** **ಭಾರತದ ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೆಸ್:** ಇದು 1947ರಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಇದು ಕಾಂಗ್ರೆಸ್ ಪಕ್ಷದ ನಿಯಂತ್ರಣದಲ್ಲಿದೆ.

**2)** **ಭಾರತದ ಕೇಂದ್ರ ಕಾರ್ಮಿಕ ಸಂಘ:** ಇದು 1970ರಲ್ಲಿ ಸ್ಥಾಪಿತವಾಯಿತು. ಇದು ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ನಿಯಂತ್ರಣದಲ್ಲಿದೆ.

3) **ಅಖಿಲ ಭಾರತೀಯ ಮಜದೂರ್ ಸಂಘ:** ಇದು 1954 ರಲ್ಲಿ ಆರಂಭವಾಯಿತು. ಇದು ಭಾರತೀಯ ಜನತಾ ಪಕ್ಷದ ನಿಯಂತ್ರಣದಲ್ಲಿದೆ.

4) **ಹಿಂದ್ ಮಜದೂರ್ ಸಭಾ:** ಇದು 1948ರಲ್ಲಿ ಸ್ಥಾಪನೆಯಾಯಿತು. ಇದು ಪ್ರಜಾ ಸೋಶಿಯಲಿಸ್ಟ್ ಪಕ್ಷದ ನಿಯಂತ್ರಣದಲ್ಲಿದೆ.

5) **ಸಂಯುಕ್ತ ಕಾರ್ಮಿಕ ಸಂಘಗಳ ಕಾಂಗ್ರೆಸ್:** ಇದು 1949 ರಲ್ಲಿ ಸ್ಥಾಪನೆಯಾಯಿತು. ಇದು ಕ್ರಾಂತಿಕಾರಿ ಸಮಾಜವಾದಿ ಪಕ್ಷದ ನಿಯಂತ್ರಣದಲ್ಲಿದೆ.

## ಕೈಗಾರಿಕಾ ಕಾರ್ಮಿಕರ ಸಾಮಾಜಿಕ ಭದ್ರತಾ ಕ್ರಮಗಳು

ಕೈಗಾರಿಕಾ ಕಾರ್ಮಿಕರು ತಾವು ಕೆಲಸ ಮಾಡುವ ಸಂದರ್ಭದಲ್ಲಿ ಅಪಘಾತ, ಅನಾರೋಗ್ಯ, ಅಂಗವಿಕಲತೆ, ನಿರುದ್ಯೋಗ ಮುಂತಾದ ಅನಿರೀಕ್ಷಿತ ಸಂಕಷ್ಟಗಳಿಗೆ ಒಳಗಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅವರನ್ನು ರಕ್ಷಿಸಲು ಸರ್ಕಾರವು ಒದಗಿಸುವ ಸೌಲಭ್ಯಗಳಿಗೆ ಸಾಮಾಜಿಕ ಭದ್ರತೆ ಎನ್ನುತ್ತಾರೆ.

ಭಾರತ ಸರ್ಕಾರವು ಕೈಗಾರಿಕಾ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಹಲವಾರು ಶಾಸನಗಳನ್ನು ಜಾರಿಗೆ ತಂದಿದೆ. ಅವುಗಳಲ್ಲಿ ಪ್ರಮುಖವಾಗಿ

1) ಕಾರ್ಮಿಕರ ಪರಿಹಾರ ಕಾನೂನು 1923

2) ಕೈಗಾರಿಕಾ ವಿವಾದಗಳ ಕಾನೂನು 1947

3) ಕಾರ್ಮಿಕರ ರಾಜ್ಯ ವಿಮಾ ಕಾನೂನು 1948

4) ಕಾರ್ಮಿಕರ ಭವಿಷ್ಯ ನಿಧಿ ಕಾನೂನು 1952

5) ಬೋನಸ್ ಕಾನೂನು 1965

6) ಗ್ರಾಚುಟಿ ಕಾನೂನು 1972

7) ಕಾರ್ಮಿಕರ ನಿವೃತ್ತಿ ವೇತನ ಕಾನೂನು 1995

8) ಕಾರ್ಖಾನೆಗಳ ತಿದ್ದುಪಡಿ ಕಾಯಿದೆ 2014

9) ಶಿಕ್ಷಾರ್ಥಿಗಳ ತಿದ್ದುಪಡಿ ಮಸೂದೆ 2014

10) ಶ್ರಮ್ ಸುವಿದ್ಯಾ ಪೋರ್ಟಾಲ್ 2015

11) ಅಪ್ರೆಂಟಿಸ್ ಪ್ರೋತ್ಸಾಹ ಯೋಜನೆ 2015

12) ಪರಿಷ್ಕರಿಸಿದ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ 2015

## ಭಾರತದಲ್ಲಿ ಕಾರ್ಮಿಕ ನೀತಿ

ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ದೆಸೆಯಲ್ಲಿ ಕಾರ್ಮಿಕ ನೀತಿಯನ್ನು ಶ್ರಮಿಕರ ಹಿತದೃಷ್ಟಿಯಿಂದ ಸರ್ಕಾರಗಳು ರೂಪುಗೊಳಿಸಿದೆ. ಭಾರತದಲ್ಲಿ ಕಾರ್ಮಿಕ ನೀತಿಗೆ ಎರಡು ಪ್ರಮುಖ ಉದ್ದೇಶಗಳಿವೆ ಅವುಗಳೆಂದರೆ;

1) ಕೈಗಾರಿಕೆಯಲ್ಲಿ ಶಾಂತಿಯನ್ನು ಕಾಪಾಡುವುದು ಹಾಗೂ

2) ಕಾರ್ಮಿಕರ ಯೋಗಕ್ಷೇಮವನ್ನು ಕಾಯುವುದಾಗಿದೆ.

**ಭಾರತದಲ್ಲಿ ಕಾರ್ಮಿಕ ನೀತಿಯ ಪ್ರಮುಖ ಅಂಶಗಳೆಂದರೆ**

1) ಸಾರ್ವಜನಿಕ ಹಾಗೂ ಖಾಸಗಿ ಹೂಟೆಯನ್ನು ಆಕರ್ಷಿಸಲು ತೆಗೆದುಕೊಳ್ಳುವ ನೀತಿಗಳಲ್ಲೊಂದಾಗಿದೆ.

2) ಹೆಚ್ಚಿನ ಉದ್ಯೋಗವಕಾಶಗಳನ್ನು ಸೃಷ್ಟಿಸುವುದಾಗಿದೆ.

3) ಅಸಂಘಟಿತ ವಲಯದ ಕಾರ್ಮಿಕರಿಗೆ ಹೊಸ ಸಾಮಾಜಿಕ ಭದ್ರತೆಯ ಯೋಜನೆಗಳನ್ನು ರೂಪಿಸುವುದಾಗಿದೆ.

4) ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಚೀಟಿಯನ್ನು ವಿತರಿಸುವುದಾಗಿದೆ.

ಕಾರ್ಮಿಕ ನೀತಿಯನ್ನು ಉದ್ಯೋಗ ಕಾಯಿದೆ ಎಂದು ಕರೆಯಲಾಗುತ್ತದೆ. ಭಾರತದ ಸಂವಿಧಾನದಲ್ಲಿ ಕಾರ್ಮಿಕರನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಹಾಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡು ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಕಾಯಿದೆ ರೂಪಿಸುತ್ತೇವೆ. ಕೆಲವನ್ನು ಕೇಂದ್ರ ಸರ್ಕಾರವೇ ರಚಿಸಿ ಅನುಷ್ಠಾನಗೊಳಿಸಿದರೆ, ಮತ್ತೇ ಕೆಲವನ್ನು ಕೇಂದ್ರ ಸರ್ಕಾರವೇ ರಚಿಸಿ ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸುವ ಹೊಣೆಯನ್ನು ಹೊರುತ್ತದೆ. ಇನ್ನು ಕೆಲವನ್ನು ರಾಜ್ಯ ಸರ್ಕಾರಗಳು ತಮ್ಮ ರಾಜ್ಯ ವ್ಯಾಪ್ತಿಯಲ್ಲಿ ಕಾಯಿದೆ ರಚಿಸಿ ಅನುಷ್ಠಾನಗೊಳಿಸುತ್ತವೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಜೀತ ಪದ್ಧತಿ ನಿರ್ಮೂಲನೆಯ ಕಾಯಿದೆಯನ್ನು ಜಾರಿಗೆ ತಂದ ವರ್ಷ ________

ಅ) 1966 ಆ) 1976

ಇ) 1986 ಈ) 1996

2) ಕನಿಷ್ಠ ಕೂಲಿ ಕಾಯಿದೆಯನ್ನು ಜಾರಿಗೆ ತಂದ ವರ್ಷ ________

ಅ) 1978 ಆ) 1968 ಇ) 1958 ಈ) 1948

3) ಕಾರ್ಮಿಕ ಕ್ಷೇತ್ರದ ಸಮಸ್ಯೆಗಳೆಂದರೆ ________

ಅ) ಹೆಚ್ಚುತ್ತಿರುವ ನಿರುದ್ಯೋಗ

ಆ) ಅರೆ ನಿರುದ್ಯೋಗ

ಇ) ಉದ್ಯೋಗ ಸೃಷ್ಠಿಯ ಮಂದಗತಿಯ ಬೆಳವಣಿಗೆ

ಈ) ಮೇಲಿನ ಎಲ್ಲವೂ

4) ಈ ಕೆಳಗಿನವುಗಳಲ್ಲಿ ಪ್ರಮುಖವಾಗಿ ಯಾವುದು ಕೃಷಿ ವೃತ್ತಿಯಲ್ಲ ________

ಅ) ಹೈನುಗಾರಿಕೆ ಆ) ತೋಟಗಾರಿಕೆ

ಇ) ಕೋಳಿ ಸಾಕಾಣಿಕೆ ಈ) ಕೈಗಾರಿಕೆ

5) ಕಾರ್ಮಿಕರ ಪರಿಹಾರ ಕಾನೂನನ್ನು ಎಷ್ಟರಲ್ಲಿ ಜಾರಿಗೊಳಿಸಲಾಯಿತು ________

ಅ) 1923 ಆ) 1943 ಇ) 1973 ಈ) 1993

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ

1) ಹಣಕಾಸಿನ ಪ್ರತಿಫಲಕ್ಕಾಗಿ ಕೈಗೊಳ್ಳುವ ________ ಹಾಗೂ ________ ಕೆಲಸವನ್ನು ಮಾಡುವವರನ್ನು ಕಾರ್ಮಿಕರು ಎಂದು ಕರೆಯುತ್ತಾರೆ.

2) ಕಾರ್ಮಿಕ ನೀತಿಯನ್ನು ________ ಎಂದು ಕರೆಯಲಾಗುತ್ತದೆ.

3) ಸರ್ಕಾರಿ ವಲಯದ ಉದ್ಯಮಗಳಲ್ಲಿ ದುಡಿಯುವ ಕಾರ್ಮಿಕರನ್ನು ________ ಕಾರ್ಮಿಕರು ಎನ್ನಲಾಗುತ್ತದೆ.

4) ಭಾರತದಲ್ಲಿ ________ ರಷ್ಟು ಉದ್ಯೋಗಿಗಳು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ.

5) ಭಾರತದ ಸಂವಿಧಾನದಲ್ಲಿ ಕಾರ್ಮಿಕರನ್ನು ________ ಪಟ್ಟಿಯಲ್ಲಿ ಸೇರಿಸಲಾಗಿದೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1) ಕೃಷಿ ಕಾರ್ಮಿಕರು ಎಂದರೇನು?

2) ಕೈಗಾರಿಕಾ ಕಾರ್ಮಿಕರು ಎಂದು ಯಾರನ್ನು ಕರೆಯುತ್ತಾರೆ?

3) ಗ್ರಾಮೀಣ ಕಾರ್ಮಿಕರ ಅರ್ಥ ಬರೆಯಿರಿ.

4) ಸಂಘಟಿತ ಕಾರ್ಮಿಕರು ಎಂದರೇನು?

5) ಕೃಷಿ ಕಾರ್ಮಿಕರು ನಿರ್ವಹಿಸುವ ಪ್ರಮುಖ ವೃತ್ತಿಗಳಾವುವು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ

1) ಕಾರ್ಮಿಕ ನೀತಿಯ ಎರಡು ಉದ್ದೇಶಗಳನ್ನು ಬರೆಯಿರಿ.

2) ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ಎಂದರೇನು?

3) ಭಾರತದ ಕಾರ್ಮಿಕ ನೀತಿಯ ಪ್ರಮುಖ ಅಂಶಗಳಾವುವು?

4) ಕೈಗಾರಿಕಾ ಕಾರ್ಮಿಕರು ತಮ್ಮ ಬೇಡಿಕೆಯನ್ನು ಮಾಲೀಕರ ಮುಂದಿಡಲು ಬಳಸುವ ಪ್ರಮುಖ ಅಸ್ತ್ರಗಳಾವುವು?

5) ಯಾವುದಾದರೂ 4 ರಾಷ್ಟ್ರಮಟ್ಟದ ಕಾರ್ಮಿಕ ಸಂಘಗಳನ್ನು ಬರೆಯಿರಿ.

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ

1) ಕಾರ್ಮಿಕರು ಎಂದರೆ ಯಾರು? ಕಾರ್ಮಿಕರ ಲಕ್ಷಣಗಳನ್ನು ವಿವರಿಸಿ.

2) ಕೈಗಾರಿಕಾ ಕಾರ್ಮಿಕರ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

3) ಭಾರತಲ್ಲಿ ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಬರೆಯಿರಿ.

4) ಭಾರತಲ್ಲಿ ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಸುಧಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ಬರೆಯಿರಿ.

5) ಕೈಗಾರಿಕಾ ಕಾರ್ಮಿಕರ ಸಾಮಾಜಿಕ ಭದ್ರತಾ ಕ್ರಮಗಳನ್ನು ಬರೆಯಿರಿ.

### ನಿಯೋಜಿತ ಕಾರ್ಯ

1) ನಿಮ್ಮ ಊರಿನಲ್ಲಿ/ಜಿಲ್ಲೆಯಲ್ಲಿನ ಕೃಷಿ ಕಾರ್ಮಿಕರು ದುಡಿಯುವ ವಿವಿಧ ವೃತ್ತಿಗಳನ್ನು ಪಟ್ಟಿ ಮಾಡಿರಿ.

2) ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವಿನ ವ್ಯತ್ಯಾಸ ತಿಳಿಯಿರಿ.

# ಅಧ್ಯಾಯ-8

# ಭಾರತದಲ್ಲಿ ಬಡತನ

'ಬಡತನವು ಹಿಂಸೆಯ ಅತಿ ಕೆಟ್ಟ ರೂಪ' - **ಮಹಾತ್ಮ ಗಾಂಧೀಜಿ**

ಬಡತನವೆಂಬುದು ಜನ್ಮಜಾತವಾಗಿ ಬಂದ ಅನಿವಾರ್ಯದ ಸ್ಥಿತಿ ಹಾಗಾಗಿ ಅದರಿಂದ ಮುಕ್ತರಾಗಲು ಸಾಧ್ಯವಿಲ್ಲ ಎಂಬ ಚಿಂತನೆಯೇ ಸಂಪೂರ್ಣ ದೋಷದಿಂದ ಕೂಡಿದೆ.

**–ಡಾ.ಬಿ.ಆರ್.ಅಂಬೇಡ್ಕರ್**

**ಪೀಠಿಕೆ :**

ಬಡತನದ ಸಮಸ್ಯೆಯು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಹಿಂದುಳಿದ ದೇಶಗಳಲ್ಲಿ ಬಡತನವು ಜಟಿಲ ಸಮಸ್ಯೆಯಾಗಿ ನಿರಂತರವಾಗಿ ಮುಂದುವರಿಯುತ್ತಲೇ ಇದೆ. ಬಡತನ ಸಮಸ್ಯೆ ನಿರ್ಮೂಲನೆಯಾಗದ ಹೊರತು ಹಿಂದುಳಿದ ದೇಶಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಬಡತನ ಎಂದರೇನು? ಬಡತನ ರೇಖೆ ಎಂದರೇನು? ಬಡತನದ ವಿಧಗಳು ಯಾವುವು? ಬಡತನಕ್ಕೆ ಕಾರಣಗಳಾವುವು? ಮತ್ತು ಬಡತನ ಹೋಗಲಾಡಿಸುವ ಪ್ರಮುಖ ಕ್ರಮಗಳು ಯಾವುವು? ಹಾಗೂ ಬಡತನ ನಿವಾರಣೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಈ ಅಧ್ಯಾಯ ನೀಡುತ್ತದೆ.

## ಬಡತನದ ಅರ್ಥ

ದೈನಂದಿನ ಜೀವನದ ಅವಶ್ಯಕ ವಸ್ತುಗಳಾದ ಆಹಾರ, ಬಟ್ಟೆ, ವಸತಿ, ಶಿಕ್ಷಣ, ನೈರ್ಮಲ್ಯ ಇತ್ಯಾದಿಗಳನ್ನು ಈಡೇರಿಸಿಕೊಳ್ಳಲಾಗದ ಸ್ಥಿತಿಯನ್ನು ಬಡತನ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ವ್ಯಕ್ತಿಯೊಬ್ಬನಿಗೆ ಕನಿಷ್ಠ ಅನುಭೋಗದ ಅಗತ್ಯತೆಗಳನ್ನು ಪೂರೈಸಿಕೊಳ್ಳಲಾಗದ ಸ್ಥಿತಿಯನ್ನು ಬಡತನ ಎಂದು ಕರೆಯುತ್ತೇವೆ. ಕನಿಷ್ಠ ಅವಶ್ಯಕ ವಸ್ತುಗಳನ್ನು ಪೊರೈಸಿಕೊಳ್ಳಲಾಗದೇ ಇದ್ದಾಗ ವ್ಯಕ್ತಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರಾಗುತ್ತಾರೆ. ಇದರ ಪರಿಣಾಮವಾಗಿ ಕಡಿಮೆ ಉತ್ಪಾದನೆ, ಕಡಿಮೆ ಆದಾಯ, ಕಡಿಮೆ ಉಳಿತಾಯಗಳ ದೆಸೆಯಿಂದ ಬಡತನದ ವಿಷ ವರ್ತುಲದಲ್ಲಿ ಬೀಳುತ್ತಾರೆ.

## ಬಡತನದ ರೇಖೆ

ಬಡತನ ರೇಖೆಯು ಒಂದು ಕಾಲ್ಪನಿಕ ರೇಖೆಯಾಗಿದ್ದು ವ್ಯಕ್ತಿಗಳು ಕನಿಷ್ಠ ಅಗತ್ಯತೆಗಳನ್ನು ತೃಪ್ತಿಪಡಿಸಿಕೊಳ್ಳಲು ಬೇಕಾದ ಆದಾಯ/ವೆಚ್ಚದ ಪ್ರಮಾಣವನ್ನು ಸೂಚಿಸುತ್ತದೆ. ಈ ಮಟ್ಟಕ್ಕಿಂತ ಕಡಿಮೆ ಗಳಿಸುವವರನ್ನು ಬಡತನದ ರೇಖೆಯ ಕೆಳಗೆ ಇದ್ದಾರೆ ಎಂದೂ, ಅದಕ್ಕಿಂತ ಹೆಚ್ಚಿಗೆ ಗಳಿಸಿದ್ದರೆ ಬಡತನದ ರೇಖೆಯ ಮೇಲೆ ಇದ್ದಾರೆ

ಎಂದೂ ಹೇಳುತ್ತೇವೆ. ಹಾಗಾಗಿ ಬಡತನ ರೇಖೆಯು ಜನಸಂಖ್ಯೆಯನ್ನು ಎರಡು ಗುಂಪುಗಳಾಗಿ ವಿಂಗಡಿಸುತ್ತದೆ. ಅವುಗಳೆಂದರೆ 1) ಬಡತನ ರೇಖೆಗಿಂತ ಮೇಲಿರುವವರು (APL) ಮತ್ತು 2) ಬಡತನ ರೇಖೆಗಿಂತ ಕೆಳಗಿರುವವರು (BPL). ಇವುಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯ ಗುಂಪನ್ನು ಬಡವರು ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯು ಕನಿಷ್ಠ ಮೂಲ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಬೇಕಾದ ಕೊಳ್ಳುವ ಶಕ್ತಿಯನ್ನು ಹೊಂದಿರುವುದಿಲ್ಲ.

ಭಾರತದ ಯೋಜನಾ ಆಯೋಗವು ಬಡತನದ ರೇಖೆಯನ್ನು ದಿನವೊಂದಕ್ಕೆ ಒಬ್ಬ ವ್ಯಕ್ತಿಗೆ ಬೇಕಾಗುವ ಕನಿಷ್ಠ ಶಕ್ತಿಯ ಪ್ರಮಾಣದ (ಕ್ಯಾಲೋರಿಗಳು) ಮೇಲೆ ನಿರ್ಧರಿಸುತ್ತದೆ. ಇದರ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಒಬ್ಬ ವ್ಯಕ್ತಿ ದಿನಕ್ಕೆ ಕನಿಷ್ಠ 2400 ಕ್ಯಾಲೋರಿ ಆಹಾರ ಪ್ರಮಾಣ ಮತ್ತು ನಗರ ಪ್ರದೇಶಗಳಲ್ಲಿ ಒಬ್ಬ ವ್ಯಕ್ತಿ ದಿನಕ್ಕೆ ಕನಿಷ್ಠ 2100 ಕ್ಯಾಲೋರಿ ಶಕ್ತಿ ನೀಡುವ ಆಹಾರ ಸೇವಿಸಬೇಕು ಎಂದು ತಿಳಿಸುತ್ತದೆ. ಈ ಪ್ರಮಾಣದ ಕ್ಯಾಲೋರಿ ಸೇವನೆಗೆ ಬೇಕಾಗುವ ಹಣದ ಪ್ರಮಾಣವನ್ನು ಬಳಸಿ ಬಡತನ ರೇಖೆಯನ್ನು ನಿಗದಿಗೊಳಿಸಲಾಗುತ್ತದೆ. ಈ ಪ್ರಮಾಣವನ್ನು ತಲಾ ಅನುಭೋಗ ವೆಚ್ಚದ ಸಮೀಕ್ಷೆಗಳಿಂದ ನಿರ್ಧರಿಸಬಹುದಾಗಿದೆ. ಅಂತೆಯೇ, 2011–12ರಲ್ಲಿ ತಲಾ ಅನುಭೋಗ ವೆಚ್ಚದ ಆಧಾರದ ಮೇಲೆ ಸುರೇಶ್ ತೆಂಡುಲ್ಕರ್ ನೇತೃತ್ವದ ಸಮಿತಿಯು ಗ್ರಾಮೀಣ ಪ್ರದೇಶದಲ್ಲಿ ತಲಾ ರೂ. 27 ಮತ್ತು ನಗರ ಪ್ರದೇಶಗಳಲ್ಲಿ ತಲಾ ರೂ. 32 ಅನುಭೋಗ ವೆಚ್ಚದ ಪ್ರಮಾಣವನ್ನು ಬಡತನ ರೇಖೆ ಎಂದು ನಿಗದಿಗೊಳಿಸಿದೆ. ಈ ಪ್ರಮಾಣಕ್ಕಿಂತ ಕಡಿಮೆ ವೆಚ್ಚ ಮಾಡುವವರನ್ನು ಬಡವರು ಎಂದು ವ್ಯಾಖ್ಯಾನಿಸಬಹುದು.

## ಬಡತನದ ವಿಧಗಳು

ಬಡತನದ ಮಟ್ಟವನ್ನು ಅಂದಾಜು ಮಾಡಲು ಮತ್ತು ಬಡತನದ ಪರಿಕಲ್ಪನೆಯನ್ನು ಎರಡು ವಿಧಾನಗಳಲ್ಲಿ ಬಳಸಲಾಗುತ್ತದೆ. ಅವುಗಳೆಂದರೆ (1) ನಿರಪೇಕ್ಷ ಬಡತನ ಮತ್ತು (2) ಸಾಪೇಕ್ಷ ಬಡತನ.

## ನಿರಪೇಕ್ಷ ಬಡತನ

ನಿರಪೇಕ್ಷ ಬಡತನವು ಒಂದು ದೇಶದ ಆರ್ಥಿಕ ಸ್ಥಿತಿಗತಿಯ ದೃಷ್ಟಿಕೋನದಲ್ಲಿ ಬಡತನವನ್ನು ಅಂದಾಜು ಮಾಡುವ ವಿಧಾನವಾಗಿದೆ. ಭಾರತದಲ್ಲಿ ನಿರಪೇಕ್ಷ ಬಡತನವನ್ನು ಆಹಾರ ಪ್ರಮಾಣದ ತಲಾ ಲಭ್ಯತೆಯನ್ನು ಮತ್ತು ಅನುಭೋಗದ ಮಟ್ಟದಲ್ಲಿ ಮಾಪನ ಮಾಡಲಾಗುತ್ತದೆ. ಒಂದು ದೇಶದ ಒಟ್ಟು ಜನಸಂಖ್ಯೆಯಲ್ಲಿ ಬಡತನ ರೇಖೆಗಿಂತ ಕೆಳಗೆ ವಾಸಿಸುವ ಜನಸಂಖ್ಯೆಯ ಪ್ರಮಾಣವನ್ನು ನಿರಪೇಕ್ಷ ಬಡತನ ಎನ್ನಲಾಗುತ್ತದೆ. ಇವರು ತಮ್ಮ ಕನಿಷ್ಠ ಮೂಲಭೂತ ಅಗತ್ಯತೆಗಳಿಂದ ವಂಚಿತರಾಗಿರುತ್ತಾರೆ.

## ಸಾಪೇಕ್ಷ ಬಡತನ

ಸಾಪೇಕ್ಷ ಬಡತನವು ಇತರೆ ದೇಶಗಳೊಂದಿಗೆ ಬಡತನವನ್ನು ಹೋಲಿಕೆ ಮಾಡುವುದಾಗಿದೆ. ಅಂದರೆ ದೇಶಗಳ ತಲಾದಾಯದ ಆಧಾರದ ಮೇಲೆ ದೇಶಗಳನ್ನು ಅತಿ ಬಡದೇಶಗಳು ಎಂದು ವರ್ಗೀಕರಿಸಲಾಗುತ್ತದೆ.

ಉದಾಹರಣೆಗೆ, ಮುಂದುವರಿದ ರಾಷ್ಟ್ರಗಳಾದ ಅಮೆರಿಕಾ, ಜಪಾನ್, ಇಂಗ್ಲೆಂಡ್ ದೇಶಗಳ ತಲಾದಾಯವು ಹೆಚ್ಚಾಗಿದ್ದು, ಭಾರತ, ಬಾಂಗ್ಲಾದೇಶದಂತಂಹ ಹಿಂದುಳಿದ ದೇಶಗಳ ತಲಾದಾಯವು ಕಡಿಮೆಯಿರುವುದರಿಂದ ಅವುಗಳನ್ನು ಬಡದೇಶಗಳೆನ್ನಲಾಗುತ್ತದೆ. ಹೀಗೆ ಆದಾಯ ಮತ್ತು ಅಸಮಾನತೆಯನ್ನು ಮಾಪನ ಮಾಡಲು ಸಾಪೇಕ್ಷ ಬಡತನವು ಬಳಕೆಯಾಗುತ್ತದೆ.

## ಭಾರತದಲ್ಲಿ ಬಡತನ ಪ್ರಮಾಣದ ಅಂದಾಜು

ಭಾರತದಲ್ಲಿ ಬಹಳ ಮುಂಚಿನಿಂದಲೂ ಬಡತನದ ಅಂದಾಜು ನಡೆದಿದ್ದು, 1973–74ರಿಂದ ನಿಯಮಿತವಾಗಿ ಐದು ವರ್ಷಗಳ ಅವಧಿಗೆ ಮಾಹಿತಿ ಲಭ್ಯವಿದೆ. ಭಾರತ ಸರ್ಕಾರದ ಯೋಜನಾ ಆಯೋಗವು (ಪುನರ್ ನಿರ್ಮಿತ ನೀತಿ ಆಯೋಗ) ಬಡತನವನ್ನು ಅಂದಾಜಿಸುವ ಕಾರ್ಯವನ್ನು ಮಾಡುತ್ತ ಬಂದಿದೆ. ಅದನ್ನು ಕೋಷ್ಟಕ 7.1ರಲ್ಲಿ ಕೊಡಲಾಗಿದೆ. ಅದರಲ್ಲಿ ತೋರಿಸಿದ ಹಾಗೆ ಭಾರತದಲ್ಲಿ 1973–74ರಲ್ಲಿ, ದೇಶದ ಶೇ. 54.9ರಷ್ಟು ಜನರು ಅಂದರೆ 321 ದಶಲಕ್ಷ ಜನರು ಬಡತನದ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದರು. ಗ್ರಾಮೀಣ ಪ್ರದೇಶದ ಶೇ. 56.4ರಷ್ಟು ಜನರು ಮತ್ತು ನಗರ ಪ್ರದೇಶದ ಶೇ. 49ರಷ್ಟು ಜನರು ಬಡವರಾಗಿದ್ದರು. ಆದರೆ 2011–12ರ ವೇಳೆಗೆ ಜನರು ಬಡತನದ ರೇಖೆಗಿಂತ ಕೆಳಗೆ ವಾಸಿಸುವ ಜನರ ಸಂಖ್ಯೆಯು 269.3 ದಶಲಕ್ಷ ಇದ್ದು ಅಂದರೆ ಒಟ್ಟು ಜನರ ಶೇ. 21.9ರಷ್ಟು ಜನರು ಬಡವರಾಗಿದ್ದರು. ಗ್ರಾಮೀಣ ಪ್ರದೇಶದ ಶೇ. 25.7ರಷ್ಟು ಜನರು ಹಾಗೂ ನಗರ ಪ್ರದೇಶದ ಶೇ. 13.7ರಷ್ಟು ಜನರು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದರು.

### ಕೋಷ್ಟಕ 7.1: ಭಾರತದಲ್ಲಿ ಬಡತನದ ಪ್ರಮಾಣ

| ವರ್ಷ | ಒಟ್ಟು ಭಾರತ | | ಗ್ರಾಮೀಣ ಪ್ರದೇಶ | | ನಗರ ಪ್ರದೇಶ | |
|---|---|---|---|---|---|---|
| | ಸಂಖ್ಯೆ (ದಶಲಕ್ಷ) | ಬಡತನ ದರ (ಶೇಕಡ) | ಸಂಖ್ಯೆ (ದಶಲಕ್ಷ) | ಬಡತನ ದರ (ಶೇಕಡ) | ಸಂಖ್ಯೆ (ದಶಲಕ್ಷ) | ಬಡತನ ದರ (ಶೇಕಡ) |
| 1973–74 | 321 | 54.9 | 261 | 56.4 | 60 | 49.0 |
| 1977–78 | 329 | 51.3 | 264 | 53.1 | 65 | 45.2 |
| 1983 | 323 | 44.5 | 252 | 45.7 | 71 | 40.8 |
| 1987–88 | 307 | 38.9 | 232 | 39.1 | 75 | 38.2 |
| 1993–94 | 320 | 36.0 | 244 | 37.3 | 76 | 32.4 |
| 1999–00 | 260 | 26.1 | 193 | 27.1 | 67 | 23.6 |
| 2004–05 | 301.7 | 27.5 | 220.9 | 28.3 | 80.8 | 25.7 |
| 2009–10 | 354.7 | 29.8 | 278.2 | 33.8 | 76.5 | 20.9 |
| 2011–12 | 269.3 | 21.9 | 216.5 | 25.7 | 52.8 | 13.7 |

ಹೀಗೆ ಶೇಕಡಾವಾರು ಬಡತನದ ಪ್ರಮಾಣ ಕಡಿಮೆಯಾಗಿದ್ದರೂ, ಒಟ್ಟು ಸಂಖ್ಯೆಯು ಇನ್ನೂ ಸುಮಾರು 27 ಕೋಟಿಯಷ್ಟಿರುವುದು ಸಮಸ್ಯೆಯ ಗಂಭೀರತೆಯನ್ನು ಸೂಚಿಸುತ್ತದೆ.

## ಭಾರತದಲ್ಲಿ ಬಡತನಕ್ಕೆ ಕಾರಣಗಳು

ಭಾರತದಲ್ಲಿ ಬಡತನವು ವ್ಯಾಪಕವಾಗಿದೆಯಲ್ಲದೇ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬಡತನದ ಪ್ರಮಾಣವು ಬೇರೆ ಬೇರೆಯಾಗಿದೆ. ಭಾರತದಲ್ಲಿ ಬಡತನಕ್ಕೆ ಕಾರಣವಾಗಿರುವ ಪ್ರಮುಖ ಅಂಶಗಳೆಂದರೆ:

1) **ಅತಿಯಾದ ಜನಸಂಖ್ಯೆ:** ಭಾರತದಲ್ಲಿ ಜನಸಂಖ್ಯೆಯ ಪ್ರಮಾಣವು ತೀವ್ರಗತಿಯಲ್ಲಿ ಏರಿಕೆಯಾಗುತ್ತಿದ್ದು, ಸದ್ಯ ವಿಶ್ವದ ಶೇ. 17.4ರಷ್ಟು ಜನಸಂಖ್ಯೆಯು ಭಾರತದಲ್ಲಿ ವಾಸವಾಗಿದೆ. ಭಾರತ ವಿಶ್ವದಲ್ಲಿಯೇ ಎರಡನೆಯ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿದೆ. ಇದು ಅನುಭೋಗಿ ಸರಕುಗಳ ಮೇಲಿನ ಬೇಡಿಕೆಯನ್ನು ಹೆಚ್ಚಾಗುವಂತೆ ಮಾಡಿದೆ. ಅಧಿಕವಾಗಿರುವ ಮತ್ತು ತೀವ್ರ ಗತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಎಲ್ಲಾ ಜೀವನಾವಶ್ಯಕತೆಗಳನ್ನು ಒದಗಿಸುವುದು ದೊಡ್ಡ ಸವಾಲಾಗಿದ್ದು ಬಹಳಷ್ಟು ಜನರಿಗೆ ಅವುಗಳು ಸಮರ್ಪಕ ಪ್ರಮಾಣದಲ್ಲಿ ದೊರಕದೇ ಬಡತನ ಅಧಿಕವಿದೆ.

2) **ಕಡಿಮೆ ಕೃಷಿ ಉತ್ಪಾದಕತೆ:** ಭೂ ಹಿಡುವಳಿಗಳ ಛಿದ್ರೀಕರಣ ಮತ್ತು ಅತಿ ಸಣ್ಣ ಹಿಡುವಳಿಗಳು, ಬಂಡವಾಳ ಕೊರತೆ, ಸಾಂಪ್ರದಾಯಿಕ ಸಾಗುವಳಿಯ ವಿಧಾನ ಬಳಕೆ, ಅನಕ್ಷರತೆ ಇತ್ಯಾದಿಗಳು ಕೃಷಿಯಲ್ಲಿನ ಕಡಿಮೆ ಉತ್ಪಾದಕತೆಗೆ ಕಾರಣವಾಗಿವೆ. ಇದರಿಂದ ಕೃಷಿಕರ ಹಾಗೂ ಭೂ ಕೃಷಿ ಕಾರ್ಮಿಕರ ಆದಾಯವು ಕಡಿಮೆ ಇದ್ದು, ಅವರಲ್ಲಿ ಬಹುತೇಕರು ಅನಿವಾರ್ಯವಾಗಿ ಬಡತನ ರೇಖೆಗಿಂತ ಕೆಳಗೆ ವಾಸವಾಗಿದ್ದಾರೆ.

3) **ಬೆಲೆಗಳಲ್ಲಿನ ಹೆಚ್ಚಳ:** ನಿರಂತರವಾಗಿ ಏರುತ್ತಿರುವ ಬೆಲೆಗಳ ಕಾರಣದಿಂದಾಗಿ ಕಡಿಮೆ ಆದಾಯ ವರ್ಗದ ಜನರು ತಮ್ಮ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೇ ಬಡವರಾಗಿಯೇ ಉಳಿಯುತ್ತಾರೆ.

4) **ನಿರುದ್ಯೋಗ ಸಮಸ್ಯೆ:** ಭಾರತದಲ್ಲಿ ಬಡತನಕ್ಕೆ ಕಾರಣವಾಗುವ ಮತ್ತೊಂದು ಅಂಶವೆಂದರೆ ನಿರುದ್ಯೋಗದ ಸಮಸ್ಯೆ. ತೀವ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆ ಒಂದೆಡೆಯಾದರೆ ಮತ್ತೊಂದೆಡೆ ನಿರಂತರವಾಗಿ ವಿಸ್ತರಣೆಗೊಳ್ಳುತ್ತಿರುವ ನಿರುದ್ಯೋಗವು ಬಡತನದ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಸಾಕಷ್ಟು ಉದ್ಯೋಗಾವಕಾಶಗಳು ಇಲ್ಲದ ಕಾರಣ ಜನರಿಗೆ ಸಮರ್ಪಕ ಆದಾಯ ದೊರಕದೇ ಅವರ ದೈನಂದಿನ ಅಗತ್ಯತೆಗಳನ್ನು ಪೂರೈಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದು ಬಡತನವನ್ನು ಅನುಭವಿಸುತ್ತಿದ್ದಾರೆ.

5) **ಬಡತನ ನಿರ್ಮೂಲನೆ ಕಾರ್ಯಕ್ರಮಗಳ ಅಸಮರ್ಪಕ ಅನುಷ್ಠಾನ:** ಭಾರತದಲ್ಲಿ ಸರ್ಕಾರಗಳು ಕಾಲದಿಂದ ಕಾಲಕ್ಕೆ ಹಲವಾರು ಉತ್ತಮ ಬಡತನ ನಿರ್ಮೂಲನೆ ಕಾರ್ಯಕ್ರಮಗಳನ್ನು ರೂಪಿಸಿವೆ. ಅದರೆ ಅವುಗಳ ಉದ್ದೇಶ ಚೆನ್ನಾಗಿದ್ದರೂ ಅವುಗಳ ಅನುಷ್ಠಾನವು ಅಸಮರ್ಪಕವಾಗಿದ್ದು ಅವುಗಳ ಪ್ರಯೋಜನವು ಬಡಜನರಿಗೆ ತಲುಪಿಲ್ಲ. ಇದಕ್ಕೆ ಹಲವಾರು ಕಾರಣಗಳಿದ್ದು ಪ್ರಯೋಜನದಾರರ ತಪ್ಪು ಗುರುತಿಸುವಿಕೆ, ಅವರಿಗೆ ನೀಡುವ ಸಹಾಯದಲ್ಲಿ ಸೋರಿಕೆ ಮತ್ತು ಜನರಿಗೆ ಈ ಕಾರ್ಯಕ್ರಮಗಳ ಕುರಿತು ತಿಳುವಳಿಕೆ ಇಲ್ಲದಿರುವಿಕೆ ಪ್ರಮುಖವಾದವುಗಳು.

## ಬಡತನ ನಿರ್ಮೂಲನೆಗಾಗಿ ಸರ್ಕಾರ ಕೈಗೊಂಡಿರುವ ಪ್ರಮುಖ ಕಾರ್ಯಕ್ರಮಗಳು

ಬಡತನವನ್ನು ಹೋಗಲಾಡಿಸುವುದು ಅಭಿವೃದ್ಧಿ ಯೋಜನೆಗಳ ಒಂದು ಪ್ರಮುಖ ಉದ್ದೇಶವಾಗಿದೆ. ಭಾರತ ಸರ್ಕಾರವು ಒಟ್ಟಾರೆ ಅಭಿವೃದ್ಧಿ ಸಾಧಿಸಿ ಬಡತನದ ಪ್ರಮಾಣವನ್ನು ಮತ್ತು ನಿರುದ್ಯೋಗ ಸಮಸ್ಯೆಯನ್ನು ಕಡಿಮೆಗೊಳಿಸಲು ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

1) **ಸಮುದಾಯ ಅಭಿವೃದ್ಧಿ ಯೋಜನೆ:** ಸದರಿ ಯೋಜನೆಯನ್ನು ಗ್ರಾಮೀಣ ಪ್ರದೇಶಗಳ ಒಟ್ಟಾರೆ ಅಭಿವೃದ್ಧಿಗಾಗಿ 1952ರಲ್ಲಿ ಜಾರಿಗೆ ತರಲಾಯಿತು. ಈ ಅಭಿವೃದ್ಧಿಯು ಬಡತನವನ್ನು ಕಡಿಮೆ ಮಾಡುತ್ತದೆ ಎಂದು ಆಶಿಸಲಾಗಿತ್ತು.

2) **20 ಅಂಶಗಳ ಕಾರ್ಯಕ್ರಮ:** ಇದನ್ನು 1975ರಲ್ಲಿ ಜಾರಿಗೆ ತರಲಾಗಿದ್ದು ಇದರಲ್ಲಿ ಅಡಕವಾದ 20 ಅಂಶಗಳ ಮೂಲಕ ಬಡತನವನ್ನು ನಿರ್ಮೂಲನೆಗೊಳಿಸಿ ಜನರ ಒಟ್ಟಾರೆ ಜೀವನಮಟ್ಟವನ್ನು ಹೆಚ್ಚಿಸುವ ಉದ್ದೇಶ ಹೊಂದಲಾಗಿತ್ತು.

3) **ಕೂಲಿಗಾಗಿ ಕಾಳು ಯೋಜನೆ:** ಬಡಜನರಿಗೆ ಅವರ ವಾಸಸ್ಥಳಗಳ ಸನಿಹದಲ್ಲಿ ಉದ್ಯೋಗ ಒದಗಿಸಿ ಕೂಲಿಯ ಕೆಲಭಾಗವನ್ನು ಆಹಾರ ಧಾನ್ಯಗಳ ಮೂಲಕ ನೀಡುವ ಉದ್ದೇಶ ಹೊಂದಿದ್ದ ಈ ಕಾರ್ಯಕ್ರಮವನ್ನು 1977–78ರಲ್ಲಿ ಪ್ರಾರಂಭಿಸಲಾಗಿತ್ತು. ಇದು ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಉದ್ಯೋಗ ಒದಗಿಸಿ ಅವರು ಸೇವಿಸುವ ಆಹಾರ ಧಾನ್ಯಗಳ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶ ಹೊಂದಿತ್ತು.

4) **ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ:** ಬಡತನವನ್ನು ಹೋಗಲಾಡಿಸುವ ಪ್ರಮುಖ ಯೋಜನೆಯಾಗಿ 1980ರಲ್ಲಿ ಭಾರತದ 2300 ಬ್ಲಾಕ್‌ಗಳಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಪ್ರಾಂಭಿಸಲಾಯಿತು. ಈ ಯೋಜನೆಯ ಪ್ರಮುಖ ಉದ್ದೇಶವು ಗ್ರಾಮೀಣ ಬಡ ಕುಟುಂಬಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸಿ, ಅವರು ಬಡತನ ರೇಖೆಯನ್ನು ದಾಟಲು ಸಹಾಯ ಮಾಡುವುದಾಗಿದೆ. ಇದಕ್ಕಾಗಿ ಸ್ವ ಉದ್ಯೋಗ ಉತ್ತೇಜನ, ಅಗತ್ಯ ಹಣಕಾಸಿನ ನೆರವುಗಳನ್ನು ಸರ್ಕಾರವು ಸಹಾಯಧನದ ರೂಪದಲ್ಲಿ ನೀಡುತ್ತಿತ್ತು. ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಯುವಜನರಿಗೆ ಸ್ವಉದ್ಯೋಗಕ್ಕಾಗಿ ತರಬೇತಿ ನೀಡುವ ಯೋಜನೆ (ಟ್ರೈಸೆಮ್) ಮತ್ತು ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಯೋಜನೆಗಳೂ (ಡ್ವಾಕ್ರಾ)ಅಡಕವಾಗಿದ್ದವು.

5) **ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ :** ಈ ಕಾರ್ಯಕ್ರಮವು 1980ರಲ್ಲಿ ಜಾರಿಗೊಂಡು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುವರಿ ಲಾಭದಾಯಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ತನ್ಮೂಲಕ ಅಲ್ಲಿನ ಜನರ ಆದಾಯ ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸುವುದಾಗಿದೆ.

6) **ಗ್ರಾಮೀಣ ಭೂ ರಹಿತ ಉದ್ಯೋಗ ಖಾತರಿ ಕಾರ್ಯಕ್ರಮ:** ಈ ಯೋಜನೆಯನ್ನು ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳ ಸೃಷ್ಟಿ ಮತ್ತು ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ ಉದ್ದೇಶಗಳೊಂದಿಗೆ 1982ರಲ್ಲಿ ಜಾರಿಗೆ ತರಲಾಯಿತು.

7) **ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (ಡ್ವಾಕ್ರಾ):** ಈ ಯೋಜನೆಯನ್ನು ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಜಾರಿಗೊಳಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಆದಾಯ ಸೃಷ್ಟಿಸುವ ವಿವಿಧ ಚಟುವಟಿಕೆಗಳನ್ನು ಸೃಷ್ಟಿಸುವ ಮೂಲಕ ಗ್ರಾಮೀಣ ಭಾಗದ ಮಹಿಳೆಯರ ಜೀವನ ಮಟ್ಟವನ್ನು ಸುಧಾರಿಸುವ ಪ್ರಮುಖ ಉದ್ದೇಶವನ್ನು ಹೊಂದಿತ್ತು.

8) **ಜವಹಾರ್ ರೋಜ್‌ಗಾರ್ ಯೋಜನೆ:** ಜವಾಹರ್ ರೋಜಗಾರ್ ಯೋಜನೆಯನ್ನು 1989ರಲ್ಲಿ ಭಾರತದ ಸರ್ಕಾರವು ದೇಶದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಜಾರಿಗೊಳಿಸಿತು. ಈ ಕಾರ್ಯಕ್ರಮದಲ್ಲಿ ಈಗಾಗಲೇ ಜಾರಿಯಲ್ಲಿದ್ದ ಉದ್ಯೋಗ ಕಾರ್ಯಕ್ರಮಗಳನ್ನು ವಿಲೀನಗೊಳಿಸಲಾಯಿತು.

9) **ಉದ್ಯೋಗ ಭರವಸೆ ಯೋಜನೆ:** ಈ ಯೋಜನೆಯನ್ನು 1993ರಲ್ಲಿ ಜಾರಿಗೊಳಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿನ ಬಡವರಿಗೆ 100 ದಿನಗಳ ಮಾನವ ನಿರ್ಮಿತ ಕೆಲಸವನ್ನು ಒದಗಿಸುವ ಪ್ರಮುಖ ಉದ್ದೇಶವನ್ನು ಹೊಂದಿದೆ. ಈ ಯೋಜನೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಕಾರ್ಯಾಚರಣೆಯಲ್ಲಿರುವ 1752 ಹಿಂದುಳಿದ ಬ್ಲಾಕ್‌ಗಳಲ್ಲಿ ಜಾರಿಗೊಳಿಸಿತು.

10) **ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ:** ಗ್ರಾಮೀಣ ಪ್ರದೇಶಗಳಲ್ಲಿ ಸ್ವ ಉದ್ಯೋಗ ಉತ್ತೇಜಿಸಿ ತನ್ಮೂಲಕ ಅಭಿವೃದ್ಧಿ ಸಾಧನೆ ಹಾಗೂ ಬಡತನ ನಿರ್ಮೂಲನೆಗಾಗಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಿ ಇದರಲ್ಲಿ ಸದ್ಯ ಜಾರಿಯಲ್ಲಿದ್ದ ಕಾರ್ಯಕ್ರಮಗಳಾದ ಟ್ರೈಸೆಮ್, ಡ್ವಾಕ್ರಾ ಮತ್ತು ಮಿಲಿಯನ್ ಬಾವಿಗಳ ಯೋಜನೆಗಳನ್ನು ವಿಲೀನಗೊಳಿಸಲಾಯಿತು. ಇದನ್ನು 1999ರಲ್ಲಿ ಜಾರಿಗೊಳಿಸಲಾಯಿತು.

11) **ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ:** ಗ್ರಾಮೀಣ ಪ್ರದೇಶದಲ್ಲಿ ಹೆಚ್ಚುವರಿ ಉದ್ಯೋಗ ನಿರ್ಮಿಸಿ ಆಹಾರ ಧಾನ್ಯಗಳನ್ನು ಕೂಲಿಯ ಭಾಗವಾಗಿ ನೀಡುವ ಈ ಯೋಜನೆಯನ್ನು 2004ರಲ್ಲಿ ಆರಂಭಿಸಲಾಯಿತು.

12) **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 2006ರಂದು ದೇಶದ 200 ಜಿಲ್ಲೆಗಳಲ್ಲಿ ಪ್ರತೀ ಗ್ರಾಮೀಣ ಕುಟುಂಬದಲ್ಲಿ ಕೌಶಲ್ಯರಹಿತ ವ್ಯಕ್ತಿಗಳಿಗೆ 100 ದಿನಗಳ ಉದ್ಯೋಗವನ್ನು ನೀಡುವ ಉದ್ದೇಶದಿಂದ ಜಾರಿಗೆ ತರಲಾಯಿತು. ಈ ಯೋಜನೆಯನ್ನು 2009 ಅಕ್ಟೋಬರ್ 2ರಂದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂದು ಮರುನಾಮಕರಣ ಮಾಡಿ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಈ ಯೋಜನೆಯೊಂದಿಗೆ ಈಗಾಗಲೇ ಜಾರಿಯಲ್ಲಿದ್ದ ಕಾರ್ಯಕ್ರಮಗಳಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ ಮತ್ತು ರಾಷ್ಟ್ರೀಯ ಕೂಲಿಗಾಗಿ ಕಾಳು ಕಾರ್ಯಕ್ರಮಗಳನ್ನು ವಿಲೀನಗೊಳಿಸಲಾಯಿತು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪ್ರಮುಖವಾಗಿ

ನೀರು ಸಂರಕ್ಷಣೆ, ಅರಣ್ಯೀಕರಣ, ರಸ್ತೆಗಳ ಬದಿಗಳಲ್ಲಿ ಗಿಡಗಳ ಬೆಳೆಸುವಿಕೆ, ಭೂ ಅಭಿವೃದ್ಧಿ, ಕೆರೆಗಳಲ್ಲಿ ಹೂಳೆತ್ತುವ ಮೂಲಕ  ಪುನರ್ ನವೀಕರಣ, ಗ್ರಾಮೀಣ ರಸ್ತೆಗಳ ನಿರ್ಮಾಣ ಇತ್ಯಾದಿಗಳಿಗೆ ಹೆಚ್ಚಿನ ಒತ್ತನ್ನು ನೀಡುತ್ತಿದೆ.

13) **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಅಜೀವಿಕಾ):** ಈ ಯೋಜನೆಯನ್ನು ಕೇಂದ್ರ ಸರ್ಕಾರವು 2011ರಲ್ಲಿ ಜಾರಿಗೊಳಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆಗೊಳಿಸುವ ಪ್ರಮುಖ ಉದ್ದೇಶವನ್ನು ಹೊಂದಿದೆ. ಇದು ಗ್ರಾಮ ಮಟ್ಟದಲ್ಲಿ ಸ್ವಸಹಾಯ ಗುಂಪುಗಳನ್ನು ಸ್ಥಾಪಿಸುವ ಮೂಲಕ ಸ್ವಸಹಾಯ ಗುಂಪುಗಳು ಗ್ರಾಮೀಣ ಜನರಿಗೆ ಉತ್ತಮ ಜೀವನ ನಿರ್ವಹಿಸಲು ಬೇಕಾದ ಲಾಭದಾಯಕ ಸ್ವ ಉದ್ಯೋಗವಕಾಶಗಳನ್ನು ನಿರ್ಮಿಸಲು ಸಹಾಯ ಮಾಡುತ್ತದೆ.

**ಇವುಗಳಲ್ಲದೇ ನಗರ ಪ್ರದೇಶದ ಬಡವರಿಗಾಗಿಯೂ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು ಅವುಗಳಲ್ಲಿ ಪ್ರಮುಖವಾದುವೆಂದರೆ:**

1) **ನೆಹರು ರೋಜ್‌ಗಾರ್ ಯೋಜನೆ:** ನಗರ ಪ್ರದೇಶಗಳಲ್ಲಿನ ಬಡಜನರಿಗೆ ಉದ್ಯೋಗವನ್ನು ಒದಗಿಸುವ ಉದ್ದೇಶದಿಂದ 1989ರಲ್ಲಿ ನೆಹರು ರೋಜ್‌ಗಾರ್ ಯೋಜನೆಯನ್ನು ಜಾರಿಗೊಳಿಸಲಾಯಿತು.

2) **ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ:** ಈ ಯೋಜನೆಯನ್ನು 1993ರಲ್ಲಿ ಭಾರತ ಸರ್ಕಾರವು ಜಾರಿಗೊಳಿಸಿತು. ಪ್ರಾರಂಭದಲ್ಲಿ ನಗರ ಪ್ರದೇಶಗಳಲ್ಲಿ ಕಾರ್ಯಗತಗೊಂಡಿದ್ದು 1994ರ ಏಪ್ರಿಲ್ 1ರ ನಂತರ ದೇಶದಾದ್ಯಂತ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ಜಾರಿಗೊಳಿಸಲಾಯಿತು. ಈ ಯೋಜನೆಯು ಶೈಕ್ಷಣಿಕ ನಿರುದ್ಯೋಗದ ಯುವಜನತೆಗೆ ಉದ್ಯೋಗ ಒದಗಿಸುವ ಪ್ರಮುಖ ಉದ್ದೇಶ ಹೊಂದಿದೆ.

3) **ಪ್ರಧಾನಮಂತ್ರಿಗಳ ಸಮಗ್ರ ನಗರ ಬಡತನ ನಿರ್ಮೂಲನಾ ಕಾರ್ಯಕ್ರಮ:** ಈ ಕಾರ್ಯಕ್ರಮವನ್ನು ಭಾರತದ ಸರ್ಕಾರವು 1996ರಲ್ಲಿ ಜಾರಿಗೊಳಿಸಿತು. ಇದು ಪ್ರಮುಖವಾಗಿ ಸ್ವಯಂ ಉದ್ಯೋಗ ಮತ್ತು ವಸತಿ ಉನ್ನತೀಕರಣ ಮೂಲಕ ಬಡತನವನ್ನು ನಿರ್ಮೂಲನೆ ಮಾಡುವ ಗುರಿ ಹೊಂದಿದೆ. ಇದು ನಗರ ಬಡತನದ ಮೂಲ ಕಾರಣಗಳನ್ನು ನಿಯಂತ್ರಿಸುವ ಪ್ರಮುಖ ಉದ್ದೇಶವನ್ನು ಹೊಂದಿದೆ. ಈ ಕಾರ್ಯಕ್ರಮದಡಿಯಲ್ಲಿ ಬಡವರಿಗೆ ಅನುದಾನ ಮತ್ತು ಸಾಲಗಳನ್ನು ಒದಗಿಸಲಾಗುತ್ತದೆ.

ಇಷ್ಟೆಲ್ಲ ಪ್ರಯತ್ನ ಮಾಡಿದ್ದರೂ ಈ ಮೊದಲು ಚರ್ಚಿಸಿದ ಕಾರಣಗಳ ದೆಸೆಯಿಂದ ಇವುಗಳ ಅನುಷ್ಠಾನ ಸಮರ್ಪಕ ರೀತಿಯಲ್ಲಿ ಆಗದೇ ಅವುಗಳು ಅಷ್ಟೇನೂ ಪರಿಣಾಮಕಾರಿಯಾಗಿಲ್ಲವೆಂದೇ ಹೇಳಲಾಗುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕ್ರಮಗಳೆಂದರೆ, ಗ್ರಾಮೀಣ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ನಗರ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ ಮತ್ತು ಪ್ರಧಾನಮಂತ್ರಿಗಳ ಸಮಗ್ರ ನಗರ ಬಡತನ ನಿರ್ಮೂಲನಾ ಕಾರ್ಯಕ್ರಮಗಳು. ಇವುಗಳಲ್ಲದೇ ಬಡಜನರಿಗೆ ಹಲವಾರು ರೀತಿಯ ಸಹಾಯಧನಗಳನ್ನು ಮತ್ತು ಸವಲತ್ತುಗಳನ್ನು ಸರ್ಕಾರ ಮೇಲಿಂದ ಮೇಲೆ ನೀಡುತ್ತ ಬಂದಿದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತ್ ನಿರ್ಮಾಣ್ ಯೋಜನೆ ________ ವರ್ಷದಲ್ಲಿ ಪ್ರಾರಂಭವಾಯಿತು

   ಅ) 2005 ಆ) 2006

   ಇ) 2007 ಈ) 2008

2. ಸುರೇಶ್ ತೆಂಡುಲ್ಕರ್ ರವರು ಬಡತನವನ್ನು ಆಳೆಯಲು ಬಳಸಿದ ಮಾನದಂಡ ________

   ಅ) ತಲಾ ಅನುಭೋಗ ವೆಚ್ಚ ಆ) ತಲಾ ಆದಾಯ

   ಇ) ಪ್ರತಿದಿನ ಸೇವಿಸುವ ಕ್ಯಾಲರಿಗಳು ಈ) ಶಿಕ್ಷಣ, ಆರೋಗ್ಯಕ್ಕೆ ಮೀಸಲಿಟ್ಟ ವೆಚ್ಚ

3. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಪ್ರತೀ ಗ್ರಾಮೀಣ ಕುಟುಂಬಕ್ಕೆ ________ ದಿನಗಳ ಕೂಲಿ ಒದಗಿಸುವ ಉದ್ದೇಶ ಹೊಂದಿದೆ.

   ಅ) 100 ಆ) 120

   ಇ) 50 ಈ) 150

4. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯನ್ನು ________ ಯೋಜನೆಯಲ್ಲಿ ಜಾರಿಗೊಳಿಸಲಾಯಿತು.

   ಅ) ಐದನೇ ಆ) ಆರನೇ

   ಇ) ಏಳನೇ ಈ) ಎಂಟನೇ

5. 2011–12ರಲ್ಲಿದ್ದ ಭಾರತದಲ್ಲಿನ ಒಟ್ಟು ಬಡಜನರ ಸಂಖ್ಯೆ ________ ಮಿಲಿಯನ್

   ಅ) 260 ಮಿಲಿಯನ್ ಆ) 301 ಮಿಲಿಯನ್

   ಇ) 354 ಮಿಲಿಯನ್ ಈ) 269 ಮಿಲಿಯನ್

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ

1. ಭಾರತದ ಯೋಜನಾ ಆಯೋಗವು ಬಡತನದ ರೇಖೆಯನ್ನು ______ ಆಧಾರದ ಮೇಲೆ ವ್ಯಾಖ್ಯಾನಿಸಿದೆ.
2. 2011–12 ರಲ್ಲಿ ಭಾರತದ ಬಡತನ ಪ್ರಮಾಣ ______ ರಷ್ಟಿದೆ.
3. ಜನರು ತನ್ನ ಕನಿಷ್ಟ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗದ ಸ್ಥಿತಿಗೆ ______ ಎಂದು ಕರೆಯುತ್ತಾರೆ.
4. ಭಾರತದ ಯೋಜನಾ ಆಯೋಗದ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ______ ಮತ್ತು ನಗರ ಪ್ರದೇಶಗಳಲ್ಲಿ ______ ಕ್ಯಾಲೋರಿ ಆಹಾರ ಪ್ರಮಾಣಕ್ಕಿಂತ ಕಡಿಮೆ ಸೇವಿಸುವವರನ್ನು ಬಡವರು ಎನ್ನಲಾಗುತ್ತದೆ.
5. ಉದ್ಯೋಗ ಭರವಸಾ ಯೋಜನೆಯನ್ನು ______ ರಲ್ಲಿ ಜಾರಿಗೊಳಿಸಲಾಯಿತು.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಬಡತನ ಎಂದರೇನು?
2. ಸಾಪೇಕ್ಷ ಬಡತನ ಎಂದರೇನು?
3. ಬಡತನ ರೇಖೆ ಎಂದರೇನು?
4. ನಿರಪೇಕ್ಷ ಬಡತನ ಎಂದರೇನು?
5. ಭಾರತದ ಬಡತನ ಪ್ರಮಾಣ ಎಷ್ಟು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಬಡತನದ ವಿಧಗಳಾವುವು?
2. ಬಡತನ ರೇಖೆಯನ್ನು ವ್ಯಾಖ್ಯಾನಿಸಿ.
3. ಬಡತನ ರೇಖೆಯು ಜನಸಂಖ್ಯೆಯನ್ನು ಎಷ್ಟು ಭಾಗಗಳಾಗಿ ವಿಂಗಡಿಸಲಾಗಿದೆ?
4. ಭಾರತ್ ನಿರ್ಮಾಣ್ ಯೋಜನೆಯ ಪ್ರಮುಖ ಕ್ಷೇತ್ರಗಳಾವುವು?

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಬಡತನಕ್ಕೆ ಪ್ರಮುಖ ಕಾರಣಗಳನ್ನು ಬರೆಯಿರಿ?
2. ಭಾರತದಲ್ಲಿ ಬಡತನ ಹೋಗಲಾಡಿಸಲು ಸರ್ಕಾರಗಳು ಹಮ್ಮಿಕೊಂಡ ಪ್ರಮುಖ ಕಾರ್ಯಕ್ರಮಗಳನ್ನು ವಿವರಿಸಿ?

### ನಿಯೋಜಿತ ಕಾರ್ಯ

1) ನಿಮ್ಮ ನೆರೆಹೊರೆಯಲ್ಲಿರುವ ಬಡತನ ರೇಖೆ ಕೆಳಗೆ ವಾಸಿಸುತ್ತಿರುವ ಮನೆಗಳಿಗೆ ಭೇಟಿ ಕೊಟ್ಟು, ಅವರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಪಟ್ಟಿಮಾಡಿ.

# ಅಧ್ಯಾಯ–9

# ಆರ್ಥಿಕ ಮೂಲಭೂತ ಸೌಕರ್ಯಗಳು

"ಮೂಲಸೌಕರ್ಯ ಮತ್ತು ಅಭಿವೃದ್ಧಿ ನಡುವಿನ ಸಂಬಂಧ ಒಮ್ಮೆಲೆ ಜೊತೆಗೂಡುವ ಕಾರ್ಯವಲ್ಲ. ಇದು ನಿರಂತರವಾದ ಪ್ರಕ್ರಿಯೆ; ನಾವು ನಮ್ಮ ಘೋಷಿತ ಸ್ವಯಂ ವೇಗವರ್ಧಕಗೊಳ್ಳುವ ಆರ್ಥಿಕ ಅಭಿವೃದ್ಧಿಯ ಕಾರ್ಯ ವಿಧಾನದ ಉದ್ದೇಶಗಳನ್ನು ಈಡೇರಿಸಿಕೊಳ್ಳಲು, ಅಭಿವೃದ್ಧಿಯಲ್ಲಿನ ಪ್ರಗತಿ ಮತ್ತು ಮೂಲಸೌಕರ್ಯಗಳ ಪ್ರಗತಿ ಜೊತೆ ಜೊತೆಯಾಗಿ ಒಂದನ್ನೊಂದು ಹಿಂಬಾಲಿಸಿಕೊಂಡು ಹೋಗಬೇಕಾಗುತ್ತದೆ."

- **ಡಾ॥ ವಿ.ಕೆ.ಆರ್.ವಿ.ರಾವ್**

**ಪೀಠಿಕೆ :**

ದೇಶದ ಜನಸಾಮಾನ್ಯರ ಜೀವನಮಟ್ಟ ಸುಧಾರಣೆಗೆ ಹಾಗೂ ದೇಶದ ಆರ್ಥಿಕ ಬೆಳವಣಿಗೆಗೆ ಆರ್ಥಿಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಅವಶ್ಯಕವಾಗಿದೆ. ದೇಶದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಯು ಪ್ರಮುಖವಾಗಿ ಮೂಲಭೂತ ಸೌಲಭ್ಯಗಳ ಲಭ್ಯತೆ ಮತ್ತು ಅದರಲ್ಲಿನ ಪ್ರಗತಿಯನ್ನು ಅವಲಂಬಿಸಿರುತ್ತದೆ. ಕೃಷಿ ಹಾಗೂ ಕೈಗಾರಿಕೆ ಕ್ಷೇತ್ರಗಳ ಪ್ರಗತಿಯು ನೀರಾವರಿ, ಇಂಧನ, ಸಾರಿಗೆ–ಸಂಪರ್ಕ, ಸಂವಹನ ಹೀಗೆ ಹಲವಾರು ಸೌಲಭ್ಯಗಳನ್ನು ಅವಲಂಬಿಸಿದ್ದು, ಅವುಗಳನ್ನು ಸಮರ್ಪಕವಾಗಿ ಪೂರೈಸಿದಾಗ ಮಾತ್ರ ಆ ದೇಶವು ಅಭಿವೃದ್ಧಿಯತ್ತ ಸಾಗುತ್ತದೆ. ಈ ನಿಟ್ಟಿನಲ್ಲಿ ಮೂಲಭೂತ ಸೌಕರ್ಯಗಳೆಂದರೇನು? ಮೂಲಭೂತ ಸೌಕರ್ಯಗಳ ವಿಧಗಳಾವುವು? ಮುಂತಾದ ಪ್ರಶ್ನೆಗಳಿಗೆ ಉತ್ತರ ನೀಡುವುದರ ಜೊತೆಗೆ ಭಾರತದಲ್ಲಿ ಪ್ರಮುಖ ಆರ್ಥಿಕ ಮೂಲಭೂತ ಸೌಕರ್ಯಗಳ ಸ್ಥಿತಿಗತಿಯನ್ನು ಈ ಅಧ್ಯಾಯವು ತಿಳಿಸುತ್ತದೆ.

## ಮೂಲಭೂತ ಸೌಕರ್ಯಗಳ ಅರ್ಥ

ದೇಶದ ಆರ್ಥಿಕಾಭಿವೃದ್ಧಿಗೆ ವಿವಿಧ ಉತ್ಪಾದನಾ ಚಟುವಟಿಕೆಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ನೆರವಾಗುವ ಎಲ್ಲಾ ಸೌಲಭ್ಯಗಳನ್ನು ಮೂಲಭೂತ ಸೌಕರ್ಯಗಳು ಎಂದು ಕರೆಯಲಾಗುತ್ತದೆ. ಇವು ಎಲ್ಲಾ ಆರ್ಥಿಕ ಚಟುವಟಿಕೆಗಳ ಮೂಲಭೂತ ಅಗತ್ಯವಾಗಿದೆ. ಯಾವುದೇ ಆರ್ಥಿಕ ವ್ಯವಸ್ಥೆಯ ಸಂರಚನೆಯ ಭದ್ರ ಬುನಾದಿಗೆ ಇವು ಸಹಾಯಕವಾಗಿದ್ದು ಇವನ್ನು ಅರ್ಥವ್ಯವಸ್ಥೆಯ ಮೂಲ ಬಂಡವಾಳ ಎಂದು ಪರಿಗಣಿಸಲಾಗುತ್ತದೆ. ಇಂತಹ ಪ್ರಮುಖ ಮೂಲಭೂತ ಸೌಕರ್ಯಗಳೆಂದರೆ, ಇಂಧನ, ಸಾರಿಗೆ–ಸಂಪರ್ಕ ವ್ಯವಸ್ಥೆ, ಬ್ಯಾಂಕಿಂಗ್ ವ್ಯವಸ್ಥೆ, ನೀರಾವರಿ, ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ನೈರ್ಮಲ್ಯ ಇತ್ಯಾದಿಗಳಾಗಿವೆ. ಕೆಲವು ಸರಕು ಮತ್ತು ಸೇವೆಗಳ ಉತ್ಪಾದನೆಯ ಮೂಲಕ ದೇಶದ ಆರ್ಥಿಕ ಪ್ರಗತಿಯ ಮೇಲೆ ನೇರವಾಗಿ ಪ್ರಭಾವಿಸಿದರೆ, ಇನ್ನು ಕೆಲವು ಸಾಮಾಜಿಕ ಬಂಡವಾಳ ನಿರ್ಮಾಣ ಮಾಡುವುದರಲ್ಲಿ ಪರೋಕ್ಷವಾಗಿ ಸಹಾಯಕವಾಗಿವೆ.

## ಮೂಲಭೂತ ಸೌಕರ್ಯಗಳ ವಿಧಗಳು

ಆರ್ಥಿಕ ಅಭಿವೃದ್ಧಿಗೆ ನೆರವಾಗುವ ಸೌಲಭ್ಯಗಳನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ;

1) **ಆರ್ಥಿಕ ಮೂಲಭೂತ ಸೌಕರ್ಯ:** ಉತ್ಪಾದನಾ ಚಟುವಟಿಕೆಯಲ್ಲಿ ನೆರವಾಗುವ ಸಾರಿಗೆ-ಸಂಪರ್ಕ, ಮಾಹಿತಿ, ಇಂಧನ, ಬ್ಯಾಂಕಿಂಗ್, ನೀರಾವರಿ ವ್ಯವಸ್ಥೆ ಇತ್ಯಾದಿಗಳು ಆರ್ಥಿಕ ಮೂಲಭೂತ ಸೌಕರ್ಯಗಳಾಗಿದ್ದು ಇವು ದೇಶದ ಆರ್ಥಿಕ ಪ್ರಗತಿಗೆ ನೇರವಾಗಿ ನೆರವಾಗುತ್ತವೆ.

2) **ಸಾಮಾಜಿಕ ಮೂಲಭೂತ ಸೌಕರ್ಯ:** ದೇಶದ ಆರ್ಥಿಕ ಪ್ರಗತಿಯಲ್ಲಿ ಪರೋಕ್ಷವಾಗಿ ನೆರವಾಗುವ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ವಸತಿ, ನೈರ್ಮಲ್ಯ ಇತ್ಯಾದಿಗಳನ್ನು ಸಾಮಾಜಿಕ ಮೂಲಭೂತ ಸೌಕರ್ಯಗಳೆಂದು ಕರೆಯಲಾಗುತ್ತದೆ. ಇವು ಮಾನವರ ಕ್ಷಮತೆಯನ್ನು ಹೆಚ್ಚಿಸಿ ತನ್ಮೂಲಕ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತವೆ.

ಈಗ ಇವುಗಳ ಕುರಿತು ಸಂಕ್ಷಿಪ್ತವಾಗಿ ಚರ್ಚೆ ಮಾಡೋಣ.

## ಸಾರಿಗೆ ವ್ಯವಸ್ಥೆ

ಆರ್ಥಿಕ ವ್ಯವಸ್ಥೆಯಲ್ಲಿ ಸರಕುಗಳ ಉತ್ಪಾದನೆ ಮಾಡಲು ಬೇಕಾಗುವ ಅಗತ್ಯ ಕಚ್ಚಾವಸ್ತುಗಳು ಬೇರೆ ಬೇರೆ ಸ್ಥಳಗಳಲ್ಲಿ ದೊರೆಯುತ್ತದೆ. ಕಚ್ಚಾ ವಸ್ತುಗಳನ್ನು ಉತ್ಪಾದನಾ ಸ್ಥಳಕ್ಕೆ ಸಾಗಿಸಬೇಕಾಗುತ್ತದೆ. ಉತ್ಪಾದಿತ ಸರಕುಗಳನ್ನು ಅನುಭೋಗಿಗಳಿಗೆ ತಲುಪಿಸಬೇಕಾಗುತ್ತದೆ. ಜನರು ತಮ್ಮ ವಿವಿಧ ಉದ್ದೇಶಗಳಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತಾರೆ. ರೈಲು, ಬಸ್ಸು, ಲಾರಿ, ಹಡಗು ಮುಂತಾದ ವಾಹನಗಳು ಮತ್ತು ಇದಕ್ಕೆಲ್ಲಾ ರೈಲು, ರಸ್ತೆ, ಜಲಸಾರಿಗೆಯ ಮಾರ್ಗಗಳನ್ನು ಬಳಸಿಕೊಳ್ಳಲಾಗುತ್ತದೆ. ಆದ್ದರಿಂದ ಸಾರಿಗೆಯು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜನರನ್ನು ಮತ್ತು ಸರಕುಗಳನ್ನು ಸಾಗಿಸುವ ವ್ಯವಸ್ಥೆಯಾಗಿದೆ.

## ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆಯ ಮಹತ್ವ:

ಅಭಿವೃದ್ಧಿ ಹೊಂದುತ್ತಿರುವ ಭಾರತದ ಆರ್ಥಿಕ ಅಭಿವೃದ್ಧಿಯ ವೇಗವನ್ನು ತೀವ್ರಗೊಳಿಸಲು ದಕ್ಷ ಹಾಗೂ ಸುಧಾರಿಸಿದ ಸಾರಿಗೆ ವ್ಯವಸ್ಥೆ ಅವಶ್ಯಕವಾದುದು. ಸಾರಿಗೆ ವ್ಯವಸ್ಥೆಯು ದೇಶದ ಆರ್ಥಿಕ ಅಭಿವೃದ್ಧಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತದೆ. ಆರ್ಥಿಕ ಚಟುವಟಿಕೆಗಳ ಪ್ರಾದೇಶಿಕ ಹಂಚಿಕೆ ಮತ್ತು ಅವುಗಳ ಸುಗಮ ಕಾರ್ಯಾಚರಣೆಗೆ ಸಾರಿಗೆಯ ಪಾತ್ರ ಮಹತ್ವವಾದದು. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆಯ ಮಹತ್ವವನ್ನು ಈ ಕೆಳಕಂಡ ಅಂಶಗಳು ಸ್ಪಷ್ಟಪಡಿಸುತ್ತದೆ.

1) **ಮಾರುಕಟ್ಟೆ ವಿಸ್ತರಣೆ:** ಸರಕುಗಳನ್ನು ಉತ್ಪಾದಕರಿಂದ ಗ್ರಾಹಕರಿಗೆ ಪೂರೈಸುವಲ್ಲಿ ಸಾರಿಗೆಯು ಮಹತ್ವದ ಪಾತ್ರ ನಿರ್ವಹಿಸುತ್ತದೆ. ದೇಶದ ಮೂಲೆ ಮೂಲೆಗೂ ಸರಕುಗಳನ್ನು ಸಕಾಲದಲ್ಲಿ ತಲುಪಿಸುವ ಮೂಲಕ ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳ ಅಭಿವೃದ್ಧಿಗೆ ಸಹಕಾರಿಯಾಗಿದೆ.

2) **ಉತ್ಪಾದನೆಗೆ ಸಹಾಯ:** ಸಾರಿಗೆಯು ಸರಕುಗಳ ಉತ್ಪಾದನೆಗೆ ಬೇಕಾದ ಅಗತ್ಯ ಕಚ್ಚಾ ವಸ್ತುಗಳನ್ನು ಯಂತ್ರೋಪಕರಣಗಳನ್ನು ಹಾಗೂ ಶ್ರಮಬಲವನ್ನು ಉತ್ಪಾದನಾ ಸ್ಥಳಕ್ಕೆ ಸಾಗಿಸಿಕೊಡುತ್ತದೆ. ಹಾಗೆಯೇ ಉತ್ಪಾದನೆಯಾದ ಸರಕುಗಳನ್ನು ವಿವಿಧ ಮಾರುಕಟ್ಟೆಗಳಿಗೆ ಸಾಗಿಸಲೂ ಸಹಾಯಕವಾಗಿದೆ.

3) **ಪ್ರಾದೇಶಿಕ ಶ್ರಮ ವಿಭಜನೆ:** ಸಾರಿಗೆಯು ದೇಶದ ಒಳಗಡೆ ಮತ್ತು ದೇಶ ದೇಶಗಳ ನಡುವೆ ಪ್ರಾದೇಶಿಕ ಶ್ರಮವಿಭಜನೆಗೆ ಪ್ರೋತ್ಸಾಹ ನೀಡುತ್ತಿದೆ.

4) **ಬೆಲೆಯಲ್ಲಿ ಸ್ಥಿರತೆ:** ವ್ಯವಸ್ಥಿತ ಸಾರಿಗೆಯ ವ್ಯವಸ್ಥೆಯ ಮೂಲಕ ಸರಕುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಶೀಘ್ರವಾಗಿ ರವಾನಿಸುವ ಮೂಲಕ ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಸಹಾಯಕವಾಗಿದೆ.

5) **ಕೃಷಿ ಮತ್ತು ಕೈಗಾರಿಕಾಭಿವೃದ್ಧಿ:** ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಹಾಗೂ ಕೈಗಾರಿಕೆಗಳು ಉತ್ಪಾದಿಸಿದ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾರಿಗೆಯ ಸೌಲಭ್ಯ ಅಗತ್ಯವಾಗಿದೆ. ಸಾರಿಗೆ ವ್ಯವಸ್ಥೆಯು ದೇಶದ ವಿವಿಧ ವಲಯಗಳ ಉತ್ಪಾದನಾ ಮೊತ್ತವನ್ನು ಹೆಚ್ಚಿಸಲು ಮೌಲ್ಯಯುತ ಸೇವೆಗಳನ್ನು ಒದಗಿಸುತ್ತದೆ.

6) **ಉದ್ಯೋಗಾವಕಾಶಗಳ ಸೃಷ್ಟಿ:** ಸಾರಿಗೆಯು ವಿವಿಧ ರೀತಿಯ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ವಾಹನಗಳ ತಯಾರಿಕೆ, ಚಾಲನೆ, ನಿರ್ವಹಣೆ, ವಾಹನಗಳ ದುರಸ್ತಿ ಮತ್ತು ವಿವಿಧ ಮಾರ್ಗಗಳ ನಿರ್ಮಾಣದಲ್ಲಿ ಲಕ್ಷಾಂತರ ಜನರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.

7) **ಸಂಪನ್ಮೂಲಗಳ ಸದ್ಬಳಕೆ:** ಭಾರತ ದೇಶವು ಯಥೇಚ್ಛವಾದ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ ರಾಷ್ಟ್ರವಾಗಿದ್ದು ಅವುಗಳ ದಕ್ಷ ಬಳಕೆಗೆ ಸಾರಿಗೆಯ ಪಾತ್ರ ಅನನ್ಯವಾದದ್ದು.

8) **ನೈಸರ್ಗಿಕ ವಿಕೋಪಗಳನ್ನು ನಿಭಾಯಿಸುವುದು:** ಬರಗಾಲ, ಭೂಕಂಪ, ಚಂಡಮಾರುತ, ಪ್ರವಾಹ, ಸುನಾಮಿ ಮುಂತಾದ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ನಾಗರೀಕರ ಪ್ರಾಣ ಮತ್ತು ಆಸ್ತಿಯನ್ನು ರಕ್ಷಿಸುವಲ್ಲಿ, ಸಂತ್ರಸ್ತರಿಗೆ ಅಗತ್ಯ ವಸ್ತುಗಳನ್ನು ಪೂರೈಸುವಲ್ಲಿ ಸಾರಿಗೆಯು ಅಮೂಲ್ಯ ಸೇವೆಯನ್ನು ಒದಗಿಸುತ್ತದೆ.

9) **ದಕ್ಷ ಆಡಳಿತ:** ಉತ್ತಮ ಸಾರಿಗೆಯಿಂದ ದೇಶದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಸಾಧ್ಯವಿದೆ. ಸರ್ಕಾರದ ಇಲಾಖೆಗಳ ಸುಗಮ ಕಾರ್ಯಾಚರಣೆಗೆ ಇದು ಸಹಾಯಕವಾಗಿದೆ. ಇದರಿಂದ ಸರ್ಕಾರ ದಕ್ಷ ಆಡಳಿತ ನೀಡಲು ಸಾಧ್ಯವಾಗುತ್ತದೆ.

10) **ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ:** ಭಾರತವು ವಿಶಾಲ ಹಾಗೂ ವೈವಿಧ್ಯತೆಯ ನಾಡು, ವಿವಿಧ ಸಂಸ್ಕೃತಿ, ಭಾಷೆ, ಆಚರಣೆಗಳು ಇಲ್ಲಿವೆ. ಸಾರಿಗೆ ಅಭಿವೃದ್ಧಿಯಿಂದ ಸಮಾಜದ ಮೂಢ ನಂಬಿಕೆಗಳು, ಅನಿಷ್ಠ ಆಚರಣೆಗಳು ದೂರವಾಗಿ ಸಮಾಜ ಪರಿವರ್ತನೆಯಾಗುತ್ತದೆ. ಬೇರೆ ಬೇರೆ ಸಂಸ್ಕೃತಿಗಳು ಮುಖಾಮುಖಿಯಾಗುವುದರಿಂದ ಸಾಂಸ್ಕೃತಿಕ ಬದಲಾವಣೆ ಸಾಧ್ಯವಾಗುತ್ತದೆ.

ಹೀಗೆ ಸಾರಿಗೆ ವ್ಯವಸ್ಥೆಯು ದೇಶದ ಆರ್ಥಿಕ ಪ್ರಗತಿಯ ವೇಗವನ್ನು ಹೆಚ್ಚಿಸುತ್ತದೆ ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಯನ್ನುಂಟು ಮಾಡುತ್ತದೆ. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸುತ್ತದೆ.

## ಸಾರಿಗೆ ವ್ಯವಸ್ಥೆಯ ವಿಧಗಳು:

ಭಾರತದಲ್ಲಿ ಸಾರಿಗೆ ವ್ಯವಸ್ಥೆಯನ್ನು ಮುಖ್ಯವಾಗಿ ಮೂರು ವಿಧಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ, 1) ಭೂ ಸಾರಿಗೆ ವ್ಯವಸ್ಥೆ 2) ಜಲ ಸಾರಿಗೆ ವ್ಯವಸ್ಥೆ ಮತ್ತು 3) ವಾಯು ಸಾರಿಗೆ ವ್ಯವಸ್ಥೆ

ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಎಲ್ಲ ಸಾರಿಗೆಗಳೂ ಅತ್ಯಗತ್ಯ. ಆರ್ಥಿಕ ಅರ್ಥವ್ಯವಸ್ಥೆಯಲ್ಲಿ ಪ್ರತಿಯೊಂದು ಸಾರಿಗೆಯೂ ತನ್ನದೇ ಆದ ಪಾತ್ರವನ್ನು ನಿರ್ವಹಿಸುತ್ತದೆ.

## ಭಾರತದಲ್ಲಿ ಭೂ ಸಾರಿಗೆ ವ್ಯವಸ್ಥೆ

ದೇಶದ ಸಾರಿಗೆ ವ್ಯವಸ್ಥೆಯಲ್ಲಿ ಭೂ ಸಾರಿಗೆಯು ಅತ್ಯಂತ ಪ್ರಮುಖವಾದ ಸಾರಿಗೆ ಮಾಧ್ಯಮವಾಗಿದೆ. ಭಾರತದಲ್ಲಿ ಭೂ ಸಾರಿಗೆ ವ್ಯವಸ್ಥೆಯನ್ನು ಪ್ರಮುಖವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ

1) ರಸ್ತೆ ಸಾರಿಗೆ

2) ರೈಲ್ವೆ ಸಾರಿಗೆ

## ರಸ್ತೆ ಸಾರಿಗೆ

"ರಸ್ತೆಗಳ ಮೇಲೆ ಗಾಡಿ, ಲಾರಿ, ಬಸ್ಸು ಮುಂತಾದ ವಾಹನಗಳ ಮೂಲಕ ಸರಕುಗಳನ್ನು ಮತ್ತು ಪ್ರಯಾಣಿಕರನ್ನು ಸಾಗಿಸುವ ವ್ಯವಸ್ಥೆಗೆ ರಸ್ತೆ ಸಾರಿಗೆ ಎನ್ನುತ್ತೇವೆ." ಇದು ಬಹು ಪುರಾತನವಾದ ಸಾರಿಗೆ ವ್ಯವಸ್ಥೆಯಾಗಿದೆ. ಸಿಂಧೂ ನಾಗರಿಕತೆಯ ಕಾಲದಲ್ಲಿಯೇ ರಸ್ತೆ ನಿರ್ಮಾಣ ಪ್ರಾರಂಭವಾಗಿರುವುದು ಇತಿಹಾಸದಿಂದ ತಿಳಿಯುತ್ತದೆ. ಅಶೋಕ, ಹರ್ಷವರ್ಧನ, ಅಕ್ಬರ್ ಮುಂತಾದ ರಾಜರು ರಸ್ತೆ ನಿರ್ಮಾಣಕ್ಕೆ ಪ್ರಾಮುಖ್ಯತೆ ನೀಡಿದ್ದರು. ಶೇರ್‌ಶಹನು ಹೆದ್ದಾರಿ ನಿರ್ಮಿಸಿದ್ದನು.

ಭಾರತವು ಹಳ್ಳಿಗಳಿಂದ ಕೂಡಿರುವ ರಾಷ್ಟ್ರವಾಗಿದೆ. ಶೇ. 68.34 ರಷ್ಟು ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ. ಹಳ್ಳಿಗಳಿಂದ ಪಟ್ಟಣ, ಪಟ್ಟಣಗಳಿಂದ ನಗರಗಳಿಗೆ ಹಾಗೂ ಇತರ ಜನವಸತಿ ಪ್ರದೇಶಗಳನ್ನು ಸಂಪರ್ಕಿಸುವುದರಲ್ಲಿ ರಸ್ತೆ ಸಾರಿಗೆಯ ಪಾತ್ರ ಅನನ್ಯವಾದದ್ದು. ಇದು ಗ್ರಾಮೀಣ ಆರ್ಥಿಕತೆಯ ವೇಗವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ರಸ್ತೆ ಸಾರಿಗೆಯು ದೇಶದಾದ್ಯಂತ ವಿಸ್ತರಿಸಿದ್ದು, ದೇಶದ ಕೃಷಿ ಮತ್ತು ಕೈಗಾರಿಕೆ ಹಾಗೂ ವಿವಿಧ ವಲಯಗಳ ಅಭಿವೃದ್ಧಿಗೆ ಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತದೆ. ಭಾರತವು ಇಡೀ ವಿಶ್ವದಲ್ಲಿಯೇ ಅತ್ಯಂತ ಹೆಚ್ಚಿನ ಸಾರಿಗೆ ವ್ಯವಸ್ಥೆಯ ಜಾಲವನ್ನು ಹೊಂದಿದೆ.

## ರಸ್ತೆಗಳ ವರ್ಗೀಕರಣ

ಭಾರತದಲ್ಲಿ ರಸ್ತೆಗಳ ಗುಣಮಟ್ಟದಲ್ಲಿ ಸುಧಾರಣೆಗಳನ್ನು ತರುವ ಸಲುವಾಗಿ 1943 ರಲ್ಲಿ ನಾಗಪುರ ಯೋಜನೆಯು ಭಾರತದ ರಸ್ತೆಗಳನ್ನು ನಾಲ್ಕು ಪ್ರಕಾರಗಳಾಗಿ ವಿಂಗಡಿಸಿದೆ.

**1) ರಾಷ್ಟ್ರೀಯ ಹೆದ್ದಾರಿಗಳು:** ರಾಷ್ಟ್ರೀಯ ಹೆದ್ದಾರಿಯು ಪ್ರಮುಖ ನಗರಗಳು, ಕೈಗಾರಿಕಾ ಕೇಂದ್ರಗಳು ಮತ್ತು ದೇಶದ ವಿವಿಧ ರಾಜ್ಯಗಳ ರಾಜಧಾನಿ ಹಾಗೂ ಬಂದರುಗಳನ್ನು ಸಂಪರ್ಕಿಸುವ ರಸ್ತೆಗಳಾಗಿವೆ. ಈ ಹೆದ್ದಾರಿಗಳು ಗುಣಮಟ್ಟದಲ್ಲಿ ಉತ್ತಮವಾಗಿದ್ದು, ದ್ವಿಪಥ, ನಾಲ್ಕು ಪಥ ಹಾಗೂ ಆರು ಪಥಗಳ ರಸ್ತೆ ಸಂಚಾರವನ್ನು ಹೊಂದಿದೆ. ದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ ಹಾಗೂ ನಿರ್ಮಾಣ ಕಾರ್ಯದ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಅದಕ್ಕಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಸ್ಥಾಪಿಸಿದೆ. ಭಾರತದ ಒಟ್ಟು ರಸ್ತೆಯ ಉದ್ದದಲ್ಲಿ ಶೇ. 2ರಷ್ಟು ರಾಷ್ಟ್ರೀಯ ಹೆದ್ದಾರಿಗಳು ಹೊಂದಿದ್ದು, ಒಟ್ಟು 92851 ಕಿ.ಮೀ. ಉದ್ದ ಹೊಂದಿದೆ. ಕರ್ನಾಟಕದಲ್ಲಿ ಪ್ರಸ್ತುತ 14 ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿ ಎನ್.ಎಚ್. 4 ಮತ್ತು 7 ಇವುಗಳು ಸುವರ್ಣ ಚತುಷ್ಪಥ ಹೆದ್ದಾರಿ ಯೋಜನೆ ಮತ್ತು ಕಾರಿಡಾರ್ ಯೋಜನೆಗಳೂ ಸೇರಿವೆ.

**2) ರಾಜ್ಯ ಹೆದ್ದಾರಿಗಳು:** ರಾಜ್ಯ ಹೆದ್ದಾರಿಗಳು ಜಿಲ್ಲಾ ಕೇಂದ್ರ ಪ್ರದೇಶ ಮತ್ತು ಪ್ರಮುಖ ಪಟ್ಟಣಗಳು ಹಾಗೂ ರಾಜಧಾನಿ ನಗರಗಳನ್ನು ಹಾಗೂ ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪರ್ಕಿಸುತ್ತದೆ. ಇವುಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳು ಹೊಂದಿವೆ. ಭಾರತವು ಒಟ್ಟು 142687 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ಹೊಂದಿದೆ. ಕರ್ನಾಟಕ ರಾಜ್ಯವು 20905 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಹೊಂದಿದೆ.

**3) ಜಿಲ್ಲಾ ರಸ್ತೆಗಳು:** ಜಿಲ್ಲಾ ಕೇಂದ್ರಗಳಿಂದ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ, ಮಾರುಕಟ್ಟೆಗಳಿಗೆ, ಪ್ರಮುಖ ಪಟ್ಟಣ ಮತ್ತು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಜಿಲ್ಲಾ ರಸ್ತೆಗಳು ಎನ್ನುವರು. ಇವುಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿಯು ಆಯಾ ಜಿಲ್ಲಾ ಪಂಚಾಯತಿಗಳಿಗೆ ಇರುತ್ತದೆ. ಕರ್ನಾಟಕವು 47,836 ಕಿ.ಮೀ. ಉದ್ದದ ಜಿಲ್ಲಾ ರಸ್ತೆಗಳನ್ನು ಹೊಂದಿದೆ.

**4) ಗ್ರಾಮೀಣ ರಸ್ತೆಗಳು:** ಭಾರತದಲ್ಲಿ ಗ್ರಾಮೀಣ ರಸ್ತೆಗಳು ಪ್ರಮುಖವಾಗಿ ಹಳ್ಳಿಗಳನ್ನು ಸಂಪರ್ಕಿಸುತ್ತವೆ. ಅಂದರೆ ತಾಲ್ಲೂಕು ಸ್ಥಳದಿಂದ ಪ್ರತಿಯೊಂದು ಗ್ರಾಮಗಳಿಗೂ ಹಾಗೂ ಎಲ್ಲ ಜಿಲ್ಲಾ ರಸ್ತೆಗಳಿಗೂ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿವೆ. ಇವುಗಳನ್ನು ನಿರ್ಮಿಸುವ ಮತ್ತು ಅಭಿವೃದ್ಧಿಪಡಿಸುವ ಜವಾಬ್ದಾರಿಯು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಆಡಳಿತಕ್ಕೆ ಒಳಪಟ್ಟಿರುತ್ತದೆ. ಭಾರತವು ಒಟ್ಟು 46,29,462 ಕಿ,ಮೀ. ಉದ್ದದ ಜಿಲ್ಲಾ ಮತ್ತು ಗ್ರಾಮೀಣ ರಸ್ತೆಗಳನ್ನು ಹೊಂದಿದೆ. ಕರ್ನಾಟಕವು 1,47,212 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು ಹೊಂದಿದೆ.

ರಸ್ತೆಗಳ ಸ್ವರೂಪಕ್ಕೆ ಅನುಗುಣವಾಗಿ ಮತ್ತೆ ಎರಡು ಭಾಗಗಳನ್ನಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ ಭಾರತದಲ್ಲಿ ರಸ್ತೆಗಳನ್ನು ಪಕ್ಕಾ ಮತ್ತು ಕಚ್ಚಾ ರಸ್ತೆಗಳೆಂತಲೂ ವಿಂಗಡಿಸಲಾಗಿದೆ. ವರ್ಷವಿಡೀ ಬಳಕೆ ಮಾಡಲು ಯೋಗ್ಯವಾಗಿರುವ ರಸ್ತೆಗಳನ್ನು ಪಕ್ಕಾ ರಸ್ತೆಗಳೆಂತಲೂ, ವರ್ಷದಲ್ಲಿ ಕೆಲವು ದಿನಗಳು ಮಾತ್ರ ಬಳಕೆಗೆ ಯೋಗ್ಯವಿರುವ ಮಣ್ಣಿನ ರಸ್ತೆಗಳನ್ನು ಕಚ್ಚಾ ರಸ್ತೆಗಳೆಂದು ಕರೆಯಲಾಗುತ್ತದೆ. ಇದಲ್ಲದೇ ಭಾರತದಲ್ಲಿ ರಸ್ತೆ ಸಾರಿಗೆಯನ್ನು ಸಾಂಪ್ರದಾಯಿಕ ಮತ್ತು ಆಧುನಿಕ ಸಾರಿಗೆ ಎಂತಲೂ ವಿಂಗಡಿಸಲಾಗಿದೆ. ಸಾಂಪ್ರದಾಯಿಕ ಸಾರಿಗೆಯು ಎತ್ತಿನಗಾಡಿ, ಆಟೋ ರಿಕ್ಷಾಗಳು, ತಳ್ಳುವ ಬಂಡಿಗಳನ್ನು ಒಳಗೊಂಡಿದ್ದರೆ, ಆಧುನಿಕ ಸಾರಿಗೆಯು ಮೋಟಾರು ವಾಹನಗಳಿಂದ ಒದಗಿಸುವ ಸಾರಿಗೆ ಸೌಲಭ್ಯಗಳೆಲ್ಲವನ್ನೂ ಒಳಗೊಂಡಿದೆ.

ಭಾರತದಲ್ಲಿ ರಸ್ತೆ ಸಾರಿಗೆಯು ಹಲವಾರು ಸಮಸ್ಯೆಗಳಿಂದ ಬಳಲುತ್ತಿದೆ ಅದರಲ್ಲಿ ಪ್ರಮುಖವಾಗಿ ಬಹುತೇಕ ರಸ್ತೆಗಳ ಗುಣಮಟ್ಟ ಉತ್ತಮವಾಗಿರದೆ ಇರುವುದು, ಹೆಚ್ಚಿನ ತೆರಿಗೆ ಹೊರೆ, ಸಾರ್ವಜನಿಕ ಸಾರಿಗೆಯ ದರದಲ್ಲಿ ಹೆಚ್ಚಳ ಮುಂತಾದವು.

## ಭಾರತದಲ್ಲಿ ರೈಲು ಸಾರಿಗೆ ವ್ಯವಸ್ಥೆ

ರೈಲು ಸಾರಿಗೆಯು ಸರಕುಗಳನ್ನು ಮತ್ತು ಪ್ರಯಾಣಿಕರನ್ನು ಸಾಗಿಸುವಲ್ಲಿ ಅತ್ಯಂತ ಪ್ರಮುಖವಾದ ಸಾರಿಗೆ ಪ್ರಕಾರವಾಗಿದೆ. ಭಾರತದಲ್ಲಿ ಮೊಟ್ಟ ಮೊದಲ ರೈಲು 1853 ಏಪ್ರಿಲ್‌ನಲ್ಲಿ ಬಾಂಬೆ ಮತ್ತು ಥಾಣೆಗಳ ನಡುವೆ 34 ಕಿ.ಮೀ.ಗಳ ದೂರ ಕ್ರಮಿಸಿತು. ಬ್ರಿಟಿಷರು ರೈಲು ಸಾರಿಗೆಯನ್ನು ವ್ಯಾಪಾರ ಮತ್ತು ಆಡಳಿತದ ಕಾರಣಗಳಿಂದಾಗಿ ಅಭಿವೃದ್ಧಿ ಪಡಿಸಿದ್ದರು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು ರೈಲು ಸಾರಿಗೆಯ ವಿಸ್ತರಣೆ ಮತ್ತು ಗುಣಮಟ್ಟ ಸುಧಾರಣೆಯಲ್ಲಿ ಬಹಳ ಪ್ರಗತಿ ಸಾಧಿಸಿದೆ.

ಇಂದು ಭಾರತದ ರೈಲ್ವೆ ವ್ಯವಸ್ಥೆಯು ಏಷ್ಯಾದಲ್ಲಿಯೇ ಚೈನಾ ನಂತರದ ಎರಡನೆಯ ಸ್ಥಾನವನ್ನು ಮತ್ತು ವಿಶ್ವದಲ್ಲಿಯೇ ಅಮೇರಿಕಾ, ರಷ್ಯಾ ಮತ್ತು ಚೀನಾ ನಂತರದ ನಾಲ್ಕನೇ ಸ್ಥಾನವನ್ನು ಹೊಂದಿದೆ. ರೈಲ್ವೆ ಸಾರಿಗೆಯ ಉದ್ಯಮವು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಹತೋಟಿಯಲ್ಲಿದ್ದು, ಪ್ರಸ್ತುತ ಭಾರತದಲ್ಲಿ 65,400 ಕಿ.ಮೀ ಉದ್ದದ ರೈಲು ಮಾರ್ಗವನ್ನು ಹೊಂದಿದೆ. ಇದರಲ್ಲಿ 20,900 ಕಿ.ಮೀ ಉದ್ದದ ರೈಲ್ವೆಯನ್ನು ವಿದ್ಯುದ್ಧೀಕರಣಗೊಳಿಸಲಾಗಿದೆ.

ಭಾರತದ ರೈಲು ಸಾರಿಗೆಯು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಕೃಷಿ, ಕೈಗಾರಿಕೆ, ಮತ್ತು ಸೇವಾಕ್ಷೇತ್ರದ ಅಭಿವೃದ್ಧಿಯಲ್ಲಿ ರೈಲು ಸಾರಿಗೆ ಪ್ರಮುಖ ಪಾತ್ರ ವಹಿಸುತ್ತದೆ. ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ ಸರ್ಕಾರಕ್ಕೆ ಸಾಕಷ್ಟು ಆದಾಯವನ್ನು ತಂದುಕೊಡುತ್ತದೆ. ದೇಶದ ಆಡಳಿತ ನಿರ್ವಹಣೆ ಮತ್ತು ರಾಷ್ಟ್ರ ರಕ್ಷಣೆಯಲ್ಲೂ ಇದರ ಪಾತ್ರ ಹಿರಿದಾದುದು.

## ರೈಲು ಸಾರಿಗೆಯ ರಚನೆ

ಭಾರತದ ರೈಲು ಸಾರಿಗೆಯ ರಚನೆಯು ಪ್ರಮುಖವಾಗಿ ಹಳಿಗಳ ಆಧಾರದ ಮೇಲೆ ರಚಿಸಲಾಗಿದೆ. ರೈಲು ಮಾರ್ಗದ ಎರಡು ಹಳಿಗಳ ನಡುವಿನ ಅಂತರಕ್ಕೆ "ಗೇಜ್" ಎಂದು ಕರೆಯುತ್ತಾರೆ. ಈ ಗೇಜ್ ಆಧಾರದ ಮೇಲೆ ರೈಲು ಮಾರ್ಗಗಳನ್ನು ಮೂರು ವಿಧಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1) **ಬ್ರಾಡ್ ಗೇಜ್:** ರೈಲು ಮಾರ್ಗದ ಎರಡು ಹಳಿಗಳ ನಡುವಿನ ಅಂತರ ಒಂದು ಮೀಟರ್‌ಗಿಂತ ಹೆಚ್ಚಾಗಿದ್ದರೆ (1,676ಮೀ.) ಅದನ್ನು ಬ್ರಾಡ್ ಗೇಜ್ ಮಾರ್ಗ ಎಂದು ಕರೆಯುತ್ತಾರೆ.

2) **ಮೀಟರ್ ಗೇಜ್:** ರೈಲು ಮಾರ್ಗದ ಎರಡು ಹಳಿಗಳ ನಡುವಿನ ಅಂತರ ಒಂದು ಮೀಟರ್ ಇದ್ದರೆ ಅದನ್ನು ಮೀಟರ್‌ಗೇಜ್ ಮಾರ್ಗ ಎಂದು ಕರೆಯುತ್ತಾರೆ.

3) **ನ್ಯಾರೋ ಗೇಜ್:** ರೈಲು ಮಾರ್ಗದ ಎರಡು ಹಳಿಗಳ ಅಂತರ ಒಂದು ಮೀಟರ್‌ಗಿಂತ ಕಡಿಮೆ (0.762) ಇದ್ದರೆ ಅದನ್ನು ನ್ಯಾರೋಗೇಜ್ ಮಾರ್ಗ ಎಂದು ಕರೆಯಲಾಗುತ್ತದೆ. ಗುಡ್ಡಗಾಡು ಪ್ರದೇಶಗಳು ಮತ್ತು ಗಣಿ ಪ್ರದೇಶಗಳಲ್ಲಿ ಈ ರೈಲು ಮಾರ್ಗಗಗಳನ್ನು ಬಳಸಲಾಗುತ್ತದೆ.

ದೇಶದ ಆರ್ಥಿಕಾಭಿವೃದ್ಧಿಯಲ್ಲಿ ರೈಲ್ವೆ ವಲಯವು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಆದರೆ ಇಲ್ಲಿಯೂ ಸಹ ಅನೇಕ ಸಮಸ್ಯೆಗಳಿವೆ ಅವುಗಳೆಂದರೆ ಅದಕ್ಷತೆ, ಸಾಮಾಜಿಕ ಜವಾಬ್ದಾರಿಗಳ ನಿರ್ಲಕ್ಷ್ಯ ಮತ್ತು ಸರಿಯಾದ ಮಾಹಿತಿ ತಂತ್ರಜ್ಞಾನದ ಕೊರತೆ, ಮುಂತಾದವುಗಳಾಗಿವೆ.

## ರೈಲ್ವೆ ವಲಯಗಳು

ದೇಶದಲ್ಲಿ ರೈಲ್ವೆ ಸಾರಿಗೆಯ ದಕ್ಷ ಆಡಳಿತ ಮತ್ತು ಸಮನ್ವಯಿತ ನಿರ್ವಹಣೆಗಾಗಿ 17 ವಲಯಗಳನ್ನು ರಚಿಸಲಾಗಿದೆ ಅವುಗಳೆಂದರೆ :

1) ಉತ್ತರ ರೈಲ್ವೆ ( ದೆಹಲಿ)

2) ದಕ್ಷಿಣ ರೈಲ್ವೆ (ಚೆನ್ನೈ)

3) ಈಶಾನ್ಯ ರೈಲ್ವೆ (ಗೋರಖಪುರ)

4) ಈಶಾನ್ಯ ಗಡಿ ರೈಲ್ವೆ ( ಮಾಲಿಗಾಂ-ಗೌಹಾತಿ)

5) ಪೂರ್ವ ರೈಲ್ವೆ (ಕೊಲ್ಕತ್ತಾ)

6) ಆಗ್ನೇಯ ರೈಲ್ವೆ (ಕೊಲ್ಕತ್ತಾ)

7) ಮಧ್ಯೆ ರೈಲ್ವೆ (ಮುಂಬಯಿ)

8) ಪಶ್ಚಿಮ ರೈಲ್ವೆ (ಮುಂಬಯಿ)

9) ದಕ್ಷಿಣ ಮಧ್ಯೆ ರೈಲ್ವೆ (ಸಿಕಂದರಾಬಾದ್ )

10) ನೈಋತ್ಯ ರೈಲ್ವೆ (ಹುಬ್ಬಳ್ಳಿ)

11) ಪೂರ್ವ ಮಧ್ಯೆ ರೈಲ್ವೆ (ಹಾಜಿಪುರ್ )

12) ಉತ್ತರ ಮಧ್ಯೆ ರೈಲ್ವೆ (ಅಲಹಾಬಾದ್)

13) ವಾಯುವ್ಯ ರೈಲ್ವೆ (ಜೈಪುರ್ )

14) ಪೂರ್ವ ಕರಾವಳಿ ರೈಲ್ವೆ (ಭುವನೇಶ್ವರ್)

15) ಪಶ್ಚಿಮ ಮಧ್ಯೆ ರೈಲ್ವೆ (ಜಬಲ್‌ಪುರ)

16) ಆಗ್ನೇಯ ಮಧ್ಯೆ ರೈಲ್ವೆ (ಬಿಲಾಸ್ ಪುರ)

17) ಕೊಲ್ಕತ್ತಾ ಮೆಟ್ರೋ ರೈಲ್ವೆ (ಕೊಲ್ಕತ್ತಾ)

## ಭಾರತದಲ್ಲಿ ಜಲ ಸಾರಿಗೆ ವ್ಯವಸ್ಥೆ

ಭಾರತದಲ್ಲಿನ ಜಲಸಾರಿಗೆ ವ್ಯವಸ್ಥೆಯು ಐತಿಹಾಸಿಕವಾದುದು. ವಿದೇಶಿಯರು ಭಾರತಕ್ಕೆ ಬರಲು ಜಲಮಾರ್ಗವನ್ನು ಕಂಡು ಹಿಡಿದಿದ್ದು, ಸಮುದ್ರಗಳ ಮೂಲಕ ವಿದೇಶಿಯರೊಂದಿಗೆ ಭಾರತೀಯರು ವ್ಯಾಪಾರ ನಡೆಸುತ್ತಿದ್ದರು. ಪ್ರಯಾಣಿಕರು, ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರೋವರ, ಸಾಗರ, ಸಮುದ್ರ, ಕಾಲುವೆ, ನದಿಗಳ ಮಾರ್ಗದಿಂದ ಹಡಗು, ದೋಣಿ ಹಾಗೂ ಇತರೆ ಸ್ಟೀಮರುಗಳ ಮೂಲಕ ಸಾಗಿಸುವ ಸಾಧನಕ್ಕೆ ಜಲಸಾರಿಗೆ ಎನ್ನುವರು. ಜಲಸಾರಿಗೆಯು ಅತ್ಯಂತ ಕಡಿಮೆ ವೆಚ್ಚದ ಸಾರಿಗೆಯ ಪ್ರಕಾರವಾಗಿದೆ. ಭಾರತವು ಸುಮಾರು 7517 ಕಿ.ಮೀ. ಉದ್ದ ತೀರ ಪ್ರದೇಶ ಹಾಗೂ ಹಲವಾರು ಜೀವನದಿಗಳನ್ನು ಹೊಂದಿದ್ದು ಜಲಸಾರಿಗೆಗೆ ಉಪಯುಕ್ತವಾಗಿದೆ. ಪ್ರಸ್ತುತ ಭಾರತದಲ್ಲಿನ ಜಲಸಾರಿಗೆಯನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ, 1) ಆಂತರಿಕ ಜಲಸಾರಿಗೆ ಅಥವಾ ಒಳನಾಡಿನ ಜಲಸಾರಿಗೆ ಮತ್ತು 2) ಹೊರನಾಡಿನ ಜಲಸಾರಿಗೆ ಅಥವಾ ಸಮುದ್ರ ಸಾರಿಗೆ

## ಆಂತರಿಕ ಜಲಸಾರಿಗೆ ಅಥವಾ ಒಳನಾಡಿನ ಜಲಸಾರಿಗೆ

ಸಣ್ಣ ಸಣ್ಣ ದೋಣಿಗಳು, ಹರಿಗೋಲು, ತೆಪ್ಪ ಹಾಗೂ ಸ್ಟೀಮರುಗಳ ಸಹಾಯದಿಂದ ನದಿ, ಕಾಲುವೆಗಳಲ್ಲಿ ಸರಕು ಮತ್ತು ಪ್ರಯಾಣಿಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಕ್ಕೆ ಒಳನಾಡಿನ ಜಲಸಾರಿಗೆ ಎನ್ನುವರು. ಈ ಪ್ರಕಾರದ ಸಾರಿಗೆಯು ಬಹಳ ಹಿಂದಿನ ಕಾಲದಿಂದಲೂ ಬಳಕೆಯಲ್ಲಿದೆ. ಹಿಂದಿನ ಕಾಲಾವಧಿಯಲ್ಲಿ ನಾಡದೋಣಿ, ಹರಿಗೋಲು ಮತ್ತು ತೆಪ್ಪಗಳು ಬಳಸುತ್ತಿದ್ದು ಆಧುನಿಕತೆಯಲ್ಲಿ ಯಂತ್ರಚಾಲಿತ ದೋಣಿಗಳನ್ನು ಮತ್ತು ಉಗಿಹಡುಗುಗಳನ್ನು ಬಳಸಲಾಗುತ್ತಿದೆ. ಒಳನಾಡಿನ ಜಲ ಸಾರಿಗೆಯು ಎಲ್ಲಾ ವಿಧದ ಸಾರಿಗೆಗಿಂತಲೂ ತುಂಬಾ ಅಗ್ಗದ್ದಾಗಿದೆ.

ಒಳನಾಡಿನ ಜಲಸಾರಿಗೆಗೆ ನೈಸರ್ಗಿಕವಾಗಿರುವ ಜೀವನದಿಗಳು ಮತ್ತು ಅದರ ಉಪನದಿಗಳು ಹಾಗೂ ಕಾಲುವೆಗಳು ಯೋಗ್ಯವಾಗಿವೆ. ಭಾರತವು ಒಟ್ಟು 14,550 ಕಿ.ಮೀ. ಜಲನಾಡಿನ ಸಂಚಾರವನ್ನು ಒಳಗೊಂಡಿದೆ. ಭಾರತದಲ್ಲಿ ಪ್ರಮುಖವಾಗಿ ಗಂಗಾ, ಬ್ರಹ್ಮಪುತ್ರ, ಗೋದಾವರಿ ಮತ್ತು ಕೃಷ್ಣ ಮುಂತಾದ ಜೀವನದಿಗಳು ಮತ್ತು ಅದರ ಉಪನದಿಗಳು, ಹಾಗೂ ಅದರ ಕಾಲುವೆಗಳು ಒಳನಾಡಿನ ಜಲಸಾರಿಗೆಗೆ ಯೋಗ್ಯವಾಗಿವೆ. ಒರಿಸ್ಸಾದ ಮಹಾನದಿ ಕಾಲುವೆ, ನರ್ಮದಾ ಮತ್ತು ತಪತಿ ನದಿಗಳ ಕಾಲುವೆ, ಕೇರಳದ ಕಾಲುವೆ ಮತ್ತು ಹಿನ್ನೀರು ನದಿ, ತಮಿಳುನಾಡಿನ ಬಕಿಂಗ್ ಹ್ಯಾಮ್ ಕಾಲುವೆಗಳು ಪ್ರಮುಖ ಜಲಮಾರ್ಗಗಳಾಗಿವೆ. ಭಾರತದಲ್ಲಿ ಒಳನಾಡಿನ ಜಲಸಾರಿಗೆಯನ್ನು ಅಭಿವೃದ್ಧಿ ಪಡಿಸಲು 1965ರಲ್ಲಿ ಆಂತರಿಕ ಜಲಸಾರಿಗೆ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು.

## ಹೊರನಾಡಿನ ಜಲಸಾರಿಗೆ ಅಥವಾ ಸಮುದ್ರ ಸಾರಿಗೆ

ಹಡಗುಗಳ ಮುಖಾಂತರ ಸಮುದ್ರ ಹಾಗೂ ಸಾಗರಗಳಲ್ಲಿ ಪ್ರಯಾಣಿಕರು ಮತ್ತು ಸರಕುಗಳನ್ನು ಸಾಗಿಸುವುದಕ್ಕೆ ಸಮುದ್ರ ಸಾರಿಗೆ ಎಂದು ಕರೆಯಲಾಗುತ್ತದೆ. ಭಾರತವು ಪರ್ಯಾಯ ದ್ವೀಪವಾಗಿದ್ದು ಅರಬ್ಬೀ ಸಮುದ್ರ, ಬಂಗಾಳಕೊಲ್ಲಿ ಹಾಗೂ ಹಿಂದೂ ಮಹಾಸಾಗರಗಳಿಂದ ಸುತ್ತುವರಿದಿದ್ದು ಸಮುದ್ರ ಸಾರಿಗೆಯು ಮಹತ್ವದ್ದಾಗಿದೆ.

ಭಾರತವು ಒಟ್ಟು 7517 ಕಿ.ಮೀ ಉದ್ದದ ಕರಾವಳಿ ತೀರ ಪ್ರದೇಶವನ್ನು ಹೊಂದಿದ್ದು, ಹಡುಗುಗಳು ಸಮುದ್ರ ಸಾರಿಗೆಯ ಪ್ರಮುಖ ಪರಿಕರವಾಗಿದೆ. ಈ ಪ್ರಕಾರದ ಸಾರಿಗೆ ವ್ಯವಸ್ಥೆಯಲ್ಲಿ ಹಡುಗುಗಳು ನಿಲ್ಲುವ ಸಮುದ್ರ ತೀರ ಪ್ರದೇಶವನ್ನು ಬಂದರುಗಳೆಂದು ಕರೆಯಲಾಗುತ್ತದೆ. ಭಾರತವು ಈ ಬಂದರುಗಳ ಮೂಲಕ ಹೆಚ್ಚಿನ ಪ್ರಮಾಣದ ವಿದೇಶಿ ವ್ಯಾಪಾರವನ್ನು ನಡೆಸುತ್ತದೆ. ಭಾರತದ ಪ್ರಮುಖ ಬಂದರುಗಳೆಂದರೆ ನವಮಂಗಳೂರು, ಕೊಚ್ಚಿನ್, ಪುದುಚೇರಿ, ಪಾರಾದೀಪ್, ಮುಂಬಯಿ, ಕೊಲ್ಕತ್ತಾ, ಚೆನ್ನೈ, ವಿಶಾಖಪಟ್ಟಣ, ಮರ್ಮ ಗೋವಾಗಳಾಗಿವೆ. ಇವುಗಳಲ್ಲಿ ವಿಶಾಖಪಟ್ಟಣ, ಕೊಚ್ಚಿನ್, ಕೊಲ್ಕತ್ತಾ ಮತ್ತು ಮುಂಬೈಗಳಲ್ಲಿ ಹಡಗು ನಿರ್ಮಾಣ ಘಟಕಗಳು ಸ್ಥಾಪಿತವಾಗಿವೆ. ಭಾರತದಲ್ಲಿ ಹಡಗುಗಳನ್ನು ಲೈನರ್ಸ್, ಟ್ರಾಂಪ್ಸ್ ಮತ್ತು ಟ್ಯಾಂಕರ್ಸ್ ಎಂದು 3 ಪ್ರಕಾರಗಳಾಗಿ ವಿಂಗಡಿಸಲಾಗುತ್ತದೆ. ಲೈನರ್ಸ್ ಎಂಬುದು ಹೆಚ್ಚು ಭಾರವಿಲ್ಲದ ಸರಕುಗಳನ್ನು ಮತ್ತು ಪ್ರಯಾಣಿಕರನ್ನು ಸಾಗಿಸಿದರೆ, ಟ್ರಾಂಪ್‌ಗಳು ಸರಕುಗಳನ್ನು ಸಾಗಿಸುವ ದೊಡ್ಡ ದೊಡ್ಡ ಹಡಗುಗಳಾಗಿವೆ. ಟ್ಯಾಂಕರ್ಸ್ ತೈಲೋತ್ಪನ್ನಗಳನ್ನು ಸಾಗಿಸುವ ಹಡಗುಗಳಾಗಿವೆ. ಭಾರತದಲ್ಲಿ 1957ರಲ್ಲಿ ಬಂದರು ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸಿದ್ದು, ಬಂದರುಗಳ ನಿರ್ಮಾಣ, ನಿರ್ವಹಣೆ ಮತ್ತು ಸೌಲಭ್ಯಗಳ ವಿಸ್ತರಣೆಯ ಜವಾಬ್ದಾರಿಯನ್ನು ಹೊಂದಿದೆ.

## ಭಾರತದಲ್ಲಿ ವಾಯು ಸಾರಿಗೆ ವ್ಯವಸ್ಥೆ

ವಾಯು ಸಾರಿಗೆಯು ಅತ್ಯಂತ ವೇಗದ ಸಾರಿಗೆ ಮಾಧ್ಯಮವಾಗಿದೆ. ಇದು ಪ್ರಯಾಣಿಕರು ಮತ್ತು ಹಗುರವಾದ ವಸ್ತುಗಳನ್ನು ಬಹುದೂರದ ಪ್ರದೇಶಗಳಿಗೆ ಅತಿ ಶೀಘ್ರವಾಗಿ ಸಾಗಿಸುವುದಕ್ಕೆ ಬಹಳ ಉಪಯುಕ್ತವಾಗಿದೆ. ಆದರೆ ಇತರೆ ಸಾರಿಗೆಯ ಪ್ರಕಾರಗಳಿಗೆ ಹೋಲಿಸಿದಂತೆ ಇದು ತುಂಬಾ ದುಬಾರಿಯಾಗಿರುವುದರಿಂದ ಇದು ಎಲ್ಲಾ ವರ್ಗದ ಜನರನ್ನು ತಲುಪುವುದರಲ್ಲಿ ವಿಫಲವಾಗಿದೆ.

ಭಾರತವು ಮೊಟ್ಟ ಮೊದಲ ಬಾರಿಗೆ 1911 ರಲ್ಲಿ ಅಲಹಾಬಾದ್‌ನಿಂದ ನೈನಿಯವರೆಗೆ 10 ಕಿ.ಮೀ. ದೂರದ ಸಾಗಾಟದ ಮೂಲಕ ವಿಮಾನಯಾನವನ್ನು ಪ್ರಾರಂಭಿಸಿತು. ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ, ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ ಪರಿಹಾರ ಕಾರ್ಯಾಚರಣೆಯನ್ನು ಕೈಗೊಳ್ಳಲು ಸಹಾಯಕವಾಗುತ್ತದೆ. ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ದೇಶದ ಬಾಹ್ಯ ರಕ್ಷಣೆಯಲ್ಲಿ ಯುದ್ಧ ವಿಮಾನಗಳು ಪ್ರಧಾನ ಪಾತ್ರ ನಿರ್ವಹಿಸುತ್ತದೆ.

ಭಾರತದಲ್ಲಿ ಭಾರತೀಯ ವಿಮಾನ ಸಂಚಾರವನ್ನು 1953ರಲ್ಲಿ ರಾಷ್ಟ್ರೀಕರಣಗೊಳಿಸಲಾಯಿತು. ಈ ಮೂಲಕ ಆಂತರಿಕ ವಾಯುಸಾರಿಗೆಯನ್ನು ನಿರ್ವಹಿಸಲು ಇಂಡಿಯನ್ ಏರ್‌ಲೈನ್ಸ್ ಮತ್ತು ಅಂತರಾಷ್ಟ್ರೀಯ ವಾಯು ಸಾರಿಗೆಯನ್ನು ನಿರ್ವಹಿಸಲು ಏರ್ ಇಂಡಿಯಾ ಇಂಟರ್ ನ್ಯಾಷನಲ್ ಎಂಬ ನಿಗಮಗಳನ್ನು ಸ್ಥಾಪಿಸಲಾಗಿತ್ತು. ಆಂತರಿಕ ವಾಯುಸಾರಿಗೆಯು ಪ್ರಮುಖ ರಾಜಧಾನಿಗಳು ಹಾಗೂ ಪ್ರಮುಖ ನಗರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಿದರೆ, ಅಂತರಾಷ್ಟ್ರೀಯ ವಾಯು ಸಾರಿಗೆಯು ದೇಶದ ಪ್ರಮುಖ ನಗರಗಳು ಹಾಗೂ ವಿದೇಶಗಳಿಗೆ ಸಂಪರ್ಕ ಕಲ್ಪಿಸುತ್ತದೆ.

ತರುವಾಯ ಭಾರತವು ಏಪ್ರಿಲ್ 1990 ರಲ್ಲಿ ಮುಕ್ತ ವಾಯು ನೀತಿಯನ್ನು ಜಾರಿಗೊಳಿಸಿತು. ಹಾಗಾಗಿ 37 ವರ್ಷಗಳ ನಂತರ ಖಾಸಗಿ ವಿಮಾನ ಸಂಸ್ಥೆಯ ವಿಮಾನಗಳು ಭಾರತದ ಬಾನಂಗಳದಲ್ಲಿ ಹಾರಡಲು ಶುರು ಮಾಡಿದವು. ಪ್ರಸ್ತುತ ಭಾರತದಲ್ಲಿ ವಿಶ್ವದ 9ನೇ ಅತಿ ದೊಡ್ಡ ವಿಮಾನಯಾನ ಮಾರುಕಟ್ಟೆಯಾಗಿದೆ.

## ಭಾರತದಲ್ಲಿ ಸಂಪರ್ಕ ವ್ಯವಸ್ಥೆ

ಒಂದು ದೇಶದ ಸಾಮಾಜಿಕ-ಆರ್ಥಿಕಾಭಿವೃದ್ಧಿಗೆ ಸಾರಿಗೆ ಎಷ್ಟು ಮುಖ್ಯವೋ, ಸಂಪರ್ಕ ವ್ಯವಸ್ಥೆಯು ಸಹ ಅಷ್ಟೇ ಮುಖ್ಯವಾದದ್ದು ಆಗಿದೆ. ಕೃಷಿ, ಕೈಗಾರಿಕೆ, ವ್ಯಾಪಾರ ವ್ಯವಹಾರ ಹಾಗೂ ಇತರೆ ಕ್ಷೇತ್ರಗಳ ಪ್ರಗತಿಗೆ ಮಾಹಿತಿಯ ಸಂವಹನ ತೀರಾ ಅಗತ್ಯವಾಗಿದೆ. ಆದ್ದರಿಂದಲೇ ಸಂಪರ್ಕ ವ್ಯವಸ್ಥೆಯು ಆರ್ಥಿಕಾಭಿವೃದ್ಧಿಯ ಒಂದು ಅವಿಭಾಜ್ಯ ಅಂಗವಾಗಿದೆ. ಮಾಹಿತಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರವಾನಿಸುವ ವ್ಯವಸ್ಥೆಗೆ ಸಂಪರ್ಕವ್ಯವಸ್ಥೆ ಎನ್ನಲಾಗುತ್ತದೆ. ಸಾರಿಗೆಯು ಸರಕು ಮತ್ತು ಪ್ರಯಾಣಿಕರನ್ನು ಸಾಗಾಟ ಮಾಡಿದರೆ, ಸಂಪರ್ಕವು ಮಾಹಿತಿ ಮತ್ತು ಸಮಾಚಾರಗಳನ್ನು ಅಂಚೆ ಮತ್ತು ತಂತಿ, ದೂರವಾಣಿ, ಫ್ಯಾಕ್ಸ್, ರೇಡಿಯೋ, ದೂರದರ್ಶನ, ಇಂಟರ್‌ನೆಟ್ (ಅಂತರ್ಜಾಲ) ಮುಂತಾದ ದೂರ ಸಂವಹನ ಮಾಧ್ಯಮಗಳನ್ನು ಬಳಸುತ್ತದೆ.

## ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕದ ಪಾತ್ರ:

ಸಂಪರ್ಕವು ಮಾನವನ ಪ್ರತಿಯೊಂದು ಆರ್ಥಿಕ ಚಟುವಟಿಕೆಯ ಮೇಲೆ ತನ್ನ ಪ್ರಭಾವ ಬೀರುತ್ತಿದೆ. ಉತ್ತಮ ಸಂಪರ್ಕವು ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿದೆ. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕದ ಪಾತ್ರವನ್ನು ಈ ಕೆಳಕಂಡ ಅಂಶಗಳಿಂದ ತಿಳಿಯಬಹುದಾಗಿದೆ.

1) **ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿ:** ಸಂಪರ್ಕವು ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಸಹಾಯಕವಾಗಿದೆ. ಉತ್ಪಾದನಾಂಗಗಳನ್ನು ಒಗ್ಗೂಡಿಸುವಲ್ಲಿ, ತಂತ್ರಜ್ಞಾನ ಅಳವಡಿಸುಕೊಳ್ಳುವಲ್ಲಿ,

ಉತ್ಪಾದಿತ ವಸ್ತುಗಳನ್ನು ಮಾರುಕಟ್ಟೆಯಲ್ಲಿ ವಿಕ್ರಯ ಮಾಡುವಲ್ಲಿ, ಹೀಗೆ ಉತ್ಪಾದನೆಯ ಪ್ರತಿ ಹಂತದಲ್ಲಿ ಸಂಪರ್ಕ ಸಹಾಯಕವಾಗಿದೆ.

2) **ಶಿಕ್ಷಣದ ಪ್ರಸಾರ:** ಸಂಪರ್ಕ ಸಾಧನಗಳು ಜನರಲ್ಲಿ ಜ್ಞಾನ ಪ್ರಸಾರ ಮಾಡುವ ಪ್ರಮುಖ ಕಾರ್ಯವನ್ನು ಮಾಡುತ್ತಿವೆ. ಜನರಲ್ಲಿ ತಿಳುವಳಿಕೆಯನ್ನು ಮೂಡಿಸುತ್ತಿವೆ. ಆ ಮೂಲಕ ಜನರ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯವನ್ನು ವೃದ್ಧಿಸುತ್ತದೆ.

3) **ಇ-ಆಡಳಿತ:** ದೇಶದ ಆಡಳಿತ ವ್ಯವಸ್ಥೆಯಲ್ಲಿ ಸಂಪರ್ಕ ವ್ಯವಸ್ಥೆ ಕ್ರಾಂತಿಯನ್ನೇ ಉಂಟು ಮಾಡಿದೆ. ಅಂತರ್ಜಾಲವನ್ನು ಆಡಳಿತದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳುವ ಮೂಲಕ ಇ-ಆಡಳಿತವನ್ನು ಜಾರಿಗೆ ತರಲಾಗಿದೆ. ಇದರಿಂದ ದೆಹಲಿಯಿಂದ ಹಳ್ಳಿಯವರೆಗೆ ಆಡಳಿತ ಸಂಪರ್ಕ ಸಾಧ್ಯವಾಗಿದೆ. ಅಲ್ಲದೇ ಆಡಳಿತದಲ್ಲಿ ಪಾರದರ್ಶಕತೆ ಬರುತ್ತಿದೆ. ಶೀಘ್ರ ಕಾರ್ಯ ನಿರ್ವಹಣೆ ಸಾಧ್ಯವಾಗುತ್ತಿದೆ.

4) **ಶೀಘ್ರ ಮಾಹಿತಿ ರವಾನೆ:** ಯಾವುದೇ ಮಾಹಿತಿಯನ್ನು ನಾವಿಂದು ವಿಶ್ವದ ಮೂಲೆ ಮೂಲೆಗೂ ಸಂಪರ್ಕ ಸಾಧನಗಳ ಸಹಾಯದಿಂದ ಅತಿ ಶೀಘ್ರವಾಗಿ ರವಾನೆ ಮಾಡಬಹುದಾಗಿದೆ.

5) **ಉದ್ಯೋಗಾವಕಾಶಗಳ ಸೃಷ್ಟಿ:** ಸಂಪರ್ಕ ವ್ಯವಸ್ಥೆಯು ಅಧಿಕ ಸಂಖ್ಯೆಯ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದೆ, ಅಂತರ್ಜಾಲ ವ್ಯವಸ್ಥೆಯು ಹೊರಗುತ್ತಿಗೆಗಳ ಮೂಲಕ ಲಕ್ಷಾಂತರ ಉದ್ಯೋಗಗಳನ್ನು ಒದಗಿಸಿಕೊಟ್ಟಿದೆ.

6) **ಶಾಂತಿ-ಸುವ್ಯವಸ್ಥೆ ಹಾಗೂ ರಾಷ್ಟ್ರ ರಕ್ಷಣೆ:** ದೇಶದಲ್ಲಿ ಗಲಭೆಗಳು, ಅಪರಾಧಗಳು, ಮುಂತಾದವುಗಳನ್ನು ತಡೆಯುವಲ್ಲಿ, ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಸಂಪರ್ಕ ವ್ಯವಸ್ಥೆ ಸಹಾಯಕವಾಗಿದೆ. ಹಾಗೆಯೇ ರಾಷ್ಟ್ರರಕ್ಷಣೆಯಲ್ಲಿ ನಿರತರಾದ ಸೇವಾ ಪಡೆಗಳಿಗೆ ಇದರ ಉಪಯೋಗ ಅತಿ ಹೆಚ್ಚಾಗಿದ್ದು, ಶತ್ರುಗಳ ಆಕ್ರಮಣ ತಡೆಯುವಲ್ಲಿ ಶತ್ರು ನೆಲೆಗಳನ್ನು ಪತ್ತೆ ಹಚ್ಚುವಲ್ಲಿ ಇವು ಹೆಚ್ಚು ಉಪಯೋಗಕ್ಕೆ ಬರುತ್ತವೆ.

7) **ನೈಸರ್ಗಿಕ ವಿಕೋಪಗಳ ನಿರ್ವಹಣೆ:** ಭೂಕಂಪ, ಪ್ರವಾಹ, ಚಂಡಮಾರುತ, ಸುನಾಮಿ ಮುಂತಾದ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ಸಂತ್ರಸ್ತ ಜನರನ್ನು ರಕ್ಷಿಸಲು, ಅವರಿಗೆ ಅಗತ್ಯ ನೆರವು ಪಡೆಯಲು ಹಾಗೂ ಅಪಾಯದ ಮುನ್ನೆಚ್ಚರಿಕೆ ನೀಡಲು ಸಂಪರ್ಕ ಸಾಧನಗಳು ಸಹಾಯಕವಾಗಿವೆ.

8) **ಸಾಮಾಜಿಕ ಪರಿವರ್ತನೆ:** ಸಂಪರ್ಕ ವ್ಯವಸ್ಥೆಯ ವಿವಿಧ ಸಮಾಜ ವ್ಯವಸ್ಥೆಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ. ಇದರಿಂದ ನಮ್ಮ ಸಮಾಜದ ಮೂಢ ನಂಬಿಕೆಗಳು ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಸಾಮಾಜಿಕ ಪರಿವರ್ತನೆ ಮಾಡಲು ಸಾಧ್ಯವಿದೆ.

## ದೂರ ಸಂಪರ್ಕ ಸೇವೆಗಳು

ವ್ಯಕ್ತಿ ವ್ಯಕ್ತಿಗಳ ನಡುವೆ ಸಂಪರ್ಕ ಸಾಧಿಸಲು ಅನೇಕ ಮಾರ್ಗಗಳಿವೆ. ಅವುಗಳೆಂದರೆ ಅಂಚೆ, ತಂತಿ, ದೂರವಾಣಿ, ಫ್ಯಾಕ್ಸ್, ಅಂತರ್ಜಾಲ ಸೇವೆ, ರೇಡಿಯೋ, ದೂರದರ್ಶನ, ಮುದ್ರಣ ಮಾಧ್ಯಮ ಮುಂತಾದವುಗಳು. ಅವುಗಳ ಕುರಿತು ಈ ಕೆಳಗೆ ತಿಳಿಯೋಣ.

## ಭಾರತದಲ್ಲಿ ಅಂಚೆಸೇವೆ

ಅಂಚೆ ಸೇವೆಯು ಅತ್ಯಂತ ಕಡಿಮೆ ವೆಚ್ಚದ ಸಂಪರ್ಕ ಸಾಧನವಾಗಿದೆ. ಭಾರತದಲ್ಲಿ ಅಂಚೆ ಸೇವೆಯು ಪುರಾತನ ಕಾಲದಿಂದ ವಿವಿಧ ರೂಪದಲ್ಲಿ ಚಾಲ್ತಿಯಲ್ಲಿದ್ದು 1837ರಲ್ಲಿ ಆಧುನಿಕ ರೀತಿಯ ಅಂಚೆ ಸೇವೆ ಪ್ರಾರಂಭವಾಯಿತು. 1854ರಲ್ಲಿ ಸರ್ಕಾರವು ಅಂಚೆ ಇಲಾಖೆಯನ್ನು ರಚಿಸಿತು. ಇದು ಬಡಜನರಿಂದ ಹಿಡಿದು ಶ್ರೀಮಂತರು, ವ್ಯಾಪಾರಿಗಳು, ಉದ್ಯಮಿಗಳು ಮುಂತಾದ ಎಲ್ಲರಿಗೂ ಉಪಯುಕ್ತ ಸೇವೆ ಸಲ್ಲಿಸುತ್ತಿದೆ. ಆದ್ದರಿಂದ ಸ್ವಾತಂತ್ರ್ಯದ ನಂತರ ಅಂಚೆ ಸೇವೆಯನ್ನು ಪ್ರಮುಖ ಮೂಲ ಸೌಕರ್ಯಗಳನ್ನಾಗಿ ಪರಿಗಣಿಸಲಾಯಿತು.

ಅಂಚೆ ಸೇವೆಯ ಸಮರ್ಥ ನಿರ್ವಹಣೆಗಾಗಿ 1972ರಲ್ಲಿ ಅಂಚೆ ಸೂಚಿ ಸಂಖ್ಯೆ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. 1975ರಲ್ಲಿ ಎಲ್ಲ ರಾಜ್ಯಗಳ ರಾಜಧಾನಿಯಲ್ಲಿ "ಶೀಘ್ರ ಅಂಚೆ ಸೇವೆ"ಯನ್ನೂ 1986ರಲ್ಲಿ 'ವೇಗದ ಅಂಚೆ' ಸೇವೆಯನ್ನು ಜಾರಿಗೊಳಿಸಲಾಯಿತು. ಇಂದು ಪ್ರತಿ ಹಳ್ಳಿ ಹಳ್ಳಿಗೂ ಅಂಚೆ ಸೇವೆ ದೊರೆಯುತ್ತಿದ್ದು, ಅಂಚೆ ಸೇವೆಯನ್ನು ಕಂಪ್ಯೂಟರೀಕರಣ ಗೊಳಿಸಲಾಗುತ್ತಿದೆ. ಇಂದು ಭಾರತದ ಆಧುನಿಕ ಅಂಚೆ ಸೇವೆಯು 38 ವಿಧದ ಸೇವೆಗಳನ್ನು ಒದಗಿಸುತ್ತಿದ್ದು, ಅವುಗಳಲ್ಲಿ ಸಂಪರ್ಕ ಸೇವೆಗಳು (ಪತ್ರಗಳು ಮತ್ತು ಅಂಚೆ ಕಾರ್ಡುಗಳು), ಸಾರಿಗೆ ಸೇವೆಗಳು (ಪಾರ್ಸೆಲ್‌ಗಳು), ಹಣಕಾಸು ಸೇವೆಗಳಲ್ಲಿ ಉಳಿತಾಯ ಖಾತೆ, ಮನಿ ಆರ್ಡರ್ ಹಾಗೂ ಅಂಚೆ ಜೀವವಿಮೆಗಳು ಪ್ರಮುಖವಾಗಿವೆ. ಈ ಸೇವೆಗಳಲ್ಲದೇ ಇತ್ತೀಚೆಗೆ ಇಂಟರ್‌ನೆಟ್‌ನ ಸಹಾಯದಿಂದ ಇ-ಪೋಸ್ಟ್, ಇ-ಬಿಲ್, ಮುಂತಾದ ಸೇವೆಗಳನ್ನು ಒದಗಿಸುತ್ತಿವೆ.

## ದೂರವಾಣಿ ಸೇವೆಗಳು

ಭಾರತದಲ್ಲಿ ದೂರವಾಣಿ ಸೌಲಭ್ಯ 1831ರಲ್ಲಿ ಪ್ರಾರಂಭವಾಯಿತು. ಭಾರತದಲ್ಲಿ ಪ್ರಸ್ತುತ ದೂರವಾಣಿಯು ಅತ್ಯಂತ ದೃಢವಾದ ಹಾಗೂ ಜನಪ್ರಿಯವಾದ ಸಂಪರ್ಕ ಸಾಧನವಾಗಿದೆ. ಇದರ ಸಹಾಯದಿಂದ ಜಾಗತಿಕ ಮಟ್ಟದಲ್ಲಿ ನಡೆಯುವ ವಿಚಾರಧಾರೆಗಳನ್ನು, ಮಾಹಿತಿಗಳನ್ನು ಹಾಗೂ ಘಟನೆಗಳನ್ನು ಕ್ಷಣಾರ್ಧದಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸೇವೆಗಳಲ್ಲಿ ಸ್ಥಿರ ದೂರವಾಣಿ ಮತ್ತು ಮೊಬೈಲ್ ದೂರವಾಣಿ ಎಂದು ವಿಂಗಡಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ಥಿರ ದೂರವಾಣಿಗಿಂತ ಮೊಬೈಲ್ ದೂರವಾಣಿ ಹೆಚ್ಚು ಜನಪ್ರಿಯಗೊಂಡಿದೆ. ಇತ್ತೀಚೆಗೆ ಮೊಬೈಲ್‌ಗಳು ಜನಸಾಮಾನ್ಯರ ತೀರ ಅಗತ್ಯ ವಸ್ತುವಾಗಿ ಪರಿಗಣಿತವಾಗಿದ್ದು, ಅದರ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿದೆ.

## ಫ್ಯಾಕ್ಸ್

ಇದು ಒಂದು ಎಲೆಕ್ಟ್ರಾನಿಕ್ ಯಂತ್ರವಾಗಿದ್ದು ಇದರ ಮೂಲಕ ಮುದ್ರಿತ ಮಾಹಿತಿ, ಪತ್ರಗಳು, ಚಿತ್ರಗಳು ಮುಂತಾದವುಗಳನ್ನು ಕ್ಷಣಾರ್ಧದಲ್ಲಿ ದೂರದ ಪ್ರದೇಶಗಳಿಗೆ ಕಳುಹಿಸಬಹುದು. ಇದು ಸಂಪರ್ಕ ಕ್ಷೇತ್ರದ ಮತ್ತೊಂದು ಕ್ರಾಂತಿಕಾರಕ ಬೆಳವಣಿಗೆಯಾಗಿದೆ.

## ಅಂತರ್ಜಾಲ ಸೇವೆ

ಕಂಪ್ಯೂಟರ್, ಟೆಲಿಫೋನ್ ಲೈನ್ ಹಾಗೂ ಉಪಗ್ರಹ ಸಂಪರ್ಕದ ಮೂಲಕ ವಿಶ್ವದ ಕೋಟ್ಯಾಂತರ ಜನರೊಂದಿಗೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಬಹುದಾದ ಸೌಲಭ್ಯಕ್ಕೆ ಅಂತರ್ಜಾಲ ಅಥವಾ ಇಂಟರ್‌ನೆಟ್ ಸೇವೆ ಎಂದು ಹೆಸರು. ಇಂಟರ್‌ನೆಟ್ ಸೌಲಭ್ಯದಿಂದ ಪ್ರಪಂಚದ ಸಾವಿರಾರು ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ ಸಂಘಟನೆಗಳು, ವ್ಯಾಪಾರ ಕೇಂದ್ರಗಳು, ಹಣಕಾಸು ಸಂಸ್ಥೆಗಳು ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗಿದೆ. ಅಂದರೆ ಇಂಟರ್‌ನೆಟ್ ಸಂಪರ್ಕ ಪಡೆದಿರುವ ಕಂಪ್ಯೂಟರ್ ಹೊಂದಿರುವ ವ್ಯಕ್ತಿಯು ಮನೆಯಲ್ಲಿಯೇ ಕುಳಿತು ವಿಶ್ವದ ಯಾವುದೇ ಮೂಲೆಯಲ್ಲಿನ ಮಾಹಿತಿಯನ್ನು ಪಡೆಯಬಹುದು, ಹಾಗೂ ಅದನ್ನು ಮುದ್ರಿಸಿಕೊಳ್ಳಬಹುದು. ಅಲ್ಲದೆ ಅಂತರ್ಜಾಲ ಇ–ಮೇಲ್, ಟೆಲಿಮೆಡಿಸಿನ್, ಟೆಲಿಬ್ಯಾಂಕಿಂಗ್ ಮತ್ತು ಕಾಲ್ ಸೆಂಟರ್ ಸೌಲಭ್ಯಗಳು ದೊರೆಯುತ್ತವೆ. ಆಡಳಿತ ಸುಧಾರಣೆಗಾಗಿ ಸರ್ಕಾರ ಟೆಲಿಕಾನ್ಫರೆನ್ಸ್ ವ್ಯವಸ್ಥೆಯನ್ನು ಸಹ ತರಲಾಗಿದೆ.

## ಇ–ಮೇಲ್

ಎಲೆಕ್ಟ್ರಾನಿಕ್ ಸಾಧನವಾದ ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಮುಖಾಂತರ ಮಾಹಿತಿಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಮಾಹಿತಿ ರವಾನಿಸುವುದಕ್ಕೆ ಇ–ಮೇಲ್ ಇಂದು ಬಹಳ ವ್ಯಾಪಕ ಬಳಕೆಯಲ್ಲಿದೆ. ಇ–ಮೇಲ್ ಮೂಲಕ ಮುದ್ರಿತ ಮಾಹಿತಿಯನ್ನು ವಿಶ್ವದ ಯಾವುದೇ ಮೂಲೆಗೆ ಹಗಲು ರಾತ್ರಿ ಎನ್ನದೆ ಅದನ್ನು ಸ್ವೀಕರಿಸುವ ವ್ಯಕ್ತಿ ಇಲ್ಲದೆ ಕಳುಹಿಸಬಹುದು. ಇದು ಒಂದು ರೀತಿಯ ಅಂಚೆ ಪತ್ರ ಬರೆದಂತೆ ಇಂದು ಇ–ಮೇಲ್ ಹೆಚ್ಚು ಪ್ರಚಲಿತ ಸಂಪರ್ಕ ಸಾಧನವಾಗಿದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1) ಜಗತ್ತಿನ ಅತಿದೊಡ್ಡ ರೈಲ್ವೆ ವ್ಯವಸ್ಥೆ ಹೊಂದಿರುವ ದೇಶವೆಂದರೆ ____________

ಅ) ಅಮೇರಿಕಾ		ಆ) ರಷ್ಯಾ

ಇ) ಚೀನಾ		ಈ) ಭಾರತ

2) ಜಗತ್ತಿನ ಅತಿದೊಡ್ಡ ಭೂಸಾರಿಗೆ ವ್ಯವಸ್ಥೆಯ ಜಾಲ ಹೊಂದಿರುವ ದೇಶವೆಂದರೆ ____________

ಅ) ಅಮೇರಿಕಾ		ಆ) ರಷ್ಯಾ

ಇ) ಚೀನಾ		ಈ) ಭಾರತ

3) ಕರ್ನಾಟಕದಲ್ಲಿರುವ ರೈಲ್ವೇ ವಲಯವೆಂದರೆ ________

ಅ) ನೈಋತ್ಯ ರೈಲ್ವೆ ಆ) ಈಶಾನ್ಯ ರೈಲ್ವೆ

ಇ) ದಕ್ಷಿಣ ರೈಲ್ವೆ ಈ) ಪೂರ್ವ ರೈಲ್ವೆ

4) ಭಾರತೀಯ ಅಂಚೆ ಸೇವೆಯು ________ ಸಂಸ್ಥೆಯಾಗಿದೆ

ಅ) ಸಾರ್ವಜನಿಕ ಆ) ಖಾಸಗಿ

ಇ) ಸಾರ್ವಜನಿಕ– ಖಾಸಗಿ ಈ) ಸ್ವಾಯತ್ತ

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1) ನಾಗಪುರ ಯೋಜನೆಯು ಭಾರತದ ರಸ್ತೆಗಳನ್ನು ______ ರಲ್ಲಿ ನಾಲ್ಕು ಪ್ರಕಾರಗಳಾಗಿ ವಿಂಗಡಿಸಿದೆ.

2) ದೂರವಾಣಿಯನ್ನು ಕಂಡುಹಿಡಿದವರು ______

3) ರೈಲು ಮಾರ್ಗದ ಎರಡು ಹಳಿಗಳ ನಡುವಿನ ಅಂತರಕ್ಕೆ ______ ಎಂದು ಕರೆಯುತ್ತಾರೆ.

4) 1975 ರಲ್ಲಿ ಎಲ್ಲ ರಾಜ್ಯಗಳ ರಾಜಧಾನಿಯಲ್ಲಿ ______ ಯನ್ನು ಜಾರಿಗೊಳಿಸಲಾಯಿತು.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1) ಮೂಲಭೂತ ಸೌಕರ್ಯ ಎಂದರೇನು?

2) ವಾಯು ಸಾರಿಗೆ ಎಂದರೇನು?

3) ಜಲ ಸಾರಿಗೆ ಎಂದರೇನು?

4) ಸಂಪರ್ಕ ವ್ಯವಸ್ಥೆ ಎಂದರೇನು?

5) ಇ–ಮೇಲ್ ಎಂದರೇನು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1) ಮೂಲಭೂತ ಸೌಕರ್ಯದ ವಿಧಗಳಾವುವು?

2) ಭಾರತದ ಸಾರಿಗೆಯ ಪ್ರಕಾರಗಳಾವುವು?

3) ಯಾವುದಾದರೂ 4 ರೈಲ್ವೆ ವಲಯಗಳನ್ನು ಹೆಸರಿಸಿ.

4) ದೂರ ಸಂಪರ್ಕ ಸೇವೆಗಳು ಯಾವುವು?

5) ರೈಲ್ವೇ ಸಾರಿಗೆಯ ರಚನೆ ಕುರಿತು ಬರೆಯಿರಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1) ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆಯ ಮಹತ್ವವನ್ನು ಬರೆಯಿರಿ.

2) ಭಾರತದಲ್ಲಿ ಸಾರಿಗೆಯ ಪ್ರಕಾರಗಳನ್ನು ವಿವರಿಸಿ.

3) ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಬರೆಯಿರಿ.

4) ಜಲ ಸಾರಿಗೆ ಎಂದರೇನು? ಅದರ ವಿಧಗಳಾವುವು?

5) ಭಾರತದ ಅಂಚೆ ಮತ್ತು ತಂತಿ ಸೇವೆ ಕುರಿತು ಟಿಪ್ಪಣಿ ಬರೆಯಿರಿ.

**ನಿಯೋಜಿತ ಕಾರ್ಯ**

1) ನೀವು ಪ್ರಯಾಣಿಸಿರುವ ಸಾರಿಗೆಯ ವಿಧಗಳನ್ನು ಬರೆಯಿರಿ.

2) ನಿಮ್ಮ ಸ್ಥಳೀಯ ಸಾರಿಗೆ –ಸಂಪರ್ಕ ವ್ಯವಸ್ಥೆಯ ಬಗ್ಗೆ ಕುರಿತು ಬರೆಯಿರಿ.

# ಅಧ್ಯಾಯ-10

# ಭಾರತದ ಕೇಂದ್ರ ಬ್ಯಾಂಕ್

"ರಾಷ್ಟ್ರವೊಂದರ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹಣವನ್ನು (ಕರೆನ್ಸಿ ನೋಟ್) ಮುದ್ರಿಸುವ ಸಂಪೂರ್ಣ ಏಕಸ್ವಾಮ್ಯ ಹೊಂದಿ ಆ ಕಾರಣದಿಂದ ಪ್ರೌಢ ಕಾರ್ಯಗಳನ್ನು ನಿರ್ವಹಿಸುವ ಆಧುನಿಕ ಗುಣಲಕ್ಷಣಗಳುಳ್ಳ ಬ್ಯಾಂಕನ್ನು ನಾವು ಕೇಂದ್ರ ಬ್ಯಾಂಕ್ ಎಂದು ವ್ಯಾಖ್ಯಾನಿಸಬಹುದು"

**- ಪ್ರೊ. ವಿರಾ ಸ್ಮಿತ್**

" ರಾಷ್ಟ್ರವೊಂದರ ಆರ್ಥಿಕ ಹಿತಾಸಕ್ತಿಗಾಗಿ ಮತ್ತು ಹಣಕಾಸು ಹಾಗೂ ಬ್ಯಾಂಕಿಂಗ್ ಕ್ಷೇತ್ರದ ಶೃಂಗ ಬ್ಯಾಂಕಾಗಿ ಕಾರ್ಯನಿರ್ವಹಿಸುವುದು ಕೇಂದ್ರ ಬ್ಯಾಂಕ್"

**- ಎಂ.ಎಚ್.ಡಿ ಕಾಕ್**

## ಪೀಠಿಕೆ

ಎಲ್ಲ ರಾಷ್ಟ್ರಗಳಲ್ಲಿ ಹಣಕಾಸು ಮಾರುಕಟ್ಟೆಯನ್ನು ಮುನ್ನಡೆಸುವುದಕ್ಕಾಗಿ, ಉಳಿದ ಬ್ಯಾಂಕುಗಳ ಹಾಗೂ ಹಣಕಾಸು ಸಂಸ್ಥೆಗಳ ಮೇಲ್ವಿಚಾರಣೆ, ನಿಯಂತ್ರಣ, ಮಾರ್ಗದರ್ಶನ, ಆಪತ್ಕಾಲೀನದಲ್ಲಿ ಅವುಗಳ ರಕ್ಷಣೆಯ ಸಲುವಾಗಿ ಒಂದು ಬ್ಯಾಂಕನ್ನು ನಿಯುಕ್ತಿಗೊಳಿಸಲಾಗುತ್ತದೆ. ಆ ಬ್ಯಾಂಕು ಆಯಾ ದೇಶದ ಕೇಂದ್ರ ಬ್ಯಾಂಕಾಗಿ ಕಾರ್ಯ ನಿರ್ವಹಿಸುತ್ತದೆ. ಕೇಂದ್ರ ಬ್ಯಾಂಕ್‌ನ ಕಾರ್ಯಗಳ ಸ್ಪಷ್ಟ ಕಲ್ಪನೆ 20ನೇ ಶತಮಾನದ ಆರಂಭದಲ್ಲಿ ಆಯಿತಾದರೂ, ವಿಶ್ವದ ಕೆಲವು ದೇಶಗಳಲ್ಲಿ ಇದು 17ನೇ ಶತಮಾನದಲ್ಲಿಯೇ ಆರಂಭವಾಯಿತು, ಉದಾಹರಣೆಗೆ 1668ರಲ್ಲಿ ಸ್ವೀಡನ್ನಿನಲ್ಲಿ ಪ್ರಾರಂಭವಾದ ರಿಕ್ಸ್ ಬ್ಯಾಂಕ್ ಪ್ರಪಂಚದ ಮೊಟ್ಟ ಮೊದಲ ಕೇಂದ್ರ ಬ್ಯಾಂಕಾಗಿದೆ. ಮುಂದೆ 1694ರಲ್ಲಿ ಇಂಗ್ಲೆಂಡ್ ದೇಶದಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ ಆ ದೇಶದ ಕೇಂದ್ರ ಬ್ಯಾಂಕಾಗಿ ಸ್ಥಾಪನೆಗೊಂಡಿತು.

20ನೇ ಶತಮಾನದಲ್ಲಿ ಪ್ರತಿಯೊಂದು ದೇಶವು ಕೇಂದ್ರ ಬ್ಯಾಂಕನ್ನು ವಿವಿಧ ಕಾಲಘಟ್ಟಗಳಲ್ಲಿ ಸ್ಥಾಪಿಸಿಕೊಂಡವು, ಉದಾಹರಣೆಗೆ ಫ್ರಾನ್ಸ್‌ನಲ್ಲಿ ಬ್ಯಾಂಕ್ ಆಫ್ ಫ್ರಾನ್ಸ್, ನೆದರ್‌ಲ್ಯಾಂಡ್‌ನಲ್ಲಿ ಬ್ಯಾಂಕ್ ಆಫ್ ನೆದರ್‌ಲ್ಯಾಂಡ್, ಜರ್ಮನಿಯಲ್ಲಿ ರಿಶ್ಯಬ್ಯಾಂಕ್, ಜಪಾನ್‌ನಲ್ಲಿ ಬ್ಯಾಂಕ್ ಆಫ್ ಜಪಾನ್, ಹಾಗೆಯೇ ಭಾರತದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪಿಸಲ್ಪಟ್ಟವು. ಹಾಗಾದರೆ ಕೇಂದ್ರ ಬ್ಯಾಂಕು ಎಂದರೇನು? ಭಾರತೀಯ ಕೇಂದ್ರ ಬ್ಯಾಂಕಿನ ಸಂಘಟನೆ ಮತ್ತು ಸಂಪನ್ಮೂಲಗಳು ಯಾವುವು? ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೇಂದ್ರ ಬ್ಯಾಂಕಿನ ಕಾರ್ಯಗಳಾವುವು? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಈ ಅಧ್ಯಾಯವು ನೀಡುತ್ತದೆ.

## ಕೇಂದ್ರ ಬ್ಯಾಂಕಿನ ಅರ್ಥ

ಒಂದು ದೇಶದ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿ ಹಾಗೂ ಸ್ಥಿರತೆಗಾಗಿ ಹಣವನ್ನು ಮುದ್ರಿಸುವ, ಅದರ ಒಟ್ಟು ಮೊತ್ತವನ್ನು ವಿಸ್ತರಿಸುವ ಹಾಗೂ ಸಂಕುಚಿಸುವ ಮೂಲಕ ಹಣಕಾಸು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯನ್ನು

ನಿಯಂತ್ರಿಸುವ ಕಾರ್ಯಾಧಿಕಾರ ಹೊಂದಿರುವ ಬ್ಯಾಂಕನ್ನು ಕೇಂದ್ರ ಬ್ಯಾಂಕು ಎನ್ನಲಾಗುತ್ತದೆ. ದಿರಾ ಸ್ಮಿಥ್‌ರವರ ಪ್ರಕಾರ 'ಯಾವ ಬ್ಯಾಂಕಿಗೆ ನೋಟು ಮುದ್ರಿಸುವ ಸಂಪೂರ್ಣ ಹಕ್ಕು ಇರುತ್ತದೆಯೋ ಅದು ಕೇಂದ್ರ ಬ್ಯಾಂಕು'.

## ಭಾರತೀಯ ರಿಸರ್ವ್ ಬ್ಯಾಂಕು

ಭಾರತದ ಕೇಂದ್ರ ಬ್ಯಾಂಕು ಆದ ಭಾರತೀಯ ರಿಸರ್ವ್ ಬ್ಯಾಂಕು, 1934ರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯಿದೆಯ ಮೇರೆಗೆ 1ನೇಯ ಏಪ್ರಿಲ್ 1935ರಂದು ಖಾಸಗಿ ಷೇರುದಾರರ ಬ್ಯಾಂಕಾಗಿ ಅಸ್ತಿತ್ವಕ್ಕೆ ಬಂದಿತು. 5 ಕೋಟಿ ರೂಪಾಯಿಗಳ ಮೂಲ ಬಂಡವಾಳದೊಂದಿಗೆ ಈ ಬ್ಯಾಂಕು ಆರಂಭವಾಯಿತು. ಭಾರತವು ಸ್ವಾತಂತ್ರ್ಯವನ್ನು ಪಡೆದ ನಂತರ ರಾಷ್ಟ್ರದ ಸಮಗ್ರ ಹಣಕಾಸು ಮತ್ತು ಆರ್ಥಿಕ ನೀತಿಗಳ ಜವಾಬ್ದಾರಿ ನಿರ್ವಹಿಸುವ ಒಂದು ಸರ್ಕಾರಿ ಮಾಲೀಕತ್ವದ ಸಂಸ್ಥೆಯನ್ನು ಜಾರಿಗೆ ತರುವ ಸಲುವಾಗಿ ಭಾರತದ ಸರ್ಕಾರವು 1 ಜನವರಿ 1949ರಂದು ಭಾರತೀಯ ರಿಸರ್ವ್ ಬ್ಯಾಂಕನ್ನು ರಾಷ್ಟ್ರೀಕರಣಗೊಳಿಸಿತು. ಆ ಮೂಲಕ ಖಾಸಗಿ ಷೇರುದಾರರ ಬ್ಯಾಂಕಾಗಿ ಅಸ್ತಿತ್ವಕ್ಕೆ ಬಂದಿದ್ದ ಭಾರತೀಯ ಕೇಂದ್ರ ಬ್ಯಾಂಕು ಸರ್ಕಾರದ ಬ್ಯಾಂಕಾಗಿ ಕಾರ್ಯಾಚರಣೆ ಆರಂಭಿಸಿತು.

## ಸಂಘಟನೆ

ಭಾರತ ದೇಶದ ಹಣಕಾಸು ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ, ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವ ವಿಶೇಷ ಅಧಿಕಾರ ಹಾಗೂ ಜವಾಬ್ದಾರಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯಿದೆಗೆ ಅನುಗುಣವಾಗಿ ಇದರ ಸಂಘಟನೆಯು ಕೇಂದ್ರ ಮಂಡಳಿ ಮತ್ತು ಸ್ಥಳೀಯ ಮಂಡಳಿಗಳನ್ನು ಒಳಗೊಂಡಿದೆ.

## ಕೇಂದ್ರ ಮಂಡಳಿ

ಕೇಂದ್ರ ನಿರ್ದೇಶಕರ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಅಂಗವಾಗಿದೆ. ಇದು ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ರೀತಿಯ ನಿರ್ವಹಣೆ ಮತ್ತು ನಿಯಂತ್ರಣಗಳ ಜವಾಬ್ದಾರಿಯನ್ನು ಹೊಂದಿದೆ. ಪ್ರಸ್ತುತ ಕೇಂದ್ರ ನಿರ್ದೇಶಕರ ಮಂಡಳಿಯಲ್ಲಿ 21 ಜನ ಸದಸ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಂದರೆ:

1) ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟಿರುವ ಒಬ್ಬ ಗವರ್ನರ್ ಮತ್ತು ನಾಲ್ಕು ಉಪ ಗವರ್ನರ್‌ಗಳು. ಇವರ ಕಾಲಾವಧಿಯು 5 ವರ್ಷಗಳಾಗಿರುತ್ತದೆ.

2) ಪ್ರತಿ ಸ್ಥಳೀಯ ಮಂಡಳಿಯಿಂದ ಒಬ್ಬ ನಿರ್ದೇಶಕರಂತೆ 4 ಜನ ನಿರ್ದೇಶಕರನ್ನು ಕೇಂದ್ರ ಸರ್ಕಾರವೇ ನೇಮಿಸುತ್ತದೆ.

3) ವ್ಯಾಪಾರ, ಹಣಕಾಸು, ಕೈಗಾರಿಕೆ, ಸೇವಾ ವಲಯ, ಸಹಕಾರ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದಿರುವ 10 ಜನ ನಿರ್ದೇಶಕರನ್ನು ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ನೇಮಿಸಲಾಗುತ್ತದೆ.

4) ಹಣಕಾಸು ಇಲಾಖೆಯಿಂದ ಇಬ್ಬರು ನಿರ್ದೇಶಕ ಪ್ರತಿನಿಧಿಗಳನ್ನು ಕೇಂದ್ರ ಸರ್ಕಾರ ನೇಮಿಸುತ್ತದೆ.

ನಿರ್ದೇಶಕರ ಕೇಂದ್ರ ಮಂಡಳಿಯ ಅಧ್ಯಕ್ಷರಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿರುತ್ತಾರೆ. ಡಾ. ರಘುರಾಮ್ ಜಿ. ರಾಜನ್ ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿದ್ದಾರೆ. ಈ ಮಂಡಳಿಯು ಕನಿಷ್ಠ ಮೂರು ತಿಂಗಳಿಗೆ ಒಮ್ಮೆ ಮತ್ತು ವರ್ಷಕ್ಕೆ ಕನಿಷ್ಠ ಆರು ಬಾರಿಯಾದರೂ ಸಭೆಯನ್ನು ಸೇರಬೇಕು. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಕಛೇರಿ ಮುಂಬೈನಲ್ಲಿದೆ.

## ಸ್ಥಳೀಯ ಮಂಡಳಿಗಳು

ಪ್ರಾದೇಶಿಕ ಆರ್ಥಿಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾದೇಶಿಕ ಕಛೇರಿಗಳನ್ನು ಸ್ಥಾಪಿಸಲಾಗಿದೆ. ಅವುಗಳೆಂದರೆ ಪಶ್ಚಿಮದಲ್ಲಿ ಕೊಲ್ಕತ್ತಾ, ಪೂರ್ವದಲ್ಲಿ ಮುಂಬೈ, ಉತ್ತರದಲ್ಲಿ ನವದೆಹಲಿ ಹಾಗೂ ದಕ್ಷಿಣದಲ್ಲಿ ಚೆನ್ನೈ ಭಾಗದಲ್ಲಿ ಒಂದೊಂದು ಸ್ಥಳೀಯ ಮಂಡಳಿಯನ್ನು ಸ್ಥಾಪಿಸಲಾಗಿದೆ. ಇಂತಹ ಪ್ರತಿ ಸ್ಥಳೀಯ ಮಂಡಳಿಯಲ್ಲಿ 5 ಜನ ಸದಸ್ಯರಿರುತ್ತಾರೆ. ಇವರ ಕಾಲಾವಧಿಯು ನಾಲ್ಕು ವರ್ಷಗಳಿಗೆ ಸೀಮಿತವಾಗಿರುತ್ತದೆ. ಇದಲ್ಲದೇ ಭಾರತೀಯ ರಿಸರ್ವ್ ಬ್ಯಾಂಕ್ 19 ಶಾಖೆಗಳನ್ನು ಹೊಂದಿದ್ದು ಅವುಗಳಲ್ಲಿ ಬೆಂಗಳೂರು, ಹೈದರಾಬಾದ್, ಲಕ್ನೋ, ಕಾನ್‌ಪುರ್ ಮುಖ್ಯವಾದವು.

## ಹಣಕಾಸು ಮೇಲ್ವಿಚಾರಣೆ ಮಂಡಳಿ

ಭಾರತೀಯ ರಿಸರ್ವ್ ಬ್ಯಾಂಕು ಹಣಕಾಸು ಮೇಲ್ವಿಚಾರಣೆಯ ಕಾರ್ಯವನ್ನು ಹಣಕಾಸು ಮೇಲ್ವಿಚಾರಣೆ ಮಂಡಳಿಯ ಮಾರ್ಗದರ್ಶನದಲ್ಲಿ ನಿರ್ವಹಿಸುತ್ತದೆ. ಈ ಮಂಡಳಿಯನ್ನು 1994ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ನಿರ್ದೇಶಕರ ಮಂಡಳಿಯ ಒಂದು ಸಮಿತಿಯ ಶಿಫಾರಸ್ಸಿನ ಅನ್ವಯ ಜಾರಿಗೆ ತರಲಾಯಿತು. ಹಣಕಾಸು ವಲಯದ ಅಂಗಗಳಾದ ವಾಣಿಜ್ಯ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಹಾಗೂ ಹಣಕಾಸೇತರ ಸಂಸ್ಥೆಗಳ ಏಕೀಕೃತ ಮೇಲ್ವಿಚಾರಣೆಯ ಕಾರ್ಯವನ್ನು ಈ ಮಂಡಳಿ ಮಾಡುತ್ತದೆ.

ಈ ಮಂಡಳಿಗೆ, ಕೇಂದ್ರ ನಿರ್ದೇಶಕರ ಮಂಡಳಿಯಲ್ಲಿನ 4 ಜನ ನಿರ್ದೇಶಕರನ್ನು ಎರಡು ವರ್ಷಗಳ ಅವಧಿಗೆ ಹಣಕಾಸು ಮೇಲ್ವಿಚಾರಣೆ ಮಂಡಳಿಯ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಅವರು ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಈ ಮಂಡಳಿಯು ಸಾಮಾನ್ಯವಾಗಿ ಪ್ರತಿ ತಿಂಗಳಿಗೆ ಒಮ್ಮೆ ಸಭೆ ಸೇರಬೇಕು. ಬ್ಯಾಂಕಿಂಗ್ ತಪಾಸಣಾ ವರದಿಗಳು ಮತ್ತು ಇತರೆ ಮೇಲ್ವಿಚಾರಣಾ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಗಣಿಸುತ್ತದೆ. ಹಣಕಾಸು ಮೇಲ್ವಿಚಾರಣೆ ಮಂಡಳಿಯ ಪ್ರಮುಖ ಕಾರ್ಯಗಳೆಂದರೆ

1) ಬ್ಯಾಂಕಿಂಗ್ ತಪಾಸಣಾ ವ್ಯವಸ್ಥೆಯನ್ನು ಸಂರಚಿಸುವುದು

2) ಬ್ಯಾಂಕುಗಳಲ್ಲಿ ಕಣ್ಗಾವಲು ವ್ಯವಸ್ಥೆಯನ್ನು ಪರಿಚಯಿಸುವುದು

3) ಶಾಸನಬದ್ಧ ಲೆಕ್ಕಪರಿಶೋಧಕರ ಪಾತ್ರವನ್ನು ಬಲಪಡಿಸವುದು.

4) ಮೇಲ್ವಿಚಾರಣಾ ಸಂಸ್ಥೆಗಳ ಆಂತರಿಕ ರಕ್ಷಣೆಯನ್ನು ಬಲಪಡಿಸುವುದು

## ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳು

ಭಾರತೀಯ ರಿಸರ್ವ್ ಬ್ಯಾಂಕು 5 ತರಬೇತಿ ಸಂಸ್ಥೆಗಳನ್ನು ಹೊಂದಿದೆ. ಅವುಗಳೆಂದರೆ:

ಅ) ರಿಸರ್ವ್ ಬ್ಯಾಂಕಿನ ಭಾಗವಾಗಿ 1) ಕೃಷಿ ಬ್ಯಾಂಕಿಂಗ್ ಕಾಲೇಜು 2) ಭಾರತೀಯ ಕೇಂದ್ರ ಬ್ಯಾಂಕಿನ ಸಿಬ್ಬಂದಿ ಕಾಲೇಜು

ಆ) ಸ್ವಾಯತ್ತ ಸಂಸ್ಥೆಗಳಾಗಿ 3) ಬ್ಯಾಂಕಿಂಗ್ ನಿರ್ವಹಣೆಯ ರಾಷ್ಟ್ರೀಯ ಸಂಸ್ಥೆ, 4) ಇಂದಿರಾಗಾಂಧಿ ಅಭಿವೃದ್ಧಿ ಸಂಶೋಧನಾ ಸಂಸ್ಥೆ ಹಾಗೂ 5) ಬ್ಯಾಂಕಿಂಗ್ ತಂತ್ರಜ್ಞಾನದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ

## ಭಾರತೀಯ ರಿಸರ್ವ್‌ಬ್ಯಾಂಕಿನ ಪ್ರಮುಖ ಕಾರ್ಯಗಳು

ದೇಶದ ಆರ್ಥಿಕ ವ್ಯವಸ್ಥೆಯ ಸುಗಮ ಕಾರ್ಯಾಚರಣೆಗಾಗಿ, ಬೆಲೆಗಳ ಹಾಗೂ ಆರ್ಥಿಕ ಸ್ಥಿರತೆಯ ಸಾಧನೆಗಾಗಿ ಹಲವಾರು ಕಾರ್ಯಗಳನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

### 1) ಹಣಕಾಸು ಪ್ರಾಧಿಕಾರ:

ಭಾರತೀಯ ರಿಸರ್ವ್ ಬ್ಯಾಂಕು ಹಣಕಾಸು ನೀತಿಯನ್ನು ರೂಪಿಸುವ, ಜಾರಿಗೊಳಿಸುವ ಹಾಗೂ ನಿಯಂತ್ರಿಸುವ ಹಣಕಾಸು ಪ್ರಾಧಿಕಾರವಾಗಿದೆ. ಇದರ ಪ್ರಮುಖ ಉದ್ದೇಶವೆಂದರೆ ಬೆಲೆ ಸ್ಥಿರತೆಯ ನಿರ್ವಹಣೆ ಮತ್ತು ಉತ್ಪಾದಕ ವಲಯಗಳಿಗೆ ಸಮರ್ಪಕ ಪ್ರಮಾಣದ ಸಾಲವನ್ನು ಪೂರೈಸುವುದಾಗಿದೆ. ಭಾರತೀಯ ರಿಸರ್ವ್ ಬ್ಯಾಂಕು ತನ್ನ ಪೂರ್ವ ನಿರ್ಧರಿತ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಆರ್ಥಿಕತೆಯಲ್ಲಿ ಹಣದ ಮೊತ್ತವನ್ನು ವಿಸ್ತರಿಸುವ ಮತ್ತು ಸಂಕುಚಿಸುವ ಮೂಲಕ ಹಣಕಾಸು ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತದೆ. ಆರ್ಥಿಕತೆಯಲ್ಲಿ ಉಂಟಾಗುವ ಅತಿಪ್ರಸರಣ ಮತ್ತು ಅನಪ್ರಸರಣದಂತಹ ಸನ್ನಿವೇಶಗಳನ್ನು ನಿಯಂತ್ರಿಸುವ ಸಲುವಾಗಿ ಸಾಲ ನಿಯಂತ್ರಣದ ವಿಧಾನಗಳನ್ನು ಅನುಸರಿಸುತ್ತದೆ.

### 2) ಹಣಕಾಸು ವ್ಯವಸ್ಥೆಯ ನಿಯಂತ್ರಣ ಮತ್ತು ಮೇಲ್ವಿಚಾರಣೆ:

ದೇಶದ ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಸ್ಥೆಯ ಕಾರ್ಯಾಚರಣೆಗಾಗಿ ವಿಶಾಲ ತಳಹದಿಯಲ್ಲಿ ವಿವಿಧ ಮಾನದಂಡಗಳನ್ನು ಶಿಫಾರಸ್ಸು ಮಾಡುತ್ತದೆ. ಹಣಕಾಸು ವ್ಯವಸ್ಥೆಯಲ್ಲಿ ಸಾರ್ವಜನಿಕ ವಿಶ್ವಾಸವನ್ನು ಉಳಿಸಿಕೊಳ್ಳುವುದು, ಠೇವಣಿದಾರರ ಹಿತಾಸಕ್ತಿಯನ್ನು ರಕ್ಷಿಸುವುದು ಮತ್ತು ಸಾರ್ವಜನಿಕರಿಗೆ ಮಿತವ್ಯಯದ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಪ್ರಮುಖ ಉದ್ದೇಶಗಳನ್ನು ಒಳಗೊಂಡಿದೆ. ಇದಲ್ಲದೇ ಬ್ಯಾಂಕುಗಳ ಸ್ಥಾಪನೆಗೆ ಪರವಾನಿಗೆ ನೀಡುವುದು, ಬ್ಯಾಂಕುಗಳ ಶಾಖೆಗಳನ್ನು ವಿಸ್ತರಿಸಲು ಪರವಾನಗಿ ನೀಡುವುದು, ಕ್ರಮಬದ್ಧವಾಗಿ

ತಪಾಸಣೆ ನಡೆಸುವುದು, ಅವುಗಳ ಆಡಳಿತ ಮತ್ತು ಕಾರ್ಯಾಚರಣೆಗಳ ಮೇಲೆ ನಿಯಂತ್ರಣ ಹಾಗೂ ಬ್ಯಾಂಕಿಂಗ್ ಶಿಕ್ಷಣ ಮತ್ತು ತರಬೇತಿಯನ್ನು ನಿರಂತರವಾಗಿ ಒದಗಿಸುವುದು, ಇವು ಸಹ ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯ ವ್ಯಾಪ್ತಿಯಲ್ಲಿ ಸೇರುತ್ತವೆ.

## 3) ಹಣದ ಚಲಾವಣೆಯ/ನೋಟು ಮುದ್ರಣ ಅಧಿಕಾರ:

ಸಾರ್ವಜನಿಕರಿಗೆ ಸಾಕಷ್ಟು ಪ್ರಮಾಣದ ಗುಣಮಟ್ಟದ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳನ್ನು ಚಲಾವಣೆ ಮಾಡುವ ಅಧಿಕಾರವನ್ನು ಭಾರತೀಯ ರಿಸರ್ವ್ ಬ್ಯಾಂಕು ಹೊಂದಿದೆ. ಅಷ್ಟೇ ಅಲ್ಲದೇ ಹಣದ ಚಲಾವಣೆಗೆ ಸರಿ ಹೊಂದದ ನಾಣ್ಯಗಳು ಮತ್ತು ನೋಟುಗಳನ್ನು ಸಾರ್ವಜನಿಕರಿಂದ ವಾಪಸ್ಸು ಪಡೆದು ನಾಶ ಪಡಿಸುತ್ತದೆ. ಆ ನಿಟ್ಟಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಒಂದು ರೂಪಾಯಿಯನ್ನು ಹೊರತು ಪಡಿಸಿ ಉಳಿದೆಲ್ಲಾ ಮೌಲ್ಯಗಳ ನೋಟುಗಳನ್ನು ಚಲಾವಣೆಗೆ ತರುವ ಜವಾಬ್ದಾರಿ ಹೊಂದಿದೆ. (ಒಂದು ರೂಪಾಯಿ ನಾಣ್ಯವನ್ನು ಕೇಂದ್ರ ಸರ್ಕಾರದ ಹಣಕಾಸು ವಿಭಾಗ ಮುದ್ರಿಸುತ್ತದೆ) ಇದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕು ಕನಿಷ್ಠ ಮೀಸಲು ಪದ್ಧತಿಯನ್ನು ಅನುಸರಿಸುತ್ತದೆ. ಒಟ್ಟು 200 ಕೋಟಿ ರೂಪಾಯಿಗಳಷ್ಟು ನಿಧಿಯನ್ನು ಹೊಂದಿದ್ದು ಇದರಲ್ಲಿ 115 ಕೋಟಿ ರೂಪಾಯಿಗಳಷ್ಟು ಭದ್ರತೆಯನ್ನು ಚಿನ್ನದ ರೂಪದಲ್ಲಿ ಹಾಗೂ 85 ಕೋಟಿ ರೂಪಾಯಿಗಳ ಭದ್ರತೆಯನ್ನು ನಗದು ರೂಪದಲ್ಲಿ ಇಟ್ಟುಕೊಳ್ಳುತ್ತದೆ.

## 4) ವಿದೇಶಿ ವಿನಿಮಯದ ನಿರ್ವಾಹಕ:

ಭಾರತದಲ್ಲಿ ವಿದೇಶಿ ವಿನಿಮಯ ಮಾರುಕಟ್ಟೆಯ ಕ್ರಮಬದ್ಧವಾದ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಉತ್ತೇಜಿಸುವ ಪ್ರಮುಖ ಉದ್ದೇಶವನ್ನು ಭಾರತೀಯ ರಿಸರ್ವ್ ಬ್ಯಾಂಕು ಹೊಂದಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ 1999ರ ಅಡಿಯಲ್ಲಿ ವಿದೇಶಿ ವಿನಿಮಯ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವ ಅಧಿಕಾರವನ್ನು ಭಾರತೀಯ ರಿಸರ್ವ್ ಬ್ಯಾಂಕು ಹೊಂದಿದೆ. ವಿಶ್ವದ ಎಲ್ಲಾ ದೇಶಗಳ ಕರೆನ್ಸಿಯನ್ನು ಕೊಳ್ಳುವ ಮಾರುವ ಹೊಣೆಗಾರಿಕೆಯನ್ನು ಹೊಂದಿದ್ದು, ಬಾಹ್ಯ ವ್ಯಾಪಾರ ಸುಧಾರಣೆಯಲ್ಲಿ ವ್ಯವಸ್ಥಿತವಾದ ವಿನಿಮಯದ ದರಗಳಲ್ಲಿ ಸ್ಥಿರತೆ ಸಾಧಿಸುವ ಮೂಲಕ ದೇಶದ ವಿನಿಮಯ ಗಳಿಕೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

## 5) ಬ್ಯಾಂಕುಗಳ ಬ್ಯಾಂಕು:

ಭಾರತದಲ್ಲಿನ ಎಲ್ಲಾ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ತಮ್ಮ ಖಾತೆಯ ಲೆಕ್ಕವನ್ನು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಹೊಂದಿವೆ. ಅಲ್ಲದೇ ಹಣಕಾಸು ವಲಯದಲ್ಲಿ ಕಂಡುಬರುವ ಎಲ್ಲಾ ವಿಧದ ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯನಿರ್ವಹಿಸುತ್ತದೆ. ವಾಣಿಜ್ಯ ಬ್ಯಾಂಕುಗಳ ತೀರುವೆ ಮನೆಯಾಗಿ ಹಾಗೂ ಅಂತಿಮ ಋಣದಾತನಾಗಿ ಕಾರ್ಯನಿರ್ವಹಿಸುತ್ತದೆ.

## 6) ಸರ್ಕಾರದ ಬ್ಯಾಂಕು :

ಭಾರತೀಯ ರಿಸರ್ವ್ ಬ್ಯಾಂಕು ಸರ್ಕಾರಿ ಬ್ಯಾಂಕಾಗಿದೆ. ಆ ಮೂಲಕ ಸರ್ಕಾರಗಳ ಠೇವಣಿ ಲೆಕ್ಕ ನಿರ್ವಹಣೆ, ಸರ್ಕಾರದ ಪರವಾಗಿ ಹಣಕಾಸು ಸ್ವೀಕಾರ ಮತ್ತು ಪಾವತಿ, ಸರ್ಕಾರಕ್ಕೆ ಮುಂಗಡ ಸಾಲ ನೀಡುವುದು, ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಸಲಹೆ, ಮಾರ್ಗದರ್ಶನ ನೀಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ವ್ಯಾಪಾರಿ ಬ್ಯಾಂಕಿಂಗ್ ಕಾರ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತದೆ.

## 7) ಸಂಶೋಧನೆ ಮತ್ತು ಪ್ರಕಟಣೆಗಳು:

ಭಾರತೀಯ ಆರ್ಥಿಕತೆಗೆ ಸಂಬಂಧಪಟ್ಟ ಅಂಕಿ-ಅಂಶಗಳನ್ನು ಹಾಗೂ ಇತರೆ ಮಾಹಿತಿಗಳನ್ನು ಸಂಗ್ರಹಿಸುವುದು ಭಾರತೀಯ ರಿಸರ್ವ್ ಬ್ಯಾಂಕಿನ ಸಂಶೋಧನಾ ಇಲಾಖೆಗೆ ಸಂಬಂಧಿಸಿದೆ. ವಾಣಿಜ್ಯ ಬ್ಯಾಂಕುಗಳ ಪ್ರಗತಿ, ಕಾರ್ಯಾಚರಣೆ, ಅನುಸರಿಸುವ ಸಾಲ ನೀತಿ ಮುಂತಾದ ಚಟುವಟಿಕೆಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸುವ ಮತ್ತು ಪ್ರಕಟಿಸುವ ಜವಾಬ್ದಾರಿಯನ್ನು ಸಹ ಒಳಗೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಪ್ರಕಟಣೆಗಳೆಂದರೆ ಆರ್.ಬಿ.ಐ ಬುಲೆಟಿನ್, ಭಾರತದಲ್ಲಿ ಬ್ಯಾಂಕಿಂಗ್ ಪ್ರಗತಿ ಮತ್ತು ಪ್ರವೃತ್ತಿಯ ಮೇಲಿನ ವರದಿ, ವಾರ್ಷಿಕ ವರದಿ ಹಾಗೂ ಹ್ಯಾಂಡ್ ಬುಕ್ ಆಫ್ ಸ್ಟ್ಯಾಟಿಸ್ಟಿಕ್ಸ್ ಮುಂತಾದವು.

## 8) ಅಭಿವೃದ್ಧಿ ಕಾರ್ಯಗಳು:

ರಾಷ್ಟ್ರೀಯ ಉದ್ದೇಶಗಳನ್ನು ಈಡೇರಿಸಲು ಭಾರತೀಯ ರಿಸರ್ವ್ ಬ್ಯಾಂಕು ವ್ಯಾಪಕವಾದ ಉತ್ತೇಜನಾ ಕಾರ್ಯಗಳನ್ನು ನಿರ್ವಹಿಸುತ್ತದೆ. ಕೃಷಿ ಮತ್ತು ಕೈಗಾರಿಕಾ ವಲಯಗಳ ಅಭಿವೃದ್ಧಿಯಲ್ಲಿ, ಅವುಗಳಿಗೆ ಅಗತ್ಯವಿರುವ ಹಣಕಾಸನ್ನು ಒದಗಿಸುವಲ್ಲಿ ಸಾಂಸ್ಥಿಕ ಚೌಕಟ್ಟಿನ ಪಾತ್ರ ನಿರ್ವಹಿಸುತ್ತದೆ. ಸಾಲವನ್ನು ಆದ್ಯತಾ ವಲಯಕ್ಕೆ ಒದಗಿಸಲು ಪರಿಣಾಮಕಾರಿ ಕ್ರಮಗಳನ್ನು ನಿರ್ದೇಶಿಸುತ್ತದೆ. ಹೀಗೆ ಭಾರತೀಯ ರಿಸರ್ವ್ ಬ್ಯಾಂಕು ಹಲವಾರು ಅಭಿವೃದ್ಧಿ ಮತ್ತು ಪ್ರೋತ್ಸಾಹಕ ಕಾರ್ಯಗಳನ್ನು ನಿರ್ವಹಿಸುವ ಮೂಲಕ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ನೋಟು ಚಲಾವಣೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಅನುಸರಿಸುವ ಪದ್ಧತಿ ________

   ಅ) ಕನಿಷ್ಠ ಮೀಸಲು ಪದ್ಧತಿ ಆ) ಅಧಿಕ ಮೀಸಲು ಪದ್ಧತಿ

   ಇ) ಕನಿಷ್ಠ ಮತ್ತು ಅಧಿಕ ಮೀಸಲು ಪದ್ಧತಿ ಈ) ಯಾವುದೂ ಅಲ್ಲ

2. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಗಿದ್ದು ________

   ಅ) 1 ಏಪ್ರಿಲ್ 1935 ಆ) 1 ಮಾರ್ಚ್ 1934

   ಇ) 1 ಏಪ್ರಿಲ್ 1949 ಈ) 1 ಮಾರ್ಚ್ 1950

3. ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್‌ನ ಕಾಲಾವಧಿಯು ______ ವರ್ಷಗಳಾಗಿರುತ್ತದೆ.

   ಅ) 4 ವರ್ಷ ಆ) 5 ವರ್ಷ

   ಇ) 6 ವರ್ಷ ಈ) 7 ವರ್ಷ

4. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಮುಖ ಕಾರ್ಯ ________

   ಅ) ಬ್ಯಾಂಕುಗಳ ಬ್ಯಾಂಕು ಆ) ಸರ್ಕಾರದ ಬ್ಯಾಂಕು

   ಇ) ಬಾಹ್ಯ ಮೌಲ್ಯ ಸಂರಕ್ಷಕ ಈ) ಎಲ್ಲವೂ

5. ಹಣಕಾಸು ಮೇಲ್ವಿಚಾರಣೆ ಮಂಡಳಿಯು ಜಾರಿಗೆ ಬಂದ ವರ್ಷ ________

   ಅ) 1994 ಆ) 1984

   ಇ) 1974 ಈ) 1964

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ

1. ಭಾರತೀಯ ರಿಸರ್ವ್ ಬ್ಯಾಂಕನ್ನು ______ ರಲ್ಲಿ ರಾಷ್ಟ್ರೀಕರಣಗೊಳಿಸಲಾಯಿತು.
2. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಕಛೇರಿ ______ ನಲ್ಲಿದೆ.
3. ಭಾರತದಲ್ಲಿ ಒಂದು ರೂಪಾಯಿಯನ್ನು ______ ವಿಭಾಗ ಮುದ್ರಿಸುತ್ತದೆ.
4. ಭಾರತೀಯ ರಿಸರ್ವ್ ಬ್ಯಾಂಕು ಹಣಕಾಸು ಚಲಾವಣೆಗೆ ______ ಪದ್ಧತಿಯನ್ನು ಅನುಸರಿಸುತ್ತದೆ.
5. ಭಾರತೀಯ ಆರ್ಥಿಕತೆಗೆ ಸಂಬಂಧಪಟ್ಟ ಅಂಕಿ-ಅಂಶಗಳನ್ನು ಹಾಗೂ ಇತರೆ ಮಾಹಿತಿಗಳನ್ನು ಸಂಗ್ರಹಿಸುವುದು ಭಾರತೀಯ ರಿಸರ್ವ್ ಬ್ಯಾಂಕಿನ ______ ಇಲಾಖೆಗೆ ಸಂಬಂಧಿಸಿದೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ

1. ಕೇಂದ್ರ ಬ್ಯಾಂಕು ಎಂದರೇನು?
2. ಭಾರತೀಯ ರಿಸರ್ವ್ ಬ್ಯಾಂಕನ್ನು ಎಷ್ಟರಲ್ಲಿ ಸ್ಥಾಪಿಸಲಾಯಿತು?
3. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಸ್ತುತ ಗವರ್ನರ್ ಯಾರು?
4. ಮೇಲ್ವಿಚಾರಣೆಯ ಮಂಡಳಿಯ ಅಧ್ಯಕ್ಷತೆಯನ್ನು ಯಾರು ವಹಿಸುತ್ತಾರೆ?
5. ಬ್ಯಾಂಕುಗಳ ಬ್ಯಾಂಕು ಎಂದರೇನು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರದೇಶಿಕ ಕೇಂದ್ರ ಕಛೇರಿಗಳನ್ನು ಎಲ್ಲಿ ಸ್ಥಾಪಿಸಲಾಗಿದೆ?
2. ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳಾವುವು?
3. ಸರ್ಕಾರದ ಬ್ಯಾಂಕು ಎಂದರೇನು?
4. ಭಾರತೀಯ ರಿಸರ್ವ್ ಬ್ಯಾಂಕಿನ ಅಭಿವೃದ್ಧಿ ಕಾರ್ಯಗಳು ಯಾವುವು?
5. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಪ್ರಕಟಣೆಗಳನ್ನು ಹೆಸರಿಸಿ.

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ.
2. ಹಣಕಾಸು ಮೇಲ್ವಿಚಾರಣೆ ಮಂಡಳಿಯ ಬಗ್ಗೆ ಟಿಪ್ಪಣಿ ಬರೆಯಿರಿ.
3. ಭಾರತೀಯ ರಿಸರ್ವ್ ಬ್ಯಾಂಕಿನ ಸಂಘಟನೆ ಕುರಿತು ಟಿಪ್ಪಣಿ ಬರೆಯಿರಿ.

### ನಿಯೋಜಿತ ಕಾರ್ಯ

1) ಭಾರತೀಯ ರಿಸರ್ವ್ ಬ್ಯಾಂಕು ಮುದ್ರಿಸುವ ನೂರು ಹಾಗೂ ಐದುನೂರು ರೂಪಾಯಿ ನೋಟುಗಳಲ್ಲಿ ಅಳವಡಿಸಿರುವ ಭದ್ರತಾ ಕ್ರಮಗಳನ್ನು ಪಟ್ಟಿ ಮಾಡಿ.

ಅಧ್ಯಾಯ-11

# ಭಾರತದ ವಿದೇಶಿ ವ್ಯಾಪಾರ

"ಸಾಮಾನ್ಯವಾಗಿ, ಒಂದು ರಾಷ್ಟ್ರವು ಗರಿಷ್ಠ ತುಲನಾತ್ಮಕ ವೆಚ್ಚದ ಅನುಕೂಲತೆ ಅಥವಾ ಕನಿಷ್ಠ ತುಲನಾತ್ಮಕ ವೆಚ್ಚದ ಅನಾನುಕೂಲತೆಯನ್ನು ಹೊಂದಿರುವ ಸರಕುಗಳ ಉತ್ಪಾದನೆಯಲ್ಲಿ ವೈಶಿಷ್ಟತೆಯನ್ನು ಸಾಧಿಸಿ ರಪ್ತು ಮಾಡುತ್ತದೆ. ಅಂತೆಯೇ ಸಾಪೇಕ್ಷವಾಗಿ ಕಡಿಮೆ ತುಲನಾತ್ಮಕ ವೆಚ್ಚ ಅನುಕೂಲತೆ ಅಥವಾ ಅಧಿಕ ತುಲನಾತ್ಮಕ ವೆಚ್ಚದ ಅನಾನುಕೂಲತೆಯನ್ನು ಹೊಂದಿರುವ ಸರಕುಗಳು ರಾಷ್ಟ್ರದ ಆಮದುಗಳಾಗಿರುತ್ತವೆ." - **ಡೇವಿಡ್ ರಿಕಾರ್ಡೋ**

"ಮುಕ್ತ ಮಾರುಕಟ್ಟೆಯ ಏಕೈಕ ಪ್ರಮುಖ ಸಂಗತಿಯೆಂದರೆ ಎರಡೂ ಪಕ್ಷದವರಿಗೂ (ಈರ್ವರಿಗೂ) ಅನುಕೂಲವಾಗದ ಹೊರತು ವಿನಿಮಯ ನಡೆಯಲಾರದು."

- **ಮಿಲ್ಟನ್ ಫ್ರೀಡ್‌ಮನ್**

**ಪೀಠಿಕೆ :**

ವಿದೇಶಿ ವ್ಯಾಪಾರವು ಯಾವುದೇ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ರಾಷ್ಟ್ರಕ್ಕೆ ತನಗೆ ಬೇಕಾದ ಎಲ್ಲಾ ಸರಕುಗಳನ್ನು ತಾನೇ ಉತ್ಪಾದಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಕೆಲವೊಂದಷ್ಟು ಸರಕುಗಳನ್ನು ತನಗೆ ಬೇಕಾದ ಪ್ರಮಾಣಕ್ಕಿಂತ ಹೆಚ್ಚಾಗಿ ಉತ್ಪಾದಿಸುತ್ತದೆ. ಆದ್ದರಿಂದ ತಾನು ಉತ್ಪಾದಿಸಲಾಗದ ಆದರೆ ಅವಶ್ಯಕ ಸರಕುಗಳನ್ನು ಬೇರೆ ರಾಷ್ಟ್ರಗಳಿಂದ ಕೊಂಡುಕೊಳ್ಳಬೇಕಾಗುತ್ತದೆ. ಹೀಗೆ ಪ್ರತಿಯೊಂದು ರಾಷ್ಟ್ರವು ತನಗೆ ಬೇಕಾದ ವಸ್ತುಗಳನ್ನು ಬೇರೆ ರಾಷ್ಟ್ರಗಳಿಂದ ಕೊಂಡುಕೊಳ್ಳುವ ಮತ್ತು ತನ್ನಲ್ಲಿ ಅಧಿಕವಿರುವ ಸರಕುಗಳನ್ನು ಬೇರೆ ರಾಷ್ಟ್ರಗಳಿಗೆ ಮಾರುವ ವ್ಯವಸ್ಥೆಯನ್ನು ವಿದೇಶಿ ವ್ಯಾಪಾರ ಎಂದು ಕರೆಯುತ್ತೇವೆ. ಹಾಗಾಗಿ ವಿದೇಶಿ ವ್ಯಾಪಾರದಲ್ಲಿ ಪಾಲ್ಗೊಳ್ಳುವ ರಾಷ್ಟ್ರಗಳು ಪರಸ್ಪರ ಪ್ರಯೋಜನ ದೊರಕಿಸಿಕೊಳ್ಳುತ್ತವೆ. ಈ ಅಧ್ಯಾಯದಲ್ಲಿ ವಿದೇಶಿ ವ್ಯಾಪಾರ ಎಂದರೇನು? ದೇಶೀಯ ಹಾಗು ವಿದೇಶಿ ವ್ಯಾಪಾರದ ನಡುವಿನ ವ್ಯತ್ಯಾಸಗಳಾವುವು? ವಿದೇಶಿ ವ್ಯಾಪಾರದ ಪ್ರಾಮುಖ್ಯತೆ ಏನು? ಭಾರತದ ಪ್ರಮುಖ ಆಮದು ಸರಕುಗಳಾವುವು? ಭಾರತವು ಯಾವ ಯಾವ ದೇಶಗಳಿಂದ ಆಮದು ಮಾಡಿಕೊಳ್ಳತ್ತದೆ? ಅಂತೆಯೇ ಭಾರತದ ಪ್ರಮುಖ ರಫ್ತು ಸರಕುಗಳಾವುವು? ವಿದೇಶಿ ವಿನಿಮಯ ಎಂದರೇನು? ವಿದೇಶಿ ವಿನಿಮಯದ ಸಂಗ್ರಹ ಎಂದರೇನು? ಮುಂತಾದ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನ ಮಾಡಲಾಗಿದೆ.

## ವ್ಯಾಪಾರದ ಅರ್ಥ

ಸರಕು ಮತ್ತು ಸೇವೆಗಳನ್ನು ಮಾರುವ ಇಲ್ಲವೇ ಕೊಳ್ಳುವ ಕ್ರಿಯೆಯನ್ನು ವ್ಯಾಪಾರ ಎನ್ನುವರು. ವ್ಯಾಪಾರವು ದೇಶದಲ್ಲಿ ಉತ್ಪಾದನೆ ಮತ್ತು ಅನುಭೋಗದ ನಡುವೆ ಸಂಪರ್ಕ ಸೇತುವೆಯಾಗಿದೆ. ವ್ಯಾಪಾರವು ವಿಶ್ವದಲ್ಲಿಯೇ ಒಂದು ಪ್ರಮುಖ ಆರ್ಥಿಕ ಚಟುವಟಿಕೆಯಾಗಿದ್ದು ಇದು ಗಮನಾರ್ಹ ಪ್ರಮಾಣದಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸಿದೆ.

## ವ್ಯಾಪಾರದ ಪ್ರಕಾರಗಳು

ವ್ಯಾಪಾರವನ್ನು ಪ್ರಮುಖವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ: 1) ಆಂತರಿಕ ವ್ಯಾಪಾರ ಅಥವಾ ದೇಶೀಯ ವ್ಯಾಪಾರ ಹಾಗೂ 2) ಬಾಹ್ಯ ವ್ಯಾಪಾರ ಅಥವಾ ವಿದೇಶಿ ವ್ಯಾಪಾರ ಅಥವಾ ಅಂತರ್‌ರಾಷ್ಟ್ರೀಯ ವ್ಯಾಪಾರ.

## 1. ಆಂತರಿಕ ವ್ಯಾಪಾರ ಅಥವಾ ದೇಶೀಯ ವ್ಯಾಪಾರ

ಒಂದು ದೇಶದ ಗಡಿಯ ಒಳಗಡೆ ನಡೆಯುವ ವ್ಯಾಪಾರವನ್ನು ಆಂತರಿಕ ವ್ಯಾಪಾರ ಎನ್ನುತ್ತಾರೆ. ಅಂದರೆ ಒಂದು ದೇಶದ ಒಳಗಡೆ ನಡೆಯುವ ಸರಕು ಮತ್ತು ಸೇವೆಗಳ ಮಾರಾಟ ಮತ್ತು ಕೊಳ್ಳುವ ಪ್ರಕ್ರಿಯೆಯನ್ನು ದೇಶೀಯ ವ್ಯಾಪಾರ ಇಲ್ಲವೇ ಆಂತರಿಕ ವ್ಯಾಪಾರ ಎನ್ನುತ್ತೇವೆ.

## 2. ಬಾಹ್ಯ ವ್ಯಾಪಾರ ಅಥವಾ ವಿದೇಶಿ ವ್ಯಾಪಾರ

ವಿಶ್ವದ ವಿವಿಧ ರಾಷ್ಟ್ರಗಳ ನಡುವೆ ನಡೆಯುವ ವ್ಯಾಪಾರವನ್ನು ಅಂತರ್‌ರಾಷ್ಟ್ರೀಯ ವ್ಯಾಪಾರ ಇಲ್ಲವೇ ವಿದೇಶಿ ವ್ಯಾಪಾರ ಎಂದು ಕರೆಯುತ್ತೇವೆ. ಅಂದರೆ ಒಂದು ದೇಶದಿಂದ ಮತ್ತೊಂದು ದೇಶ ಇಲ್ಲವೆ ದೇಶಗಳ ನಡುವೆ ನಡೆಯುವ ಸರಕು ಮತ್ತು ಸೇವೆಗಳ ಮಾರಾಟ ಮತ್ತು ಕೊಂಡುಕೊಳ್ಳುವ ಪ್ರಕ್ರಿಯೆಯೇ ವಿದೇಶಿ ವ್ಯಾಪಾರವಾಗಿದೆ.

## ಆಂತರಿಕ ವ್ಯಾಪಾರ ಮತ್ತು ಅಂತರ್ ರಾಷ್ಟ್ರೀಯ ವ್ಯಾಪಾರಗಳ ನಡುವಿನ ವ್ಯತ್ಯಾಸಗಳು

ಆಂತರಿಕ ಮತ್ತು ವಿದೇಶಿ ವ್ಯಾಪಾರದ ನಡುವೆ ಅನೇಕ ವ್ಯತ್ಯಾಸಗಳಿವೆ. ಅವುಗಳಲ್ಲಿ ಪ್ರಮುಖವಾಗಿ:

1. **ಉತ್ಪಾದನಾಂಗಗಳ ಚಲನಶೀಲತೆ:** ಆಂತರಿಕ ವ್ಯಾಪಾರದಲ್ಲಿ ಉತ್ಪಾದನಾಂಗಗಳಾದ ಶ್ರಮ ಮತ್ತು ಬಂಡವಾಳಗಳ ಚಲನೆಗೆ ಅಷ್ಟೇನು ಕಷ್ಟವಾಗುವುದಿಲ್ಲ. ದೇಶದ ಗಡಿಯೊಳಗಿನ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಶ್ರಮ (ಕಾರ್ಮಿಕರು) ಮತ್ತು ಬಂಡವಾಳ ಸುಲಭವಾಗಿ ಚಲಿಸುತ್ತವೆ. ಆದರೆ ಅಂತರ್‌ರಾಷ್ಟ್ರೀಯ ವ್ಯಾಪಾರದಲ್ಲಿ ಶ್ರಮ ಮತ್ತು ಬಂಡವಾಳದ ಮುಕ್ತ ಚಲನೆಗೆ ಅವಕಾಶಗಳು ವಿರಳವಾಗಿರುತ್ತವೆ. ಮುಕ್ತ ವ್ಯಾಪಾರದ ಹೊರತಾಗಿಯೂ ಶ್ರಮ ಮತ್ತು ಬಂಡವಾಳದ ಚಲನೆಗೆ ಹಲವಾರು ನಿಬಂಧನೆಗಳಿವೆ.

2. **ನಾಣ್ಯ ಪದ್ಧತಿಯಲ್ಲಿ ವ್ಯತ್ಯಾಸ:** ಆಂತರಿಕ ವ್ಯಾಪಾರ ರಾಷ್ಟ್ರದ ಒಳಗಡೆ ನಡೆಯುವುದರಿಂದ ಆ ದೇಶದ ಶಾಸನಬದ್ಧ ಹಣವನ್ನೇ ವ್ಯಾಪಾರದಲ್ಲಿ ಬಳಸುವುದರಿಂದ ಅದರಲ್ಲಿ ಯಾವುದೇ ಸಮಸ್ಯೆಗಳು ಎದುರಾಗುವುದಿಲ್ಲ. ಆದರೆ ಅಂತರ್‌ರಾಷ್ಟ್ರೀಯ ವ್ಯಾಪಾರದಲ್ಲಿ ಹಲವು ದೇಶಗಳು ಭಾಗವಹಿಸುವುದರಿಂದ ಅಲ್ಲಿ ಅನೇಕ ದೇಶದ ಕರೆನ್ಸಿಗಳು ಎದುರಾಗುತ್ತವೆ. ಅಲ್ಲದೇ ಆ ಕರೆನ್ಸಿಗಳ ಮೌಲ್ಯಗಳು ಭಿನ್ನವಾಗಿರುವುದರಿಂದ ದೇಶಗಳ ಕರೆನ್ಸಿಗಳ ವಿನಿಮಯ ದರವು ಪ್ರಾಮುಖ್ಯತೆ ಪಡೆಯುತ್ತದೆ.

3. **ರಾಷ್ಟ್ರೀಯ ನೀತಿಗಳು:** ಆಂತರಿಕ ವ್ಯಾಪಾರವು ರಾಷ್ಟ್ರದ ಒಳಗಡೆ ನಡೆಯುವುದರಿಂದ ಅಲ್ಲಿ ಒಂದೇ ಬಗೆಯ ಆರ್ಥಿಕ ನೀತಿಯನ್ನು ನಾವು ದೇಶದಾದ್ಯಂತ ಕಾಣುತ್ತೇವೆ. ಆದರೆ ಬಾಹ್ಯ ವ್ಯಾಪಾರವು ಬೇರೆ ಬೇರೆ ದೇಶಗಳ ನಡುವೆ ನಡೆಯುವುದರಿಂದ ಅಲ್ಲಿ ವಿವಿಧ ರೀತಿಯ ಆರ್ಥಿಕ ನೀತಿಗಳು ಇರುತ್ತವೆ.

4. **ಆಯಾತ-ನಿರ್ಯಾತ ಸುಂಕ/ತೆರಿಗೆಗಳು:** ಆಂತರಿಕ ವ್ಯಾಪಾರದಲ್ಲಿ ಬಹು ಮಟ್ಟಿಗೆ ಆಯಾತ-ನಿರ್ಯಾತ ಕರಗಳ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ವಿದೇಶಿ ವ್ಯಾಪಾರದಲ್ಲಿ ಆಮದು ಮತ್ತು ರಫ್ತು ಸುಂಕಗಳ ತೊಡಕುಗಳು ಉದ್ಭವಿಸುತ್ತವೆ.

5. **ಸಾಗಣಿಕೆ ಮತ್ತು ಆಮದು ವೆಚ್ಚಗಳು:** ಆಂತರಿಕ ವ್ಯಾಪಾರದಲ್ಲಿ ಸಾಗಾಣಿಕೆ ವೆಚ್ಚ ಹಾಗೂ ವಿಮೆ ವೆಚ್ಚ ಸಾಮಾನ್ಯವಾಗಿ ಕಡಿಮೆ ಇರುತ್ತದೆ. ಆದರೆ ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಸಾಗಾಣಿಕೆ ಹಾಗೂ ವಿಮೆಯ ವೆಚ್ಚಗಳು ಅಧಿಕವಾಗಿರುತ್ತದೆ.

6. **ಗಂಡಾಂತರಗಳು:** ದೇಶೀಯ ವ್ಯಾಪಾರವು ದೇಶದಲ್ಲಿನ ವ್ಯಾಪಾರ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿರುದರಿಂದ ಅದರ ವ್ಯಾಪ್ತಿ ಕಡಿಮೆ ಇದ್ದು ಅನಾಹುತಗಳು ಕಡಿಮೆ ಇರುತ್ತವೆ. ಆದರೆ ಬಾಹ್ಯ ವ್ಯಾಪಾರದಲ್ಲಿ ದೂರ ಪ್ರದೇಶಗಳಿಗೆ ಸರಕುಗಳನ್ನು ರಫ್ತು ಮಾಡುವುದರಿಂದ ಅನಾಹುತಗಳ ಮತ್ತು ಅಪಘಾತಗಳ ಸಾಧ್ಯತೆ ಅಧಿಕವಿರುತ್ತದೆ.

7. **ಯುದ್ಧಗಳಿಂದ ತೊಂದರೆ:** ಆಂತರಿಕ ವ್ಯಾಪಾರದಲ್ಲಿ ಯುದ್ಧ ಸಮಯದಲ್ಲಿ ಸಂಭವಿಸುವ ತೊಂದರೆಗಳು ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಉದ್ಭವಿಸುವ ತೊಂದರೆಗಳಿಗಿಂತ ಕಡಿಮೆಯಾಗಿರುತ್ತವೆ. ಏಕೆಂದರೆ ಯುದ್ಧ ಕಾಲದಲ್ಲಿ ಬೇರೆ ದೇಶಗಳಿಂದ ಆಮದು-ರಫ್ತು ವ್ಯಾಪಾರ ಸ್ಥಗಿತಗೊಳ್ಳುವ ಸಂಭವ ಅಧಿಕವಾಗಿರುತ್ತದೆ. ಇದಲ್ಲದೇ ಸರಕು ಸೇವೆಗಳ ರಫ್ತು ಇಲ್ಲವೇ ಅಂದಿನ ಸಂದರ್ಭದಲ್ಲಿ ಅವುಗಳು ಶತ್ರು ರಾಷ್ಟ್ರಗಳ ಕೈಗೆ ಸಿಕ್ಕಿ ನಾಶವಾಗುವ ಗಂಡಾಂತರವು ಇರುತ್ತದೆ.

8. **ವಿಭಿನ್ನ ರೂಢಿ ಮತ್ತು ಸಂಪ್ರದಾಯ:** ಆಂತರಿಕ ವ್ಯಾಪಾರದಲ್ಲಿ ದೇಶದ ಒಳಗಡೆ ನಡೆಯುವುದರಿಂದ ಸಾಮಾನ್ಯವಾಗಿ ಒಂದೇ ತರಹದ ಸಂಪ್ರದಾಯ ಅಥವಾ ರೂಢಿಯನ್ನು ಕಾಣುತ್ತೇವೆ. ಇದರಿಂದಾಗಿ ದೇಶೀಯ ವ್ಯಾಪಾರದಲ್ಲಿ ಮಹತ್ತರ ಬದಲಾವಣೆ ಕಂಡು ಬರುವುದಿಲ್ಲ. ಆದರೆ ಬಾಹ್ಯ ವ್ಯಾಪಾರದಲ್ಲಿ ವಿವಿಧ ದೇಶದ ಜನರ ರೂಢಿ ಅಥವಾ ಸಂಪ್ರದಾಯಗಳು ಬೇರೆ ಬೇರೆಯಾಗಿದ್ದು ಹಲವಾರು ಸಮಸ್ಯೆಗಳನ್ನು ವ್ಯಾಪಾರದಲ್ಲಿ ಅನುಭವಿಸಬೇಕಾಗುತ್ತದೆ.

ಹೀಗೆ ಆಂತರಿಕ ಹಾಗೂ ಬಾಹ್ಯ ವ್ಯಾಪಾರಗಳ ನಡುವೆ ಹಲವಾರು ಭಿನ್ನತೆಗಳು ಇರುತ್ತವೆ.

## ವಿದೇಶಿ ವ್ಯಾಪಾರದ ಅವಶ್ಯಕತೆ ಮತ್ತು ಮಹತ್ವ

ಅಂತರ್‍ರಾಷ್ಟ್ರೀಯ ವ್ಯಾಪಾರವು ಆಧುನಿಕ ಜಗತ್ತಿನಲ್ಲಿ ಅನಿವಾರ್ಯವಾಗಿದೆ. ವಿದೇಶಿ ವ್ಯಾಪಾರವು ಇಂದು "ಪ್ರಗತಿಯ ಯಂತ್ರ" ಎಂದು ಪರಿಗಣಿಸಲ್ಪಟ್ಟಿದೆ. ಬಾಹ್ಯವ್ಯಾಪಾರದಿಂದ ನೈಸರ್ಗಿಕ ಸಂಪನ್ಮೂಲಗಳ ಸದುಪಯೋಗವಾಗುತ್ತದೆ. ಇದರಿಂದ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಖರೀದಿಸಿ ಜನರ ಜೀವನ ಮಟ್ಟವನ್ನು ವೃದ್ಧಿಸಲು ಅವಕಾಶವಿರುತ್ತದೆ. ಬಾಹ್ಯ ವ್ಯಾಪಾರದಿಂದಾಗುವ ಪ್ರಯೋಜನಗಳು ಯಾವುವೆಂದರೆ:

1. **ಅಗತ್ಯ ಸರಕುಗಳ ಆಯಾತ:** ದೇಶದಲ್ಲಿ ಉತ್ಪಾದಿಸಲಾಗದ ಅವಶ್ಯಕವಾಗಿ ಬೇಕಾಗಿರುವ ವಸ್ತುಗಳನ್ನು ಆಮದು ಮಾಡಿಕೊಳ್ಳುವ ದೃಷ್ಟಿಯಿಂದ ವಿದೇಶಿ ವ್ಯಾಪಾರವು ಪ್ರಮುಖ ಪಾತ್ರ ವಹಿಸುತ್ತದೆ. ಈ ರೀತಿಯಾಗಿ ಅವಶ್ಯಕವಾಗಿ ಬೇಕಿರುವ ಸರಕುಗಳನ್ನು ಆಮದು ಮಾಡಿ ಕೊಳ್ಳದಿದ್ದರೆ ಆರ್ಥಿಕ ಪ್ರಗತಿಯ ಚಕ್ರ ತಿರುಗುವುದಿಲ್ಲ. ಉದಾಹರಣೆಗೆ ಕಚ್ಚಾ ತೈಲ ಆಮದು ಮಾಡಿಕೊಳ್ಳದಿದ್ದರೆ ಭಾರತವು ಸಂಕಷ್ಟಕ್ಕೀಡಾಗುತ್ತದೆ.

2. **ಸರಕುಗಳ ಬೆಲೆಯಲ್ಲಿ ಸಮಾನತೆ ಕಾಪಾಡುವುದು:** ಬಾಹ್ಯ ವ್ಯಾಪಾರದಿಂದ ದೇಶದಲ್ಲಿ ದೊರಕುವ ವಸ್ತುಗಳ ಬೆಲೆಗಳಲ್ಲಿ ಸಮಾನತೆ ಕಾಪಾಡಲು ನೆರವಾಗುತ್ತದೆ. ಒಂದು ದೇಶವು ವಿದೇಶಿ ವ್ಯಾಪಾರದಲ್ಲಿ ಸಕ್ರಿಯವಾಗಿದ್ದರೆ ದೇಶದಲ್ಲಿ ಸರಕುಗಳ ಬೆಲೆಯಲ್ಲಿ ಆಮದು ರಫ್ತಿನಿಂದಾಗಿ ಸ್ಥಿರತೆ ಕಾಪಾಡ ಬಹುದಾಗಿದೆ. ಇಲ್ಲದಿದ್ದರೆ ಆರ್ಥಿಕವಾಗಿ ಹಲವಾರು ದುಷ್ಪರಿಣಾಮಗಳು ಉಂಟಾಗುತ್ತವೆ.

3. **ಕೈಗಾರಿಕಾಭಿವೃದ್ಧಿ:** ವಿದೇಶಿ ವ್ಯಾಪಾರದಿಂದಾಗಿ ಕೈಗಾರಿಕಾ ಬೆಳವಣಿಗೆಗೆ ಬೇಕಾದ ಯಂತ್ರಗಳು, ಉಪಕರಣಗಳು, ಬಿಡಿಭಾಗಗಳು, ಕಚ್ಚಾ ಸರಕುಗಳು ಇತ್ಯಾದಿಗಳನ್ನು ತರಿಸಿಕೊಂಡು ಉದ್ದಿಮೆಗಳ ಪ್ರಗತಿ ಸಾಧಿಸಬಹುದಾಗಿದೆ. ಅಂತೆಯೇ ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡಿ ವಿದೇಶಿ ವಿನಿಮಯ ಗಳಿಸಲು ಅನುವು ಮಾಡಿಕೊಡುತ್ತದೆ.

4. **ಮಾರುಕಟ್ಟೆ ವಿಸ್ತರಣೆ:** ಅಂತರಾಷ್ಟ್ರೀಯ ವ್ಯಾಪಾರದಿಂದಾಗಿ ದೇಶೀಯ ಹಾಗೂ ವಿದೇಶಿ ಮಾರುಕಟ್ಟೆಗಳ ವಿಸ್ತರಣೆಯಾಗುತ್ತದೆ. ಒಂದು ದೇಶದಿಂದ ಹೆಚ್ಚಿನ ಪ್ರಮಾಣದಲ್ಲಿ ಆಯಾತವಾಗಲಿ ಅಥವಾ ನಿರ್ಯಾತವಾಗಿ ಮಾರುಕಟ್ಟೆಗಳು ವಿಸ್ತರಣೆಗೊಂಡು ವಹಿವಾಟಿನ ಪ್ರಮಾಣ ಹೆಚ್ಚಾಗುತ್ತದೆ. ಅಲ್ಲದೆ ಹೆಚ್ಚಿನ ಆದಾಯ ಗಳಿಸಲು ನೆರವಾಗುತ್ತದೆ.

5. **ಬಂಡವಾಳ ಚಲನೆಯ ಅನುಕೂಲತೆಗಳು:** ಅಂತರಾಷ್ಟ್ರೀಯ ವ್ಯಾಪಾರವು ದೇಶದೇಶಗಳ ಮಧ್ಯೆ ಬಂಡವಾಳ ಚಲನೆಯಾಗಲು ಸಹಕಾರಿಯಾಗಿದೆ. ಹಲವಾರು ಬಂಡವಾಳ ಸರಕುಗಳು ಅಂದರೆ ಯಂತ್ರಗಳು, ಉಪಕರಣಗಳು, ಕಚ್ಚಾ ಸಾಮಗ್ರಿಗಳು, ಯಂತ್ರಗಳ ಬಿಡಿ ಭಾಗಗಳು ಮುಂತಾದವುಗಳು ಸರಾಗವಾಗಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಚಲಿಸುವುದರ ಮೂಲಕ ಪ್ರಗತಿಯ ಪ್ರಮಾಣ ವೃದ್ಧಿಯಾಗುವಲ್ಲಿ ಸಹಾಯಕವಾಗಿದೆ.

6. **ಅಂತರಾಷ್ಟ್ರೀಯ ಶಾಂತಿ ಮತ್ತು ಸಹಕಾರ:** ದೇಶ ದೇಶಗಳ ಮಧ್ಯೆ ವ್ಯಾಪಾರ ಚಟುವಟಿಕೆಗಳು ನಿರಂತರವಾಗಿ ನಡೆಯುವ ಮೂಲಕ ಅಂತರಾಷ್ಟ್ರೀಯ ಶಾಂತಿ ಮತ್ತು ಸಹಕಾರ ಏರ್ಪಡುತ್ತದೆ. ವಿದೇಶಿ ವ್ಯಾಪಾರದಿಂದಾಗಿ ದೇಶ–ದೇಶಗಳ ಮಧ್ಯೆ ಮನಸ್ತಾಪ, ಅಪನಂಬಿಕೆಗಳ ಅಥವಾ ಯುದ್ಧದ ಸಾಧ್ಯತೆ ಕಡಿಮೆ ಇರುತ್ತದೆ.

7. **ಸಂಪನ್ಮೂಲಗಳ ಬಳಕೆ:** ಬಾಹ್ಯ ವ್ಯಾಪಾರವು ದೇಶದಲ್ಲಿ ದೊರೆಯಬಹುದಾದ ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ, ದಕ್ಷವಾಗಿ, ಪರಿಣಾಮಕಾರಿಯಾಗಿ ಉತ್ಪಾದನಾ ಪ್ರಕ್ರಿಯೆಯಲ್ಲಿ ಉಪಯೋಗಿಸಿಕೊಳ್ಳಲು ತುಂಬಾ ಸಹಕಾರಿಯಾಗಿದೆ. ಇದರಿಂದಾಗಿ ಸಂಪನ್ಮೂಲಗಳ ಸದುಪಯೋಗವಾಗಿ ಆರ್ಥಿಕ ಪ್ರಗತಿ ಉಂಟಾಗುತ್ತದೆ.

8. **ವಿಜ್ಞಾನ–ತಂತ್ರಜ್ಞಾನ ವರ್ಗಾವಣೆ:** ವಿದೇಶಿ ವ್ಯಾಪಾರವು ದೇಶದಲ್ಲಿ ಗರಿಷ್ಠ ಪ್ರಮಾಣದಲ್ಲಿ ಸರಕು–ಸೇವೆಗಳ ಉತ್ಪಾದನೆಯಾಗುವ ದೃಷ್ಟಿಯಿಂದ ತುಂಬಾ ಅನುಕೂಲಕರವಾಗಿದೆ. ಇದರಿಂದಾಗಿ ರಾಷ್ಟ್ರೀಯ ವರಮಾನ ಹೆಚ್ಚಳವಾಗಿ ದೇಶದ ಸರ್ವತೋಮುಖ ಅಭಿವೃದ್ಧಿಯಾಗಲು ಸಹಕಾರಿಯಾಗಿದೆ.

## ಭಾರತದ ಅಂತರಾಷ್ಟ್ರೀಯ ವ್ಯಾಪಾರ

ಭಾರತವು ಅಭಿವೃದ್ಧಿ ಪಥದಲ್ಲಿ ದಾಪುಗಾಲು ಹಾಕುತ್ತಿದೆ. ಆದರೆ ಭಾರತದ ಅಂತರಾಷ್ಟ್ರೀಯ ವ್ಯಾಪಾರದ ಪ್ರಮಾಣವು ಇನ್ನೂ ಗಣನೀಯವಾಗಿ ಹೆಚ್ಚಳವಾಗಬೇಕಿದೆ. ವಿಶ್ವದ ಒಟ್ಟು ವ್ಯಾಪಾರದಲ್ಲಿ ಭಾರತದ ಪಾಲು ಶೇ.2ಕ್ಕಿಂತ ಕಡಿಮೆಯಿದೆ.

## ಭಾರತದ ರಫ್ತು ಸಂಯೋಜನೆ

ಭಾರತದ ರಫ್ತು ಸಂಯೋಜನೆಯಲ್ಲಿ ಆಮೂಲಾಗ್ರ ಬದಲಾವಣೆ ಆಗಿದೆ. 1980ಕ್ಕಿಂತ ಮೊದಲು ಪ್ರಾಥಮಿಕ ಸರಕುಗಳು ಅಂದರೆ ಕೃಷಿ ಮತ್ತು ಕೃಷಿ ಸಂಬಂಧಿ ಸರಕುಗಳು, ಕಾಫಿ, ಟೀ, ತಂಬಾಕು, ಗೋಡಂಬಿ, ಸಾಂಬಾರ ತಿನಿಸುಗಳು, ಸಕ್ಕರೆ, ಹತ್ತಿ, ಅಕ್ಕಿ, ಮೀನು ಮತ್ತು ಮೀನು ತಯಾರಿಕೆಗಳು, ಮಾಂಸ, ಹಣ್ಣುಗಳು, ತರಕಾರಿ, ಬೇಳೆ, ಅಭ್ರಕ, ಕಬ್ಬಿಣದ ಅದಿರು ಮುಂತಾದವುಗಳನ್ನು ಹೆಚ್ಚಾಗಿ ರಫ್ತು ಮಾಡಲಾಗುತ್ತಿತ್ತು. ಆದರೆ ಇಂದು ಅದರಲ್ಲಿ ಬದಲಾವಣೆಯಾಗಿ ಭಾರತ ದೇಶವು ಸಿದ್ಧಪಡಿಸಿದ ವಸ್ತುಗಳನ್ನು ಹೆಚ್ಚಾಗಿ ರಫ್ತು ಮಾಡುತ್ತಿದೆ. 2013–14 ರಲ್ಲಿ ಭಾರತದ ರಫ್ತಿನಲ್ಲಿ ಸಿದ್ಧಪಡಿಸಿದ ಸರಕುಗಳ ಪಾಲು ಶೇ. 63.7ರಷ್ಟಾಗಿತ್ತು. ತದನಂತರದಲ್ಲಿ ಕಚ್ಚಾತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳು, ಕೃಷಿ ಪದಾರ್ಥಗಳು, ಅದಿರು ಮತ್ತು ಖನಿಜಗಳು ಪ್ರಮುಖವಾಗಿವೆ.

ಇತ್ತೀಚಿನ ವರ್ಷಗಳಲ್ಲಿ ಭಾರತವು ಸೇವೆಗಳ ರಫ್ತಿನಲ್ಲಿ ಪ್ರಮುಖ ದೇಶವಾಗಿ ಹೊರಹೊಮ್ಮಿದೆ. ಮಾಹಿತಿ ತಂತ್ರಜ್ಞಾನ ವ್ಯವಹಾರ ಪ್ರಕ್ರಿಯೆ ಹೊರಗುತ್ತಿಗೆ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳ ಪ್ರಗತಿಯಿಂದಾಗಿ ಭಾರತವು ಸೇವೆಗಳ ರಫ್ತಿನ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದೆ.

## ರಫ್ತು ವ್ಯಾಪಾರದ ದಿಕ್ಕು

ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಭಾರತದ ಸರಕುಗಳನ್ನು ಕೊಳ್ಳುತ್ತಿರುವ ದೇಶಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟನ್ ಪಾಲು ಅತಿ ಹೆಚ್ಚಾಗಿತ್ತು. ಆದರೆ ಪ್ರಸ್ತುತ ಭಾರತವು ಮುಂದುವರಿದ ದೇಶಗಳು ಸೇರಿದಂತೆ ಅನೇಕ ರಾಷ್ಟ್ರಗಳಿಗೆ ಹಲವಾರು ಬಗೆಯ ಸರಕುಗಳನ್ನು ರಫ್ತು ಮಾಡುತ್ತಿದೆ.

ಭಾರತ ವಿಶ್ವದ ಎಲ್ಲ ಖಂಡಗಳ ಜೊತೆ ವ್ಯಾಪಾರ ಸಂಬಂಧ ಹೊಂದಿದೆ. ಅದು ಏಷ್ಯಾ ಖಂಡದ ದೇಶಗಳಿಗೆ ಹೆಚ್ಚು ರಫ್ತು ಮಾಡುತ್ತಿದೆ. ತದನಂತರದ ಸ್ಥಾನಗಳಲ್ಲಿ ಅಮೇರಿಕ, ಯುರೋಪ್, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳಿವೆ. ಭಾರತವು 2013–14ರಲ್ಲಿ ಅತಿ ಹೆಚ್ಚು ರಫ್ತು ಮಾಡಿದ ದೇಶಗಳೆಂದರೆ ಯು.ಎಸ್.ಎ, ತದನಂತರ ಸ್ಥಾನದಲ್ಲಿ ಕೆನಡಾ, ಯು.ಎ.ಇ., ಚೈನಾ, ಹಾಂಕ್‌ಕಾಂಗ್ ಮತ್ತು ಸೌದಿ ಅರೇಬಿಯಾ ದೇಶಗಳಾಗಿವೆ.

## ಭಾರತದ ಆಮದುಗಳು

ಭಾರತವು ಬಹಳ ದೀರ್ಘಕಾಲದಿಂದ ಸರಕುಗಳನ್ನು ವಿವಿಧ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ಭಾರತದ ಆಮದು ದಿಕ್ಕಿನಲ್ಲಿ ಸಾಕಷ್ಟು ಬದಲಾವಣೆಗಳಾಗಿ ರಾಷ್ಟ್ರಗಳು ಮತ್ತು ಅವುಗಳ ಸಂಖ್ಯೆ ಹಾಗು ಆಮದಾಗುತ್ತಿರುವ ಸರಕುಗಳ ಪ್ರಮಾಣದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಭಾರತದ ಆಮದು ಸಂಯೋಜನೆಯು ವೈವಿಧ್ಯಮಯ ಸರಕುಗಳನ್ನು ಒಳಗೊಂಡಿದೆ. ಭಾರತ ಅತ್ಯಂತ ಹೆಚ್ಚು ಆಮದು ಮಾಡುವ ವಸ್ತುವೆಂದರೆ ಇಂಧನವಾಗಿದೆ. ಅದರಲ್ಲಿ ಪೆಟ್ರೋಲಿಯಂ ತೈಲ ಮತ್ತು ಲೂಬ್ರಿಕೆಂಟ್ಸ್‌ನ ಪಾಲು ಬಹುತೇಕವಿದೆ. ನಂತರದ ಸ್ಥಾನದಲ್ಲಿ ಬಂಡವಾಳ ಸರಕುಗಳು, ಚಿನ್ನ ಮತ್ತು ಬೆಳ್ಳಿ, ಎಲೆಕ್ಟ್ರಾನಿಕ್ ಸರಕುಗಳು, ರಾಸಾಯನಿಕ ಮತ್ತು ಯಂತ್ರೋಪಕರಣದ ಸರಕುಗಳಿವೆ.

## ಭಾರತದ ಆಮದುಗಳ ದಿಕ್ಕು

ಆಮದಿನ ವಿಚಾರದಲ್ಲೂ ಭಾರತ ಎಲ್ಲಾ ಖಂಡಗಳಿಂದ ತನಗೆ ಬೇಕಾದ ಸರಕು ಮತ್ತು ಸೇವೆಗಳನ್ನು ಪಡೆಯುತ್ತಿದೆ. ಏಷ್ಯಾ ಖಂಡದಿಂದ ಹೆಚ್ಚಿನ ಆಮದು ಮಾಡಿಕೊಳ್ಳುತ್ತಿದೆ. ಅಂದರೆ ಅದು ಇತರೆ ಏಷ್ಯಾ ದೇಶಗಳಿಂದ ಹೆಚ್ಚಿನ ಆಮದು ಮಾಡಿಕೊಳ್ಳುತ್ತಿದೆ. ತದನಂತರದ ಸ್ಥಾನಗಳಲ್ಲಿ ಯುರೋಪ್, ಅಮೇರಿಕಾ ಹಾಗೂ ಆಫ್ರಿಕಾ ಖಂಡಗಳಿವೆ. ಭಾರತವು 2013–14ರಲ್ಲಿ ಅತಿ ಹೆಚ್ಚು ಆಮದನ್ನು ಚೈನಾ ದೇಶದಿಂದ ಮಾಡಿಕೊಂಡಿತ್ತು, ತದನಂತರ ಸ್ಥಾನಗಳಲ್ಲಿ ಜರ್ಮನಿ, ಸೌದಿ ಅರೇಬಿಯಾ, ಯು.ಎ.ಇ., ಉತ್ತರ ಅಮೇರಿಕಾ ಹಾಗೂ ಯು.ಎಸ್.ಎ., ದೇಶಗಳಿವೆ.

## ವಿದೇಶಿ ವಿನಿಮಯ

ಸಾಮಾನ್ಯ ಭಾಷೆಯಲ್ಲಿ ವಿದೇಶಿ ವಿನಿಮಯ ಎಂದರೆ ವಿದೇಶಿ ಹಣ ಎಂದರ್ಥ. ಉದಾಹರಣೆಗೆ ರಷ್ಯಾದ ರೂಬಲ್, ಅಮೇರಿಕಾ ಡಾಲರ್, ಫ್ರಾನ್ಸ್‌ನ ಫ್ರಾಂಕ್, ಇಂಗ್ಲೆಂಡ್‌ನ ಪೌಂಡ್ ಮುಂತಾದವು. ಆದರೆ

ವಿದೇಶಿ ವ್ಯಾಪಾರದಲ್ಲಿ ವಿದೇಶಿ ವಿನಿಮಯವೆಂದರೆ ಒಂದು ದೇಶದ ಹಣವನ್ನು ಇತರೇ ರಾಷ್ಟ್ರಗಳ ಹಣಕ್ಕೆ ಪರಿವರ್ತನೆ ಮಾಡುವುದು ಎಂಬುದಾಗಿದೆ. ಉದಾಹರಣೆಗೆ ಭಾರತದ ರೂಪಾಯಿಯನ್ನು ಅಮೇರಿಕಾದ ಡಾಲರ್‌ಗೆ ಪರಿವರ್ತಿಸುವುದು. ಅಂದರೆ ವಿದೇಶಿ ವ್ಯಾಪಾರ ಮತ್ತು ವಿದೇಶಿ ಹೂಡಿಕೆಗೆ ಹಣಕಾಸು ಒದಗಿಸಲು ದೇಶವೊಂದರ ಸ್ವದೇಶಿ ನಾಣ್ಯವನ್ನು ವಿದೇಶಿ ನಾಣ್ಯಗಳಿಗೆ ವಿನಿಮಯ ಮಾಡುವುದಾಗಿದೆ. ಅದು ಎರಡು ವಿಭಿನ್ನ ನಾಣ್ಯ ಪದ್ಧತಿಗಳನ್ನು ಹೊಂದಿರುವ ದೇಶಗಳ ನಡುವೆ ಪಾವತಿಗಳನ್ನು ಮಾಡಲಾಗುವ ಪ್ರಕ್ರಿಯೆಯಾಗಿದೆ. ಹೀಗೆ ಒಂದು ದೇಶದ ಕರೆನ್ಸಿಯನ್ನು ಇನ್ನೊಂದು ದೇಶದ ಕರೆನ್ಸಿಗೆ ಪರಿವರ್ತಿಸುವ ಮತ್ತು ಅಂತರ ರಾಷ್ಟ್ರೀಯ ಪಾವತಿ ಜವಾಬ್ದಾರಿಗಳನ್ನು ಪೂರೈಸುವ ವಿಧಿ ವಿಧಾನವನ್ನು ವಿದೇಶಿ ವಿನಿಮಯ ಎನ್ನಬಹುದು. ಒಂದು ದೇಶದ ಕರೆನ್ಸಿಯೊಂದಿಗೆ ಮತ್ತೊಂದು ದೇಶದ ಕರೆನ್ಸಿಯನ್ನು ವಿನಿಮಯ ಮಾಡುವ ದರವನ್ನು ವಿದೇಶಿ ವಿನಿಮಯ ದರ ಎಂದು ಕರೆಯಲಾಗುತ್ತದೆ.

ಯಾವುದೇ ಒಂದು ರಾಷ್ಟ್ರವು ಆರ್ಥಿಕ ಭದ್ರತೆಗೋಸ್ಕರ ಸಮರ್ಪಕ ಪ್ರಮಾಣದ ವಿದೇಶೀ ವಿನಿಮಯ ಸಂಗ್ರಹವನ್ನು ಹೊಂದಿರುವುದು ಅವಶ್ಯಕವಾಗಿದೆ. ಆದರೆ ಅದರಲ್ಲಿ ಕೇವಲ ವಿದೇಶಿ ಕರೆನ್ಸಿಯಲ್ಲದೇ, ಮೌಲ್ಯಯುತ ವಸ್ತುಗಳೂ ಸೇರಿಕೊಂಡಿರುತ್ತವೆ. ಉದಾಹರಣೆಗೆ ಭಾರತೀಯ ರಿಝರ್ವ್ ಬ್ಯಾಂಕು ತನ್ನಲ್ಲಿ ಹೊಂದಿರುವ ಚಿನ್ನ, ಎಸ್.ಡಿ.ಆರ್. ಮತ್ತು ವಿದೇಶಿ ಹಣದ ಒಟ್ಟು ಸಂಗ್ರಹಕ್ಕೆ ವಿದೇಶಿ ವಿನಿಮಯ ಸಂಗ್ರಹವೆಂದು ಕರೆಯಲಾಗುತ್ತದೆ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದ ಕರೆನ್ಸಿ ______ ಆಗಿದೆ.

   ಅ) ರೂಪಾಯಿ　　ಆ) ಡಾಲರ್

   ಇ) ಪೌಂಡು　　ಈ) ಯೆನ್

2. 2013–14ರಲ್ಲಿ ಭಾರತದಿಂದ ಅತಿ ಹೆಚ್ಚು ರಫ್ತು ______ ದೇಶಕ್ಕೆ ಹೋಯಿತು.

   ಅ) ಯು.ಎಸ್.ಎ.　　ಆ) ಪಾಕಿಸ್ತಾನ

   ಇ) ಜರ್ಮನಿ　　ಈ) ಚೈನಾ

3. 2013–14ರಲ್ಲಿ ಭಾರತಕ್ಕೆ ಹೆಚ್ಚು ಆಮದು ______ ದೇಶದಿಂದ ಬಂದಿತು.

   ಅ) ಯು.ಎಸ್.ಎ.　　ಆ) ಪಾಕಿಸ್ತಾನ

   ಇ) ಜರ್ಮನಿ　　ಈ) ಚೈನಾ

4. ವ್ಯಾಪಾರದ ಪ್ರಕಾರಗಳಲ್ಲಿ ಪ್ರಮುಖವಾದ ವಿಧಗಳೆಂದರೆ ________

ಅ) ಆಂತರಿಕ ಹಾಗೂ ಬಾಹ್ಯ ವ್ಯಾಪಾರ

ಆ) ಆಂತರಿಕ ಹಾಗೂ ಅಂತರಿಕ್ಷ ವ್ಯಾಪಾರ

ಇ) ಆಂತರಿಕ ಹಾಗೂ ಅಂತರಾಜ್ಯ ವ್ಯಾಪಾರ

ಈ) ಸಂತೆ ಹಾಗೂ ಅಂತರಾಜ್ಯ ವ್ಯಾಪಾರ

5. ವಿದೇಶಿ ವಿನಿಮಯ ಎಂದರೆ ________

ಅ) ಒಂದು ದೇಶದ ಹಣವನ್ನು ಇತರೆ ದೇಶದ ಹಣಕ್ಕೆ ವಿನಿಮಯ ಮಾಡುವುದು.

ಆ) ಒಂದು ದೇಶದ ಹಣವನ್ನು ಬಂಗಾರದೊಂದಿಗೆ ವಿನಿಮಯ ಮಾಡುವುದು.

ಇ) ವಿದೇಶದಲ್ಲಿ ರೂಪಾಯಿಯನ್ನು ನೇರವಾಗಿ ಕೊಟ್ಟು ವಸ್ತು ಖರೀದಿಸುವುದು.

ಈ) ಕಾಗದದ ಹಣಕ್ಕೆ ನಾಣ್ಯಗಳ ವಿನಿಮಯ ಮಾಡುವುದು.

## II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಒಂದು ದೇಶದ ಒಳಗಡೆ ನಡೆಯುವ ವ್ಯಾಪಾರವನ್ನು ______ ಎನ್ನುತ್ತಾರೆ.
2. ವಿದೇಶಿ ವ್ಯಾಪಾರವನ್ನು ______ ಎಂದು ಪರಿಗಣಿಸಲ್ಪಟ್ಟಿದೆ.
3. ವಿಶ್ವ ವ್ಯಾಪಾರದಲ್ಲಿ ಭಾರತದ ಪಾಲು ______ ಕ್ಕಿಂತ ಕಡಿಮೆಯಿದೆ.
4. ವಿದೇಶಿ ವಿನಿಮಯ ಎಂದರೆ ______ ಎಂದರ್ಥ.

## III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ವ್ಯಾಪಾರ ಎಂದರೇನು?
2. ವಿದೇಶಿ ವ್ಯಾಪಾರ ಎಂದರೇನು?
3. ಆಂತರಿಕ ವ್ಯಾಪಾರ ಎಂದರೇನು?
4. ವಿದೇಶಿ ವಿನಿಮಯ ಎಂದರೇನು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ವ್ಯಾಪಾರದ ಪ್ರಕಾರಗಳನ್ನು ಬರೆಯಿರಿ.
2. ಭಾರತದ ಪ್ರಮುಖ ರಫ್ತು ಸರಕುಗಳನ್ನು ಹೆಸರಿಸಿ.
3. ಭಾರತದ ಪ್ರಮುಖ ಆಮದು ಸರಕುಗಳನ್ನು ಹೆಸರಿಸಿ.
4. ವಿದೇಶಿ ವಿನಿಮಯ ಸಂಗ್ರಹ ಎಂದರೇನು?

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1. ವಿದೇಶಿ ವ್ಯಾಪಾರದಿಂದಾಗುವ ಪ್ರಯೋಜನಗಳಾವುವು?
2. ಆಂತರಿಕ ಮತ್ತು ವಿದೇಶಿ ವ್ಯಾಪಾರದ ನಡುವಿನ ವ್ಯತ್ಯಾಸ ತಿಳಿಸಿ.

**ನಿಯೋಜಿತ ಕಾರ್ಯ**

1) ಕರ್ನಾಟಕ ರಾಜ್ಯದಿಂದ ರಫ್ತಾಗುವ ವಸ್ತುಗಳನ್ನು ಪಟ್ಟಿಮಾಡಿ.
2) ನಿಮ್ಮ ಮನೆಯಲ್ಲಿ/ಊರಿನಲ್ಲಿ ಆಮದಾಗಿರುವ ವಸ್ತುಗಳನ್ನು ಉಪಯೋಗಿಸುತ್ತಿದ್ದರೆ, ಆ ವಸ್ತುಗಳನ್ನು ಆ ದೇಶಗಳ ಹೆಸರಿನೊಂದಿಗೆ ಪಟ್ಟಿಮಾಡಿ.